ತಿಳಿದಾಗ ಜಿಜ್ಞಾಸೆ ಜಾಗ್ರತವಾಗುತ್ತದೆ, ಅದು ಪೂರ್ತಿಯಾದಾಗ ಸಂಶಯ- ವಿನಾಶಕ ಜ್ಞಾನದ ಪ್ರಾಪ್ತಿ ಯಾಗುತ್ತದೆ.

ಹುಡುಕುವುದೇ ಸಾಧಕನ ಲಕ್ಷಣವಾಗಿದೆ. ಅವನು ಮನಸ್ಸು, ಇಂದ್ರಿಯಗಳಿಂದ ಕಂಡ ಮಾತನ್ನೇ ಸತ್ಯವೆಂದು ತಿಳಿದರೆ ಅಲ್ಲೆ ನಿಂತು ಬಿಡುತ್ತಾನೆ, ಮುಂದಕ್ಕೆ ಸಾಗಲಾರನು. ಸಾಧಕನು ನಿರಂತರ ಮುಂದೆ ಸಾಗುತ್ತಾ ಇರಬೇಕು. ಮನುಷ್ಯನು ದಾರಿ ನಡೆಯುವಾಗ ಎಷ್ಟು ಮೈಲಿ ಮುಂದೆ ಬಂದಿದ್ದೇನೆ ಎಂದು ನೋಡದೆ ಎಷ್ಟು ಮೈಲು ಇನ್ನು ಬಾಕಿ ಇದೆ ಎಂಬುದನ್ನು ನೋಡಿದಾಗ ಅವನು ಸರಿಯಾದ ತನ್ನ ಠಾವಿಗೆ ತಲುಪಬಲ್ಲನು. ಹೀಗೆಯೇ ಸಾಧಕನು-ಎಷ್ಟು ತಿಳಿದೆ ಎಂದು ನೋಡದೆ ಅರ್ಥಾತ್ ತಾನು ತಿಳಿದುದರಲ್ಲಿ ಸಂತೋಷಪಡದೆ ಯಾವ ವಿಷಯವನ್ನು ಚೆನ್ನಾಗಿ ತಿಳಿದಿಲ್ಲವೋ ಅದನ್ನು ತಿಳಿಯುವ ಪ್ರಯತ್ನಮಾಡುತ್ತಾ ಇರಬೇಕು. ಅದಕ್ಕಾಗಿ ಸಂಶಯವು ಇರುವಾಗ ಎಂದೂ ಸಂತೋಷಪಡದೆ ಜಿಜ್ಞಾಸೆಯು ಅಗ್ನಿಯಂತೆ ಧಗಧಗಿಸುತ್ತಿರಬೇಕು. ಹೀಗಾದಾಗ ಸಾಧಕನ ಸಂಶಯವು ಸಂತ-ಮಹಾತ್ಮರಿಂದ ಅಥವಾ ಗ್ರಂಥಗಳಿಂದ ಯಾವುದಾದರು ಪ್ರಕಾರದಿಂದ ದೂರವಾಗಿಯೇ ಆಗುತ್ತದೆ. ಸಂಶಯ ದೂರಮಾಡುವವರು ಯಾರೂ ಸಿಗದಿದ್ದರೆ ಭಗವತ್‌ಕೃಪೆಯಿಂದ ಅವನ ಸಂಶಯ ದೂರವಾಗುತ್ತದೆ.

ವಿಶೇಷ ವಿಚಾರ

ಜೀವಾತ್ಮನು ಪರಮಾತ್ಮನ ಅಂಶನಾಗಿದ್ದಾನೆ– **'ಮಮೈವಾಂಶೋ ಜೀವಲೋಕೇ'** (೧೫/೭) ಅದಕ್ಕಾಗಿ ಅವನಲ್ಲಿ ತನ್ನ ಅಂಶೀ ಪರಮಾತ್ಮನನ್ನು ಪಡೆಯುವ ಹುರುವು ಜಾಗ್ರತವಾದಾಗ ಮತ್ತು ಅದರ ಪೂರ್ತಿಯಾಗದಿರುವ ದುಃಖವಾದಾಗ, ಆ ದುಃಖವನ್ನು ಭಗವಂತನು ಸಹಿಸುವುದಿಲ್ಲ, ಆದ್ದರಿಂದ ಅದರ ಪೂರ್ಣತೆಯು ಭಗವಂತನು ಸ್ವತಃ ಮಾಡುತ್ತಾನೆ. ಹೀಗೆಯೇ ಸಾಧಕನಿಗೆ ತನ್ನೊಳಗೆ ಇರುವ ಸಂಶಯದಿಂದ ವ್ಯಾಕುಲತೆ ಅಥವಾ ದುಃಖವಾದಾಗ ಆ ದುಃಖವು ಭಗವಂತನಿಂದ ಸಹಿಸಲಾಗುವುದಿಲ್ಲ, ಸಂಶಯವನ್ನು ದೂರಮಾಡಲು ಭಗವಂತನಲ್ಲಿ ಪ್ರಾರ್ಥಿಸಬೇಕಾಗುವುದಿಲ್ಲ, ಯಾವ ಸಂಶಯದಿಂದ ಸಾಧಕನಿಗೆ ದುಃಖವಾಗುತ್ತದೋ ಆ ಸಂಶಯವನ್ನು ದೂರಮಾಡಿ ಭಗವಂತನು ಸ್ವತಃ ಅವನ ಆ ದುಃಖವನ್ನು ಇಲ್ಲವಾಗಿಸುತ್ತಾನೆ. ಸಂಶಯಾತ್ಮಾ ಪುರುಷನ ಒಂದು ಕೂಗು ಇರುತ್ತದೆ, ಅದು ಸ್ವತಃ ಭಗವಂತನವರೆಗೆ ತಲುಪುತ್ತದೆ.

ಸಂಶಯದ ಕಾರಣ ಸಾಧಕನ ನಿಜವಾದ ಏಳಿಗೆಯು ನಿಂತು ಹೋಗುತ್ತದೆ, ಅದಕ್ಕಾಗಿ ಸಂಶಯವನ್ನು ದೂರಮಾಡುವು ದರಲ್ಲಿಯೇ ಅವನ ಹಿತವಿದೆ. ಭಗವಂತನು ಪ್ರಾಣಿಮಾತ್ರರ ಸುಹೃದ್ ಆಗಿದ್ದಾನೆ – **'ಸುಹೃದಂ ಸರ್ವಭೂತಾನಾಮ್'** (೫/೨೯) ಅದಕ್ಕಾಗಿ ಯಾವ ಸಂಶಯದಿಂದ ಮನುಷ್ಯನು ವ್ಯಾಕುಲನಾಗುತ್ತಾನೋ ಆ ವ್ಯಾಕುಲತೆಯು ಅವನಿಗೆ ಅಸಹ್ಯ ವಾದರೆ ಭಗವಂತನು ಆ ಸಂಶಯವನ್ನು ಯಾವುದಾದರೂ ರೀತಿಯಿಂದ, 'ಉಪಾಯದಿಂದ ದೂರಗೊಳಿಸುತ್ತಾನೆ. ಮನುಷ್ಯನು ಎಷ್ಟು ತಿಳಿದುಕೊಂಡಿರುವನೋ ಅದನ್ನೇ ಪೂರ್ಣವೆಂದು ತಿಳಿದು ನಾನು ಸರಿಯಾಗಿ ತಿಳಿದಿರುವೆನೆಂದು ಅಭಿಮಾನಪಡುವುದೇ ದೊಡ್ಡ ತಪ್ಪುಮಾಡುತ್ತಾನೆ. ಈ ಅಭಿಮಾನವೇ ಮಹಾನ್ ಪತನವಾಗಿಸುವಂತಹುದು.

'ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ'– ಈ ಶ್ಲೋಕದಲ್ಲಿ 'ಅಜ್ಞ' ಮತ್ತು ಅಶ್ರದ್ಧೆಯುಳ್ಳ ಸಂಶಯಾತ್ಮಾ ಮನುಷ್ಯನ ವರ್ಣನೆ ಇದೆ. ತಾತ್ಪರ್ಯ – ಒಳಗೆ ಸಂಶಯವಿರುವಾಗ ಆ ಮನುಷ್ಯನಿಗೆ ತನ್ನ ವಿವೇಕವತಿ ಬುದ್ಧಿ ಇರುವುದಿಲ್ಲ ಹಾಗೂ ಅವನು ಬೇರೆಯವರ ಮಾತನ್ನು ಒಪ್ಪಿಕೊಳ್ಳುವುದಿಲ್ಲ, ಅದಕ್ಕಾಗಿ ಆ ಸಂಶಯಾತ್ಮಾ ಮನುಷ್ಯನ ಪತನವಾಗುತ್ತದೆ. ಅವನಿಗೆ ಈ ಲೋಕವಾಗಲೀ ಪರಲೋಕವಾಗಲೀ ಸುಖವಾಗಲೀ ಇರುವುದಿಲ್ಲ.

ಸಂಶಯಾತ್ಮಾ ಮನುಷ್ಯನ ಈ ಲೋಕದ ವ್ಯವಹಾರ ಕೆಟ್ಟು ಹೋಗುತ್ತದೆ. ಕಾರಣ – ಅವನು ಪ್ರತಿಯೊಂದು ವಿಷಯದಲ್ಲಿ ಈ ಮನುಷ್ಯನು ಸರಿಯಾಗಿದ್ದಾನೋ ಇಲ್ಲವೋ, ಈ ಊಟ ಚೆನ್ನಾಗಿದೆಯೋ ಕೆಟ್ಟದಾಗಿದೆಯೋ, ಇದರಲ್ಲಿ ನನ್ನ ಹಿತವಿದೆಯೋ ಇಲ್ಲವೋ, ಇತ್ಯಾದಿ ಸಂಶಯಪಡುತ್ತಿರುತ್ತಾನೆ. ಆ ಸಂಶಯಾತ್ಮಾ ಮನುಷ್ಯನಿಗೆ ಪರಲೋಕದಲ್ಲಿಯೂ ಶ್ರೇಯಸ್ಸಾಗುವುದಿಲ್ಲ, ಏಕೆಂದರೆ, ಶ್ರೇಯಸ್ಸಿನಲ್ಲಿ ನಿಶ್ಚಯಾತ್ಮಿಕಾ ಬುದ್ಧಿಯ ಆವಶ್ಯಕತೆ ಇರುತ್ತದೆ ಮತ್ತು ಸಂಶಯಾತ್ಮಾ ಮನುಷ್ಯನು ಇಬ್ಬಗೆಯಲ್ಲಿ ಇರುವ ಕಾರಣ ಯಾವುದೇ ಒಂದು ನಿಶ್ಚಯವನ್ನು ಮಾಡಲಾರನು, ಜಪ ಮಾಡಲೇ ಅಥವಾ ಸ್ವಾಧ್ಯಾಯಮಾಡಲೇ, ಪ್ರಪಂಚದ ಕೆಲಸ ಮಾಡಲೇ ಅಥವಾ ಪರಮಾತ್ಮನ ಪ್ರಾಪ್ತಿಮಾಡಿಕೊಳ್ಳಲೇ ಇತ್ಯಾದಿ. ಒಳಗೆ ಸಂಶಯ ತುಂಬಿರುವ ಕಾರಣ ಅವನ ಮನಸ್ಸಿನಲ್ಲಿಯೂ ಸುಖ-ಶಾಂತಿ ಇರುವುದಿಲ್ಲ, ಅದಕ್ಕಾಗಿ ವಿವೇಕವತಿ ಬುದ್ಧಿ ಮತ್ತು ಶ್ರದ್ಧೆಯ ಮೂಲಕ ಸಂಶಯವನ್ನು ಅವಶ್ಯವಾಗಿ ದೂರವಾಗಿಸಬೇಕು.

ಎರಡು ಬೇರೆ-ಬೇರೆ ವಿಷಯಗಳನ್ನು ಓದಿದಾಗ – ಕೇಳಿದಾಗ ಸಂಶಯ ಉಂಟಾಗುತ್ತದೆ. ಆ ಸಂಶಯವು ಒಂದೋ ವಿವೇಕ-ವಿಚಾರದಿಂದ ದೂರವಾಗಬಲ್ಲದು ಅಥವಾ ಶಾಸ್ತ್ರ ಹಾಗೂ ಸಂತ-ಮಹಾಪುರುಷರ ಮಾತನ್ನು ಶ್ರದ್ಧಾಪೂರ್ವಕ ಒಪ್ಪಿಕೊಳ್ಳುವುದರಿಂದ ದೂರಾಗಬಲ್ಲದು. ಅದಕ್ಕಾಗಿ ಸಂಶಯಾತ್ಮಾ ಪುರುಷನಲ್ಲಿ ಅಜ್ಞತೆ ಇದ್ದರೆ ಅವನು ವಿವೇಕ-ವಿಚಾರವನ್ನು ಹೆಚ್ಚಿಸಬೇಕು ಮತ್ತು ಅಶ್ರದ್ಧೆ ಇದ್ದರೆ

ಶ್ರದ್ಧೆಯನ್ನು ಹೆಚ್ಚಿಸಬೇಕು; ಏಕೆಂದರೆ, ಇವೆರಡರಲ್ಲಿನ ಒಂದನ್ನು ವಿಶೇಷವಾಗಿ ತನ್ನದಾಗಿಸದೆ ಸಂಶಯ ದೂರವಾಗುವುದಿಲ್ಲ.

ಪರಿತಿಷ್ಠ ಭಾವ – ಜ್ಞಾನವಿದ್ದರೆ ಸಂಶಯ ಅಳಿದು ಹೋಗುತ್ತದೆ **'ಜ್ಞಾನಸಂಛಿನ್ನಸಂಶಯಮ್'** *(೪/೩೯)* ಮತ್ತು ಶ್ರದ್ಧೆ ಇದ್ದರೂ ಸಂಶಯ ಅಳಿದುಹೋಗುತ್ತದೆ – **'ಶ್ರದ್ಧಾವಾನ್‌ಲ್ಲಭತೇ ಜ್ಞಾನಮ್'** *(೪/೩೯)*. ಆದರೆ ಜ್ಞಾನ ಮತ್ತು ಶ್ರದ್ಧೆ ಇವೆರಡೂ ಇಲ್ಲದಿದ್ದರೆ ಸಂಶಯವು ಅಳಿದುಹೋಗಲಾರದು. ಅದಕ್ಕಾಗಿ ಸಂಶಯಾತ್ಮಾ ಮನುಷ್ಯನಲ್ಲಿ ಜ್ಞಾನ *(ವಿವೇಕ)*ವಿಲ್ಲ ಮತ್ತು ಶ್ರದ್ಧೆಯೂ ಇಲ್ಲವೋ ಅರ್ಥಾತ್ – ಸ್ವತಃ ತಿಳಿಯುವುದಿಲ್ಲ, ಬೇರೆಯವರ ಮಾತನ್ನು ಕೇಳುವುದಿಲ್ಲ ಅಂತಹವನ ಪತನವಾಗುತ್ತದೆ.

–❁–

ಸಂಬಂಧ *- ಭಗವಂತನು ೩೩ನೇ ಶ್ಲೋಕದಿಂದ ಜ್ಞಾನಯೋಗದ ಪ್ರಕರಣವನ್ನು ಪ್ರಾರಂಭಿಸುತ್ತಾ ಜ್ಞಾನಪ್ರಾಪ್ತಿಯ ಉಪಾಯ ಹಾಗೂ ಜ್ಞಾನದ ಮಹಿಮೆಯನ್ನು ಹೇಳಿದನು. ಯಾವ ಜ್ಞಾನ ಗುರುಗಳ ಬಳಿಯಲ್ಲಿದ್ದು ಅವರ ಸೇವಾದಿಗಳನ್ನು ಮಾಡುವುದರಿಂದ ಉಂಟಾಗುತ್ತದೋ, ಅದೇ ಜ್ಞಾನವು ಕರ್ಮಯೋಗದಿಂದ ಸಿದ್ಧವಾದ ಮನುಷ್ಯನಿಗೆ ತನ್ನಿಂದ-ತಾನೇ ದೊರೆಯುತ್ತದೆ – ಹೀಗೆ ಹೇಳಿ ಭಗವಂತನು ಜ್ಞಾನಪ್ರಾಪ್ತಿಯ ಪಾತ್ರ – ಅಪಾತ್ರತೆಯ ವರ್ಣನೆಮಾಡುತ್ತಾ ಪ್ರಕರಣದ ಉಪಸಂಹಾರ ಮಾಡಿದನು.*

ಈಗ ಸಿದ್ಧವಾಗಲು ಕರ್ಮಯೋಗಿಯು ಏನುಮಾಡಬೇಕೆಂಬ ಪ್ರಶ್ನೆ ಉಂಟಾಗುತ್ತದೆ. ಇದರ ಉತ್ತರವನ್ನು ಭಗವಂತನು ಮುಂದಿನ ಶ್ಲೋಕದಲ್ಲಿ ಕೊಡುತ್ತಾನೆ —

ಯೋಗಸಂನ್ಯಸ್ತಕರ್ಮಾಣಂ ಜ್ಞಾನಸಂಛಿನ್ನಸಂಶಯಮ್ ।
ಆತ್ಮವಂತಂ ನ ಕರ್ಮಾಣಿ ನಿಬಧ್ನಂತಿ ಧನಂಜಯ ॥ ೪೧॥

ಧನಂಜಯ - ಹೇ ಧನಂಜಯಾ!, **ಯೋಸಂನ್ಯಸ್ತಕರ್ಮಾಣಮ್** - ಯೋಗ (ಸಮತೆ)ದ ಮೂಲಕ ಯಾರ ಸಂಪೂರ್ಣ ಕರ್ಮಗಳಿಂದ ಸಂಬಂಧವಿಚ್ಛೇದವಾಗಿದೆಯೋ (ಮತ್ತು), **ಜ್ಞಾನಸಂಛಿನ್ನಸಂಶಯಮ್** - ವಿವೇಕ ಜ್ಞಾನದ ಮೂಲಕ ಯಾರ ಸಂಪೂರ್ಣ ಸಂಶಯಗಳು ನಾಶವಾಗಿವೆಯೋ (ಅಂತಹ), **ಆತ್ಮವಂತಮ್** - ಸ್ವರೂಪ-ಪರಾಯಣ ಮನುಷ್ಯನಿಗೆ, **ಕರ್ಮಾಣಿ** - ಕರ್ಮಗಳು, **ನ, ನಿಬಧ್ನಂತಿ** - ಬಂಧಿಸುವುದಿಲ್ಲ. ॥ ೪೧॥

ಹೇ ಧನಂಜಯಾ! ಯೋಗ (ಸಮತೆ)ದ ಮೂಲಕ ಯಾರಲ್ಲಿ ಸಂಪೂರ್ಣ ಕರ್ಮಗಳಿಂದ ಸಂಬಂಧ ವಿಚ್ಛೇದವಾಗಿದೆಯೋ ಮತ್ತು ವಿವೇಕ ಜ್ಞಾನದ ಮೂಲಕ ಯಾರ ಸಂಪೂರ್ಣ ಸಂಶಯಗಳು ನಾಶವಾಗಿವೆಯೋ ಅಂತಹ ಸ್ವರೂಪ-ಪರಾಯಣ ಮನುಷ್ಯನಿಗೆ ಕರ್ಮಗಳು ಬಂಧಿಸುವುದಿಲ್ಲ. ॥ ೪೧॥

ವ್ಯಾಖ್ಯಾ - **'ಯೋಗಸಂನ್ಯಸ್ತಕರ್ಮಾಣಮ್'** – ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿಗಳು ನಮಗೆ ದೊರಕಿದ ವಸ್ತುಗಳು ಮತ್ತು ನಮ್ಮದೆಂದು ಕಾಣುವುದೆಲ್ಲವೂ ಬೇರೆಯವರ ಸೇವೆಗಾಗಿಯೇ ಇವೆ, ನಮ್ಮ ಅಧಿಕಾರ ನಡೆಸಲು ಅಲ್ಲ. ಈ ದೃಷ್ಟಿಯಿಂದ ಆ ವಸ್ತುಗಳನ್ನು ಬೇರೆಯವರ ಸೇವೆಯಲ್ಲಿ (ಅವರದೆಂದು ತಿಳಿದು) ತೊಡಗಿಸಿದಾಗ ಕರ್ಮಗಳ ಮತ್ತು ವಸ್ತುಗಳ ಪ್ರವಾಹ ಪ್ರಪಂಚದತ್ತ ಆಗಿ ಹೋಗುತ್ತದೆ ಮತ್ತು ತನ್ನಲ್ಲಿರುವ ಸ್ವತಃಸಿದ್ಧ ಸಮತೆಯ ಅನುಭವವಾಗುತ್ತದೆ. ಈ ಪ್ರಕಾರ ಯೋಗ (ಸಮತೆ)ದ ಮೂಲಕ ಯಾರು ಕರ್ಮಗಳಿಂದ ಸಂಬಂಧ ಕಡಿದುಕೊಂಡಿರುವನೋ ಅವನು **'ಯೋಗಸಂನ್ಯಸ್ತಕರ್ಮಾ'** ಆಗಿದ್ದಾನೆ.

ಕರ್ಮಯೋಗಿಯು ಕರ್ಮದಲ್ಲಿ ಅಕರ್ಮ ಹಾಗೂ ಅಕರ್ಮದಲ್ಲಿ ಕರ್ಮವನ್ನು ನೋಡುತ್ತಾನೋ ಅರ್ಥಾತ್ - ಕರ್ಮಮಾಡುವಾಗಲೂ ಅಥವಾ ಮಾಡದಿರುವಾಗಲೂ ಎರಡೂ ಅವಸ್ಥೆಗಳಲ್ಲಿ ನಿತ್ಯನಿರಂತರ ಅಸಂಗವಾಗಿರುತ್ತಾನೋ ಆಗ ಅವನೇ ನಿಜವಾಗಿ **'ಯೋಗಸಂನ್ಯಸ್ತಕರ್ಮಾ'** ಆಗುತ್ತಾನೆ.

'ಜ್ಞಾನಸಂಛಿನ್ನಸಂಶಯಮ್' – ಮನುಷ್ಯನೊಳಗೆ ಪ್ರಾಯಶಃ ಕರ್ಮಮಾಡುತ್ತಾ ಇದ್ದು ಕರ್ಮಗಳಿಂದ ತನ್ನ ಸಂಬಂಧ ವಿಚ್ಛೇದ ಹೇಗಾದೀತು? ತನಗಾಗಿ ಏನನ್ನೂ ಮಾಡದಿದ್ದರೆ ತನ್ನ ಶ್ರೇಯಸ್ಸು ಹೇಗಾದೀತು? ಇತ್ಯಾದಿ ಈ ಸಂಶಯಗಳು ಇರುತ್ತವೆ. ಆದರೆ ಅವನು ಕರ್ಮಗಳ ತತ್ತ್ವವನ್ನು ಒಳ್ಳೆಯ ರೀತಿಯಿಂದ ತಿಳಿದುಕೊಂಡಾಗ* ಅವನ ಎಲ್ಲ ಸಂಶಯಗಳು ಇಲ್ಲವಾಗುತ್ತವೆ. ಕರ್ಮಗಳು ಮತ್ತು ಅವುಗಳ ಫಲಗಳ ಆದಿ ಮತ್ತು ಅಂತ್ಯವಾಗುತ್ತದೆ, ಆದರೆ ಸ್ವರೂಪವು ಹೇಗಿದೆಯೋ ಹಾಗೆಯೇ ಇರುತ್ತದೆ ಈ ಮಾತಿನ ಸ್ಪಷ್ಟ ಜ್ಞಾನ ಅವನಿಗೆ ಉಂಟಾಗುತ್ತದೆ. ಅದಕ್ಕಾಗಿ ಎಲ್ಲ

* ಕರ್ಮಗಳ ತತ್ತ್ವವನ್ನು ಇದೇ ಅಧ್ಯಾಯದ ೧೬ರಿಂದ ೩೨ನೇ ಶ್ಲೋಕದವರೆಗಿನ ಪ್ರಕರಣದಲ್ಲಿ ವಿಶೇಷವಾಗಿ ವರ್ಣಿಸಲಾಗಿದೆ. ಅದರಲ್ಲಿಯೂ ೧೮ನೇ ಶ್ಲೋಕವು ಮುಖ್ಯವಾಗಿದೆ.

ಕರ್ಮಗಳ ಸಂಬಂಧ 'ಪರ' (ಪ್ರಪಂಚ)ದ ಜೊತೆಗಿದೆ, 'ಸ್ವ' (ಸ್ವರೂಪ) ಇದರೊಂದಿಗೆ ಖಂಡಿತವಾಗಿ ಇಲ್ಲ. ಈ ದೃಷ್ಟಿಯಿಂದ ತನಗಾಗಿ ಕರ್ಮಮಾಡುವುದರಿಂದ ಕರ್ಮಗಳೊಂದಿಗೆ ಸಂಬಂಧ ಬೆಳೆಯುತ್ತದೆ ಮತ್ತು ನಿಷ್ಕಾಮ ಭಾವದಿಂದ ಕೇವಲ ಬೇರೆಯವರಿಗಾಗಿ ಕರ್ಮಮಾಡುವು ದರಿಂದ ಕರ್ಮಗಳಿಂದ ಸಂಬಂಧ ವಿಚ್ಛೇದವಾಗುತ್ತದೆ. ಇದರಿಂದ – ಬೇರೆಯವರಿಗಾಗಿ ಕರ್ಮ ಮಾಡುವುದರಿಂದ ತನ್ನ ಶ್ರೇಯಸ್ಸು ಆಗುತ್ತದೆ, ತನಗಾಗಿ ಕರ್ಮಮಾಡುವುದ ರಿಂದ ಅಲ್ಲ ಎಂಬುದು ಸಿದ್ಧವಾಗುತ್ತದೆ.

'ಆತ್ಮವಂತಮ್' – ಕರ್ಮಯೋಗಿಯ ಉದ್ದೇಶವು ಸ್ವರೂಪಬೋಧವನ್ನು ಪ್ರಾಪ್ತಮಾಡಿಕೊಳ್ಳುವುದಾಗಿದೆ. ಅದಕ್ಕಾಗಿ ಅವನು ಸದಾಕಾಲ ಸ್ವರೂಪದ ಪರಾಯಣನಾಗಿರುತ್ತಾನೆ. ಅವನ ಎಲ್ಲ ಕರ್ಮಗಳು ಪ್ರಪಂಚಕ್ಕಾಗಿಯೇ ಆಗುತ್ತವೆ. ಸೇವೆಯಾದರೋ ಸ್ವರೂಪದಿಂದಲೇ ಬೇರೆಯ ವರಿಗಾಗಿ ಆಗುತ್ತದೆ. ಊಟ-ತಿಂಡಿ, ಮಲಗುವುದು, ಕುಳಿತುಕೊಳ್ಳುವುದು ಇತ್ಯಾದಿ ಜೀವನ ನಿರ್ವಾಹದ ಸಮಸ್ತ ಕ್ರಿಯೆಗಳೂ ಕೂಡ ಬೇರೆಯವರಿಗಾಗಿ ಆಗುತ್ತವೆ; ಏಕೆಂದರೆ, ಕ್ರಿಯಾಮಾತ್ರದ ಸಂಬಂಧ ಪ್ರಪಂಚದೊಂದಿಗೆ ಇದೆ, ಸ್ವರೂಪದೊಂದಿಗೆ ಇಲ್ಲ.

'ನ ಕರ್ಮಾಣಿ ನಿಬಧ್ನಂತಿ' – ತನಗಾಗಿ ಯಾವುದೇ ಕರ್ಮ ಮಾಡದಿರುವುದರಿಂದ ಕರ್ಮಯೋಗಿಗೆ ಸಂಪೂರ್ಣ ಕರ್ಮ ಗಳಿಂದ ಸಂಬಂಧ ವಿಚ್ಛೇದವಾಗುತ್ತದೆ ಅರ್ಥಾತ್ ಅವನು ಎಂದೆಂದಿಗೂ ಸಂಸಾರ ಬಂಧನದಿಂದ ಸರ್ವಥಾ ಮುಕ್ತನಾಗುತ್ತಾನೆ (೪/೨೩).

ಕರ್ಮಗಳು ಸ್ವರೂಪದಿಂದ ಬಂಧನಕಾರಕ ಅಲ್ಲವೇ ಅಲ್ಲ, ಕರ್ಮಗಳಲ್ಲಿ ಫಲೇಚ್ಛೆ, ಮಮತೆ, ಆಸಕ್ತಿ ಮತ್ತು ಕರ್ತೃತ್ವಾಭಿಮಾನವೇ ಬಂಧಿಸುವಂತಹುದು.

—❋—

ಸಂಬಂಧ - ಹಿಂದಿನ ಶ್ಲೋಕದಲ್ಲಿ ಭಗವಂತನು – ಜ್ಞಾನದ ಮೂಲಕ ಸಂಶಯದ ನಾಶವಾಗುತ್ತದೆ ಮತ್ತು ಸಮತೆಯ ಮೂಲಕ ಕರ್ಮಗಳಿಂದ ಸಂಬಂಧ ವಿಚ್ಛೇದವಾಗುತ್ತದೆ ಎಂದು ಹೇಳಿದನು. ಈಗ ಮುಂದಿನ ಶ್ಲೋಕದಲ್ಲಿ ಭಗವಂತನು ಜ್ಞಾನದ ಮೂಲಕ ತನ್ನ ಸಂಶಯದ ನಾಶಮಾಡಿ ಸಮತೆಯಲ್ಲಿ ಸ್ಥಿತನಾಗಲು ಅರ್ಜುನನಿಗೆ ಆಜ್ಞೆಕೊಡುತ್ತಾನೆ —

ತಸ್ಮಾದಜ್ಞಾನಸಂಭೂತಂ ಹೃತ್‌ಸ್ಥಂ ಜ್ಞಾನಾಸಿನಾತ್ಮನಃ ।
ಛಿತ್ತ್ವೈನಂ ಸಂಶಯಂ ಯೋಗಮಾತಿಷ್ಠೋತ್ತಿಷ್ಠ ಭಾರತ ॥ ೪೨॥

ತಸ್ಮಾತ್ - ಆದಕ್ಕಾಗಿ, **ಭಾರತ** -ಹೇ ಭರತವಂಶೀ ಅರ್ಜುನಾ!, **ಹೃತ್ಸ್ಥಮ್** - ಹೃದಯದಲ್ಲಿ ಸ್ಥಿತವಾದ, **ಏನಮ್** - ಈ, **ಅಜ್ಞಾನಸಂಭೂತಮ್** - ಅಜ್ಞಾನದಿಂದ ಉಂಟಾದ, **ಆತ್ಮನಃ** - ತನ್ನ, **ಸಂಶಯಮ್** - ಸಂಶಯವನ್ನು, **ಜ್ಞಾನಾಸಿನಾ** - ಜ್ಞಾನರೂಪೀ ಖಡ್ಗದಿಂದ, **ಛಿತ್ತ್ವಾ** - ಕತ್ತರಿಸಿ, **ಯೋಗಮ್** - ಯೋಗ (ಸಮತೆ)ಯಲ್ಲಿ, **ಆತಿಷ್ಠ** - ಸ್ಥಿತನಾಗು (ಮತ್ತು), **ಉತ್ತಿಷ್ಠ**- (ಯುದ್ಧಕ್ಕಾಗಿ) ಎದ್ದುನಿಲ್ಲು. ॥ ೪೨॥

ಆದಕ್ಕಾಗಿ ಹೇ ಭರತವಂಶೀ ಅರ್ಜುನಾ! ಹೃದಯದಲ್ಲಿ ಸ್ಥಿತವಾದ ಈ ಅಜ್ಞಾನದಿಂದ ಉಂಟಾದ ತನ್ನ ಸಂಶಯ ವನ್ನು ಜ್ಞಾನರೂಪೀ ಖಡ್ಗದಿಂದ ಕತ್ತರಿಸಿ, ಯೋಗ (ಸಮತೆ)ದಲ್ಲಿ ಸ್ಥಿತನಾಗು ಮತ್ತು ಯುದ್ಧಕ್ಕಾಗಿ ಎದ್ದುನಿಲ್ಲು. ॥ ೪೨॥

ವ್ಯಾಖ್ಯಾ - **'ತಸ್ಮಾದಜ್ಞಾನಸಂಭೂತಂ ..... ಛಿತ್ತ್ವೈನಂ ಸಂಶಯಮ್'** – ಹಿಂದಿನ ಶ್ಲೋಕದಲ್ಲಿ ಭಗವಂತನು – ಯಾರು ಸಮತೆಯ ಮೂಲಕ ಸಮಸ್ತ ಕರ್ಮಗಳಿಂದ ಸಂಬಂಧ ವಿಚ್ಛೇದ ಮಾಡಿಕೊಂಡಿರುವನೋ ಮತ್ತು ಜ್ಞಾನದ ಮೂಲಕ ಸಮಸ್ತ ಸಂಶಯಗಳನ್ನು ನಾಶಮಾಡಿಕೊಂಡಿರುವನೋ, ಆ ಆತ್ಮಪರಾಯಣ ಕರ್ಮಯೋಗಿಗೆ ಕರ್ಮಗಳು ಬಂಧಿಸು ವುದಿಲ್ಲ ಅರ್ಥಾತ್-ಅವನು ಜನ್ಮ ಮರಣದಿಂದ ಮುಕ್ತನಾಗುತ್ತಾನೆ ಎಂದು ಹೇಳಿರುವನು. ಈಗ ಭಗವಂತನು **'ತಸ್ಮಾತ್'** ಪದದಿಂದ ಅರ್ಜುನನಿಗೂ ಹಾಗೆಯೇ ತಿಳಿದು ಕೊಂಡು ಕರ್ತವ್ಯಕರ್ಮಮಾಡುವ ಪ್ರೇರಣೆ ಕೊಡುತ್ತಾನೆ.

ಅರ್ಜುನನ ಹೃದಯದಲ್ಲಿ – ಯುದ್ಧರೂಪೀ ಘೋರಕರ್ಮದಿಂದ ನನ್ನ ಶ್ರೇಯಸ್ಸು ಹೇಗಾದೀತು? ಮತ್ತು ಶ್ರೇಯಸ್ಸಿಗಾಗಿ ನಾನು ಕರ್ಮಯೋಗದ ಅನುಷ್ಠಾನ ಮಾಡಲೇ ಅಥವಾ ಜ್ಞಾನ ಯೋಗದ್ದೋ? ಎಂಬ ಸಂಶಯವಿತ್ತು. ಈ ಶ್ಲೋಕದಲ್ಲಿ ಭಗವಂತನು ಈ ಸಂಶಯವನ್ನು ದೂರ ಮಾಡುವ ಪ್ರೇರಣೆ ಕೊಡುತ್ತಾನೆ; ಏಕೆಂದರೆ ಸಂಶಯವು ಇರುವಾಗ ಕರ್ತವ್ಯದ ಪಾಲನೆ ಸರಿಯಾಗಿ ಆಗಲಾರದು.

'ಅಜ್ಞಾನಸಂಭೂತಮ್' – ಪದದ ಭಾವ – ಎಲ್ಲ ಸಂಶಯ ಗಳು ಅಜ್ಞಾನದಿಂದ ಅರ್ಥಾತ್ -ಕರ್ಮಗಳ ಮತ್ತು ಯೋಗದ ತತ್ತ್ವವನ್ನು ಸರಿಯಾಗಿ ತಿಳಿಯದಿರುವುದರಿಂದಲೇ ಉಂಟಾಗುತ್ತವೆ. ಕ್ರಿಯೆಗಳನ್ನು ಮತ್ತು ಪದಾರ್ಥಗಳನ್ನು ತನ್ನವು ಹಾಗೂ ತನಗಾಗಿ ಎಂದು ತಿಳಿಯುವುದೇ ಅಜ್ಞಾನ ವಾಗಿದೆ. ಈ ಅಜ್ಞಾನವಿರುವ ತನಕ ಅಂತಃಕರಣದಲ್ಲಿ ಸಂಶಯಗಳು ಇರುತ್ತವೆ; ಏಕೆಂದರೆ, ಕ್ರಿಯೆಗಳು ಮತ್ತು ಪದಾರ್ಥಗಳು

ವಿನಾಶಿಯಾಗಿವೆ ಹಾಗೂ ಸ್ವರೂಪವು ಅವಿನಾಶೀಯಾಗಿದೆ.

ಮೂರನೇ ಅಧ್ಯಾಯದಲ್ಲಿ ಕರ್ಮಯೋಗದ ಆಚರಣೆ ಮಾಡುವ ಮತ್ತು ಈ ನಾಲ್ಕನೇ ಅಧ್ಯಾಯದಲ್ಲಿ ಕರ್ಮಯೋಗವನ್ನು ತತ್ತ್ವದಿಂದ ತಿಳಿಯುವ ಮಾತು ವಿಶೇಷ ರೂಪದಿಂದ ಬಂದಿದೆ. ಕಾರಣ – ಕರ್ಮಮಾಡುವ ಜೊತೆ-ಜೊತೆಗೆ ಕರ್ಮವನ್ನು ತಿಳಿಯುವುದರ ಆವಶ್ಯಕತೆಯು ತುಂಬಾ ಇದೆ. ಸರಿಯಾಗಿ ತಿಳಿಯದೇ ಯಾವುದೇ ಕರ್ಮವು ಒಳ್ಳೆಯ ರೀತಿಯಿಂದ ಆಗುವುದಿಲ್ಲ. ಇದಲ್ಲದೆ ಒಳ್ಳೆ ರೀತಿಯಿಂದ ತಿಳಿದು ಕರ್ಮಮಾಡುವುದರಿಂದ ಬಂಧಿಸುವಂತಹ ಕರ್ಮಗಳೇ ಮುಕ್ತವಾಗಿಸುವುದಾಗುತ್ತವೆ (೪/೧೬ ಮತ್ತು ೩೨). ಅದಕ್ಕಾಗಿ ಈ ಅಧ್ಯಾಯದಲ್ಲಿ ಭಗವಂತನು ಕರ್ಮಗಳನ್ನು ತತ್ತ್ವದಿಂದ ತಿಳಿಯುವುದರ ಬಗ್ಗೆ ವಿಶೇಷ ಒತ್ತ ಕೊಟ್ಟಿರುವನು.

ಹಿಂದಿನ ಶ್ಲೋಕದಲ್ಲಿಯೂ **'ಜ್ಞಾನಸಂಛಿನ್ನಸಂಶಯಮ್'** ಪದವು ಇದೇ ಅರ್ಥದಿಂದ ಬಂದಿದೆ. ಯಾವ ಮನುಷ್ಯನು ಕರ್ಮ ಮಾಡುವ ವಿದ್ಯೆಯನ್ನು ತಿಳಿದುಕೊಳ್ಳುವನೋ, ಅವನ ಎಲ್ಲ ಸಂಶಯಗಳು ನಾಶವಾಗುತ್ತವೆ. ಕರ್ಮಮಾಡುವ ವಿದ್ಯೆಯು – ತನಗಾಗಿ ಏನನ್ನೂ ಮಾಡದಿರುವುದೇ ಆಗಿದೆ.

'ಯೋಗಮಾತಿಷ್ಠೋತ್ತಿಷ್ಠ ಭಾರತ' – ಅರ್ಜುನನು ತನ್ನ ಬಿಲ್ಲು ಬಾಣಗಳನ್ನು ತ್ಯಾಗಮಾಡಿ ರಥದ ನಡುವೆ ಕುಳಿತಿದ್ದನು (೧/೪೭). ಅವನು ಭಗವಂತನಲ್ಲಿ 'ನಾನು ಯುದ್ಧಮಾಡುವುದಿಲ್ಲ' – **'ನ ಯೋತ್ಸ್ಯೆ'** (೨/೯) ಎಂದು ಸ್ಪಷ್ಟವಾಗಿ ಹೇಳಿದ್ದನು. ಇಲ್ಲಿ ಭಗವಂತನು ಅರ್ಜುನನಿಗೆ ಯೋಗದಲ್ಲಿ ಸ್ಥಿತನಾಗಿ ಯುದ್ಧಕ್ಕಾಗಿ ಎದ್ದು ನಿಲ್ಲಲು ಆಜ್ಞೆಕೊಡುತ್ತಿದ್ದಾನೆ. ಇದೇ ಮಾತನ್ನು ಭಗವಂತನು ೨ನೇ ಅಧ್ಯಾಯದ ೪೮ನೇ ಶ್ಲೋಕದಲ್ಲಿ **'ಯೋಗಸ್ಥಃ ಕುರು ಕರ್ಮಾಣಿ'** (ಯೋಗದಲ್ಲಿ ಸ್ಥಿತನಾಗಿ ಕರ್ತವ್ಯಕರ್ಮಗಳನ್ನು ಮಾಡು) ಎಂಬ ಪದಗಳಿಂದ ಹೇಳಿದ್ದನು. ಯೋಗದ ಅರ್ಥ 'ಸಮತೆ' ಯಾಗಿದೆ – **'ಸಮತ್ವಂ ಯೋಗ ಉಚ್ಯತೇ'** (೨/೪೮).

ಅರ್ಜುನನು ಯುದ್ಧವನ್ನು ಪಾಪವೆಂದು ತಿಳಿಯುತ್ತಿದ್ದನು (೧/೩೬ ಮತ್ತು ೪೫). ಅದಕ್ಕಾಗಿ ಭಗವಂತನು ಅರ್ಜುನನಿಗೆ ಸಮತೆಯಲ್ಲಿ ಸ್ಥಿತನಾಗಿ ಯುದ್ಧಮಾಡಲು ಆಜ್ಞೆಕೊಡುತ್ತಿದ್ದಾನೆ; ಏಕೆಂದರೆ, ಸಮತೆಯಲ್ಲಿ ಸ್ಥಿತನಾಗಿದ್ದು ಯುದ್ಧಮಾಡುವುದರಿಂದ ಪಾಪತಟ್ಟುವುದಿಲ್ಲ (೨/೩೮). ಅದಕ್ಕಾಗಿ ಸಮತೆಯಲ್ಲಿ ಸ್ಥಿತನಾಗಿ ಕರ್ತವ್ಯ-ಕರ್ಮಗಳನ್ನು ಮಾಡುವುದೇ ಕರ್ಮ ಬಂಧನದಿಂದ ಬಿಡುಗಡೆಹೊಂದುವ ಉಪಾಯವಾಗಿದೆ.

ಪ್ರಪಂಚದಲ್ಲಿ ಹಗಲು-ರಾತ್ರಿ ಅನೇಕ ಕರ್ಮಗಳು ಆಗುತ್ತಿರುತ್ತವೆ, ಆದರೆ ಆ ಕರ್ಮಗಳಲ್ಲಿ ರಾಗ-ದ್ವೇಷಗಳು ಇಲ್ಲದಿರುವುದರಿಂದ ನಾವು ಪ್ರಪಂಚದ ಆ ಕರ್ಮಗಳಲ್ಲಿ ಬಂಧಿತರಾಗದೆ ನಿರ್ಲಿಪ್ತನಾಗಿರುತ್ತೇವೆ. ಯಾವ ಕರ್ಮಗಳಲ್ಲಿ ನಮಗೆ ರಾಗ-ದ್ವೇಷಗಳುಂಟಾಗುವವೋ ಅದೇ ಕರ್ಮಗಳಿಂದ ನಾವು ಬಂಧಿತರಾಗುತ್ತೇವೆ. ಕಾರಣ-ರಾಗ ಅಥವಾ ದ್ವೇಷದಿಂದ ಕರ್ಮಗಳೊಂದಿಗೆ ನಮ್ಮ ಸಂಬಂಧ ಬೆಳೆಯುತ್ತದೆ. ರಾಗ-ದ್ವೇಷಗಳು ಇಲ್ಲದಿರುವಾಗ ಅರ್ಥಾತ್-ಸಮತೆ ಬಂದುಬಿಟ್ಟಾಗ, ಕರ್ಮಗಳೊಂದಿಗೆ ನಮ್ಮ ಸಂಬಂಧ ಬೆಳೆಯುವುದಿಲ್ಲ; ಆದ್ದರಿಂದ ಮನುಷ್ಯನು ಕರ್ಮಬಂಧನದಿಂದ ಮುಕ್ತನಾಗುತ್ತಾನೆ.

ನಮ್ಮ ಸ್ವರೂಪವನ್ನು ನೋಡಿದರೆ ಅದರಲ್ಲಿ ಸಮತೆ ಸ್ವತಃಸಿದ್ಧವಾಗಿದೆ. ವಿಚಾರಮಾಡಿರಿ – ಪ್ರತಿಯೊಂದು ಕರ್ಮ ಆರಂಭವಾಗುತ್ತದೆ ಮತ್ತು ಅಂತ್ಯವಾಗುತ್ತದೆ, ಆ ಕರ್ಮಗಳ ಫಲವೂ ಕೂಡ ಆದಿ ಹಾಗೂ ಅಂತ್ಯವುಳ್ಳದ್ದಾಗಿರುತ್ತದೆ. ಆದರೆ ಸ್ವರೂಪವು ಹೇಗಿದೆಯೋ ಹಾಗೆಯೇ ಇರುತ್ತದೆ. ಕರ್ಮ ಮತ್ತು ಫಲಗಳು ಅನೇಕವಾಗಿರುತ್ತವೆ, ಆದರೆ ಸ್ವರೂಪ ಒಂದೇ ಆಗಿದೆ. ಆದ್ದರಿಂದ ಯಾವುದೇ ಕರ್ಮವನ್ನು ತನಗಾಗಿ ಮಾಡದೆ, ಕ್ರಿಯಾ-ಪದಾರ್ಥಗಳು ತನ್ನವು ಮತ್ತು ತನಗಾಗಿ ಎಂದು ತಿಳಿಯದೆ, ಕ್ರಿಯಾ-ಪದಾರ್ಥರೂಪೀ ಪ್ರಪಂಚದಿಂದ ಸರ್ವಥಾ ಸಂಬಂಧ ವಿಚ್ಛೇದವಾದಾಗ ಸ್ವತಃಸಿದ್ಧ ಸಮತೆಯು ತನ್ನಿಂದ ತಾನೇ ಅನುಭವಕ್ಕೆ ಬರುತ್ತದೆ.

—✱— ✱ —✱—

ಓಂ ತತ್ಸದಿತಿ ಶ್ರೀಮದ್ಭವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನ ಸಂವಾದೇ
ಜ್ಞಾನಕರ್ಮಸಂನ್ಯಾಸಯೋಗೋನಾಮ ಚತುರ್ಥೋऽಧ್ಯಾಯಃ॥ ೪॥

ಈ ಪ್ರಕಾರ ಓಂ, ತತ್. ಸತ್ ಈ ಭಗವನ್ನಾಮಗಳ ಉಚ್ಚಾರಣಪೂರ್ವಕ ಬ್ರಹ್ಮವಿದ್ಯಾ ಮತ್ತು ಯೋಗಶಾಸ್ತ್ರಮಯ ಶ್ರೀಮದ್ಭಗವದ್ಗೀತೋಪನಿಷದ್‌ರೂಪೀ ಶ್ರೀಕೃಷ್ಣಾರ್ಜುನ ಸಂವಾದದಲ್ಲಿ 'ಜ್ಞಾನಕರ್ಮಸಂನ್ಯಾಸಯೋಗವೆಂಬ' ನಾಲ್ಕನೇ ಅಧ್ಯಾಯವು ಪೂರ್ಣವಾಯಿತು ॥ ೪॥

ತತ್ತ್ವಜ್ಞಾನದ ಪ್ರಾಪ್ತಿಗಾಗಿ ಕರ್ಮಯೋಗ ಮತ್ತು ಸಾಂಖ್ಯಯೋಗದ ವರ್ಣನೆ ಆಗಿರುವುದರಿಂದ ಈ ನಾಲ್ಕನೇ ಅಧ್ಯಾಯದ ಹೆಸರು **'ಜ್ಞಾನಕರ್ಮಸಂನ್ಯಾಸಯೋಗ'** ವಾಗಿದೆ.

ನಾಲ್ಕನೇ ಅಧ್ಯಾಯದ ಪದ, ಅಕ್ಷರ ಮತ್ತು ಉವಾಚ

(೧) ಈ ಅಧ್ಯಾಯದಲ್ಲಿ **'ಅಥ ಚತುರ್ಥೋऽಧ್ಯಾಯಃ'** ಇದರ ೩, **ಅರ್ಜುನ ಉವಾಚ** ಇತ್ಯಾದಿ ಪದಗಳ ೬, ಶ್ಲೋಕಗಳ

೫೧೧ ಮತ್ತು ಪುಷ್ಪಿಕೆಯ ೧೩ ಪದಗಳಿವೆ. ಈ ಪ್ರಕಾರ ಒಟ್ಟಿಗೆ ೫೩೩ ಪದಗಳಿವೆ.

(೨) ಈ ಅಧ್ಯಾಯದಲ್ಲಿ **'अथ चतुर्थोऽध्यायः'** ಇದರ ೭, **अर्जुन उवाच** ಇತ್ಯಾದಿ ಪದಗಳ ೨೦, ಶ್ಲೋಕಗಳ ೧,೩ಳಿಳಿ ಮತ್ತು ಪುಷ್ಪಿಕೆಯ ೫೦ ಅಕ್ಷರಗಳಿವೆ. ಈ ಪ್ರಕಾರ ಸಂಪೂರ್ಣ ಅಕ್ಷರಗಳು ಒಟ್ಟಿಗೆ ೧, ೪೨೧ ಇವೆ. ಈ ಅಧ್ಯಾಯದ ಎಲ್ಲ ಶ್ಲೋಕಗಳು ೩೨ ಅಕ್ಷರಗಳಾದ್ದಾಗಿವೆ.

(೩) ಈ ಅಧಾಯದಲ್ಲಿ ೨ **भगवानुवाच** ಮತ್ತು ೧ **अर्जुन उवाच** ಹೀಗೆ ೩ ಉವಾಚಗಳಿವೆ.

ನಾಲ್ಕನೇ ಅಧ್ಯಾಯದಲ್ಲಿ ಬಳಸಿದ ಛಂದಗಳು

ಈ ಅಧ್ಯಾಯದ ೪೨ ಶ್ಲೋಕಗಳಲ್ಲಿನ – ೩,೧ ಮತ್ತು ೩೮ನೇ ಶ್ಲೋಕದ ಪ್ರಥಮ ಚರಣದಲ್ಲಿ ಹಾಗೂ ೨, ೧೦, ೧೩ ಮತ್ತು ೪೦ನೇ ಶ್ಲೋಕಗಳ ತೃತೀಯ ಚರಣದಲ್ಲಿ 'ನಗಣ' ಉಪಯೋಗವಾದ್ದರಿಂದ **'ನ-ವಿಪುಲಾ'**, ೬ನೇ ಶ್ಲೋಕದ ಪ್ರಥಮ ಚರಮದಲ್ಲಿ 'ರಗಣ' ವಿರುವುದರಿಂದ **'ರ-ವಿಪುಲಾ'** ಮತ್ತು ೨೪ನೇ ಶ್ಲೋಕದ ಪ್ರಥಮ ಚರಣದಲ್ಲಿ ಹಾಗೂ ೩೦ನೇ ಶ್ಲೋಕದ ಮೂರನೇ ಚರಣದಲ್ಲಿ 'ಭಗಣ' ಇರುವುದರಿಂದ **'ಭ-ವಿಪುಲಾ'** ಸಂಜ್ಞೆಯುಳ್ಳ ಛಂದ ಗಳಿವೆ. ಉಳಿದ ೩೩ ಶ್ಲೋಕಗಳು ಸರಿಯಾಗಿ **'ಪಥ್ಯಾವಕ್ತ್ರ'** ಅನುಷ್ಟುಪ್ ಛಂದದ ಲಕ್ಷಣಗಳಿಂದ ಕೂಡಿವೆ.

—✱— ✱ — ✱—

॥ ಓಂ ಶ್ರೀಪರಮಾತ್ಮನೇ ನಮಃ ॥

॥ ಅಥ ಪಂಚಮೋಽಧ್ಯಾಯಃ - ಕರ್ಮಸಂನ್ಯಾಸಯೋಗವು ॥

ಅವತರಣಿಕೆ –

ಶ್ರೀಭಗವಂತನು ನಾಲ್ಕನೇ ಅಧ್ಯಾಯದ ೩೩ರಿಂದ ೩೭ನೇ ಶ್ಲೋಕದವರೆಗೆ ಕರ್ಮ ಹಾಗೂ ಪದಾರ್ಥಗಳನ್ನು ಸ್ವರೂಪದಿಂದ ತ್ಯಾಗಮಾಡಿ ತತ್ತ್ವದರ್ಶೀ ಮಹಾಪುರುಷರ ಬಳಿಗೆ ಹೋಗಿ ಜ್ಞಾನವನ್ನು ಪಡೆಯುವ ಪ್ರಚಲಿತ ಪ್ರಣಾಲಿಯನ್ನು ಪ್ರಶಂಸೆ ಮಾಡಿ ಮತ್ತೆ ಇದಕ್ಕಾಗಿ (೪/೩೪) ಅರ್ಜುನನಿಗೆ ಆಜ್ಞೆಕೊಟ್ಟನು. ತತ್ತ್ವಜ್ಞಾನ ಪಡೆಯುವ ಈ ಪ್ರಣಾಲಿಯಲ್ಲಿ ಕರ್ಮಗಳನ್ನು ಸ್ವರೂಪದಿಂದ ತ್ಯಾಗಮಾಡಿ ಏಕಾಂತದಲ್ಲಿ ಪರಮಾತ್ಮ ತತ್ತ್ವದ ಮನನ ಮಾಡುವುದು ಆವಶ್ಯಕವಾಗಿದೆ. ಅರ್ಜುನನ ಮನಸ್ಸಿನಲ್ಲಿ ಮೊದಲೇ ಯುದ್ಧಮಾಡದಿರುವ ಭಾವವಿತ್ತು; ಏಕೆಂದರೆ, ಅವನು ತನ್ನ ಶ್ರೇಯಸ್ಸನ್ನು ಬಯಸುತ್ತಿದ್ದನು ಮತ್ತು ಯುದ್ಧವನ್ನು ಪಾಪವೆಂದು ತಿಳಿಯುತ್ತಿದ್ದನು. ಆದ್ದರಿಂದ ಅರ್ಜುನನು– 'ಭಗವಂತನು ನನಗೆ ಈ ಪ್ರಕಾರ ಕರ್ಮಗಳನ್ನು ಸ್ವರೂಪದಿಂದ ತ್ಯಾಗಮಾಡಿ ಜ್ಞಾನಪ್ರಾಪ್ತಿಗಾಗಿ ಸಾಧನೆಮಾಡಲು ಆಜ್ಞೆಕೊಡುತ್ತಿದ್ದಾನೆ' ಎಂದು ತಿಳಿದನು.

ಬಳಿಕ ನಾಲ್ಕನೇ ಅಧ್ಯಾಯದ್ದೇ ೩೮ನೇ ಶ್ಲೋಕದಲ್ಲಿ ಭಗವಂತನು – 'ಅದೇ ತತ್ತ್ವಜ್ಞಾನವನ್ನು ಸಾಧಕನು ಕರ್ಮಯೋಗದ ಮೂಲಕ ಅವಶ್ಯವಾಗಿ ಸ್ವಯಂ ತಾನೇ-ತನ್ನಲ್ಲಿ ಪಡೆದುಕೊಳ್ಳುತ್ತಾನೆ' ಎಂದು ಹೇಳಿದನು. ಕರ್ಮಯೋಗದ ಸಾಧಕನಿಗೆ ಜ್ಞಾನಪ್ರಾಪ್ತಿಗಾಗಿ ಬೇರೆ ಸಾಧನೆಗಳ ಹಾಗೂ ತತ್ತ್ವದರ್ಶೀ ಮಹಾಪುರುಷರ ಬಳಿಗೆ ಹೋಗಿ ವಾಸಿಸುವ ಯಾವ ಆವಶ್ಯಕತೆಯೂ ಇಲ್ಲವೆಂಬುದೇ ಭಾವವಾಗಿದೆ. ಇದರಿಂದ ಸ್ಪಷ್ಟವಾಗಿಯೇ ತತ್ತ್ವಜ್ಞಾನದ ಪ್ರಾಪ್ತಿಯಲ್ಲಿ ಕರ್ಮಯೋಗದ ಪ್ರಶಂಸೆ ವಿಶೇಷರೂಪದಿಂದ ಆಗಿದೆ.

ಈ ಪ್ರಕಾರ ಅರ್ಜುನನು ೪ನೇ ಅಧ್ಯಾಯದ ೩೩ನೇ ಶ್ಲೋಕದಲ್ಲಿ ಜ್ಞಾನಪಡೆಯುವ ಪ್ರಚಲಿತ ಪ್ರಣಾಲಿಯ ಪ್ರಶಂಸೆ ಕೇಳಿದನು ಮತ್ತು ೩೪ನೇ ಶ್ಲೋಕದಲ್ಲಿ '**ವಿದ್ಧಿ**' ಪದದಿಂದ ಆ ಪ್ರಣಾಲಿಯಿಂದ ಜ್ಞಾನವನ್ನು ಪಡೆಯಲು ತನಗಾಗಿ ವಿಶೇಷ ಆಜ್ಞೆಯೆಂದು ತಿಳಿದನು. ಮತ್ತೆ ೩೮ ಮತ್ತು ೪೧ ಶ್ಲೋಕಗಳಲ್ಲಿ ಕರ್ಮಯೋಗದ ಪ್ರಶಂಸೆ ಕೇಳಿದನು. ೪೨ನೇ ಶ್ಲೋಕದಲ್ಲಿ ಭಗವಂತನು ಅರ್ಜುನನಿಗೆ '**ಯೋಗಮಾತಿಷ್ಠೋತ್ತಿಷ್ಠ**' ಪದದಿಂದ ಕರ್ಮಯೋಗದ ವಿಧಿಯಿಂದ ಯುದ್ಧಮಾಡಲು ಆಜ್ಞೆ ಮಾಡಿದನು. ಈ ರೀತಿ ಜ್ಞಾನಯೋಗ ಮತ್ತು ಕರ್ಮಯೋಗ-ಎರಡರ ಪ್ರಶಂಸೆ ಕೇಳಿ ಹಾಗೂ ಎರಡರ ಬಗ್ಗೆ ಆಜ್ಞೆ ಪಡೆದು ಅರ್ಜುನನು – ಇವೆರಡರಲ್ಲಿ ಯಾವ ಸಾಧನೆ ನನಗಾಗಿ ಶ್ರೇಷ್ಠವಾಗಿದೆ? ಈ ನಿರ್ಣಯವನ್ನು ಮಾಡದಾದನು. ಆದ್ದರಿಂದ ಇದರ ನಿರ್ಣಯವನ್ನು ಮಾಡಲು ಭಗವಂತನಲ್ಲಿ ಅರ್ಜುನನು ಪ್ರಶ್ನಿಸುತ್ತಿದ್ದಾನೆ –

ಅರ್ಜುನ ಉವಾಚ

ಸಂನ್ಯಾಸಂ ಕರ್ಮಣಾಂ ಕೃಷ್ಣ ಪುನರ್ಯೋಗಂ ಚ ಶಂಸಸಿ ।
ಯಚ್ಛ್ರೇಯ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್ ॥ ೧॥

ಕೃಷ್ಣ - ಹೇ ಕೃಷ್ಣಾ!, **ಕರ್ಮಣಾಮ್** - ಕರ್ಮಗಳನ್ನು, **ಸಂನ್ಯಾಸಮ್** - ಸ್ವರೂಪದಿಂದ ತ್ಯಾಗಮಾಡಲು, **ಚ** - ಮತ್ತು **ಪುನಃ** - ಪುನಃ, **ಯೋಗಮ್** - ಕರ್ಮಯೋಗವನ್ನು, **ಶಂಸಸಿ** - ಪ್ರಶಂಸೆಮಾಡುತ್ತಿರುವೆ (ಆದ್ದರಿಂದ), **ಏತಯೋಃ** - ಇವೆರಡು ಸಾಧನೆಗಳಲ್ಲಿ, **ಯತ್** - ಯಾವ, **ಏಕಮ್** - ಒಂದನ್ನು, **ಸುನಿಶ್ಚಿತಮ್** - ನಿಶ್ಚಿತರೂಪದಿಂದ, **ಶ್ರೇಯಃ** - ಶ್ರೇಯಸ್ಸಾಗುವಂತಹ, **ತತ್** - ಅದನ್ನು, **ಮೇ**, **ಬ್ರೂಹಿ** - ನನಗೆ ಹೇಳು. ॥ ೧॥

ಅರ್ಜುನನು ಹೇಳಿದನು – ಹೇ ಕೃಷ್ಣಾ! ನೀನು ಕರ್ಮಗಳನ್ನು ಸ್ವರೂಪದಿಂದ ತ್ಯಾಗವನ್ನು ಮತ್ತು ಪುನಃ ಕರ್ಮಯೋಗವನ್ನು ಪ್ರಶಂಸೆಮಾಡುತ್ತಿರುವೆ, ಆದ್ದರಿಂದ ಇವೆರಡು ಸಾಧನೆಗಳಲ್ಲಿ ಯಾವುದಾದರು ಒಂದನ್ನು ನಿಶ್ಚಿತರೂಪದಿಂದ ಶ್ರೇಯಸ್ಸಾಗುವಂತಹುದನ್ನು ನನಗೆ ಹೇಳು. ॥ ೧॥

ವ್ಯಾಖ್ಯಾ - '**ಸಂನ್ಯಾಸಂ ಕರ್ಮಣಾಂ ಕೃಷ್ಣ**' – ಕೌಟುಂಬಿಕ ಸ್ನೇಹದ ಕಾರಣದಿಂದ ಅರ್ಜುನನ ಮನಸ್ಸಿನಲ್ಲಿ ಯುದ್ಧಮಾಡದಿರುವ ಭಾವ ಉಂಟಾಗಿತ್ತು. ಇದರ ಸಮರ್ಥನೆಯಲ್ಲಿ ಅರ್ಜುನನು ಮೊದಲನೇ ಅಧ್ಯಾಯದಲ್ಲಿ ಅನೇಕ ತರ್ಕಗಳನ್ನು ಮತ್ತು ಯುಕ್ತಿಗಳನ್ನೂ ಮುಂದಿಟ್ಟ. ಅವನು ಯುದ್ಧ ಮಾಡುವುದನ್ನು ಪಾಪವೆಂದು ತಿಳಿಸಿದನು (೧/೪೫). ಯುದ್ಧಮಾಡದೆ ಭಿಕ್ಷಾನ್ನದಿಂದ ಜೀವನ-ನಿರ್ವಾಹ ಮಾಡುವುದು ಶ್ರೇಷ್ಠವೆಂದು ತಿಳಿಯತೊಡಗಿದ (೨/೫) ಮತ್ತು ಅವನು ನಿಶ್ಚಯಗೈದು ಭಗವಂತನಲ್ಲಿ – ನಾನು ಯಾವುದೇ ಸ್ಥಿತಿಯಲ್ಲಿ ಯುದ್ಧಮಾಡಲಾರೆ (೨/೯) ಎಂದು ಸ್ಪಷ್ಟವಾಗಿ ಹೇಳಿದನು.

ಪ್ರಾಯಶಃ ವಕ್ತಾಸ ಶಬ್ದಗಳನ್ನು ಶ್ರೋತೃಗಳು ತಮ್ಮ

ವಿಚಾರಕ್ಕನುಸಾರ ಅರ್ಥ ಮಾಡಿಕೊಳ್ಳುತ್ತಾರೆ. ಸ್ವಜನರನ್ನು ನೋಡಿ ಅರ್ಜುನನ ಹೃದಯದಲ್ಲಿ ಉಂಟಾದ ಮೋಹಕ್ಕನುಸಾರ ಅವನಿಗೆ ಯುದ್ಧರೂಪೀ ಕರ್ಮದ ತ್ಯಾಗದ ಮಾತು ಉಚಿತವೆಂದು ಕಂಡು ಬಂತು. ಆದ್ದರಿಂದ ಭಗವಂತನ ಶಬ್ದಗಳನ್ನು ಅವನು ತನ್ನ ವಿಚಾರಕ್ಕನುಸಾರ – ಭಗವಂತನು ಕರ್ಮಗಳನ್ನು ಸ್ವರೂಪದಿಂದ ತ್ಯಾಗಮಾಡಿ ಪ್ರಚಲಿತ ಪ್ರಣಾಲಿಗನುಸಾರ ತತ್ತ್ವಜ್ಞಾನವನ್ನು ಪಡೆಯುವ ಪ್ರಶಂಸೆ ಮಾಡುತ್ತಿದ್ದಾನೆ ಎಂದು ತಿಳಿದನು.

'ಪುನರ್ಯೋಗಂ ಚ ಶಂಸಸಿ' – ನಾಲ್ಕನೇ ಅಧ್ಯಾಯದ ಏಳನೇ ಶ್ಲೋಕದಲ್ಲಿ ಭಗವಂತನು ಕರ್ಮಯೋಗಿಗೆ ಬೇರೆ ಯಾವುದೇ ಸಾಧನೆಯಿಲ್ಲದೆ ಅವಶ್ಯವಾಗಿ ತತ್ತ್ವಜ್ಞಾನ ಪ್ರಾಪ್ತವಾಗುವ ಮಾತನ್ನು ಹೇಳಿರುವನು. ಅದನ್ನೆ ಲಕ್ಷ್ಯದಲ್ಲಿಟ್ಟು ಅರ್ಜುನನು ಭಗವಂತನಲ್ಲಿ – ಒಮ್ಮೆ ನೀನು ಜ್ಞಾನಯೋಗದ ಪ್ರಶಂಸೆ ಮಾಡುತ್ತಿರುವೆ (೪/೩೩) ಒಮ್ಮೆ ಕರ್ಮಯೋಗದ ಪ್ರಶಂಸೆ ಮಾಡುತ್ತಿರುವೆ (೪/೪೧) ಎಂದು ಹೇಳುತ್ತಿರುವನು.

'ಯಚ್ಛ್ರೇಯ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್' ಇದೇ ರೀತಿಯ ಪ್ರಶ್ನೆಯನ್ನು ಅರ್ಜುನನು ಏನೇ ಅಧ್ಯಾಯದ ಒನೇ ಶ್ಲೋಕದಲ್ಲಿಯೂ **'ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ'** – ಪದಗಳಿಂದ ಮಾಡಿದ್ದನು. ಅದರ ಉತ್ತರದಲ್ಲಿ ಭಗವಂತನು ೨ನೇ ಅಧ್ಯಾಯದ ೪೭ ಮತ್ತು ೪೮ನೇ ಶ್ಲೋಕಗಳಲ್ಲಿ ಕರ್ಮಯೋಗದ ವ್ಯಾಖ್ಯೆಮಾಡಿ ಅದರ ಆಚರಣೆ ಮಾಡಲು ಹೇಳಿದನು. ಪುನಃ ೩ನೇ ಅಧ್ಯಾಯದ ೨ನೇ ಶ್ಲೋಕದಲ್ಲಿ ಅರ್ಜುನನು – **'ತದೇಕಂ ವದ ನಿಶ್ಚಿತ್ಯ ಯೇನ ಶ್ರೇಯೋऽಹಮಾಪ್ನುಯಾಮ್'** ಪದಗಳಿಂದ ಪುನಃ ತನ್ನ ಶ್ರೇಯಸ್ಸಿನ ಮಾತನ್ನು ಕೇಳಿದನು. ಅದರ ಉತ್ತರದಲ್ಲಿ ಭಗವಂತನು – ೩ನೇ ಅಧ್ಯಾಯದ ೩೦ನೇ ಶ್ಲೋಕದಲ್ಲಿ ನಿಷ್ಕಾಮ, ನಿರ್ಮಮ, ಮತ್ತು ಸಂತಾಪರಹಿತನಾಗಿ ಯುದ್ಧಮಾಡುವ ಆಜ್ಞೆಮಾಡಿದ್ದನು ಹಾಗೂ ೩೫ನೇ ಶ್ಲೋಕದಲ್ಲಿ ತನ್ನ ಧರ್ಮವನ್ನು ಪಾಲಿಸುವುದನ್ನು ಶ್ರೇಯಸ್ಕರ ವೆಂದು ಹೇಳಿದನು.

ಇಲ್ಲಿಮೇಲೆ ಹೇಳಿದ ಪದಗಳಿಂದ ಅರ್ಜುನನು ಕೇಳಿರುವ ಮಾತಿನ ಉತ್ತರವಾಗಿ ಭಗವಂತನು – 'ಕರ್ಮಯೋಗವು ಶ್ರೇಷ್ಠ ವಾಗಿದೆ' ಎಂದು ಹೇಳಿದನು (೫/೨). ಕರ್ಮಯೋಗಿಯು ಸುಖವಾಗಿ ಸಂಸಾರ-ಬಂಧನದಿಂದ ಮುಕ್ತನಾಗುತ್ತಾನೆ (೫/೩). ಕರ್ಮಯೋಗವಿಲ್ಲದೆ ಸಾಂಖ್ಯಯೋಗದ ಸಾಧನೆ ಸಿದ್ಧವಾಗುವುದು ಕಷ್ಟವಾಗಿದೆ; ಆದರೆ ಕರ್ಮಯೋಗಿಯು ಬೇಗನೇ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ (೫/೬). ಈ ಪ್ರಕಾರ ಹೇಳಿ ಭಗವಂತನು ಅರ್ಜುನನಿಗೆ – 'ಕರ್ಮಯೋಗವೇ ನಿನಗಾಗಿ ಶೀಘ್ರವಾಗಿ ಮತ್ತು ಸುಲಭವಾಗಿ ಬ್ರಹ್ಮನ ಪ್ರಾಪ್ತಿಮಾಡಿಸುವುದಾಗಿದೆ,' ಆದ್ದರಿಂದ ನೀನು ಕರ್ಮಯೋಗದ್ದೇ ಅನುಷ್ಠಾನ ಮಾಡು ಎಂದು ಹೇಳುವಂತಿದೆ.

ಅರ್ಜುನನ ಮನಸ್ಸಿನಲ್ಲಿ ಮುಖ್ಯವಾಗಿ ತನ್ನ ಶ್ರೇಯಸ್ಸಿನ ಇಚ್ಛೆಯೇ ಇತ್ತು, ಅದಕ್ಕಾಗಿ ಅವನು ಪದೇ-ಪದೇ ಭಗವಂತನ ಮುಂದೆ ಶ್ರೇಯಸ್ಸಿನವಿಷಯಕ ಜಿಜ್ಞಾಸೆಯನ್ನಿಡುತ್ತಾನೆ (೨/೭; ೩/೨; ೫/೧). ಶ್ರೇಯಸ್ಸಿನ ಪ್ರಾಪ್ತಿಯಲ್ಲಿ ಇಚ್ಛೆಯ ಪ್ರಧಾನತೆ ಇದೆ. ಸಾಧಕನ ಸಾಧನೆಯ ಸಫಲತೆಯಲ್ಲಿ ತಡವಾಗುವ ಕಾರಣವೂ – ಶ್ರೇಯಸ್ಸಿನ ಇಚ್ಛೆಯು ಪೂರ್ಣವಾಗಿ ಜಾಗ್ರತವಾಗದಿರುವುದೇ ಆಗಿದೆ. ತೀವ್ರವಾದ ವೈರಾಗ್ಯ ವಿಲ್ಲದಿರುವ ಸಾಧಕರಲ್ಲಿಕೂಡ ಇಚ್ಛೆ ಜಾಗ್ರತವಾದಾಗ ಕರ್ಮಯೋಗದ ಸಾಧನೆ ಸುಲಭವಾಗಿ ಮಾಡಬಲ್ಲರು.* ಅರ್ಜುನನ ಹೃದಯದಲ್ಲಿ ಭೋಗಗಳಲ್ಲಿ ಪೂರ್ಣ ವೈರಾಗ್ಯವಿಲ್ಲದಿದ್ದರೂ, ಅವನಲ್ಲಿ ತನ್ನ ಶ್ರೇಯಸ್ಸಿನ ಇಚ್ಛೆ ಇದೆ, ಅದಕ್ಕಾಗಿ ಅವನು ಕರ್ಮಯೋಗದ ಅಧಿಕಾರಿಯಾಗಿದ್ದಾನೆ.

ಮೊದಲನೇ ಅಧ್ಯಾಯದ ೨೨ನೇ ಹಾಗೂ ಎರಡನೆ ಅಧ್ಯಾಯದ ೬ನೇ ಶ್ಲೋಕವನ್ನು ನೋಡುವುದರಿಂದ – ಅರ್ಜುನನು ಮರ್ತ್ಯಲೋಕದ ರಾಜ್ಯದಮಾತೇನು, ತ್ರೈಲೋಕ್ಯದ ರಾಜ್ಯವೂ ಕೂಡ ಬಯಸುವುದಿಲ್ಲವೆಂದು ತಿಳಿದುಬರುತ್ತದೆ. ಆದರೆ ನಿಜವಾಗಿ ಅರ್ಜುನನು ರಾಜ್ಯ ಹಾಗೂ ಭೋಗಗಳನ್ನು ಸರ್ವಥಾ ಬಯಸುವುದಿಲ್ಲ ಎಂಬ ಮಾತು ಇಲ್ಲ. ಅವನು ಹೇಳುತ್ತಾನೆ – ಯುದ್ಧದಲ್ಲಿ ಕುಟುಂಬದವರನ್ನು ಕೊಂದು ರಾಜ್ಯ ಮತ್ತು ವಿಜಯವನ್ನು ಬಯಸುವುದಿಲ್ಲ. ಇದರ ತಾತ್ಪರ್ಯ – ಒಂದು ವೇಳೆ ಕುಟುಂಬದವರನ್ನು ಕೊಲ್ಲದೆ ರಾಜ್ಯವು ದೊರಕಿದರೆ ನಾನು ಅದನ್ನು ತೆಗೆದುಕೊಳ್ಳಲು ಸಿದ್ಧನಿದ್ದೇನೆ. ೨ನೇ ಅಧ್ಯಾಯದ ೫ನೇ ಶ್ಲೋಕದಲ್ಲಿ ಅರ್ಜುನನು – ಹಿರಿಯರನ್ನು ಕೊಂದು ಭೋಗ ಭೋಗಿಸುವುದು ಸರಿಯಲ್ಲವೆಂದೇ ಹೇಳುತ್ತಾನೆ. ಇದರಿಂದ – ಹಿರಿಯರನ್ನು ಕೊಲ್ಲದೆ ರಾಜ್ಯ ಸಿಕ್ಕಿದರೆ ಅದು ಸ್ವೀಕೃತವಾಗಿದೆ ಎಂಬ ಧ್ವನಿ ಹೊರಡುತ್ತದೆ. ೨ನೇ ಅಧ್ಯಾಯದ ೬ನೇ ಶ್ಲೋಕದಲ್ಲಿ ಅರ್ಜುನನು – 'ಯಾರು ಗೆಲ್ಲುವರು – ಇದು ನಮಗೆ ತಿಳಿಯದು ಮತ್ತು ಅವರನ್ನು ಕೊಂದು ನಾವು ಬದುಕಲು ಬಯಸುವುದಿಲ್ಲ' ಎಂದು ಹೇಳುತ್ತಾನೆ. ಇದರ ತಾತ್ಪರ್ಯ – ಒಂದು ವೇಳೆ ನಮ್ಮ ವಿಜಯ ನಿಶ್ಚಿತವಾಗಿದೆ ಹಾಗೂ ಅವರನ್ನು ಕೊಲ್ಲದೆ ರಾಜ್ಯಸಿಗುವುದಾದರೆ ನಾನು

* **ಯೋಗಾಸ್ತ್ಯೋ ಮಯಾ ಪ್ರೋಕ್ತಾ ನೃಣಾಂ ಶ್ರೇಯೋವಿಧಿತ್ಸಯಾ। .....॥**
.....। ತೇಷ್ವನಿರ್ವಿಣ್ಣಚಿತ್ತಾನಾಂ ಕರ್ಮಯೋಗಸ್ತು ಕಾಮಿನಾಮ್॥
(ಶ್ರೀಮದ್ಭಾಗವತ ೧೧/೨೦/೬,೭)

ಪಡೆಯಲು ಸಿದ್ಧನಾಗಿದ್ದೇನೆ. ಮುಂದೆ ೨ನೇ ಅಧ್ಯಾಯದ ೩೭ನೇ ಶ್ಲೋಕದಲ್ಲಿ ಭಗವಂತನು ಅರ್ಜುನನಲ್ಲಿ – ನಿನ್ನ ಎರಡೂ ಕೈಗಳಲ್ಲಾದರೋ ಲಡ್ಡುಗಳಿವೆ; ನೀನು ಯುದ್ಧದಲ್ಲಿ ಸತ್ತರೆ ನಿನಗೆ ಸ್ವರ್ಗಸಿಗಬಹುದು ಮತ್ತು ಗೆದ್ದರೆ ರಾಜ್ಯಸಿಗಬಹುದು ಎಂದು ಹೇಳುತ್ತಾನೆ. ಒಂದು ವೇಳೆ ಅರ್ಜುನನ ಮನಸ್ಸಿನಲ್ಲಿ ಸ್ವರ್ಗ ಮತ್ತು ಜಗತ್ತಿನ ರಾಜ್ಯದ ಕಿಂಚಿತ್ತಾದರೂ ಇಚ್ಛೆ ಇಲ್ಲದಿರುತ್ತಿದ್ದರೆ ಭಗವಂತನು ಬಹುಶಃ ಹಾಗೆಯೇ ಹೇಳುತ್ತಿದ್ದನು. ಆದ್ದರಿಂದ ಅರ್ಜುನನ ಹೃದಯದಲ್ಲಿ ಕಂಡುಬರುವ ವೈರಾಗ್ಯವು ನಿಜವಾದುದಲ್ಲ. ಆದರೂ ಅವನಲ್ಲಿ ತನ್ನ ಶ್ರೇಯಸ್ಸಿನ ಇಚ್ಛೆ ಇದೆ, ಅದು ಈ ಶ್ಲೋಕದಲ್ಲಿಯೂ ಕಂಡುಬರುತ್ತದೆ.

–❋–

ಸಂಬಂಧ - ಈಗ ಭಗವಂತನು ಅರ್ಜುನನ ಪ್ರಶ್ನೆಯ ಉತ್ತರವನ್ನು ಕೊಡುತ್ತಿದ್ದಾನೆ —

ಶ್ರೀಭಗವಾನುವಾಚ

ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ ।
ತಯೋಸ್ತು ಕರ್ಮಸಂನ್ಯಾಸಾತ್ಕರ್ಮಯೋಗೋ ವಿಶಿಷ್ಯತೇ ॥ ೨॥

ಸಂನ್ಯಾಸಃ - ಸಂನ್ಯಾಸವು (ಸಾಂಖ್ಯಯೋಗ), **ಚ** - ಮತ್ತು **ಕರ್ಮಯೋಗಃ** - ಕರ್ಮಯೋಗವು, **ಉಭೌ** - ಎರಡೂ, **ನಿಃಶ್ರೇಯಸಕರೌ** - ಶ್ರೇಯಸ್ಕರವಾಗಿವೆ, **ತು** - ಆದರೆ, **ತಯೋಃ** - ಆ ಎರಡರಲ್ಲಿಯೂ, **ಕರ್ಮಸಂನ್ಯಾಸಾತ್** - ಕರ್ಮಸಂನ್ಯಾಸ (ಸಾಂಖ್ಯಯೋಗ)ಕ್ಕಿಂತ, **ಕರ್ಮಯೋಗಃ** - ಕರ್ಮಯೋಗವು, **ವಿಶಿಷ್ಯತೇ** - ಶ್ರೇಷ್ಠವಾಗಿದೆ. ॥ ೨॥

ಶ್ರೀಭಗವಂತನು ಹೇಳಿದನು – ಸಂನ್ಯಾಸ (ಸಾಂಖ್ಯಯೋಗ)ವು ಮತ್ತು ಕರ್ಮಯೋಗವು ಎರಡೂ ಶ್ರೇಯಸ್ಕರವಾಗಿವೆ. ಆದರೆ ಆ ಎರಡರಲ್ಲಿಯೂ ಕರ್ಮಸಂನ್ಯಾಸ (ಸಾಂಖ್ಯಯೋಗ)ಕ್ಕಿಂತ ಕರ್ಮಯೋಗವು ಶ್ರೇಷ್ಠವಾಗಿದೆ. ॥ ೨॥

ವ್ಯಾಖ್ಯಾ - [ಭಗವಂತನ ಸಿದ್ಧಾಂತಕ್ಕನುಸಾರ ಸಾಂಖ್ಯಯೋಗ ಮತ್ತು ಕರ್ಮಯೋಗದ ಪಾಲನೆಯನ್ನು ಯಾವುದೇ ವರ್ಣ, ಆಶ್ರಮ, ಸಂಪ್ರದಾಯ, ಮುಂತಾದವರಿಗೆ ಸೀಮಿತವಾಗಿರದೆ ಎಲ್ಲ ವರ್ಣ, ಆಶ್ರಮ, ಸಂಪ್ರದಾಯದ ಮನುಷ್ಯರಿಗಾಗಿ ಇದೆ. ಇದೇ ಅಧ್ಯಾಯದ ಮೊದಲನೇ ಶ್ಲೋಕದಲ್ಲಿ ಅರ್ಜುನನು ಕರ್ಮಗಳ ತ್ಯಾಗಗೈದು ವಿಧಿಪೂರ್ವಕ ಜ್ಞಾನವನ್ನು ಪಡೆಯುವ ಪ್ರಚಲಿತ ಪ್ರಣಾಲಿಯನ್ನು 'ಕರ್ಮಸಂನ್ಯಾಸ' ಹೆಸರಿನಿಂದ ಹೇಳಿರುವನು. ಆದರೆ ಭಗವಂತನ ಸಿದ್ಧಾಂತಕ್ಕನುಸಾರ ಜ್ಞಾನ ಪ್ರಾಪ್ತಿಗಾಗಿ ಸಾಂಖ್ಯಯೋಗದ ಪಾಲನೆಯನ್ನು ಪ್ರತಿಯೋರ್ವ ಮನುಷ್ಯನು ಸ್ವತಂತ್ರವಾಗಿ ಮಾಡಬಲ್ಲನು ಮತ್ತು ಅದನ್ನು ಪಾಲಿಸಲು ಕರ್ಮಗಳನ್ನು ಸ್ವರೂಪದಿಂದ ತ್ಯಾಗಮಾಡುವ ಆವಶ್ಯಕತೆಯು ಇಲ್ಲ. ಆದಕ್ಕಾಗಿ ಭಗವಂತನು ಪ್ರಚಲಿತ ಮತವನ್ನೂ ಆದರಿಸುತ್ತಾ ತನ್ನ ಸಿದ್ಧಾಂತಕ್ಕನುಸಾರ ಅರ್ಜುನನ ಪ್ರಶ್ನೆಯ ಉತ್ತರ ಕೊಡುತ್ತಾನೆ].

'ಸಂನ್ಯಾಸಃ' ಇಲ್ಲಿ **'ಸಂನ್ಯಾಸಃ'** ಪದದ ಅರ್ಥ – ಸಾಂಖ್ಯಯೋಗವಾಗಿದೆ, ಕರ್ಮಗಳ ಸ್ವರೂಪದಿಂದ ತ್ಯಾಗವಲ್ಲ. ಅರ್ಜುನನ ಪ್ರಶ್ನೆಯ ಉತ್ತರ ಕೊಡುತ್ತಾ ಭಗವಂತನು – ಕರ್ಮಗಳ ತ್ಯಾಗ ಪೂರ್ವಕ ಸಂನ್ಯಾಸದ ವಿವೇಚನೆ ಮಾಡದೆ ಕರ್ಮಮಾಡುತ್ತಾ ಜ್ಞಾನವನ್ನು ಪಡೆದುಕೊಳ್ಳುವ ಸಾಂಖ್ಯಯೋಗ ಮಾರ್ಗದ ವಿವೇಚನೆಯನ್ನು ಮಾಡುತ್ತಾನೆ. ಆ ಸಾಂಖ್ಯಯೋಗದ ಮೂಲಕ ಮನುಷ್ಯನು ಪ್ರತಿಯೊಂದು ವರ್ಣ, ಆಶ್ರಮ, ಸಂಪ್ರದಾಯ ಇತ್ಯಾದಿಗಳಲ್ಲಿ ಇರುತ್ತಿದ್ದು ಪ್ರತಿಯೊಂದು ಪರಿಸ್ಥಿತಿಯಲ್ಲಿ ಸ್ವತಂತ್ರವಾಗಿ ಜ್ಞಾನವನ್ನೂ ಪಡೆಯಬಲ್ಲನು. ಅರ್ಥಾತ್ – ತನ್ನ ಶ್ರೇಯಸ್ಸನ್ನು ಮಾಡಿಕೊಳ್ಳಬಲ್ಲನು.

ಸಾಂಖ್ಯಯೋಗದ ಸಾಧನೆಯಲ್ಲಿ ವಿವೇಕ-ವಿಚಾರದ ಪ್ರಾಮುಖ್ಯತೆ ಇರುತ್ತದೆ. ವಿವೇಕ ಪೂರ್ವಕ ತೀವ್ರ ವೈರಾಗ್ಯವಿಲ್ಲದೆ ಈ ಸಾಧನೆಯು ಸಫಲವಾಗುವುದಿಲ್ಲ. ಈ ಸಾಧನೆಯಲ್ಲಿ ಪ್ರಪಂಚದ ಸ್ವತಂತ್ರ ಅಸ್ತಿತ್ವವು ಅಭಾವವಾಗಿ ಏಕಮಾತ್ರ ಪರಮಾತ್ಮತತ್ತ್ವದಲ್ಲಿ ದೃಷ್ಟಿ ಇರುತ್ತದೆ. ರಾಗ ಅಳಿಯದೆ ಪ್ರಪಂಚದ ಸ್ವತಂತ್ರ ಅಸ್ತಿತ್ವದ ಅಭಾವವಾಗುವುದು ತುಂಬಾ ಕಷ್ಟವಾಗಿದೆ. ಆದಕ್ಕಾಗಿ ಭಗವಂತನು ದೇಹಾಭಿಮಾನಿಗಳಿಗಾಗಿ ಈ ಸಾಧನೆಯು ಕ್ಲೇಶಯುಕ್ತವೆಂದು ಹೇಳಿರುವನು (೧೨/೫) ಇದೇ ಅಧ್ಯಾಯದ ೬ನೇ ಶ್ಲೋಕದಲ್ಲಿಯೂ ಭಗವಂತನು – ಕರ್ಮಯೋಗದ ಸಾಧನೆಮಾಡದೆ ಸಂನ್ಯಾಸದ ಸಾಧನೆ ಆಗುವುದು ಕಷ್ಟ ಏಕೆಂದರೆ, ಪ್ರಪಂಚದಿಂದ ರಾಗವು ದೂರವಾಗಿಸಲು ಕರ್ಮಯೋಗವೇ ಸುಲಭವಾದ ಉಪಾಯ ವಾಗಿದೆ ಎಂದು ಹೇಳಿರುವನು.

'ಕರ್ಮಯೋಗಶ್ಚ' – ಎಲ್ಲ ಮಾನವರಲ್ಲಿ ಕರ್ಮಮಾಡುವ ರಾಗವು ಅನಾದಿಕಾಲದಿಂದ ನಡೆದು ಬಂದಿದೆ, ಅದನ್ನು ಅಳಿಸಲು ಕರ್ಮಮಾಡುವುದು ಆವಶ್ಯಕವಾಗಿದೆ (೬/೩) ಆದರೆ ಆ ಕರ್ಮವನ್ನು ಯಾವ ಭಾವ ಮತ್ತು ಉದ್ದೇಶದಿಂದ ಹೇಗೆ ಮಾಡಬಹುದು, ಮಾಡುವ ರಾಗವು ಸರ್ವಥಾ ಹೇಗೆ ಅಳಿದುಹೋದೀತು, ಅದರಂತೆ ಆ ಕರ್ತವ್ಯ-ಕರ್ಮವನ್ನು

ಮಾಡುವ ಕಲೆಗೆ 'ಕರ್ಮಯೋಗ' ಎಂದು ಹೇಳುತ್ತಾರೆ. ಕರ್ಮಯೋಗದಲ್ಲಿ ಕಾರ್ಯ ಸಣ್ಣದೋ-ದೊಡ್ಡದೋ ಇದರ ಕುರಿತು ದೃಷ್ಟಿ ಇರುವುದಿಲ್ಲ. ಯಾವುದೇ ಕರ್ತವ್ಯ-ಕರ್ಮ ಮುಂದೆ ಬಂದಾಗ ಅದನ್ನೇ ನಿಷ್ಕಾಮಭಾವದಿಂದ ಬೇರೆಯವರ ಹಿತಕ್ಕಾಗಿ ಮಾಡುವುದಾಗಿದೆ. ಕರ್ಮಗಳಿಂದ ಸಂಬಂಧ ವಿಚ್ಛೇದ ಮಾಡಲಿಕ್ಕಾಗಿ ಕರ್ಮಗಳನ್ನು ತನಗಾಗಿ ಮಾಡದಿರುವುದು ಆವಶ್ಯಕವಾಗಿದೆ. ತನಗಾಗಿ ಕರ್ಮ ಮಾಡದಿರುವುದರ ಅರ್ಥ – ಕರ್ಮಗಳ ಬದಲಿಗೆ ತನಗಾಗಿ ಏನನ್ನೂ ಪಡೆಯುವ ಇಚ್ಛೆ ಇಲ್ಲದಿರುವುದಾಗಿದೆ. ತನಗಾಗಿ ಏನಾದರು ಪಡೆಯುವ ಇಚ್ಛೆ ಇರುವತನಕ ಕರ್ಮಗಳೊಂದಿಗೆ ಸಂಬಂಧ ಇದ್ದುಕೊಂಡಿರುತ್ತದೆ.

'ನಿಃ ಶ್ರೇಯಸಕರಾವುಭೌ' – ಸಾಂಖ್ಯಯೋಗ ಮತ್ತು ಕರ್ಮಯೋಗ ಇವೆರಡು ಸಾಧನೆಗಳಲ್ಲಿ ಯಾವ ಸಾಧನೆ ನಿಶ್ಚಯವಾಗಿ ಶ್ರೇಯಸ್ಕರವಾಗಿದೆ? ಎಂಬದು ಅರ್ಜುನನ ಪ್ರಶ್ನೆಯಾಗಿತ್ತು. ಇದರ ಉತ್ತರವಾಗಿ ಭಗವಂತನು – ಅರ್ಜುನಾ! ಇವೆರಡೂ ಸಾಧನೆಗಳು ನಿಶ್ಚಯವಾಗಿ ಶ್ರೇಯಸ್ಕರವಾಗಿವೆ ಎಂದು ಹೇಳುತ್ತಾನೆ. ಕಾರಣ – ಎರಡರ ಮೂಲಕವೂ ಒಂದೇ ಸಮತೆಯ ಪ್ರಾಪ್ತಿಯಾಗುತ್ತದೆ. ಇದೇ ಅಧ್ಯಾಯದ ೪-೫ನೇ ಶ್ಲೋಕಗಳಲ್ಲಿಯೂ ಭಗವಂತನು ಇದೇ ಮಾತನ್ನು ಪುಷ್ಟಿಗೊಳಿಸಿರುವನು. ೧೩ನೇ ಅಧ್ಯಾಯದ ೨೪ನೇ ಶ್ಲೋಕದಲ್ಲಿಯೂ ಭಗವಂತನು ಸಾಂಖ್ಯಯೋಗ ಮತ್ತ ಕರ್ಮಯೋಗ – ಎರಡರಿಂದಲೂ ಪರಮಾತ್ಮತತ್ತ್ವದ ಅನುಭವವಾಗುವ ಮಾತನ್ನು ಹೇಳಿರುವನು. ಅದಕ್ಕಾಗಿ ಇವೆರಡೂ ಪರಮಾತ್ಮ ಪ್ರಾಪ್ತಿಯ ಸ್ವತಂತ್ರ ಸಾಧನೆಗಳಾಗಿವೆ (೫/೫).

'ತಯೋಸ್ತು ಕರ್ಮಸಂನ್ಯಾಸಾತ್' – ಒಂದೇ ಸಾಂಖ್ಯಯೋಗದ ಎರಡು ಭೇದಗಳಿವೆ – ಮೊದಲೆಯದು ೪ನೇ ಅಧ್ಯಾಯದ ೩೪ನೇ ಶ್ಲೋಕದಲ್ಲಿ ಹೇಳಿರುವ ಸಾಂಖ್ಯಯೋಗ, ಅದರಲ್ಲಿ ಕರ್ಮಗಳ ಸ್ವರೂಪದಿಂದ ತ್ಯಾಗವಿದೆ; ಮತ್ತು ಎರಡನೆಯದು ೨ನೇ ಅಧ್ಯಾಯದ ೧೧ರಿಂದ ೩೦ನೇ ಶ್ಲೋಕದವರೆಗೆ ಹೇಳಿರುವ ಸಾಂಖ್ಯಯೋಗ, ಅದರಲ್ಲಿ ಕರ್ಮಗಳ ಸ್ವರೂಪದಿಂದ ತ್ಯಾಗವಿಲ್ಲ. ಇಲ್ಲಿ **'ಕರ್ಮ ಸಂನ್ಯಾಸಾತ್'** ಪದವು ಎರಡೂ ಪ್ರಕಾರದ ಸಾಂಖ್ಯಯೋಗದ ವಾಚಕವಾಗಿದೆ.

'ಕರ್ಮಯೋಗೋ ವಿಶಿಷ್ಯತೆ' – ಮುಂದಿನ ೩ನೇ ಶ್ಲೋಕದಲ್ಲಿ ಭಗವಂತನು ಈ ಪದಗಳ ವ್ಯಾಖ್ಯೆಮಾಡುವಾಗ – ಕರ್ಮಯೋಗಿಯು ನಿತ್ಯಸಂನ್ಯಾಸಿಯೆಂದು ತಿಳಿಯಲು ಯೋಗ್ಯನಾಗಿದ್ದಾನೆ; ಏಕೆಂದರೆ ಅವನು ಸುಖವಾಗಿ ಸಂಸಾರ-ಬಂಧನದಿಂದ ಮುಕ್ತನಾಗುತ್ತಾನೆ ಎಂದು ಹೇಳಿರುವನು. ಪುನಃ ೬ನೇ ಶ್ಲೋಕದಲ್ಲಿ ಭಗವಂತನು – ಕರ್ಮಯೋಗವಿಲ್ಲದೆ ಸಾಂಖ್ಯಯೋಗದ ಸಾಧನೆ ಆಗುವುದು ಕಷ್ಟವಾಗಿದೆ ಹಾಗೂ ಕರ್ಮಯೋಗಿಯು ಬೇಗನೇ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ ಎಂದು ಹೇಳಿರುವನು. ತಾತ್ಪರ್ಯ – ಸಾಂಖ್ಯಯೋಗದಲ್ಲಿ ಕರ್ಮಯೋಗದ ಆವಶ್ಯಕತೆ ಇದೆ, ಆದರೆ ಕರ್ಮಯೋಗದಲ್ಲಿ ಸಾಂಖ್ಯಯೋಗದ ಆವಶ್ಯಕತೆ ಇಲ್ಲ. ಅದಕ್ಕಾಗಿ ಎರಡೂ ಸಾಧನೆಗಳೂ ಶ್ರೇಯಸ್ಕರವಾಗಿದ್ದರೂ ಕೂಡ ಭಗವಂತನು ಕರ್ಮಯೋಗವನ್ನೇ ಶ್ರೇಷ್ಠವೆಂದು ಹೇಳಿರುವನು.

ಕರ್ಮಯೋಗಿಯು ಲೋಕಸಂಗ್ರಹಕ್ಕಾಗಿ ಕರ್ಮಮಾಡುತ್ತಾನೆ – **'ಲೋಕ ಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ'** (೩/೨೦). ಲೋಕಸಂಗ್ರಹದ ತಾತ್ಪರ್ಯ – ನಿಸ್ವಾರ್ಥಭಾವದಿಂದ ಲೋಕಮರ್ಯಾದೆಯನ್ನು ಸುರಕ್ಷಿತವಾಗಿಡಲು ಜನರನ್ನು ಕೆಟ್ಟಮಾರ್ಗದಿಂದ ಬಿಡಿಸಿ ಸನ್ಮಾರ್ಗದಲ್ಲಿ ತರಲು ಕರ್ಮಮಾಡುವುದು ಅರ್ಥಾತ್ – ಕೇವಲ ಬೇರೆಯವರ ಹಿತಕ್ಕಾಗಿ ಕರ್ಮಮಾಡುವುದಾಗಿದೆ. ಇದನ್ನೇ ಗೀತೆಯಲ್ಲಿ 'ಯಜ್ಞಾರ್ಥಕರ್ಮ'ದ ಹೆಸರಿನಿಂದಲೂ ಹೇಳಲಾಗಿದೆ. ಕೇವಲ ತನಗಾಗಿ ಕರ್ಮಮಾಡುವವನು ಬಂಧಿತನಾಗುತ್ತಾನೆ (೩/೯ ಮತ್ತು ೧೩) ಆದರೆ ಕರ್ಮಯೋಗಿಯು ನಿಸ್ವಾರ್ಥಭಾವದಿಂದ ಕೇವಲ ಬೇರೆಯವರ ಹಿತಕ್ಕಾಗಿ ಕರ್ಮ ಮಾಡುತ್ತಾನೆ; ಆದ್ದರಿಂದ ಅವನು ಕರ್ಮಬಂಧನದಿಂದ ಸುಲಭವಾಗಿ ಮುಕ್ತನಾಗುತ್ತಾನೆ (೪/೨೩) ಅದಕ್ಕಾಗಿ ಕರ್ಮಯೋಗವು ಶ್ರೇಷ್ಠವಾಗಿದೆ.

ಕರ್ಮಯೋಗದ ಸಾಧನೆಯನ್ನು ಪ್ರತಿಯೊಂದು ಪರಿಸ್ಥಿತಿಯಲ್ಲಿ ಮತ್ತು ಪ್ರತಿಯೊಂದು ವ್ಯಕ್ತಿ ಅವನು ಬೇಕಾದರೆ ಯಾವುದೇ ವರ್ಣ, ಆಶ್ರಮ, ಸಂಪ್ರದಾಯದವರಿರಲಿ ಅವರ ಮೂಲಕ ಮಾಡಲಾಗುತ್ತದೆ. ಆದರೆ ಅರ್ಜುನನು ಹೇಳುವ ಕರ್ಮಸಂನ್ಯಾಸದ ಮಾತನ್ನು ಒಂದು ವಿಶೇಷ ಪರಿಸ್ಥಿತಿಯಲೇ ಮಾಡಲಾಗುತ್ತದೆ (೪/೩೪): ಏಕೆಂದರೆ, ತತ್ತ್ವಜ್ಞ ಮಹಾಪುರುಷರು ಸಿಗುವುದು, ಅವರಲ್ಲಿ ನಮ್ಮ ಶ್ರದ್ಧೆ ಉಂಟಾಗುವುದು ಮತ್ತು ಅವರ ಬಳಿಗೆ ಹೋಗಿ ವಾಸಿಸುವುದು – ಇಂತಹ ಪರಿಸ್ಥಿತಿ ಪ್ರತಿಯೊಬ್ಬ ಮನುಷ್ಯನಿಗೆ ದೊರೆಯುವುದು ಸಂಭವವಿಲ್ಲ, ಆದ್ದರಿಂದ ಪ್ರಚಲಿತ ಪ್ರಣಾಲಿಯ ಸಾಂಖ್ಯಯೋಗದ ಸಾಧನೆಯು ಯಾವುದೋ ಒಂದು ವಿಶೇಷ ಪರಿಸ್ಥಿತಿಯಲ್ಲೇ ಸಾಧ್ಯವಿದೆ. ಆದರೆ ಕರ್ಮಯೋಗದ ಸಾಧನೆಯು ಪ್ರತಿಯೊಂದು ಪರಿಸ್ಥಿತಿಯಲ್ಲಿ ಮತ್ತು ಪ್ರತಿಯೊಂದು ವ್ಯಕ್ತಿಗೂ ಸಾಧ್ಯವಾಗಿದೆ. ಆದಕ್ಕಾಗಿ ಕರ್ಮಯೋಗವು ಶ್ರೇಷ್ಠವಾಗಿದೆ.

ದೊರಕಿದ ಪರಿಸ್ಥಿತಿಯನ್ನು ಸದುಪಯೋಗ ಪಡಿಸಿಕೊಳ್ಳುವುದು ಕರ್ಮಯೋಗವಾಗಿದೆ. ಯುದ್ಧದಂತಹ ಘೋರ ಪರಿಸ್ಥಿತಿಯಲ್ಲಿಯೂ ಕರ್ಮಯೋಗದ ಪಾಲನೆ ಮಾಡಲಾಗುತ್ತದೆ. ಕರ್ಮಯೋಗವನ್ನು ಪಾಲಿಸಲು ಯಾರೇ

ಮನುಷ್ಯನು ಯಾವುದೇ ಪರಿಸ್ಥಿತಿಯಲ್ಲಿ ಅಸಮರ್ಥ ಮತ್ತು ಪರಾಧೀನನಲ್ಲ; ಏಕೆಂದರೆ, ಕರ್ಮಯೋಗದಲ್ಲಿ ಏನನ್ನಾದರು ಪಡೆಯುವ ಇಚ್ಛೆಯ ತ್ಯಾಗವಿರುತ್ತದೆ. ಏನನ್ನಾದರು ಪಡೆಯುವ ಇಚ್ಛೆ ಇರುವುದರಿಂದಲೇ ಕರ್ತವ್ಯ-ಕರ್ಮ ಮಾಡುವುದರಲ್ಲಿ ಅಸಮರ್ಥತೆಯ ಮತ್ತು ಪರಾಧೀನತೆಯ ಅನುಭವವಾಗುತ್ತದೆ.

ಕರ್ತೃತ್ವ ಮತ್ತು ಭೋಕ್ತೃತ್ವವೇ ಪ್ರಪಂಚವಾಗಿದೆ. ಸಾಂಖ್ಯಯೋಗೀ ಮತ್ತು ಕರ್ಮಯೋಗೀ ಇವರಿಬ್ಬರಿಗೂ ಪ್ರಪಂಚದಿಂದ ಸಂಬಂಧ-ವಿಚ್ಛೇದ ಮಾಡುವುದಿದೆ, ಅದಕ್ಕಾಗಿ ಇಬ್ಬರೂ ಸಾಧಕರಿಗೂ ಕರ್ತೃತ್ವ ಮತ್ತು ಭೋಕ್ತೃತ್ವ – ಇವೆರಡನ್ನೂ ಅಳಿಸುವುದರ ಅವಶ್ಯಕತೆ ಇದೆ. ತೀವ್ರ ವೈರಾಗ್ಯ ಹಾಗೂ ತೀಕ್ಷ್ಣಬುದ್ಧಿ ಇರುವುದರಿಂದ ಸಾಂಖ್ಯಯೋಗಿಯು ಕರ್ತೃತ್ವವನ್ನು ಅಳಿಸಿಬಿಡುತ್ತಾನೆ. ಅಷ್ಟು ತೀವ್ರ ವೈರಾಗ್ಯ ಮತ್ತು ತೀಕ್ಷ್ಣಬುದ್ಧಿ ಇಲ್ಲದಿರುವುದರಿಂದ ಕರ್ಮಯೋಗಿಯು ಬೇರೆಯವರ ಹಿತಕ್ಕಾಗಿಯೇ ಎಲ್ಲ ಕರ್ಮಗೈದು ಭೋಕ್ತೃತ್ವವನ್ನು ಅಳಿಸಿಬಿಡುತ್ತಾನೆ. ಈ ಪ್ರಕಾರ ಸಾಂಖ್ಯ ಯೋಗಿಯು ಕರ್ತೃತ್ವದ ತ್ಯಾಗಮಾಡಿ ಪ್ರಪಂಚದಿಂದ ಮುಕ್ತನಾಗುತ್ತಾನೆ ಮತ್ತು ಕರ್ಮಯೋಗಿಯು ಭೋಕ್ತೃತ್ವದ ಅರ್ಥಾತ್ ಏನನ್ನಾದರು ಪಡೆಯವ ಇಚ್ಛೆಯ ತ್ಯಾಗಮಾಡಿ ಮುಕ್ತನಾಗುತ್ತಾನೆ. ಕರ್ತೃತ್ವದ ತ್ಯಾಗಮಾಡುವುದರಿಂದ ಭೋಕ್ತೃತ್ವದ ತ್ಯಾಗ ಮತ್ತು ಭೋಕ್ತೃತ್ವದ ತ್ಯಾಗಮಾಡುವುದರಿಂದ ಕರ್ತೃತ್ವದ ತ್ಯಾಗ ತನ್ನಿಂದ ತಾನೇ ಆಗುತ್ತದೆ ಇದು ನಿಯಮವಾಗಿದೆ. ಏನನ್ನಾದರು ಪಡೆಯುವ ಇಚ್ಛೆಯಿಂದಲೇ ಕರ್ತೃತ್ವ ಉಂಟಾಗುತ್ತದೆ. ಯಾವ ಕರ್ಮದಿಂದ ತನಗಾಗಿ ಯಾವುದೇ ಪ್ರಕಾರದ ಸುಖಭೋಗದ ಇಚ್ಛೆ ಇರುವುದಿಲ್ಲವೋ, ಅದು ಕ್ರಿಯಾಮಾತ್ರವಾಗಿದೆ, ಕರ್ಮವಲ್ಲ. ಹೇಗೆ ಯಂತ್ರದಲ್ಲಿ ಕರ್ತೃತ್ವವಿರುವುದಿಲ್ಲವೋ ಹಾಗೆಯೇ ಕರ್ಮಯೋಗಿಯಲ್ಲಿ ಕರ್ತೃತ್ವ ಇರುವುದಿಲ್ಲ.

ಸಾಧಕನಿಗೆ ಪ್ರಪಂಚದ ಪ್ರಾಣಿ, ಪದಾರ್ಥ, ಪರಿಸ್ಥಿತಿ ಇತ್ಯಾದಿಗಳಲ್ಲಿ ಸ್ಪಷ್ಟವಾಗಿ ತನ್ನ ರಾಗವು ಕಾಣುತ್ತದೆ. ಆ ರಾಗವನ್ನು ಅವನು ತನ್ನ ಬಂಧನದ ಮುಖ್ಯ ಕಾರಣವೆಂದು ತಿಳಿಯುತ್ತಾನೆ ಹಾಗೂ ಅದನ್ನು ಅಳಿಸಲು ಪ್ರಯತ್ನವನ್ನೂ ಮಾಡುತ್ತಾನೆ. ಆ ರಾಗವನ್ನು ಅಳಿಸಲಿಕ್ಕಾಗಿ ಕರ್ಮಯೋಗಿಯು ಯಾವುದೇ ಪ್ರಾಣಿ, ಪದಾರ್ಥ ಇತ್ಯಾದಿಗಳನ್ನು ತನ್ನದೆಂದು ತಿಳಿಯುವುದಿಲ್ಲ,* ತನಗಾಗಿ ಏನನ್ನೂ ಮಾಡುವುದಿಲ್ಲ ಹಾಗೂ ತನಗಾಗಿ ಏನನ್ನೂ ಬಯಸುವುದಿಲ್ಲ. ಕ್ರಿಯೆಗಳಿಂದ ಸುಖ ಪಡೆಯವ ಭಾವ ಇಲ್ಲದಿರುವುದರಿಂದ ಕರ್ಮಯೋಗಿಯ ಕ್ರಿಯೆಗಳು ಪರಿಣಾಮದಲ್ಲಿ ಎಲ್ಲರ ಹಿತ ಹಾಗೂ ವರ್ತಮಾನದಲ್ಲಿ ಎಲ್ಲರ ಸಂತೋಷಕ್ಕಾಗಿ ಮತ್ತು ಸುಖಕ್ಕಾಗಿಯೇ ಆಗುತ್ತವೆ. ಕ್ರಿಯೆಗಳಿಂದ ಸುಖಪಡೆಯುವ ಭಾವ ಇರುವುದರಿಂದ ಕ್ರಿಯೆಗಳಲ್ಲಿ ಅಭಿಮಾನ (ಕರ್ತೃತ್ವ) ಮತ್ತು ಮಮತೆ ಉಂಟಾಗುತ್ತದೆ. ಆದರೆ ಅವುಗಳಿಂದ ಸುಖಪಡೆಯುವ ಭಾವವು ಸರ್ವಥಾ ಇಲ್ಲದಿರುವುದರಿಂದ ಕರ್ತೃತ್ವ ಮುಗಿದುಹೋಗುತ್ತದೆ. ಕಾರಣ – ಕ್ರಿಯೆಗಳು ದೋಷಿಗಳಲ್ಲ, ಕ್ರಿಯಾಜನ್ಯ ಆಸಕ್ತಿ ಮತ್ತು ಕ್ರಿಯೆಗಳ ಫಲವನ್ನು ಬಯಸುವುದೇ ದೋಷಿಯಾಗಿದೆ. ಸಾಧಕನು ಕ್ರಿಯಾಜನ್ಯ ಸುಖ ಪಡೆಯದೆ ಹಾಗೂ ಕ್ರಿಯೆಗಳ ಫಲ ಬಯಸದಿದ್ದಾಗ ಕರ್ತೃತ್ವವು ಹೇಗೆ ಉಳಿಯಬಲ್ಲದು? ಏಕೆಂದರೆ ಕರ್ತೃತ್ವವು ಭೋಕ್ತೃತ್ವದ ಮೇಲೆ ಇರುತ್ತದೆ. ಭೋಕ್ತೃತ್ವವು ಇಲ್ಲದಿರುವಾಗ ಕರ್ತೃತ್ವವು ತನ್ನ ಉದ್ದೇಶದಲ್ಲಿ (ಯಾವುದಕ್ಕಾಗಿ ಕರ್ಮ ಮಾಡುತ್ತಾನೋ ಅದರಲ್ಲಿ) ಲೀನವಾಗುತ್ತದೆ ಮತ್ತು ಒಂದೇ ಪರಮಾತ್ಮತತ್ತ್ವ ಶೇಷವಾಗಿ ಉಳಿದುಬಿಡುತ್ತದೆ.

ಕರ್ಮಯೋಗಿಯ 'ಅಹಮ್' (ವ್ಯಕ್ತಿತ್ವ) ಬೇಗನೆ ಹಾಗೂ ಸುಲಭವಾಗಿ ನಾಶವಾಗುತ್ತದೆ, ಆದರೆ ಜ್ಞಾನಯೋಗಿಯ 'ಅಹಮ್' ದೂರದವರೆಗೆ ಜೊತೆಗಿರುತ್ತದೆ. ಕಾರಣ – 'ನಾನು ಸೇವಕನಾಗಿದ್ದೇನೆ' (ಕೇವಲ ಸೇವ್ಯನಿಗಾಗಿ ಸೇವಕನಾಗಿದ್ದೇನೆ, ತನಗಾಗಿ ಅಲ್ಲ) ಹೀಗೆ ತಿಳಿಯುವುದರಿಂದ ಕರ್ಮಯೋಗಿಯ 'ಅಹಮ್' ಕೂಡ ಸೇವ್ಯದ ಸೇವೆಯಲ್ಲಿ ಕೊಡಗಿಹೋಗುತ್ತದೆ; ಆದರೆ 'ನಾನು ಮುಮುಕ್ಷು ಆಗಿದ್ದೇನೆ' ಹೀಗೆ ತಿಳಿಯುವುದರಿಂದ ಜ್ಞಾನಯೋಗಿಯ 'ಅಹಮ್' ಜೊತೆಗೆ ಇರುತ್ತದೆ. ಕರ್ಮಯೋಗಿಯು ತನಗಾಗಿ ಏನನ್ನೂ ಮಾಡದೆ ಕೇವಲ ಬೇರೆಯವರ ಹಿತಕ್ಕಾಗಿ ಎಲ್ಲ ಕರ್ಮ ಗಳನ್ನು ಮಾಡುತ್ತಾನೆ, ಆದರೆ ಜ್ಞಾನಯೋಗಿ ತನ್ನ ಹಿತಕ್ಕಾಗಿ ಸಾಧನೆ ಮಾಡುತ್ತಾನೆ. ತನ್ನ ಹಿತಕ್ಕಾಗಿ ಸಾಧನೆಮಾಡುವುದರಿಂದ ಅಹಂ ಹೇಗಿದೆಯೋ ಹಾಗೆಯೇ ಇದ್ದುಕೊಂಡಿರುತ್ತದೆ.

ಜ್ಞಾನಯೋಗದ ಮುಖ್ಯ ಮಾತು – ಪ್ರಪಂಚದ ಸ್ವತಂತ್ರ ಸತ್ತೆಯನ್ನು ಅಭಾವಗೊಳಿಸುವುದು ಮತ್ತು ಕರ್ಮಯೋಗದ ಮುಖ್ಯ ಮಾತು – ರಾಗವನ್ನು ಅಭಾವಗೊಳಿಸುವುದಾಗಿದೆ. ಜ್ಞಾನಯೋಗಿಯು ವಿಚಾರದ ಮೂಲಕ ಪ್ರಪಂಚದ ಅಸ್ತಿತ್ವವನ್ನು ಅಭಾವಗೊಳಿಸಲು ಬಯಸುತ್ತಾನೆ, ಆದರೆ ಪದಾರ್ಥಗಳಲ್ಲಿ ರಾಗವು ಇರುವಾಗ ಅದರ ಸ್ವತಂತ್ರ ಸತ್ತೆಯು ಅಭಾವವಾಗುವುದು ತುಂಬಾ ಕಷ್ಟವಾಗಿದೆ. ವಿಚಾರಕಾಲದಲ್ಲಿ ಜ್ಞಾನಯೋಗದ ಸಾಧಕನಿಗೆ ಪದಾರ್ಥಗಳ ಸ್ವತಂತ್ರ ಸತ್ತೆಯು ಅಭಾವದಂತೆ ಕಂಡುಬಂದರೂ, ವ್ಯವಹಾರಕಾಲದಲ್ಲಿ ಆ ಪದಾರ್ಥಗಳ ಸ್ವತಂತ್ರ ಸತ್ತೆಯು ಕಂಡುಬರಲು ತೊಡಗುತ್ತದೆ. ಆದರೆ ಕರ್ಮಯೋಗದ ಸಾಧಕನಿಗೆ ಬೇರೆಯವರಿಗೆ ಸುಖಕೊಡುವ ಲಕ್ಷ್ಯವಿರುವುದರಿಂದ ಅವನ ರಾಗವು ತನ್ನಿಂದ-ತಾನೇ ಅಳಿದು ಹೋಗುತ್ತದೆ. ಇದಲ್ಲದೆ

* ಕರ್ಮಯೋಗಿಯು ಸೇವೆಮಾಡಲಿಕ್ಕಾಗಿಯಾದರೋ ಎಲ್ಲರನ್ನು ತನ್ನವರೆಂದು ತಿಳಿಯುತ್ತಾನೆ, ಆದರೆ ತನಗಾಗಿ ಯಾರನ್ನೂ ಕೂಡ ತನ್ನವರೆಂದು ತಿಳಿಯುವುದಿಲ್ಲ.

ದೊರಕಿದ ಸಾಮಗ್ರಿಯ ತ್ಯಾಗಮಾಡುವುದು ಕರ್ಮಯೋಗಿಗಾಗಿ ಸುಲಭವಾದಪ್ಪು ಜ್ಞಾನಯೋಗಿಗಾಗಿ ಇಲ್ಲ. ಜ್ಞಾನಯೋಗದ ದೃಷ್ಟಿಯಿಂದ ಯಾವುದೇ ವಸ್ತುವನ್ನು ಮಾಯಾ ಮಾತ್ರವೆಂದು ತಿಳಿದುಕೊಂಡು ಹಾಗೆಯೇ ಅದರ ತ್ಯಾಗ ಮಾಡುವುದು ಕಠಿಣವಾಗುತ್ತದೆ; ಆದರೆ ಅದೇ ವಸ್ತು ಯಾರಾದರ ಉಪಯೋಗಕ್ಕೆ ಬರುವುದೆಂದು ಕೆಂಡುಬಂದರೆ ಅದರ ತ್ಯಾಗಮಾಡುವುದು ಸುಲಭವಾಗುತ್ತದೆ. ನಮ್ಮ ಬಳಿಯಲ್ಲಿ ಕಂಬಳಿಗಳು ಬಿದ್ದಿವೆಯಾದರೆ ಆ ಕಂಬಳಿಗಳನ್ನು ಬೇರೆಯವರ ಉಪಯೋಗಿ ಎಂದು ತಿಳಿದುಕೊಂಡು ಅದರ ತ್ಯಾಗ ಮಾಡುವುದು ವಿಚಾರ್ತ್-ಅವುಗಳಿಂದ ತನ್ನ ರಾಗವನ್ನು ದೂರವಾಗಿಸುವುದು ಸಾಧಾರಣ ಮಾತಾಗಿದೆ; ಆದರೆ (ಬಂದು ವೇಳೆ ತೀವ್ರ ವೈರಾಗ್ಯವಿಲ್ಲದಿದ್ದರೆ) ಅದೇ ಕಂಬಳಿಗಳನ್ನು ವಿಚಾರದಿಂದ ಅನಿತ್ಯ, ಕ್ಷಣಭಂಗುರ, ಸ್ವಪ್ನದಂತೆ ಮಾಯಾಮಯ ಪದಾರ್ಥಗಳೆಂದು ತಿಳಿದು ಹಾಗೆಯೇ ಬಿಟ್ಟು ಹೊರಟುಹೋಗುವುದು ಕಷ್ಟವಾಗಿದೆ. ಇನ್ನೊಂದು ಮಾತು – ಮಾಯಾಮಾತ್ರವೆಂದು ತಿಳಿದು ತ್ಯಾಗ ಮಾಡುವುದರಲ್ಲಿ (ತೀವ್ರವಾದ ವೈರಾಗ್ಯವಿಲ್ಲದಿದ್ದರೆ) ನಮಗೆ ಸುಖಬುದ್ಧಿ ಮಸ್ತ ಇಲ್ಲದಿರುವ ಆ ಕೆಟ್ಟವಸ್ತುಗಳ ತ್ಯಾಗವೇನೋ ಸುಲಭವಾಗಿ ಆಗುತ್ತದೆ, ಆದರೆ ಯಾವುದರಲ್ಲಿ ನಮಗೆ ಸುಖಬುದ್ಧಿ ಇದೆಯೋ ಆ ವಸ್ತುಗಳ ತ್ಯಾಗವು ಕಷ್ಟದಿಂದ ಆಗುತ್ತದೆ. ಅದರೂ ಬೇರೆಯವರ ಉಪಯೋಗಿ ಎಂದು ತಿಳಿದು ಕೊಂಡು ನಮಗೆ ಸುಖಬುದ್ಧಿ ಇರುವ ವಸ್ತುಗಳ ತ್ಯಾಗ ಸುಲಭವಾಗಿ ಆಗಿಹೋಗುತ್ತದೆ; ಹೇಗೆಂದರೆ – ಊಟದ ಸಮಯ ತನ್ನ ತಟ್ಟೆಯಿಂದ ರೊಟ್ಟಿಗಳನ್ನು ತೆಗೆದಿಡ ಬೇಕಾದರೆ ಆರಿದ, ಹಳೆಯದಾದ, ಗಟ್ಟಿಯಾದ ರೊಟ್ಟಿಗಳನ್ನು ತೆಗೆದಿಡುತ್ತೇವೆ. ಆದರೆ ಅದೇ ರೊಟ್ಟಿಗಳು ಬೇರೆಯವರಿಗೆ ಕೊಡವುದಿದ್ದರೆ ಒಳ್ಳೆಯ ರೊಟ್ಟಿಗಳನ್ನೆ ತೆಗೆಯುತ್ತೇವೆ. ಕೆಟ್ಟದ್ದನ್ನಲ್ಲ. ಅದಕ್ಕಾಗಿ ಕರ್ಮಯೋಗಿಯ ಕ್ರಮದಿಂದ ರಾಗವನ್ನು ಅಳಿಸಿದೆ ಸಾಂಖ್ಯಯೋಗದ ಸಾಧನೆಯಾಗುವುದು ತುಂಬಾ ಕಷ್ಟವಾಗಿದೆ. ವಿಚಾರದಿಂದ ಪದಾರ್ಥಗಳಲ್ಲಿ ಅಸ್ತಿತ್ವವನ್ನು ಒಪ್ಪಿಕೊಂಡಿದ್ದರೂ ಪದಾರ್ಥಗಳಲ್ಲಿ ಸ್ವಾಭಾವಿಕ ರಾಗವಿರುವ ಕಾರಣದಿಂದ ಭೋಗಗಳಲ್ಲಿ ಸಿಲುಕಿಕೊಂಡು ಪತನವಾಗುವ ಸಂಭವವಿರುತ್ತದೆ.

ಕೇವಲ ಅಸತ್ತನ್ನು ಜ್ಞಾನದಿಂದ ಅರ್ಥಾತ್ ಅಸತ್ತನ್ನು ಅಸತ್ತೆಂದು ತಿಳಿದುಕೊಳ್ಳುವುದರಿಂದ ರಾಗದ ನಿವೃತ್ತಿ ಆಗುವುದಿಲ್ಲ.* ಸಿನೇಮಾದಲ್ಲಿ ಕಂಡುಬರುವ ಪದಾರ್ಥಗಳ ಅಸ್ತಿತ್ವವೇ ಇಲ್ಲ ಎಂದು ತಿಳಿದರೂ ಅವುಗಳಲ್ಲಿ ರಾಗ ಉಂಟಾಗುತ್ತದೆ. ಸಿನೇಮಾ ನೋಡುವುದರಿಂದ ಚಾರಿತ್ರ್ಯ, ಸಮಯ, ಕಣ್ಣಿನ ಶಕ್ತಿ ಮತ್ತು ಹಣ – ಈ ನಾಲ್ಕರ ನಾಶವಾಗುತ್ತದೆ, ಹೀಗೆ ತಿಳಿದಿದ್ದರೂ ರಾಗದ ಕಾರಣ ಸಿನೇಮಾ ನೋಡುತ್ತಾರೆ. ಇದರಿಂದ ವಸ್ತುಗಳ ಸತ್ತೆಯು ಇರದಿದ್ದರೂ ಅದರಲ್ಲಿ ರಾಗ ಅಥವಾ ಸಂಬಂಧ ಉಳಿಯಬಲ್ಲದು ಎಂದು ಸಿದ್ಧವಾಗುತ್ತದೆ. ರಾಗವೇ ಇಲ್ಲದಿರುತ್ತಿದ್ದರೆ ವಸ್ತುವಿನ ಸತ್ತೆಯನ್ನು ಒಪ್ಪಿಕೊಂಡರೂ ಅದರಲ್ಲಿ ರಾಗ ಉಂಟಾಗುವುದಿಲ್ಲ. ಅದಕ್ಕಾಗಿ ಸಾಧಕನ ಮುಖ್ಯ ಕೆಲಸ – ರಾಗದ ಅಭಾವ ಮಾಡುವುದಾಗಿದೆ, ಸತ್ತೆಯ ಅಭಾವ ಮಾಡುವುದಲ್ಲ; ಏಕೆಂದರೆ ಬಂಧಿಸುವಂತಹ ವಸ್ತು ರಾಗ ಅಥವಾ ಸಂಬಂಧವೇ ಆಗಿದೆ, ಸತ್ತಾಮಾತ್ರವಲ್ಲ, ಪದಾರ್ಥಗಳು ಬೇಕಾದರೆ ಸತ್ತಾಗಿರಲಿ, ಬೇಕಾದರೆ ಅಸತ್ತಾಗಿರಲಿ, ಬೇಕಾದರೆ ಸತ್-ಅಸತ್ತಿನಿಂದ ವಿಲಕ್ಷಣವಾಗಿರಲಿ, ಅದರಲ್ಲಿ ರಾಗವಿದ್ದರೆ ಅದು ಬಂಧಿಸುವಂತಹುದಾಗುತ್ತದೆ. ನಿಜವಾಗಿ ನಮಗೆ ಯಾವುದೇ ಪದಾರ್ಥ ಬಂಧಿಸುವುದಿಲ್ಲ, ರಾಗವುಂಟುಮಾಡಿದ ನಮ್ಮ ಸಂಬಂಧವೇ ಬಂಧಿಸುತ್ತದೆ. ಅದ್ದರಿಂದ ರಾಗವನ್ನು ಅಳಿಸುವ ಜವಾಬ್ದಾರಿ ನಮ್ಮ ಮೇಲಿದೆ.

ಪರಿತಿಪ್ಪ ಭಾವ – 'ಯೋಗ'ವಿಲ್ಲದೆ ಕರ್ಮ ಮತ್ತು ಜ್ಞಾನ ಎರಡೂ ಬಂಧನಕಾರಕವಾಗಿದ್ದರೂ ವಾಚಿಕ (ಕಲಿತಿರುವ) ಜ್ಞಾನದಿಂದಾಗುವಷ್ಟು ಪತನ ಕರ್ಮ ಮಾಡುವುದರಿಂದ ಆಗುವುದಿಲ್ಲ. ವಾಚಿಕ ಜ್ಞಾನವು ನರಕಕ್ಕೆ ಕೊಂಡು ಹೋಗಬಹುದು–

ಅಜ್ಞಸ್ಯಾರ್ಧಪ್ರಬುದ್ಧಸ್ಯ ಸರ್ವಂ ಬ್ರಹ್ಮೇತಿ ಯೋ ವದೇತ್।
ಮಹಾನಿರಯಜಾಲೇಷು ಸ ತೇನ ವಿನಿಯೋಜಿತಃ॥

(ಯೋಗವಾಸಿಷ್ಠ, ಸ್ಥಿತಿ – ೩೯)

ತಿಳಿವಳಿಕೆಯಿಲ್ಲದ ಮನುಷ್ಯನಿಗೆ 'ಎಲ್ಲವೂ ಬ್ರಹ್ಮವಾಗಿದೆ' ಹೀಗೆ ಉಪದೇಶ ಮಾಡುವವನು ಆ ಮನುಷ್ಯನನ್ನು ಮಹಾ ನರಕಗಳಲ್ಲಿ ಕೆಡಹುವವನಾಗುತ್ತಾನೆ.

ಆದ್ದರಿಂದ ವಾಚಿಕ ಜ್ಞಾನಕ್ಕಿಂತ ಕರ್ಮಮಾಡುವವನು ಶ್ರೇಷ್ಠವಾಗಿದ್ದಾನೆ. ಹಾಗಿರುವಾಗ ಕರ್ಮಯೋಗದ ಆಚರಣ ಮಾಡುವವನ ಶ್ರೇಷ್ಠತೆಯ ಬಗ್ಗೆ ಹೇಳುವುದೇನಿದೆ? ಜ್ಞಾನಯೋಗಿಯಾದರೋ ಕೇವಲ ತನಗಾಗಿ ಉಪಯೋಗಿಯಾಗುತ್ತಾನೆ, ಆದರೆ ಕರ್ಮಯೋಗಿಯು ಪ್ರಪಂಚವೆಲ್ಲಕ್ಕೆ ಉಪಯೋಗಿಯಾಗುತ್ತಾನೆ. ಪ್ರಪಂಚಕ್ಕೆ ಉಪಯೋಗಿ ಯಾಗುವವನು ತನಗಾಗಿಯೂ ಉಪಯೋಗಿಯಾಗುತ್ತಾನೆ. ಇದು ನಿಯಮವಾಗಿದೆ. ಅದಕ್ಕಾಗಿ ಕರ್ಮಯೋಗವು ವಿಶೇಷವಾಗಿದೆ.

* ಅಸತ್ತನ್ನು ಅಸತ್ತೆಂದು ತಿಳಿಯುವುದರಿಂದ–ತನ್ನ ಸ್ವರೂಪದಲ್ಲಿ ನಲೆನಿಂತು ಅಸತ್ತನ್ನು ಅಸತ್ ರೂಪದಿಂದ ತಿಳಿದಾಗಲೇ ಅಪರ ನಿವೃತ್ತಿಯಾಗುತ್ತದೆ. ಸ್ವರೂಪದಲ್ಲಿ ಸ್ಥಿತಿಯು ಕರಣ-ನಿರಪೇಕ್ಷವಾಗಿದೆ. ಆದರೂ ಬುದ್ಧಿಯೇ ಮುಂತಾದ ಕರಣಗಳಿಂದ ಅಸತ್ತನ್ನು ಅಸತ್ತೆಂದು ತಿಳಿಯುವುದರಿಂದ ಅವುಗಳ ನಿವೃತ್ತಿಯಾಗುವುದಿಲ್ಲ; ಏಕೆಂದರೆ, ಬುದ್ಧಿಯೇ ಆದಿ ಕರಣಗಳೂ ಅಸತ್ತಾಗಿವೆ. ಆದ್ದರಿಂದ ಜಗತ್ತಿನ ಮಿಥ್ಯಕ ಅಸತ್ತನ್ನು ತಿಳಿಯುವುದರಿಂದ ಅವರ ನಿವೃತ್ತಿ ಹೇಗಾಗ ಬಲ್ಲದು?

ಸಾಂಖ್ಯಯೋಗವಿಲ್ಲದೆಯೇ ಈ ಕರ್ಮಯೋಗವಾಗ ಬಲ್ಲದು, ಆದರೆ ಕರ್ಮಯೋಗವಿಲ್ಲದೆ ಸಾಂಖ್ಯಯೋಗ ಆಗುವುದು ಕಠಿಣವಾಗಿದೆ (೫/೬). ಅದಕ್ಕಾಗಿ ಸಾಂಖ್ಯಯೋಗಕ್ಕಿಂತ ಕರ್ಮಯೋಗವು ವಿಶೇಷವಾಗಿದೆ. ಸಾಂಖ್ಯಯೋಗದಿಂದ ಕರ್ಮಯೋಗ ಶ್ರೇಷ್ಠವಾಗಿದೆ ಮತ್ತು ಕರ್ಮಯೋಗದಿಂದ ಭಕ್ತಿಯೋಗ ಶ್ರೇಷ್ಠವಾಗಿದೆ. (೬/೪೭). ಅದಕ್ಕಾಗಿ ಗೀತೆಯಲ್ಲಿ ಮೊದಲಿಗೆ ಸಾಂಖ್ಯಯೋಗ ಮತ್ತೆ ಕರ್ಮಯೋಗ, ಬಳಿಕ ಭಕ್ತಿಯೋಗ ಈ ಕ್ರಮದಿಂದ ವಿವೇಚನೆ ಮಾಡಲಾಗಿದೆ.*

ಫಲದಲ್ಲಿ ಕರ್ಮಯೋಗ ಮತ್ತು ಜ್ಞಾನಯೋಗ ಒಂದೇ ಆಗಿದೆ (೫/೪, ೫). ಸಾಧನೆಯಲ್ಲಿ ಕರ್ಮಯೋಗ ಹಾಗೂ ಭಕ್ತಿಯೋಗ ಒಂದೇ ಆಗಿದೆ – **'ಮೈತ್ರಃ ಕರುಣ ಏವ ಚ'** (೧೨/೧೩); ಏಕೆಂದರೆ ಕರ್ಮಯೋಗ ಮತ್ತು ಭಕ್ತಿಯೋಗ– ಎರಡರಲ್ಲಿಯೂ ಬೇರೆಯವರಿಗೆ ಸುಖಕೊಡುವುದರ ಭಾವವಿರುತ್ತದೆ. ಕರ್ಮಮಾಡುವುದರಲ್ಲಿ ಕರ್ಮಿ ಮತ್ತು ಕರ್ಮಯೋಗೀ ಒಂದೇ ಆಗಿದ್ದಾರೆ (೩/೨೫) ಹಾಗೂ ತತ್ತ್ವಜ್ಞ ಮಹಾಪುರುಷ ಮತ್ತು ಭಗವಂತನೂ ಕೂಡ ಕರ್ಮಮಾಡುವುದರಲ್ಲಿ ಜೊತೆಗಿದ್ದಾರೆ (೩/೨೨ರಿಂದ ೨೬). ಈ ಪ್ರಕಾರ ಕರ್ಮಿ, ಜ್ಞಾನಯೋಗೀ, ಭಕ್ತಿಯೋಗೀ ಮತ್ತು ಭಗವಂತ – ಈ ನಾಲ್ಕರೊಂದಿಗೆ ಕರ್ಮಯೋಗಿಯು ಒಂದಾಗಿ ಹೋಗುತ್ತಾನೆ – ಇದು ಕರ್ಮ ಯೋಗದ ವಿಶೇಷತೆಯಾಗಿದೆ.

ಸಾಂಖ್ಯಯೋಗದಲ್ಲಾದರೋ ಅಹಂಕಾರದ ಸೂಕ್ಷ್ಮ ಸಂಸ್ಕಾರ ಇರಬಲ್ಲುದು, ಆದರೆ ಕರ್ಮಯೋಗದಲ್ಲಿ ಕ್ರಿಯಾ ಮತ್ತು ಪದಾರ್ಥಗಳಿಂದ ಸರ್ವಥಾ ಸಂಬಂಧ ವಿಚ್ಛೇದವಾದ್ದರಿಂದ ಅಹಂದಲ್ಲಿ ಸೂಕ್ಷ್ಮ ಸಂಸ್ಕಾರವೂ ಕೂಡ ಇರುವುದಿಲ್ಲ. ಕರ್ಮಯೋಗದಲ್ಲಿ ಅಕರ್ಮ ಶೇಷವಾಗಿರುತ್ತದೆ (೪/೧೮) ಮತ್ತು ಸಾಂಖ್ಯಯೋಗದಲ್ಲಿ ಆತ್ಮಾ ಶೇಷವಾಗಿರುತ್ತದೆ (೬/೨೯)

– ❁ –

ಸಂಬಂಧ - ಈಗ ಭಗವಂತನು ಕರ್ಮಯೋಗವನ್ನು ಶ್ರೇಷ್ಠವೆಂದು ಹೇಳುವ ಕಾರಣವನ್ನು ಹೇಳುತ್ತಾನೆ —

ಜ್ಞೇಯಃ ಸ ನಿತ್ಯಸಂನ್ಯಾಸೀ ಯೋ ನ ದ್ವೇಷ್ಟಿ ನ ಕಾಂಕ್ಷತಿ ।
ನಿರ್ದ್ವಂದ್ವೋ ಹಿ ಮಹಾಬಾಹೋ ಸುಖಂ ಬಂಧಾತ್ಪ್ರಮುಚ್ಯತೇ ॥ ೩॥

ಮಹಾಬಾಹೋ - ಹೇ ಮಹಾಬಾಹೋ!, **ಯಃ** - ಯಾವ ಮನುಷ್ಯನು, **ನ, ದ್ವೇಷ್ಟಿ** - (ಯಾರನ್ನೂ) ದ್ವೇಷಿಸುವುದಿಲ್ಲ (ಮತ್ತು), **ನ, ಕಾಂಕ್ಷತಿ** - ಯಾವುದನ್ನೂ ಬಯಸುವುದಿಲ್ಲವೋ, **ಸಃ** – ಆ (ಕರ್ಮಯೋಗಿಯು), **ನಿತ್ಯಸಂನ್ಯಾಸೀ** - ಸದಾ ಸಂನ್ಯಾಸಿಯೆಂದು, **ಜ್ಞೇಯಃ** - ತಿಳಿಯಲು ಯೋಗ್ಯನಾಗಿದ್ದಾನೆ, **ಹಿ** - ಏಕೆಂದರೆ, **ನಿರ್ದ್ವಂದ್ವಃ** - ದ್ವಂದ್ವಗಳಿಂದ ರಹಿತ (ಮನುಷ್ಯನು), **ಸುಖಮ್** - ಸುಖವಾಗಿ, **ಬಂಧಾತ್** - ಸಂಸಾರ ಬಂಧನದಿಂದ, **ಪ್ರಮುಚ್ಯತೆ** - ಮುಕ್ತನಾಗಿ ಹೋಗುತ್ತಾನೆ. ॥ ೩॥

ಹೇ ಮಹಾಬಾಹೋ! ಯಾವ ಮನುಷ್ಯನು ಯಾರನ್ನೂ ದ್ವೇಷಿಸುವುದಿಲ್ಲವೋ, ಮತ್ತು ಯಾವುದನ್ನೂ ಬಯಸುವುದಿಲ್ಲವೋ, ಆ ಕರ್ಮಯೋಗಿಯು ನಿತ್ಯಸಂನ್ಯಾಸಿ ಎಂದು ತಿಳಿಯಲು ಯೋಗ್ಯನಾಗಿದ್ದಾನೆ; ಏಕೆಂದರೆ ದ್ವಂದ್ವಗಳಿಂದ ರಹಿತ ಮನುಷ್ಯನು ಸುಖವಾಗಿ ಸಂಸಾರ ಬಂಧನದಿಂದ ಮುಕ್ತನಾಗಿ ಹೋಗುತ್ತಾನೆ. ॥ ೩॥

ವ್ಯಾಖ್ಯಾ - **'ಮಹಾಬಾಹೋ'** ಎಂಬ ಸಂಬೋಧನೆಯ ಎರಡು ಅರ್ಥಗಳಾಗುತ್ತವೆ – ಒಂದು ಯಾರ ಭುಜಗಳು ಉದ್ದ ಮತ್ತು ಬಲಿಷ್ಠವಾಗಿವೆಯೋ ಅರ್ಥಾತ್ – ಶೂರವೀರನೋ, ಮತ್ತು ಇನ್ನೊಂದು – ಯಾರ ಮಿತ್ರರು ಮತ್ತು ಸಹೋದರರು ದೊಡ್ಡ ಪುರುಷರೋ ಅವನು. ಅರ್ಜುನನಿಗೆ ಮಿತ್ರನು ಸಕಲ ಪ್ರಾಣಿಗಳ ಸುಹೃದ್ ಭಗವಾನ್ ಶ್ರೀಕೃಷ್ಣನಾಗಿದ್ದ ಮತ್ತು ಸಹೋದರ ಅಜಾತಶತ್ರು ಯುಧಿಷ್ಠಿರನಾಗಿದ್ದನು. ಅದಕ್ಕಾಗಿ ಹೀಗೆ ಸಂಬೋಧಿಸಿ ಭಗವಂತನು ಅರ್ಜುನನಲ್ಲಿ – ಕರ್ಮಯೋಗಕ್ಕನುಸಾರ ಎಲ್ಲರ ಸೇವೆ ಮಾಡುವ ಬಲವು ನಿನ್ನಲ್ಲಿದೆ ಎಂದು ಹೇಳುವಂತಿದೆ. ಆದ್ದರಿಂದ ನೀನು ಸುಲಭವಾಗಿ ಕರ್ಮಯೋಗವನ್ನು ಪಾಲಿಸಬಲ್ಲೆ.

'ಯೋ ನ ದ್ವೇಷ್ಟಿ' – ಯಾವುದೇ ಪ್ರಾಣಿ, ಪದಾರ್ಥ, ಪರಿಸ್ಥಿತಿ, ಸಿದ್ಧಾಂತ ಇತ್ಯಾದಿಗಳನ್ನು ದ್ವೇಷಿಸದವನೇ ಕರ್ಮಯೋಗಿಯಾಗುತ್ತಾನೆ. ಕರ್ಮಯೋಗಿಯ ಕೆಲಸ ಎಲ್ಲರ ಸೇವೆ ಮಾಡುವುದು, ಎಲ್ಲರಿಗೆ ಸುಖಕೊಡುವುದೇ

* ಭಾಗವತದಲ್ಲಿಯೂ ಇದೇ ಕ್ರಮವಿದೆ–

ಯೋಗಸ್ತ್ರಯೋ ಮಯಾ ಪ್ರೋಕ್ತಾ ನೃಣಾಂ ಶ್ರೇಯೋವಿಧಿತ್ಸಯಾ। ಜ್ಞಾನಂ ಕರ್ಮ ಚ ಭಕ್ತಿಶ್ಚ ನೋಪಾಯೋಽನ್ಯೋಽಸ್ತಿ ಕುತ್ರಚಿತ್॥

(ಶ್ರೀಮದ್ಭಾಗವತ ೧೧/೨೦/೬)

ತನ್ನ ಶ್ರೇಯಸ್ಸನ್ನು ಬಯಸುವ ಮನುಷ್ಯರಿಗಾಗಿ ನಾನು ಮೂರು ಯೋಗಮಾರ್ಗಗಳನ್ನೂ ಹೇಳಿರುವೆನು – ಜ್ಞಾನಯೋಗ, ಕರ್ಮಯೋಗ ಮತ್ತು ಭಕ್ತಿಯೋಗ. ಈ ಮೂರರಲ್ಲದೆ ಬೇರೆ ಯಾವುದೇ ಶ್ರೇಯಸ್ಸಿನ ಮಾರ್ಗವಿಲ್ಲ.

ಆಗಿದೆ. ಅವನಿಗೆ ಯಾರೊಂದಿಗಾದರೂ ಕಿಂಚಿತ್ತು ದ್ವೇಷವಿದ್ದರೆ ಅವನಿಂದ ಕರ್ಮಯೋಗದ ಆಚರಣೆಯು ಸಾಂಗೋಪಾಂಗವಾಗಿ ಆಗಲಾರದು. ಆದ್ದರಿಂದ ಯಾರೊಂದಿಗಾದರೂ ದ್ವೇಷವಿದ್ದರೆ ಅವನ ಸೇವೆಯನ್ನು ಕರ್ಮಯೋಗಿಯು ಮೊಟ್ಟಮೊದಲು ಮಾಡಬೇಕು.

ಎಲ್ಲಕ್ಕಿಂತ ಮೊದಲು **'ನ ದ್ವೇಷ್ಟಿ'** ಪದವನ್ನು ಕೊಡುವ ತಾತ್ಪರ್ಯ – ಯಾರನ್ನಾದರು ಕೆಟ್ಟವನೆಂದು ತಿಳಿಯುವವನು ಮತ್ತು ಯಾರದಾದರು ಕೆಡುಕನ್ನು ಬಯಸುವವನು ಕರ್ಮಯೋಗದ ತತ್ತ್ವವನ್ನು ತಿಳಿಯಲಾರನು.

ಮಾರ್ಮಿಕ ಮಾತು

ಸಕಲ ಪ್ರಾಣಿಗಳ ಹಿತದ ಉದ್ದೇಶದಿಂದ ಕರ್ಮಯೋಗಿಯು ಕೆಟ್ಟತನದ ತ್ಯಾಗಮಾಡುವಷ್ಟು ಆವಶ್ಯಕತೆ ಒಳ್ಳೆಯದನ್ನು ಮಾಡುವ ಆವಶ್ಯಕತೆ ಇಲ್ಲ. ಒಳ್ಳೆಯದನ್ನು ಮಾಡುವುದರಿಂದ ಕೇವಲ ಸಮಾಜದ ಹಿತವಾಗುತ್ತದೆ; ಆದರೆ ಕೆಟ್ಟತನವಿಲ್ಲದಿರುವುದರಿಂದ ವಿಶ್ವ ಮಾತ್ರದ ಹಿತವಾಗುತ್ತದೆ. ಕಾರಣ – ಒಳ್ಳೆಯದನ್ನು ಮಾಡುವುದರಲ್ಲಿ ಸೀಮಿತ ಕ್ರಿಯೆಗಳ ಮತ್ತು ಪದಾರ್ಥಗಳ ಪ್ರಧಾನತೆ ಇರುತ್ತದೆ; ಆದರೆ ಕೆಟ್ಟತನವಿಲ್ಲದಿರುವುದರಲ್ಲಿ ಆಂತರಂಗಿಕ ಅಸೀಮಭಾವ ಪ್ರಧಾನವಾಗಿರುತ್ತದೆ. ಆಂತರಂಗಿಕವಾಗಿ ಕೆಟ್ಟ ಭಾವ ದೂರವಾಗದೆ ಹೊರಗಿನಿಂದ ಒಳ್ಳೆಯದನ್ನು ಮಾಡಿದರೆ ಅದರಿಂದ ಅಭಿಮಾನ ಉಂಟಾದೀತು, ಅದು ಆಸುರೀ ಸಂಪತ್ತಿನ ಮೂಲವಾಗಿದೆ. ಒಳಗೆ ಏನಾದರೂ ಕೆಟ್ಟತನವಿದ್ದು, ಒಳ್ಳೆಯದನ್ನು ಮಾಡಿದಾಗ ಅಭಿಮಾನ ಉಂಟಾಗುತ್ತದೆ. ಅಪೂರ್ಣತೆ (ಕೊರತೆ) ಇದ್ದಲ್ಲೇ ಅಭಿಮಾನ ಹುಟ್ಟಿಕೊಳ್ಳುತ್ತದೆ. ಆದರೆ ಪೂರ್ಣತೆ ಇದ್ದಲ್ಲಿ ಅಭಿಮಾನದ ಪ್ರಶ್ನೆಯೇ ಉಂಟಾಗುವುದಿಲ್ಲ.

ಆಳವಾಗಿ ನೋಡಿದರೆ, ನಾಶವುಳ್ಳ ವಸ್ತುಗಳ ಸಹಾಯವಿಲ್ಲದೆ ಒಳ್ಳೆಯದನ್ನು ಮಾಡಲಾಗುವುದಿಲ್ಲ. ಯಾವ ವಸ್ತುಗಳಿಂದ ನಾವು ಒಳ್ಳೆಯದನ್ನು ಮಾಡುತ್ತೇವೋ, ಆ ವಸ್ತುಗಳು ನಮ್ಮವು ಆಗಿರದೆ ನಾವು ಯಾರ ಒಳ್ಳೆದನ್ನು ಮಾಡುತ್ತೇವೋ ಅವರದ್ದಾಗಿವೆ. ಆದರೂ ಕೂಡ ಒಳ್ಳೆತನದ ಅಭಿಮಾನವಿದ್ದರೆ ಇದು ನಾಶವುಳ್ಳದರ ಸಂಗವಾಗಿದೆ. ನಾಶವುಳ್ಳದರ ಸಂಗವಿರುವವರೆಗೆ ಯೋಗದ ಸಿದ್ಧಿಯಾಗುವುದಿಲ್ಲ. 'ನಾನು ಒಳ್ಳೆಯದನ್ನು ಮಾಡಿದೆ' – ಈ ಅಭಿಮಾನವು ಕೆಟ್ಟತನದಿಂದಲೂ ಹೆಚ್ಚು ಭಯಂಕರವಾಗಿದೆ; ಏಕೆಂದರೆ, ಈ ಭಾವವು ನನ್ನ ತನದಲ್ಲಿ ಕುಳಿತುಬಿಡುತ್ತದೆ. ಕರ್ಮ ಮತ್ತು ಫಲವಾದರೋ ಅಳಿದುಹೋಗುತ್ತದೆ, ಆದರೆ ನಾನುತನ ಇರುವವರೆಗೆ ಅದರಲ್ಲಿ ವಾಸವಾಗಿದ್ದ ಒಳ್ಳೆಯತನದ ಅಭಿಮಾನವು ಅಳಿದು ಹೋಗುವುದಿಲ್ಲ. ಇನ್ನೊಂದು ಮಾತು – ಕೆಟ್ಟತನವಾದರೋ ನಾವು ಕೆಟ್ಟದಾಗಿ ತಿಳಿಯುತ್ತೇವೆ, ಆದರೆ ಒಳ್ಳೆಯದನ್ನು ಕೆಟ್ಟದಾಗಿ ತಿಳಿಯುವುದಿಲ್ಲ. ಅದಕ್ಕಾಗಿ ಒಳ್ಳೆತನದ ಅಭಿಮಾನವನ್ನು ತ್ಯಾಗಮಾಡುವುದು ತುಂಬಾ ಕಷ್ಟವಾಗಿದೆ. ಕಬ್ಬಿಣದ ಕೈಕೊಳವನ್ನಾದರೋ ತ್ಯಾಗಮಾಡುತ್ತೇವೆ; ಆದರೆ ಚಿನ್ನದ ಕೈಕೊಳವನ್ನು ತ್ಯಾಗಮಾಡಲಾಗುವುದಿಲ್ಲ; ಏಕೆಂದರೆ, ಅದು ಆಭರಣದ ರೂಪದಿಂದ ಕಾಣುತ್ತದೆ. ಆದಕ್ಕಾಗಿ ಕೆಟ್ಟತನ ರಹಿತನಾಗಿಯೇ ಒಳ್ಳೆಯದನ್ನು ಮಾಡಬೇಕು. ನಿಜವಾಗಿ ಕೆಟ್ಟತನದ ತ್ಯಾಗವಾದಾಗ ಇಡೀ ವಿಶ್ವದ ಒಳಿತು ತನ್ನಿಂದ ತಾನೇ ಆಗುತ್ತದೆ, ಮಾಡಬೇಕಾಗುವುದಿಲ್ಲ. ಅದಕ್ಕಾಗಿ ಕೆಟ್ಟತನವಿಲ್ಲದ ಮಹಾಪುರುಷರು ಹಿಮಾಲಯದ ಏಕಾಂತ ಗುಹೆಯಲ್ಲಿ ಕುಳಿತಿದ್ದರೂ ಕೂಡ ಅವರಿಂದ ವಿಶ್ವದ ತುಂಬಾ ಹಿತವಾಗುತ್ತದೆ.

'ನ ಕಾಂಕ್ಷತಿ' – ಕರ್ಮಯೋಗದಲ್ಲಿ ಕಾಮನೆಯತ್ಯಾಗ ಮುಖ್ಯವಾಗಿದೆ. ಕರ್ಮಯೋಗಿಯು ಯಾವುದೇ ಪ್ರಾಣಿ, ಪದಾರ್ಥ, ಪರಿಸ್ಥಿತಿ ಇತ್ಯಾದಿಗಳ ಕಾಮನೆ ಮಾಡುವುದಿಲ್ಲ. ಕಾಮನೆಯ ತ್ಯಾಗ ಮತ್ತು ಪರಹಿತದಲ್ಲಿ ಪರಸ್ಪರ ಘನಿಷ್ಠ ಸಂಬಂಧವಿದೆ. ನಿಷ್ಕಾಮನಾಗಲು ಬೇರೆಯವ ಹಿತಮಾಡುವುದು ಆವಶ್ಯಕವಾಗಿದೆ. ಬೇರೆಯವರ ಹಿತಮಾಡುವುದರಿಂದ ಕಾಮನೆಯ ತ್ಯಾಗಕ್ಕೆ ಬಲ ಬರುತ್ತದೆ.

ಕರ್ಮಯೋಗದಲ್ಲಿ ಕರ್ತಾ ನಿಷ್ಕಾಮನಾಗುತ್ತಾನೆ, ಕರ್ಮವಲ್ಲ; ಏಕೆಂದರೆ, ಜಡವಾದ ಕಾರಣ ಕರ್ಮವು ಸ್ವತಃ ನಿಷ್ಕಾಮ ಅಥವಾ ಸಕಾಮ ಆಗಲಾರದು. ಕರ್ಮವು ಕರ್ತೃವಿನ ಅಧೀನವಿರುತ್ತದೆ, ಅದಕ್ಕಾಗಿ ಕರ್ಮಗಳ ಅಭಿವ್ಯಕ್ತಿಯು ಕರ್ತಾನಿಂದ ಆಗುತ್ತದೆ. ನಿಷ್ಕಾಮ ಕರ್ತೃವಿನ ಮೂಲಕವೇ ನಿಷ್ಕಾಮ ಕರ್ಮಗಳಾಗುತ್ತವೆ, ಅದನ್ನು ಕರ್ಮಯೋಗವೆಂದು ಹೇಳುತ್ತಾರೆ. ಆದ್ದರಿಂದ ಬೇಕಾದರೆ 'ಕರ್ಮಯೋಗ'ವೆಂದು ಹೇಳಿರಿ, ಅಥವಾ 'ನಿಷ್ಕಾಮಕರ್ಮ' ವೆಂದು ಹೇಳಿ ಎರಡರ ಅರ್ಥ ಒಂದೇ ಆಗುತ್ತದೆ. ಸಕಾಮ ಕರ್ಮ ಯೋಗವಾಗುವುದಿಲ್ಲ, ನಿಷ್ಕಾಮವಾದ್ದರಿಂದ ಕರ್ತಾ ಕರ್ಮಫಲದಿಂದ ಅಸಂಗನಾಗಿರುತ್ತಾನೆ; ಆದರೆ ಕರ್ತೃವಿನಲ್ಲಿ ಸಕಾಮಭಾವ ಬಂದಾಗ ಅವನು ಕರ್ಮಫಲದಿಂದ ಬಂಧಿತನಾಗುತ್ತಾನೆ (೫/೧೨). ಕರ್ತೃವು ಯಾವುದೇ ಕರ್ಮ ತನಗಾಗಿ ಮಾಡದೆ ಸಂಪೂರ್ಣ ಕರ್ಮಗಳನ್ನು ಬೇರೆಯವರ ಹಿತಕ್ಕಾಗಿ ಮಾಡಿದಾಗ ಸಕಾಮಭಾವ ನಷ್ಟವಾಗುತ್ತದೆ. ಅದಕ್ಕಾಗಿ ಕರ್ತೃವಿನ ಭಾವವು ನಿತ್ಯ-ನಿರಂತರವಾಗಿ ನಿಷ್ಕಾಮವಾಗಿರಬೇಕು. ಕರ್ತೃವಿನಲ್ಲಿ ಎಷ್ಟು ನಿಷ್ಕಾಮಭಾವವಿದ್ದಿತೋ ಅಷ್ಟೇ ಕರ್ಮಯೋಗದ ಸರಿಯಾದ ಆಚರಣೆಯಾದೀತು. ಕರ್ತೃವು ಸರ್ವಥಾ ನಿಷ್ಕಾಮನಾದಾಗ ಕರ್ಮಯೋಗ ಸಿದ್ಧವಾಗುತ್ತದೆ.

'ಜ್ಞೇಯಃ ಸ ನಿತ್ಯಸಂನ್ಯಾಸೀ' – ಅರ್ಜುನನು ಯುದ್ಧಮಾಡದೆ ಭಿಕ್ಷೆಬೇಡಿ ಜೀವನ ನಿರ್ವಾಹಮಾಡುವ

ಇಚ್ಛೆಯನ್ನು ಪ್ರಕಟಿಸಿದ್ದನು-'**ಗುರೂನಹತ್ವಾ ಹಿ ಮಹಾನುಭಾವಾನ್ ಶ್ರೇಯೋ ಭೋಕ್ತುಂ ಭೈಕ್ಷ್ಯಮಪೀಹ ಲೋಕೇ**' (೨/೫) ಅರ್ಥಾತ್ ಹಿರಿಯರನ್ನು ಕೊಲ್ಲದೆ ಸಂನ್ಯಾಸ ಕೈಗೊಳ್ಳುವುದೇ ಶ್ರೇಷ್ಠವಾಗಿದೆ. ಭಗವಂತನು ಅದೇ ಮಾತಿನ ಉತ್ತರವನ್ನು ಕೊಡುತ್ತಾ – ಹೇ ಅರ್ಜುನಾ! ಆ ಸಂನ್ಯಾಸವಾದರೋ ಹಿರಿಯರು ಸತ್ತು ಹೋಗುವ ಭಯದಿಂದ ಮಾಡಲಾಗುವ ಹೊರಗಿನ ಸಂನ್ಯಾಸವಾಗಿದೆ, ಆದರೆ ಕರ್ಮಯೋಗಿಯ ಸಂನ್ಯಾಸ ರಾಗ-ದ್ವೇಷಗಳ ತ್ಯಾಗದಿಂದ ಆಗುವ ನಿತ್ಯಸಂನ್ಯಾಸ ಅರ್ಥಾತ್ - ಆಂತರಿಕ ಮತ್ತು ನಿಜವಾದ ಸಂನ್ಯಾಸವಾಗಿದೆ ಎಂದು ಹೇಳುವಂತಿದೆ.

ಮುಂದೆ ಆರನೇ ಅಧ್ಯಾಯದ ಮೊದಲನೇ ಶ್ಲೋಕದಲ್ಲಿಯೂ ಭಗವಂತನು ಕೇವಲ ಅಗ್ನಿಯ ತ್ಯಾಗ ಮಾಡುವವರು ಅರ್ಥಾತ್ – ಸಂನ್ಯಾಸ ಆಶ್ರಮಮಾತ್ರ ಸ್ವೀಕರಿಸುವ ಪುರುಷನನ್ನು ಸಂನ್ಯಾಸಿ ಎಂದು ಹೇಳದೆ, ಒಳಗಿನಿಂದ ಪ್ರಪಂಚದ ಆಶ್ರಯವನ್ನು ತ್ಯಾಗ ಮಾಡುವ ಕರ್ಮಯೋಗಿಗೇ ಸಂನ್ಯಾಸೀ ಎಂದು ಹೇಳಿರುವನು. ಈ ಪ್ರಕಾರ ಭಗವಂತನ ಮತದಲ್ಲಿ ಕರ್ಮಯೋಗಿಯೇ ನಿಜವಾದ ಸಂನ್ಯಾಸಿಯಾಗಿದ್ದಾನೆ.

ಕರ್ಮಗಳನ್ನು ಮಾಡುತ್ತಾ ಕರ್ಮಗಳಿಂದ ಯಾವುದೇ ಪ್ರಕಾರ ಸಂಬಂಧ ಇಟ್ಟುಕೊಳ್ಳದಿರುವುದು ಸಂನ್ಯಾಸವಾಗಿದೆ. ಕರ್ಮಗಳಿಂದ ಯಾವುದೇ ಪ್ರಕಾರದ ಸಂಬಂಧವಿಟ್ಟುಕೊಳ್ಳದಿರುವವನಿಗೆ ಕರ್ಮಗಳ ಫಲವು ಎಂದೂ ಯಾವುದೇ ಅವಸ್ಥೆಯಲ್ಲಿ ಕಿಂಚಿನ್ಮಾತ್ರವೂ ಸಿಗುವುದಿಲ್ಲ – '**ನ ತು ಸಂನ್ಯಾಸಿನಾಂ ಕ್ವಚಿತ್**' (೧೮/೧೨). ಅದಕ್ಕಾಗಿ ಶಾಸ್ತ್ರವಿಹಿತ ಸಮಸ್ತ ಕರ್ಮಮಾಡುತ್ತಿದ್ದರೂ ಕರ್ಮಯೋಗಿಯು ಸದಾ ಸಂನ್ಯಾಸಿಯೇ ಆಗಿದ್ದಾನೆ.

ಕರ್ಮಯೋಗದ ಅನುಷ್ಠಾನ ಮಾಡದೆ ಸಾಂಖ್ಯ ಯೋಗದ ಪಾಲನೆ ಮಾಡುವುದು ಕಷ್ಟವಾಗಿದೆ. ಅದಕ್ಕಾಗಿ ಸಾಂಖ್ಯಯೋಗದ ಸಾಧಕನು ಮೊದಲಿಗೆ ಕರ್ಮಯೋಗಿ ಯಾಗುತ್ತಾನೆ, ಮತ್ತೆ ಸಂನ್ಯಾಸಿ (ಸಾಂಖ್ಯಯೋಗೀ) ಆಗುತ್ತಾನೆ. ಆದರೆ ಕರ್ಮಯೋಗದ ಸಾಧಕನಿಗೆ ಸಾಂಖ್ಯಯೋಗದ ಅನುಷ್ಠಾನ ಮಾಡುವ ಆವಶ್ಯಕತೆ ಇಲ್ಲ, ಅದಕ್ಕಾಗಿ ಕರ್ಮಯೋಗಿಯು ಪ್ರಾರಂಭದಿಂದಲೇ ಸಂನ್ಯಾಸಿಯಾಗಿದ್ದಾನೆ.

ರಾಗ-ದ್ವೇಷಗಳು ಅಭಾವವಾಗಿರುವವನಿಗೆ ಸಂನ್ಯಾಸ ಆಶ್ರಮವನ್ನು ಸ್ವೀಕರಿಸುವ ಆವಶ್ಯಕತೆ ಇಲ್ಲ, ಯಾವುದೇ ವ್ಯಕ್ತಿ ವಸ್ತು, ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿಗಳು ತನ್ನದಲ್ಲ ಮತ್ತು ತನಗಾಗಿಯೂ ಅಲ್ಲ ಎಂಬ ನಿಶ್ಚಯವಾದ ಬಳಿಕ ರಾಗ-ದ್ವೇಷಗಳು ಇಲ್ಲವಾಗಿ ಮತ್ತೆ ವ್ಯವಹಾರದಲ್ಲಿ ಪ್ರಪಂಚ ದೊಂದಿಗೆ ಸಂಬಂಧ ಕಂಡುಬಂದರೂ ಒಳಗಿನಿಂದ (ರಾಗ-ದ್ವೇಷಗಳಿಲ್ಲದಿರುವುದರಿಂದ) ಸಂಬಂಧಗಳು ಉಂಟಾಗದಂತಹ ಯಥಾರ್ಥ ಅನುಭವ ಉಂಟಾಗುತ್ತದೆ; ಇದೇ 'ನಿತ್ಯ ಸಂನ್ಯಾಸ'ವಾಗಿದೆ. ಲೌಕಿಕ ಅಥವಾ ಪಾರಲೌಕಿಕ ಪ್ರತಿಯೊಂದು ಕಾರ್ಯಮಾಡುವ ಸಮಯದಲ್ಲಿ ಕರ್ಮ ಯೋಗಿಗೆ ಪ್ರಪಂಚದಿಂದ ಸರ್ವಥಾ ಸಂನ್ಯಾಸವಿರುತ್ತದೆ, ಅದಕ್ಕಾಗಿ ಅವನು ನಿತ್ಯಸಂನ್ಯಾಸಿಯೆಂದೇ ತಿಳಿಯಲು ಯೋಗ್ಯನಾಗಿದ್ದಾನೆ.

ಪ್ರಪಂಚದಿಂದ ಸಂಬಂಧ ವಿಚ್ಛೇದ ಅರ್ಥಾತ್-ಲಿಪ್ತತೆಯ ಅಭಾವವೇ ಸಂನ್ಯಾಸವಾಗಿದೆ ಮತ್ತು ಕರ್ಮ ಯೋಗಿಯಲ್ಲಿ ರಾಗ-ದ್ವೇಷಗಳು ಇಲ್ಲದಿರುವುದರಿಂದ ಪ್ರಪಂಚದೊಂದಿಗೆ ಲಿಪ್ತತೆ ಇರುವುದೇ ಇಲ್ಲ, ಅದ್ದರಿಂದ ಕರ್ಮಯೋಗಿಯು ನಿತ್ಯಸಂನ್ಯಾಸಿಯಾಗಿದ್ದಾನೆ.

'**ನಿರ್ದ್ವಂದ್ವೋ ಹಿ..... ಸುಖಂ ಬಂಧಾತ್ ಪ್ರಮುಚ್ಯತೇ**'– * ಸಾಧನೆಯ ಪ್ರಾರಂಭದಲ್ಲಿ ಸಾಧಕನ ಅಂತಃಕರಣದಲ್ಲಿ ದ್ವಂದ್ವವಿರುತ್ತದೆ. ಸತ್ಸಂಗ, ಸ್ವಾಧ್ಯಾಯ, ವಿಚಾರ ಇತ್ಯಾದಿ ಮಾಡುವುದರಿಂದ ಅವನು ಪರಮಾತ್ಮ ಪ್ರಾಪ್ತಿಯ ತನ್ನ ಧ್ಯೇಯವೇನೋ ತಿಳಿದುಕೊಳ್ಳುತ್ತಾನೆ, ಆದರೆ ಅವನು ತನ್ನದೆಂದು ಹೇಳಿಕೊಳ್ಳುವ ಮನ, ಇಂದ್ರಿಯಗಳು ಇತ್ಯಾದಿಗಳಲ್ಲಿ ಸ್ವಾಭಾವಿಕವಾಗಿಯೇ ಭೋಗ ಭೋಗಿಸಲು ಹಾಗೂ ಸಂಗ್ರಹಿಸಲು ರುಚಿ ಇರುತ್ತದೆ. ಅದಕ್ಕಾಗಿ ಸಾಧಕನು ಎಂದಾದರು ಪರಮಾತ್ಮತತ್ತ್ವವನ್ನು ಪಡೆಯಲು ಬಯಸುತ್ತಾನೆ ಮತ್ತು ಎಂದಾದರು ಭೋಗ ಹಾಗೂ ಸಂಗ್ರಹವನ್ನು ಬಯಸುತ್ತಾನೆ. ಅವನಿಗೆ ದೊರಕುವ ಸಂಗಕ್ಕನುಸಾರ ಅವನ ಭಾವಗಳಲ್ಲಿ ಪರಿವರ್ತನೆ ಆಗುತ್ತಿರುತ್ತದೆ. ಹೀಗಿದ್ದರೂ ಕೂಡ ಅವನು ಭೋಗಗಳನ್ನು ಶಾಂತಿಯಿಂದ ಭೋಗಿಸಲಾರನು; ಏಕೆಂದರೆ, ಸತ್ಸಂಗಾದಿಗಳ ಸಂಸ್ಕಾರಗಳು ಅವನ ಅಂತಃಕರಣದಲ್ಲಿ ವೈರಾಗ್ಯವನ್ನು (ಭೋಗಗಳಲ್ಲಿ ಅರುಚಿ) ಉಂಟುಮಾಡುತ್ತಿರುತ್ತವೆ. ಈ ಪ್ರಕಾರ ಸಾಧಕನ ಅಂತಃಕರಣದಲ್ಲಿ ದ್ವಂದ್ವಗಳು (ಭೋಗ ಭೋಗಿಸಲೇ ಅಥವಾ ಸಾಧನೆ ಮಾಡಲೇ) ನಡೆಯುತ್ತಾ ಇರುತ್ತವೆ. ಈ ದ್ವಂದ್ವದಲ್ಲೇ ಅಹಂಭಾವ ನಿಂತಿದೆ. ನಾವು ಸಾಂಸಾರಿಕ ಭೋಗ ಮತ್ತು ಸಂಗ್ರಹದಲ್ಲಿ ತೊಡಗದೆ ಏಕಮಾತ್ರ ಪರಮಾತ್ಮತತ್ತ್ವವನ್ನು ಪಡೆದುಕೊಳ್ಳಬೇಕು – ಎಂಬ ದೃಢ

---

* ಗೀತೆಯಲ್ಲಿ ಬಂದಿರುವ '**ಕರ್ಮಬಂಧಂ ಪ್ರಹಾಸ್ಯಸಿ**' (೨/೩೯); '**ತ್ರಾಯತೇ ಮಹತೋ ಭಯಾತ್**' (೨/೪೦); '**ಜಹಾತೀಹ ಉಭೇ ಸುಕೃತ ದುಷ್ಕೃತೇ**' (೨/೫೦); '**ಮೋಕ್ಷ್ಯೇऽಶುಭಾತ್**'; (೪/೧೬; ೯/೧); '**ವೃಜಿನಂ ಸಂತರಿಷ್ಯಸಿ**' (೪/೩೬); '**ನಾಪ್ನುವಂತಿ ದುಃಖಾಲಯಮಶಾಶ್ವತಮ್**' (೮/೧೫); '**ಶುಭಾಶುಭ ಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ**' (೯/೨೮); '**ಮೃತ್ಯು ಸಂಸಾರಸಾಗರಾತ್ ಸಮುದ್ಧರ್ತಾ ಭವಾಮಿ**' (೧೨/೭) ಇತ್ಯಾದಿ ಪದಗಳು ಇಲ್ಲಿ ಬಂದಿರುವ '**ಬಂಧಾತ್ ಪ್ರಮುಚ್ಯತೆ**' ಪದಗಳ ಪರ್ಯಾಯವಾಚಿಗಳಾಗಿವೆ.

ನಿಶ್ಚಯವಾದಾಗ ದ್ವಂದ್ವಗಳು ಇರುವುದಿಲ್ಲ ಮತ್ತು ಅಹಂಭಾವವು ಪರಮಾತ್ಮತತ್ತ್ವದಲ್ಲಿ ಲೀನವಾಗುತ್ತದೆ.

ನಿಜವಾಗಿ ಪ್ರಪಂಚದ ಮಹತ್ವ ಅಂತಃಕರಣದಲ್ಲಿ ಅಂಕಿತವಾದ್ದರಿಂದಲೇ ದ್ವಂದ್ವ ಇರುತ್ತದೆ. ಭೋಗ ಭೋಗಿಸುತ್ತಿರುವುದರಿಂದ, ಬೇರೆಯವರಿಂದ ಸುಖವನ್ನು ಬಯಸುವುದರಿಂದ, ಪ್ರಪಂಚದ ಪ್ರಾಣಿ ಪದಾರ್ಥಗಳ ಮಹತ್ವ ಅಂತಃಕರಣದಲ್ಲಿ ಅಂಕಿತವಾಗುತ್ತದೆ. ಅವುಗಳಿಂದ ಸುಖ ಪಡೆಯುವುದರಿಂದ ಆ ಮಹತ್ವ ಹೆಚ್ಚುತ್ತಾ ಹೋಗುತ್ತದೆ. ಅದರಿಂದ ಅವನ್ನು ಪಡೆಯುವ ರುಚಿ ಪ್ರಬಲವಾಗುತ್ತದೆ. ಆ ರುಚಿಯು ಒಂದೇ ಪರಮಾತ್ಮಪ್ರಾಪ್ತಿಯ ಉದ್ದೇಶವನ್ನು ಸ್ಥಾಯೀ ಮತ್ತು ದೃಢವಾಗಲು ಬಿಡುವುದಿಲ್ಲ, ಇದರಿಂದ ಸಾಧಕನಲ್ಲಿ ದ್ವಂದ್ವಗಳು ಇದ್ದುಕೊಂಡಿರುತ್ತವೆ. ಉದ್ದೇಶದ ದೃಢತೆಗಾಗಿ ಸಾಧಕನು – ಎಷ್ಟೇ ಸುಖ, ವಿಶ್ರಾಂತಿ, ಭೋಗಗಳು ದೊರಕಲಿ, ನಾನು ಅವನ್ನು ಪಡೆದುಕೊಳ್ಳದೆ ಪರಹಿತಕ್ಕಾಗಿ ತ್ಯಾಗಮಾಡಬೇಕು ಎಂಬ ವಿಚಾರವನ್ನು ಗಟ್ಟಿಮಾಡಿಕೊಳ್ಳಬೇಕು. ಈ ವಿಚಾರ ಎಷ್ಟು ದೃಢವಾದೀತೋ, ಅಷ್ಟು ಸಾಧಕನು ನಿರ್ದ್ವಂದ್ವನಾದಾನು.

ನಿರ್ದ್ವಂದ್ವನಾಗುವ ಮುಖ್ಯವಾದ ಮಾತು ಇದೇ ಶ್ಲೋಕದಲ್ಲಿ **'ನ ದ್ವೇಷ್ಟಿ ನ ಕಾಂಕ್ಷತಿ'** ಪದಗಳಿಂದ ಹೇಳಲಾಗಿದೆ. ಅದರ ತಾತ್ಪರ್ಯ – ರಾಗ-ದ್ವೇಷಗಳಿಂದ ರಹಿತನಾಗುವುದು. ರಾಗ-ದ್ವೇಷಗಳನ್ನು ಅಳಿಸಿ ಹಾಕಲು – 'ತಾನು ಬಯಸದಿದ್ದರೂ ಅನುಕೂಲತೆ ಮತ್ತು ಪ್ರತಿಕೂಲತೆಗಳು ಬಂದೇ ಬರುತ್ತವೆ ಅರ್ಥಾತ್ – ತಾನು ಬಯಸಿದಾಗ ಅನುಕೂಲತೆ ಬರುತ್ತದೆ ಎಂಬ ಮಾತಿಲ್ಲ ಮತ್ತು ಬಯಸದಿದ್ದರೆ ಪ್ರತಿಕೂಲತೆ ಬರುವುದಿಲ್ಲ ಎಂಬ ಮಾತೂ ಇಲ್ಲ' ಹೀಗೆ ವಿಚಾರಮಾಡಬೇಕು. ಅನುಕೂಲತೆ-ಪ್ರತಿಕೂಲತೆಗಳು ಪ್ರಾರಬ್ಧದ ಫಲಸ್ವರೂಪವಾಗಿ ಬರುತ್ತಾ ಹೋಗುತ್ತಾ ಇರುತ್ತವೆ, ಹಾಗಿರುವಾಗ ಇವುಗಳು ಬರಲು ಅಥವಾ ಹೋಗಲು ಏಕೆ ಬಯಸಬೇಕು? ಅನುಕೂಲತೆಯ ಕುರಿತು ರಾಗ ಮತ್ತು ಪ್ರತಿಕೂಲತೆಯ ಕುರಿತು ದ್ವೇಷ ನಮ್ಮ ತಪ್ಪಿನಿಂದಾಗುತ್ತದೆ. ಈ ಪ್ರಕಾರ ವಿಚಾರ ಮಾಡುವುದರಿಂದ ತಪ್ಪು ಅಳಿದುಹೋಗಿ ರಾಗ-ದ್ವೇಷಗಳು ಸರ್ವಥಾ ಮುಗಿದು ಹೋಗುತ್ತವೆ.

ಇನ್ನೊಂದು ಮಾತು – ತನ್ನ (ಸ್ವಯಂ) ಅಸ್ತಿತ್ವವು ಸ್ವತಂತ್ರವಾಗಿದೆ, ಯಾವುದೇ ಪದಾರ್ಥ, ವ್ಯಕ್ತಿ, ಕ್ರಿಯೆಯ ಅಧೀನವಾಗಿಲ್ಲ; ಏಕೆಂದರೆ ಸುಷುಪ್ತಿ ಅವಸ್ಥೆಯಲ್ಲಿ ನಾವು ಜಗತ್ತನ್ನು ಮರೆತು ಹೋದಾಗಲೂ ನಮ್ಮ ಅಸ್ತಿತ್ವ ಇದ್ದುಕೊಂಡಿರುತ್ತದೆ; ಜಾಗ್ರತ್ ಮತ್ತು ಸ್ವಪ್ನ ಅವಸ್ಥೆಯಲ್ಲಿಯೂ ನಾವು ಪ್ರಾಣ, ಪದಾರ್ಥಗಳಿಲ್ಲದೆ ಇರಬಲ್ಲೆವು. ಮತ್ತೆ (ತನ್ನ ಸ್ವತಂತ್ರ ಸತ್ತೆ ಇರುತ್ತಿರುವಾಗ) ಅವುಗಳಲ್ಲಿ ರಾಗ-ದ್ವೇಷಗೈದು ನಾವು ಅವುಗಳ ಅಧೀನ ಏಕೆ ಆಗಬೇಕು? ಈ ಪ್ರಕಾರ ವಿಚಾರ ಮಾಡುವುದರಿಂದಲೂ ರಾಗ-ದ್ವೇಷಗಳು ಅಳಿದುಹೋಗುತ್ತವೆ.

ಪ್ರಪಂಚದ ರಾಗವು ಉತ್ಪನ್ನ ಮತ್ತು ನಷ್ಟವಾಗುವಂತಹುದು. ಈ ರಾಗವು ಎಂದೂ ಸ್ಥಾಯಿಯಾಗಿರುವುದಿಲ್ಲ; ಆದರೂ ನಾವು ಹೊಸ- ಹೊಸ ಪ್ರಾಣಿ ಪದಾರ್ಥಗಳಲ್ಲಿ ರಾಗವಿಟ್ಟು ಅದನ್ನು ಇಟ್ಟುಕೊಳ್ಳುವ ಪ್ರಯತ್ನ ಮಾಡುತ್ತೇವೆ. ಆದರೆ ಪರಮಾತ್ಮನ ಅಭಿಲಾಷೆಯು ಉತ್ಪನ್ನ ಮತ್ತು ನಷ್ಟವಾಗುವಂತಹುದಲ್ಲ; ಏಕೆಂದರೆ ಪರಮಾತ್ಮನ ಅಂಶನಾದ ಕಾರಣ ಜೀವಿಗೆ ಪರಮಾತ್ಮನೊಂದಿಗೆ ಅಖಂಡ ಸಂಬಂಧವಿದೆ. ಪರಮಾತ್ಮನ ಅಭಿಲಾಷೆಯು ಎಂದೂ ಹೆಚ್ಚು – ಕಡಿಮೆಯಾಗುವುದಿಲ್ಲ, ಕೇವಲ ಪ್ರಪಂಚದಲ್ಲಿ ರಾಗ ಹೆಚ್ಚಾದಾಗ ಅದು ಕಡಿಮೆಯಾದಂತೆ ಮತ್ತು ರಾಗವು ಕಡಿಮೆಯಾದಾಗ ಹೆಚ್ಚಿದಂತೆ ಕಂಡು ಬರುತ್ತದೆ. ಅದಕ್ಕಾಗಿ 'ನಾನು ಯಾವಾಗಲೂ ಬದುಕಿದ್ದೇನೆ, ನಾನು ಎಲ್ಲವನ್ನು ತಿಳಿದುಕೊಳ್ಳುವೆ, ನಾನು ಸದಾಕಾಲ ಸುಖೀಯಾಗಿರಬೇಕು' – ಈ ರೂಪದಲ್ಲಿ ಸತ್-ಚಿತ್-ಆನಂದ ಸ್ವರೂಪೀ ಪರಮಾತ್ಮನ ಅಭಿಲಾಷೆ ಜೀವಮಾತ್ರರಲ್ಲಿ ನಿರಂತರವಾಗಿರುತ್ತದೆ. ಯಾವಾಗ ಪ್ರಪಂಚದ ರಾಗ ಅಳಿದು ಹೋದಾಗ ಮತ್ತು ಏಕಮಾತ್ರ ಪರಮಾತ್ಮನ ಅಭಿಲಾಷೆಯು ಇರುವಾಗ ದ್ವಂದ್ವ ಇರುವುದಿಲ್ಲ.

ಕರ್ಮಯೋಗ, ಜ್ಞಾನಯೋಗ ಮತ್ತು ಭಕ್ತಿಯೋಗ – ಮೂರೂ ಯೋಗಮಾರ್ಗಗಳಲ್ಲಿ ನಿರ್ದ್ವಂದ್ವನಾಗುವುದು ತುಂಬಾ ಆವಶ್ಯಕವಾಗಿದೆ. ದ್ವಂದ್ವವಿರುವತನಕ ಮುಕ್ತಿಯಾಗುವುದಿಲ್ಲ (೭/೨೭) ಪರಮಾತ್ಮತತ್ತ್ವದ ಪ್ರಾಪ್ತಿಯಲ್ಲಿ ರಾಗ-ದ್ವೇಷಗಳು ಶತ್ರುಗಳಾಗಿವೆ (೩/೩೪). ನಿರ್ದ್ವಂದ್ವನಾಗುವುದರಿಂದ ಇವೆರಡೂ ಇಲ್ಲವಾಗುತ್ತವೆ ಮತ್ತು ಇವುಗಳು ಇಲ್ಲವಾದಾಗ ಸುಖವಾಗಿ ಪರಮಾತ್ಮ ತತ್ತ್ವದ ಪ್ರಾಪ್ತಿಯಾಗುತ್ತದೆ.

ಪ್ರಪಂಚದಲ್ಲಿ ಸಿಕ್ಕಿಕೊಳ್ಳಲು ರಾಗ ಮತ್ತು ದ್ವೇಷ ಎರಡೇ ಕಾರಣಗಳವೆ. ಇರುವ ಸಾಧನೆಗಳೆಲ್ಲವು ರಾಗ-ದ್ವೇಷಗಳನ್ನು ಇಲ್ಲವಾಗಿಸಲೆಂದೇ ಇವೆ.* ರಾಗ-ದ್ವೇಷಗಳು ಅಳಿದು ಹೋದಾಗ ನಿತ್ಯಪ್ರಾಪ್ತ ಪರಮಾತ್ಮತತ್ತ್ವದ ಅನುಭೂತಿಯು ಸ್ವತಃಸಿದ್ಧವಾಗಿದೆ. ಇದರಲ್ಲಿ ಪರಿಶ್ರಮ ಇಲ್ಲವೇ ಇಲ್ಲ. ಕಾರಣ – ಪರಮಾತ್ಮತತ್ತ್ವದ ಅನುಭೂತಿ ಅಸತ್ತಿನಿಂದ ಆಗದೆ ಅಸತ್ತಿನ ತ್ಯಾಗದಿಂದ ಆಗುತ್ತದೆ. ಅಸತ್ತಿನ ಸತ್ತೆಯು ರಾಗ-ದ್ವೇಷದಲ್ಲೇ

* ಏತಾವಾನೇವ ಯೋಗೇಸ ಸಮಗ್ರೇಣೇಹ ಯೋಗಿನಃ। ಯುಜ್ಯತೇ ಽಭಿಮತೋ ಹ್ಯರ್ಥೋ ಯದಸಂಗಸ್ತು ಕೃತ್ಸ್ನಶಃ॥

(ಶ್ರೀಮದ್ಭಾಗವತ – ೩/೩೨/೨೭)

ಯೋಗಿಗಳ ಸಮಸ್ತ ಯೋಗ ಸಾಧನೆಗಳ ಏಕಮಾತ್ರ ಅಭೀಷ್ಟಫಲವು– ಸಂಪೂರ್ಣ ಪ್ರಪಂಚದಿಂದ ಆಸಕ್ತಿಯ ಅಭಾವವಾಗುವುದಾಗಿದೆ.

ನೆಲೆನಿಂತಿದೆ. ಅಸತ್ ಪ್ರಪಂಚವಾದರೋ ತನ್ನಿಂದ-ತಾನೇ ಇಲ್ಲವಾಗುತ್ತಾ ಇದೆ, ಆದರೆ ತನ್ನಲ್ಲಿ ರಾಗ-ದ್ವೇಷಗಳನ್ನು ಹಿಡಿದಿಟ್ಟಕಾರಣ ಪ್ರಪಂಚ ಸ್ಥಿರವೆಂದು ಕಾಣುತ್ತದೆ. ಆದ್ದರಿಂದ ಯಾವ ಪ್ರಪಂಚವು ಅಳಿದು ಹೋಗುತ್ತದೆಯೋ, ಅದರಲ್ಲಿ ರಾಗ-ದ್ವೇಷಗಳು ಇಲ್ಲದಿರುವಾಗ ಮುಕ್ತಿಯಾಗದೆ ಮತ್ತೇನಾಗುವುದು? ಅದಕ್ಕಾಗಿ ನಿರ್ದ್ವಂದ್ವ ಅರ್ಥಾತ್ ರಾಗ-ದ್ವೇಷಗಳಿಂದ ರಹಿತ ಪುರುಷನು ಸುಖವಾಗಿ ಸಂಸಾರ ಬಂಧನದಿಂದ ಮುಕ್ತನಾಗುತ್ತಾನೆ.

ಪರಿತಿಷ್ಪ ಭಾವ – *ಹೊರಗಿನ ಸುಖ-ದುಃಖಗಳ (ಸುಖಮಯ, ದುಃಖಮಯ ಪರಿಸ್ಥಿತಿ)ಲ್ಲಿ ಸಮ ಮತ್ತು ಅಂತರಂಗದ ಸುಖ- ದುಃಖದಿಂದ ರಹಿತನಾಗುವುದು 'ನಿರ್ದ್ವಂದ್ವ' ಅರ್ಥಾತ್ – ದ್ವಂದ್ವರಹಿತನಾಗುವುದಾಗಿದೆ.*

ತಾದಾತ್ಮ್ಯದಲ್ಲಿ ಚೇತನ ಅಂಶದ ಮುಖ್ಯತೆಯಿಂದ 'ಜಿಜ್ಞಾಸೆ' ಇರುತ್ತದೆ ಹಾಗೂ ಜಡ-ಅಂಶದ ಮುಖ್ಯತೆಯಿಂದ ಕಾಮನೆ ಇರುತ್ತದೆ. ಮನುಷ್ಯನಲ್ಲಿ ಹಸಿವಾದರೋ ಅವಿನಾಶೀ ತತ್ತ್ವದ್ದಿರುತ್ತದೆ, ಆದರೆ ರುಚಿ ನಾಶವುಳ್ಳದ್ದಿರುತ್ತದೆ; ಏಕೆಂದರೆ, ಅವಿನಾಶಿಯ ಹಸಿವನ್ನು ಅವನು ನಾಶವುಳ್ಳದ್ದರಿಂದ ಇಲ್ಲವಾಗಿಸಲು ಬಯಸುತ್ತಾನೆ. ಹಸಿವು ಮತ್ತು ರುಚಿ ಈ ದ್ವಂದ್ವವು ಮನುಷ್ಯನ ಸಂಸಾರ ಬಂಧನವನ್ನು ದೃಢವಾಗಿಸುತ್ತದೆ. ಮನುಷ್ಯನಿಗೆ ಸಂಸಾರದಲ್ಲಿ ರಾಗ-ದ್ವೇಷಗಳು ಇಲ್ಲದಿರುವಾಗ ಅವನ ಜಿಜ್ಞಾಸೆ ಪೂರ್ಣವಾಗುತ್ತದೆ ಮತ್ತು ಕಾಮನೆ ಅಳಿದುಹೋಗುತ್ತದೆ. ಅರ್ಥಾತ್ ಅವನು ನಿರ್ದ್ವಂದ್ವನಾಗುತ್ತಾನೆ.

—●—

ಸಂಬಂಧ - ಈ ಅಧ್ಯಾಯದ ಎರಡನೇ ಶ್ಲೋಕದ ಪೂರ್ವಾರ್ಧದಲ್ಲಿ ಭಗವಂತನು ಜ್ಞಾನಯೋಗ ಮತ್ತು ಕರ್ಮಯೋಗ – ಎರಡನ್ನೂ ಶ್ರೇಯಸ್ಕರವೆಂದು ಹೇಳಿರುವನು. ಅದರ ವ್ಯಾಖ್ಯೆಯನ್ನು ಈಗ ಮುಂದಿನ ಎರಡು ಶ್ಲೋಕಗಳಲ್ಲಿ ಮಾಡುತ್ತಾನೆ —

ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ ।
ಏಕಮಪ್ಯಾಸ್ಥಿತಃ ಸಮ್ಯಗುಭಯೋರ್ವಿಂದತೇ ಫಲಮ್ ॥ ೪॥

ಬಾಲಾಃ - ತಿಳಿವಳಿಕೆಯಿರದಿರುವ ಜನ, **ಸಾಂಖ್ಯಯೋಗೌ** - ಸಾಂಖ್ಯಯೋಗ ಮತ್ತು ಕರ್ಮಯೋಗವನ್ನು, **ಪೃಥಕ್** - ಬೇರೆ- ಬೇರೆ (ಫಲವುಳ್ಳದ್ದು), **ಪ್ರವದಂತಿ** - ಹೇಳುತ್ತಾರೆ, **ನ, ಪಂಡಿತಾಃ** - ಪಂಡಿತರು ಹೇಳುವುದಿಲ್ಲ; (ಏಕೆಂದರೆ), **ಏಕಮ್** - (ಇವೆರಡರಲ್ಲಿ) ಒಂದು ಸಾಧನೆಯಲ್ಲಿ, **ಅಪಿ** - ಕೂಡ, **ಸಮ್ಯಕ್** - ಚೆನ್ನಾಗಿ, **ಆಸ್ಥಿತಾಃ** - ಸ್ಥಿತನಾದ (ಮನುಷ್ಯನು), **ಉಭಯೋಃ** - ಎರಡರ, **ಫಲಮ್**- ಫಲರೂಪೀ (ಪರಮಾತ್ಮನನ್ನು), **ವಿಂದತೆ** - ಪಡೆದುಕೊಳ್ಳುತ್ತಾರೆ. ॥ ೪॥

ತಿಳಿವಳಿಕೆಯಿಲ್ಲದಿರುವ ಜನರು ಸಾಂಖ್ಯಯೋಗ ಮತ್ತು ಕರ್ಮಯೋಗಗಳು ಬೇರೆ-ಬೇರೆ ಫಲವುಳ್ಳದ್ದು ಎಂದು ಹೇಳುತ್ತಾರೆ; ಆದರೆ ಪಂಡಿತರು ಹೇಳುವುದಿಲ್ಲ; ಏಕೆಂದರೆ, ಇವೆರಡರಲ್ಲಿನ ಒಂದು ಸಾಧನೆಯಲ್ಲಿ ಕೂಡ ಚೆನ್ನಾಗಿ ಸ್ಥಿತನಾದ ಮನುಷ್ಯನು ಎರಡರ ಫಲರೂಪೀ ಪರಮಾತ್ಮನನ್ನು ಪಡೆದುಕೊಳ್ಳುತ್ತಾರೆ. ॥ ೪॥

ವ್ಯಾಖ್ಯಾ - **'ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ'** – ಇದೇ ಅಧ್ಯಾಯದ ಮೊದಲನೆ ಶ್ಲೋಕದಲ್ಲಿ ಅರ್ಜುನನು ಕರ್ಮಗಳನ್ನು ಸ್ವರೂಪದಿಂದ ತ್ಯಾಗಗೈದು ತತ್ತ್ವದರ್ಶಿ ಮಹಾಪುರುಷರ ಬಳಿಗೆ ಹೋಗಿ ಜ್ಞಾನವನ್ನು ಪಡೆಯವ ಸಾಧನೆಯನ್ನು **'ಕರ್ಮಸಂನ್ಯಾಸ'** ಎಂಬ ಹೆಸರಿನಿಂದ ಹೇಳಿರುವನು. ಭಗವಂತನೂ ಕೂಡ ೨ನೇ ಶ್ಲೋಕದಲ್ಲಿ ತನ್ನ ಸಿದ್ಧಾಂತದ ಮುಖ್ಯತೆಯನ್ನಿರಿಸಿಕೊಂಡು ಅದನ್ನು **'ಸಂನ್ಯಾಸ'** ಮತ್ತು **'ಕರ್ಮಸಂನ್ಯಾಸ'** ಎಂಬ ಹೆಸರಿನಿಂದ ಹೇಳಿರುವನು. ಈಗ ಆ ಸಾಧನೆಯನ್ನು ಭಗವಂತನು ಇಲ್ಲಿ **'ಸಾಂಖ್ಯ'** ಹೆಸರಿನಿಂದ ಹೇಳುತ್ತಿದ್ದಾನೆ. ಭಗವಂತನು ಶರೀರ-ಶರೀರಿಯ ಭೇದದ ವಿಚಾರಗೈದು ಸ್ವರೂಪದಲ್ಲಿ ಸ್ಥಿತನಾಗುವುದಕ್ಕೆ ಸಾಂಖ್ಯವೆಂದು ಹೇಳುತ್ತಾನೆ. ಭಗವಂತನ ಮತದಲ್ಲಿ ಸಂನ್ಯಾಸ ಮತ್ತು ಸಾಂಖ್ಯ ಪರ್ಯಾಯವಾಚಿಗಳಾಗಿವೆ, ಅದರಲ್ಲಿ ಕರ್ಮಗಳನ್ನು ಸ್ವರೂಪದಿಂದ ತ್ಯಾಗಮಾಡುವ ಅವಶ್ಯಕತೆ ಇಲ್ಲ.

ಅರ್ಜುನನು **'ಕರ್ಮಸಂನ್ಯಾಸ'** ಎಂಬ ಹೆಸರಿನಿಂದ ಹೇಳುತ್ತಿರುವುದೂ ಕೂಡ ನಿಃಸಂದೇಹವಾಗಿ ಭಗವಂತನಿಂದ ಹೇಳಲಾದ **'ಸಾಂಖ್ಯ'**ದ್ದೇ ಒಂದು ಅವಾಂತರ ಭೇದವಾಗಿದೆ. ಕಾರಣ – ಗುರುವಿನಿಂದ ಕೇಳಿಯೂ ಕೂಡ ಸಾಧಕನು ಶರೀರ-ಶರೀರಿಯ ಭೇದದ್ದೇ ವಿಚಾರ ಮಾಡುತ್ತಾನೆ.

'ಬಾಲಾಃ' ಪದದಿಂದ ಭಗವಂತನು – ವಯಸ್ಸು ಮತ್ತು ಬುದ್ಧಿಯಲ್ಲಿ ದೊಡ್ಡವರಾಗಿದ್ದರೂ ಸಾಂಖ್ಯಯೋಗ ಮತ್ತು ಕರ್ಮಯೋಗಗಳನ್ನು ಬೇರೆ-ಬೇರೆ ಫಲವುಳ್ಳದ್ದೆಂದು ಹೇಳುವವರು ಬಾಲಕರೇ ಅರ್ಥಾತ್-ತಿಳಿವಳಿಕೆಯಿಲ್ಲದವರು ಎಂದು ಹೇಳುತ್ತಾನೆ.

ಸಾಂಖ್ಯಯೋಗ ಹಾಗೂ ಕರ್ಮಯೋಗದ ತತ್ತ್ವವನ್ನು ಸರಿಯಾಗಿ ತಿಳಿದಿರುವ ಮಹಾಪುರುಷರೇ ಪಂಡಿತ ಅರ್ಥಾತ್ ಬುದ್ಧಿವಂತರಾಗಿದ್ದಾರೆ. ಅವರು ಎರಡನ್ನು ಬೇರೆ-ಬೇರೆ ಫಲವುಳ್ಳದ್ದು ಎಂದು ಹೇಳುವುದಿಲ್ಲ; ಏಕೆಂದರೆ ಅವರು

ಎರಡೂ ಸಾಧನೆಯ ಪ್ರಣಾಲಿಕೆಗಳನ್ನು ನೋಡದೆ ಅವೆರಡರ ನಿಜವಾದ ಪರಿಣಾಮವನ್ನು ನೋಡುತ್ತಾರೆ.

ಸಾಧನಾ ಪ್ರಣಾಲಿಕೆಯನ್ನು ನೋಡಿಕೊಂಡು ಸ್ವತಃ ಭಗವಂತನು ೩ನೇ ಅಧ್ಯಾಯದ ೩ನೇ ಶ್ಲೋಕದಲ್ಲಿ ಸಾಂಖ್ಯಯೋಗ ಮತ್ತು ಕರ್ಮಯೋಗ ಎರಡು ಪ್ರಕಾರದ ಸಾಧನೆಗಳನ್ನು ಸ್ವೀಕರಿಸಿರುವನು. ಎರಡರ ಸಾಧನಾ ಪ್ರಣಾಳಿಕೆಯು ಬೇರೆ-ಬೇರೆ ಆಗಿದ್ದರೂ ಸಾಧ್ಯ ಬೇರೆ-ಬೇರೆಯಲ್ಲ.

'ಏಕಮಪ್ಯಾಸ್ಥಿತಃ ಸಮ್ಯಗುಭಯೋರ್ವಿಂದತೇಫಲಮ್' – ಗೀತೆಯಲ್ಲಿ ಅಲ್ಲಲ್ಲಿ ಸಾಂಖ್ಯಯೋಗ ಮತ್ತು ಕರ್ಮಯೋಗಗಳ ಫಲವು ಪರಮಾತ್ಮನಪ್ರಾಪ್ತಿ ಎಂದು ಒಂದೇ ತಿಳಿಸಲಾಗಿದೆ. ೧೩ನೇ ಅಧ್ಯಾಯದ ೨೪ನೇ ಶ್ಲೋಕದಲ್ಲಿ ಎರಡೂ ಸಾಧನೆಗಳಿಂದ ತಾನೇ-ತನ್ನಲ್ಲಿ ಪರಮಾತ್ಮ ತತ್ತ್ವದ ಅನುಭವವಾಗುವುದನ್ನು ಹೇಳಲಾಗಿದೆ. ೩ನೇ ಅಧ್ಯಾಯದ ೧೯ನೇ ಶ್ಲೋಕದಲ್ಲಿ ಕರ್ಮಯೋಗಿಗೆ ಪರಮಾತ್ಮನ ಪ್ರಾಪ್ತಿಯನ್ನು ಹೇಳಲಾಗಿದೆ ಮತ್ತು ೧೨ನೇ ಅಧ್ಯಾಯದ ೪ನೇ ಶ್ಲೋಕದಲ್ಲಿ ಹಾಗೂ ೧೩ನೇ ಅಧ್ಯಾಯದ ೩೪ನೇ ಶ್ಲೋಕದಲ್ಲಿ ಜ್ಞಾನಯೋಗಿಗೆ ಪರಮಾತ್ಮನ ಪ್ರಾಪ್ತಿಯನ್ನು ಹೇಳಲಾಗಿದೆ. ಈ ಪ್ರಕಾರ ಭಗವಂತನ ಮತದಲ್ಲಿ ಎರಡೂ ಸಾಧನೆಗಳು ಒಂದೇ ಫಲವುಳ್ಳದ್ದಾಗಿವೆ.

ಪರಿಶಿಷ್ಟ ಭಾವ – ಬೇರೆ ಶಾಸ್ತ್ರೀಯ ಮಾತುಗಳನ್ನು ತಿಳಿದಿದ್ದರೂ ಸಾಂಖ್ಯಯೋಗ ಮತ್ತು ಕರ್ಮಯೋಗಗಳ ತತ್ತ್ವವನ್ನು ಅಳವಾಗಿ ತಿಳಿಯದವನು ನಿಜವಾಗಿ ಬಾಲಕನೇ ಅರ್ಥಾತ್-ತಿಳಿವಳಿಕೆಯಿಲ್ಲದವನಾಗಿದ್ದಾನೆ.

ಇಡೀ ಗೀತೆಯಲ್ಲಿ ಅವಿನಾಶೀ ತತ್ತ್ವಕ್ಕಾಗಿ 'ಫಲ' ಶಬ್ದ ಇದೇ ಶ್ಲೋಕದಲ್ಲಿ ಬಂದಿದೆ. 'ಫಲ' ಶಬ್ದದ ಅರ್ಥ – ಪರಿಣಾಮ. ಕರ್ಮಯೋಗ ಮತ್ತು ಜ್ಞಾನಯೋಗ ಎರಡೂ ಸಾಧನೆಗಳಿಂದ ಪ್ರಾಪ್ತವಾಗುವ ತತ್ತ್ವಕ್ಕೆ 'ಫಲ'ವೆಂದು ಹೇಳುವ ತಾತ್ಪರ್ಯ – ಇವೆರಡೂ ಸಾಧನೆಗಳಲ್ಲಿ ಮನುಷ್ಯನಿಗೆ ತನ್ನ ಉದ್ಯೋಗ ಮುಖ್ಯವಾಗಿದೆ. ಜ್ಞಾನಯೋಗದಲ್ಲಿ ವಿವೇಕರೂಪೀ ಉದ್ಯೋಗ ಮುಖ್ಯವಾಗಿದೆ ಮತ್ತು ಕರ್ಮಯೋಗದಲ್ಲಿ ಪರಹಿತದ ಕ್ರಿಯಾರೂಪೀ ಉದ್ಯೋಗ ಮುಖ್ಯವಾಗಿದೆ. ಸಾಧಕನ ತನ್ನ ಉದ್ಯೋಗ ಪರಿಶ್ರಮ ಸಫಲವಾಯಿತು, ಅದಕ್ಕಾಗಿ ಇದಕ್ಕೆ 'ಫಲ'ವೆಂದು ಹೇಳಲಾಗಿದೆ. ಈ ಫಲವು ನಷ್ಟವಾಗುವಂತಹುದಲ್ಲ, ಕರ್ಮಯೋಗ ಹಾಗೂ ಜ್ಞಾನಯೋಗ ಎರಡರ ಫಲವು ಅತ್ಮಜ್ಞಾನ ಅಥವಾ ಬ್ರಹ್ಮಜ್ಞಾನವಾಗಿದೆ.

ಕರ್ತವ್ಯ-ಕರ್ಮಗಳನ್ನು ಮಾಡುವುದು ಕರ್ಮಯೋಗವಾಗಿದೆ ಮತ್ತು ಏನನ್ನೂ ಮಾಡದಿರುವುದು ಜ್ಞಾನಯೋಗವಾಗಿದೆ. ಏನನ್ನೂ ಮಾಡದಿರುವುದರಿಂದ ಆಗುವ ತತ್ತ್ವದ ಪ್ರಾಪ್ತಿಯೇ ಕರ್ತವ್ಯ-ಕರ್ಮ ಮಾಡುವುದರಿಂದ ಉಂಟಾಗುತ್ತದೆ. ಮಾಡುವುದು ಮತ್ತು ಮಾಡದಿರುವುದಾದರೋ ಸಾಧನೆಯಾಗಿದೆ ಮತ್ತು ಇವುಗಳಿಂದ ಆಗುವ ತತ್ತ್ವದ ಪ್ರಾಪ್ತಿಯು ಸಾಧ್ಯವಾಗಿದೆ.

-*-

ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ ॥ ೫॥

ಸಾಂಖ್ಯೈಃ - ಸಾಂಖ್ಯಯೋಗಿಗಳು, **ಯತ್** - ಯಾವ, **ಸ್ಥಾನಮ್** - ತತ್ತ್ವವನ್ನು, **ಪ್ರಾಪ್ಯತೇ** - ಪಡೆದುಕೊಳ್ಳುವರೋ, **ಯೋಗೈಃ** - ಕರ್ಮಯೋಗಿಗಳೂ, **ಅಪಿ** - ಕೂಡ, **ತತ್** - ಅದನ್ನೇ, **ಗಮ್ಯತೇ** - ಪಡೆದುಕೊಳ್ಳುವರು (ಆದ್ದರಿಂದ), **ಯಃ** - ಯಾವ ಮನುಷ್ಯನು, **ಸಾಂಖ್ಯಮ್** - ಸಾಂಖ್ಯಯೋಗ, **ಚ** - ಮತ್ತು **ಯೋಗಮ್** - ಕರ್ಮಯೋಗವನ್ನು (ಫಲರೂಪದಲ್ಲಿ), **ಏಕಮ್** - ಒಂದೇ, **ಪಶ್ಯತಿ** - ನೋಡುತ್ತಾನೋ, **ಸಃ, ಚ** - ಅವನೇ (ಸರಿಯಾಗಿ), **ಪಶ್ಯತಿ** - ನೋಡುತ್ತಾನೆ. ॥ ೫॥

ಸಾಂಖ್ಯಯೋಗಿಗಳು ಯಾವ ತತ್ತ್ವವನ್ನು ಪಡೆದುಕೊಳ್ಳುವರೋ ಕರ್ಮಯೋಗಿಗಳೂ ಕೂಡ ಅದನ್ನೇ ಪಡೆದುಕೊಳ್ಳುತ್ತಾರೆ. ಆದ್ದರಿಂದ ಯಾವ ಮನುಷ್ಯನು ಸಾಂಖ್ಯಯೋಗ ಮತ್ತು ಕರ್ಮಯೋಗವನ್ನು ಫಲರೂಪದಲ್ಲಿ ಒಂದೇ ಎಂದು ನೋಡುತ್ತಾನೋ ಅವನೇ ಸರಿಯಾಗಿ ನೋಡುತ್ತಾನೆ. ॥ ೫॥

ವ್ಯಾಖ್ಯಾ - **'ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ'**– ಹಿಂದಿನ ಶ್ಲೋಕದ ಉತ್ತರಾರ್ಧದಲ್ಲಿ ಭಗವಂತನು ಒಂದೇ ಸಾಧನೆಯಲ್ಲಿ ಕೂಡ ಚೆನ್ನಾಗಿ ಸ್ಥಿತನಾದ ಮನುಷ್ಯನು ಎರಡೂ ಸಾಧನೆಗಳ ಫಲರೂಪೀ ಪರಮಾತ್ಮತತ್ತ್ವವನ್ನು ಪಡೆದುಕೊಳ್ಳುವನು ಎಂದು ಹೇಳಿರುವನು. ಅದೇ ಮಾತಿನ ಪುಷ್ಟಿಯನ್ನು ಭಗವಂತನು-ಸಾಂಖ್ಯಯೋಗಿಯು ಪಡೆದುಕೊಳ್ಳುವ ತತ್ತ್ವವನ್ನೇ ಕರ್ಮಯೋಗಿಯು ಪಡೆದುಕೊಳ್ಳುತ್ತಾನೆ ಎಂದು ಇನ್ನೊಂದು ಕ್ರಮದಿಂದ ಹೇಳುತ್ತಿದ್ದಾನೆ.

ಪ್ರಪಂಚದಲ್ಲಿ–ಕರ್ಮಯೋಗದಿಂದ ಶ್ರೇಯಸ್ಸು ಆಗುವುದಿಲ್ಲ, ಶ್ರೇಯಸ್ಸಾದರೋ ಜ್ಞಾನಯೋಗದಿಂದ ಆಗುತ್ತದೆ ಎಂಬ ಇರುವ ಧೋರಣೆಯನ್ನು ದೂರವಾಗಿಸಲು ಇಲ್ಲಿ **'ಅಪಿ'** ಅವ್ಯಯದ ಪ್ರಯೋಗ ಮಾಡಲಾಗಿದೆ.

ಸಾಂಖ್ಯಯೋಗೀ ಮತ್ತು ಕರ್ಮಯೋಗೀ ಇಬ್ಬರಿಗೂ ಕೊನೆಯಲ್ಲಿ ಕರ್ಮಗಳಿಂದ ಅರ್ಥಾತ್-ಕ್ರಿಯಾಶೀಲ ಪ್ರಕೃತಿ

ಯಿಂದ ಸಂಬಂಧ ವಿಚ್ಛೇದವಾದಾಗ ಎರಡೂ ಯೋಗಗಳೂ ಒಂದೇ ಆಗುತ್ತವೆ. ಸಾಧನೆಯ ಕಾಲದಲ್ಲಿಯೂ ಸಾಂಖ್ಯ ಯೋಗದ ವಿವೇಕ (ಜಡ-ಚೇತನದ ಸಂಬಂಧ ವಿಚ್ಛೇದ)ವನ್ನು ಕರ್ಮಯೋಗಿಯು ತನ್ನದಾಗಿಸಿಕೊಳ್ಳಬೇಕಾಗುತ್ತದೆ ಮತ್ತು ಕರ್ಮಯೋಗದ ಪ್ರಣಾಳಿಕೆಯನ್ನು (ತನಗಾಗಿ ಕರ್ಮ ಮಾಡದಿರುವ ಪದ್ಧತಿಯನ್ನು) ಸಾಂಖ್ಯ ಯೋಗಿಗೆ ತನ್ನದಾಗಿಸಿ ಕೊಳ್ಳಬೇಕಾಗುತ್ತದೆ. ಸಾಂಖ್ಯಯೋಗದ ವಿವೇಕವು ಪ್ರಕೃತಿ-ಪುರುಷನ ಸಂಬಂಧ-ವಿಚ್ಛೇದ ಮಾಡುವುದಕ್ಕಾಗಿ ಇರುತ್ತದೆ ಮತ್ತು ಕರ್ಮಯೋಗದ ಕರ್ಮವು ಪ್ರಪಂಚದ ಸೇವೆಗಾಗಿ ಆಗುತ್ತದೆ. ಸಿದ್ಧವಾದಾಗ ಸಾಂಖ್ಯಯೋಗೀ ಮತ್ತು ಕರ್ಮಯೋಗಿ ಇಬ್ಬರ ಸ್ಥಿತಿ ಒಂದೇ ಆಗುತ್ತದೆ; ಏಕೆಂದರೆ ಎರಡೂ ಸಾಧಕರಲ್ಲಿ ಕನ್ನ ನಿಷ್ಠೆಗಳು ಇರುತ್ತವೆ. (೩/೩).

ಪ್ರಪಂಚವು ವಿಷಮವಾಗಿದೆ. ಅತಿ ಘನಿಷ್ಠ ಪ್ರಾಪಂಚಿಕ ಸಂಬಂಧದಲ್ಲಿಯೂ ವಿಷಮತೆ ಇರುತ್ತದೆ. ಆದರೆ ಪರಮಾತ್ಮನು ಸಮನಾಗಿದ್ದಾನೆ. ಆದ್ದರಿಂದ ಸಮರೂಪೀ ಪರಮಾತ್ಮನ ಪ್ರಾಪ್ತಿಯು ಪ್ರಪಂಚದಿಂದ ಸರ್ವಥಾ ಸಂಬಂಧ ವಿಚ್ಛೇದವಾದಾಗಲೇ ಆಗುತ್ತದೆ. ಪ್ರಪಂಚದಿಂದ ಸಂಬಂಧ ವಿಚ್ಛೇದ ಮಾಡಲಿಕ್ಕಾಗಿ ಜ್ಞಾನಯೋಗ ಮತ್ತು ಕರ್ಮ ಯೋಗವೆಂಬ ಎರಡು ಯೋಗಮಾರ್ಗಗಳಿವೆ. ನನ್ನ ಸತ್ ಸ್ವರೂಪದಲ್ಲಿ ಎಂದೂ ಅಭಾವವಾಗುವುದಿಲ್ಲ ಕಾಮನೆ, ಆಸಕ್ತಿ ಅಭಾವದಲ್ಲೇ ಹುಟ್ಟಿಕೊಳ್ಳುತ್ತದೆ – ಹೀಗೆ ತಿಳಿದುಕೊಂಡು ಅಸಂಗನಾಗುವುದು – ಜ್ಞಾನಯೋಗವಾಗಿದೆ. ಯಾವ ವಸ್ತುಗಳಲ್ಲಿ ಸಾಧಕನಿಗೆ ರಾಗವಿದೆಯೋ ಆ ವಸ್ತುಗಳನ್ನು ಬೇರೆಯವರ ಸೇವೆಯಲ್ಲಿ ವಿನಿಯೋಗಿಸುವುದು ಮತ್ತು ಯಾವ ವ್ಯಕ್ತಿಗಳಲ್ಲಿ ರಾಗವಿದೆಯೋ ಅವರ ಸೇವೆಯನ್ನು ನಿಸ್ವಾರ್ಥಭಾವದಿಂದ ಮಾಡುವುದು – ಕರ್ಮಯೋಗ ವಾಗಿದೆ. ಈ ಪ್ರಕಾರ ಜ್ಞಾನಯೋಗದಲ್ಲಿ ವಿವೇಕ ವಿಚಾರದಿಂದ ಮತ್ತು ಕರ್ಮಯೋಗದಲ್ಲಿ ಸೇವೆಯಿಂದ ಪ್ರಪಂಚದ ಸಂಬಂಧ ಕಡಿದುಹೋಗುತ್ತದೆ.

'ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ'

ಹಿಂದಿನ ಶ್ಲೋಕದ ಪೂರ್ವಾರ್ಧದಲ್ಲಿ ಭಗವಂತನು ವ್ಯತಿರೇಕ ರೀತಿಯಿಂದ – ತಿಳಿವಳಿಕೆ ಇಲ್ಲದ ಜನರು ಸಾಂಖ್ಯಯೋಗ ಮತ್ತು ಕರ್ಮಯೋಗಗಳು ಬೇರೆ-ಬೇರೆ ಫಲಕೊಡುವಂತಹ ವುಗಳು ಎಂದು ಹೇಳುತ್ತಾರೆ ಎಂದು ಹೇಳಿದನು. ಅದೇ ಮಾತನ್ನು ಈಗ ಅನ್ವಯರೀತಿ ಯಿಂದ – ಯಾವ ಮನುಷ್ಯನು ಇವೆರಡೂ ಸಾಧನೆಗಳನ್ನು ಫಲದೃಷ್ಟಿಯಿಂದ ಒಂದೇ ಎಂದು ನೋಡುತ್ತಾನೋ ಅವನೇ ಯಥಾರ್ಥರೂಪದಿಂದ ನೋಡುತ್ತಾನೆ ಎಂದು ಹೇಳುತ್ತಾನೆ.

ಈ ಪ್ರಕಾರ ೪ ಮತ್ತು ೫ನೇ ಶ್ಲೋಕಗಳ ಸಾರ – ಭಗವಂತನು ಸಾಂಖ್ಯಯೋಗ ಮತ್ತು ಕರ್ಮಯೋಗ ಎರಡನ್ನು ಸ್ವತಂತ್ರ ಸಾಧನವೆಂದು ತಿಳಿಯುತ್ತಾನೆ ಮತ್ತು ಎರಡರ ಫಲವು ಒಂದೇ ಪರಮಾತ್ಮ ತತ್ತ್ವದ ಪ್ರಾಪ್ತಿ ಎಂದು ತಿಳಿಯುತ್ತಿದ್ದಾನೆ. ಈ ವಾಸ್ತವಿಕತೆಯನ್ನು ತಿಳಿಯದ ಮನುಷ್ಯನನ್ನು ತಿಳಿವಳಿಕೆಯಿಲ್ಲದವನೆಂದು ಹೇಳುತ್ತಾನೆ ಮತ್ತು ತಿಳಿದವರನ್ನು ಭಗವಂತನು ಯಥಾರ್ಥವಾಗಿ ತಿಳಿದಂತಹ (ಬುದ್ಧಿವಂತ)ನೆಂದು ಹೇಳುತ್ತಾನೆ.

ವಿಶೇಷ ವಿಚಾರ

ಯಾವುದೇ ಸಾಧನೆಯು ಪೂರ್ಣವಾದಾಗ ಬದುಕುವ ಇಚ್ಛೆ, ಸಾಯುವ ಭಯ, ಪಡೆಯುವ ಲಾಲಸೆ ಮತ್ತು ಮಾಡುವುದರ ರಾಗ – ಈ ನಾಲ್ಕೂ ಅಳಿದುಹೋಗುತ್ತವೆ.

ನಿರಂತರವಾಗಿ ಸಾಯುತ್ತಿರುವ ಅರ್ಥಾತ್ – ನಿರಂತರ ಅಭಾವವಾಗುತ್ತಿರುವ ಶರೀರದಲ್ಲಿ ಸಾಯುವ ಭಯ ಇರಲಾರದು; ಮತ್ತು ನಿತ್ಯ-ನಿರಂತರವಾಗಿರುವ ಆ ಸ್ವರೂಪದಲ್ಲಿ ಬದುಕುವ ಇಚ್ಛೆಯೂ ಇರಲಾರದು ಹಾಗಾದರೆ ಮತ್ತೆ ಬದುಕುವ ಇಚ್ಛೆ, ಸಾಯುವ ಭಯ ಯಾರಿಗಾಗುತ್ತದೆ? ಶರೀರದೊಂದಿಗೆ ಸ್ವರೂಪದ ತಾದಾತ್ಮ್ಯ ಉಂಟಾದಾಗ ಅದರಲ್ಲಿ ಬದುಕುವ ಇಚ್ಛೆ ಮತ್ತು ಸಾಯುವ ಭಯ ಉಂಟಾಗುತ್ತದೆ. ಬದುಕುವ ಇಚ್ಛೆ ಹಾಗೂ ಸಾಯುವ ಭಯ ಇವೆರಡೂ ಜ್ಞಾನಯೋಗದಿಂದ (ವಿವೇಕದಿಂದ) ಇಲ್ಲವಾಗುತ್ತವೆ.

ಯಾವುದಾದರು ಅಭಾವವಿರುವವನಲ್ಲೇ ಪಡೆಯುವ ಇಚ್ಛೆ ಇರುತ್ತದೆ. ನಮ್ಮ ಸ್ವರೂಪವು ಭಾವರೂಪಿಯಾಗಿದೆ, ಅದರಲ್ಲಿ ಎಂದೂ ಅಭಾವವು ಉಂಟಾಗಲಾರದು. ಅದಕ್ಕಾಗಿ ಸ್ವರೂಪದಲ್ಲಿ ಪಡೆಯುವ ಇಚ್ಛೆಯು ಎಂದೂ ಉಂಟಾಗುವು ದಿಲ್ಲ. ಪಡೆಯುವ ಇಚ್ಛೆ ಆಗದಿರುವಾಗ ಅವನಲ್ಲಿ ಮಾಡುವವನ ರಾಗ ಎಂದಿಗೂ ಉತ್ಪನ್ನವಾಗುವುದಿಲ್ಲ. ಸ್ವತಃ ಭಾವರೂಪಿಯಾಗಿದ್ದರೂ ಕೂಡ ಸ್ವರೂಪವು ಅಭಾವರೂಪೀ ಶರೀರದೊಂದಿಗೆ ತಾದಾತ್ಮ್ಯ ಮಾಡಿಕೊಂಡಾಗ ಅವನಿಗೆ ತನ್ನಲ್ಲಿ ಅಭಾವವು ಕಂಡುಬರುತ್ತದೆ, ಅದರಿಂದ ಅವನಲ್ಲಿ ಪಡೆಯುವ ಇಚ್ಛೆ ಉಂಟಾಗುತ್ತದೆ. ಪಡೆಯುವ ಇಚ್ಛೆಯಿಂದ ಮಾಡುವ ರಾಗವು ಉತ್ಪನ್ನವಾಗುತ್ತದೆ. ಪಡೆಯುವ ಇಚ್ಛೆ ಮತ್ತು ಮಾಡುವ ರಾಗವು ಕರ್ಮಯೋಗದಿಂದ ಅಳಿದು ಹೋಗುತ್ತದೆ.

ಜ್ಞಾನಯೋಗ ಮತ್ತು ಕರ್ಮಯೋಗ – ಇವೆರಡೂ ಸಾಧನೆಗಳಲ್ಲಿ ಯಾವುದಾದರೊಂದು ಸಾಧನೆಯು ಪೂರ್ಣ ವಾದಾಗ ಬದುಕುವ ಇಚ್ಛೆ, ಸಾಯುವಭಯ, ಪಡೆಯುವ ಲಾಲಸೆ, ಮಾಡುವ ರಾಗ ಈ ನಾಲ್ಕೂ ಸರ್ವಥಾ ಇಲ್ಲವಾಗುತ್ತವೆ.

ಪರಿಶಿಷ್ಟ ಭಾವ – ಸಾಂಖ್ಯಯೋಗ ಮತ್ತು ಕರ್ಮಯೋಗ ಎರಡೂ ಸಾಧನೆಗಳೂ ಲೌಕಿಕವಾದ್ದರಿಂದ ಒಂದೇ ಆಗಿವೆ.

ಸಾಂಖ್ಯಯೋಗದಲ್ಲಿ ಸಾಧಕನು ಚಿನ್ಮಯತೆಯಲ್ಲಿ ಸ್ಥಿತನಾಗುತ್ತಾನೆ ಮತ್ತು ಚಿನ್ಮಯತೆಯಲ್ಲಿ ಸ್ಥಿತನಾದ ಮೇಲೆ ಜಡತೆಯ ತ್ಯಾಗವಾಗುತ್ತದೆ. ಕರ್ಮಯೋಗದಲ್ಲಿ ಸಾಧಕನು ಜಡತೆಯ ತ್ಯಾಗ ಮಾಡುತ್ತಾನೆ ಹಾಗೂ ಜಡತೆಯ ತ್ಯಾಗವಾದಾಗ ಚಿನ್ಮಯತೆಯಲ್ಲಿ ಸ್ಥಿತಿ ಉಂಟಾಗುತ್ತದೆ. ಈ ಪ್ರಕಾರ ಸಾಂಖ್ಯಯೋಗ-ಕರ್ಮಯೋಗ ಎರಡೂ ಸಾಧನೆಗಳ ಪರಿಣಾಮದಲ್ಲಿ ಚಿನ್ಮಯತೆಯ ಪ್ರಾಪ್ತಿ ಅರ್ಥಾತ್- ಚಿನ್ಮಯ ಸ್ವರೂಪದಲ್ಲಿ ಸ್ಥಿತಿಯ ಅನುಭವವಾಗುತ್ತದೆ.

ಶರೀರವನ್ನು ಪ್ರಪಂಚದ ಸೇವೆಯಲ್ಲಿ ತೊಡಗಿಸುವುದು ಕರ್ಮ ಯೋಗವಾಗಿದೆ ಮತ್ತು ಶರೀರದಿಂದ ಸ್ವತಃ ಬೇರೆಯಾಗುವುದು ಜ್ಞಾನಯೋಗವಾಗಿದೆ. ಬೇಕಾದರೆ ಶರೀರವನ್ನು ಪ್ರಪಂಚದ ಸೇವೆಯಲ್ಲಿ ತೊಡಗಿಸಲೀ, ಬೇಕಾದರೆ ಶರೀರದಿಂದ ಸ್ವಯಂ ಬೇರೆಯಾಗಲೀ ಎರಡರ ಪರಿಣಾಮವೂ ಒಂದೇ ಆಗುವುದು ಅರ್ಥಾತ್-ಎರಡೂ ಸಾಧನೆಗಳಿಂದ ಪ್ರಪಂಚದಿಂದ ಸಂಬಂಧ ವಿಚ್ಛೇದವಾಗಿ ಸ್ವರೂಪದಲ್ಲಿ ಸ್ಥಿತಿಉಂಟಾದೀತು.

ಇಲ್ಲಿ ೪ನೇ ಮತ್ತು ೫ನೇ ಶ್ಲೋಕಗಳಲ್ಲಿ ೪ನೇ ಶ್ಲೋಕದ ಪೂರ್ವಾರ್ಧದ ಸಂಬಂಧ ೫ನೇ ಶ್ಲೋಕದ ಉತ್ತರಾರ್ಧದೊಂದಿಗೆ ಇದೆ ಮತ್ತು ೫ನೇ ಶ್ಲೋಕದ ಪೂರ್ವಾರ್ಧದ ಸಂಬಂಧ ೪ನೇ ಶ್ಲೋಕದ ಉತ್ತರಾರ್ಧದೊಂದಿಗೆ ಇದೆ.

ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ – ಈ ಮೂರು ಸಾಧನೆಗಳಲ್ಲಿ ಜ್ಞಾನಯೋಗ ಮತ್ತು ಭಕ್ತಿಯೋಗದ ಪ್ರಚಾರವಾದರೋ ಹೆಚ್ಚಾಗಿದೆ, ಆದರೆ ಕರ್ಮಯೋಗದ ಪ್ರಚಾರ ತುಂಬಾ ಕಡಿಮೆ ಇದೆ. ಭಗವಂತನೂ ಗೀತೆಯಲ್ಲಿ– ತುಂಬಾ ಸಮಯ ಕಳೆದು ಹೋದ ಕಾರಣದಿಂದ ಈ ಕರ್ಮಯೋಗವು ಈ ಮನುಷ್ಯ ಲೋಕದಲ್ಲಿ ಲುಪ್ತವಾದಂತಾಗಿದೆ (೪/೨) ಎಂದು ಹೇಳಿರುವನು. ಅದಕ್ಕಾಗಿ ಕರ್ಮಯೋಗದ ಸಂಬಂಧದಲ್ಲಿ ಇದು ಪರಮಾತ್ಮ ಪ್ರಾಪ್ತಿಯ ಸ್ವತಂತ್ರ ಸಾಧನೆಯಿಲ್ಲ ಎಂಬ ದೋರಣೆ ಉಂಟಾಗಿದೆ. ಆದ್ದರಿಂದ ಕರ್ಮಯೋಗದ ಸಾಧಕನು ಒಂದೋ ಜ್ಞಾನಯೋಗದಲ್ಲಿ ಹೊರಟುಹೋಗುತ್ತಾನೆ, ಅಥವಾ ಭಕ್ತಿಯೋಗದಲ್ಲಿ ತೊಡಗುತ್ತಾನೆ.

ತಾವತ್ ಕರ್ಮಾಣಿ ಕುರ್ವೀತ ನ ನಿರ್ವಿದ್ಯೇತ ಯಾವತಾ।
ಮತ್ಕಥಾಶ್ರವಣಾದೌ ವಾ ಶ್ರದ್ಧಾ ಯಾವನ್ನ ಜಾಯತೇ॥
(ಶ್ರೀಮದ್ಭಾಗವತ ೧೧/೨೦/೯)

ಎಲ್ಲಿಯವರೆಗೆ ಭೋಗಗಳಿಂದ ವೈರಾಗ್ಯ ಉಂಟಾಗುವುದಿಲ್ಲವೋ (ಜ್ಞಾನಯೋಗದ ಅಧಿಕಾರಿಯಾವುದಿಲ್ಲವೋ) ಅಥವಾ ನನ್ನ ಲೀಲೆ ಕಥಾ ಶ್ರವಣಾದಿಗಳಲ್ಲಿ ಶ್ರದ್ಧೆ ಉಂಟಾಗುವುದಿಲ್ಲವೋ (ಭಕ್ತಿಯೋಗದ ಅಧಿಕಾರಿಯಾಗುವುದಿಲ್ಲವೋ) ಅಲ್ಲಿಯವರೆಗೆ ಕರ್ಮಗಳನ್ನು ಮಾಡಬೇಕು.

ಆದರೆ ಇಲ್ಲಿ ಭಗವಂತನು ಜ್ಞಾನಯೋಗದಂತೆ ಕರ್ಮಯೋಗವನ್ನೂ ಕೂಡ ಪರಮಾತ್ಮಪ್ರಾಪ್ತಿಯ ಸ್ವತಂತ್ರ ಸಾಧನೆಯೆಂದು ಹೇಳುತ್ತಿದ್ದಾನೆ. ಮೇಲೆ ಹೇಳಿದ ೪ನೇ, ೫ನೇ ಶ್ಲೋಕಗಳಲ್ಲದೆ ಗೀತೆಯಲ್ಲಿ ಅನೇಕ ಕಡೆಗಳಲ್ಲಿ ಕರ್ಮಯೋಗದಿಂದ ಸ್ವತಂತ್ರವಾಗಿ ತತ್ತ್ವಜ್ಞಾನ, ಪರಮಶಾಂತಿ, ಮುಕ್ತಿ ಅಥವಾ ಪರಮಾತ್ಮತತ್ತ್ವದ ಪ್ರಾಪ್ತಿಯಾಗುವ ಮಾತು ಬಂದಿದೆ; ಹೇಗೆಂದರೆ – **'ತತ್ತ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ'** (೪/೩೮), **'ಯೋಗಯುಕ್ತೋ ಮುನಿರ್ಬ್ರಹ್ಮ ನಚಿರೇಣಾಧಿಗಚ್ಛತಿ'** (೫/೬), **'ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ'** (೪/೨೩), **'ಜ್ಞಾನಾಗ್ನಿ ದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ'** (೪/೧೯), **'ಯುಕ್ತಃ ಕರ್ಮಫಲಂ ತ್ಯಕ್ತ್ವಾ ಶಾಂತಿಮಾಪ್ನೋತಿ ನೈಷ್ಠಿಕೀಮ್'** (೫/೧೨).

ಶ್ರೀಮದ್ಭಾಗವತದಲ್ಲಿಯೂ ಕರ್ಮಯೋಗವನ್ನು ಪರಮಾತ್ಮ ಪ್ರಾಪ್ತಿಯ ಸ್ವತಂತ್ರ ಸಾಧನೆಯೆಂದು ಹೇಳಿದೆ –

ಸ್ವಧರ್ಮಸ್ಥೋ ಯಜನ್ ಯಜ್ಞೈರನಾಶೀಃ ಕಾಮ ಉದ್ಧವ।
ನ ಯಾತಿ ಸ್ವರ್ಗನರಕೌ ಯದ್ಯನ್ನಸ್ಯ ಸಮಾಚರೇತ್ ॥
(೧೧/೨೦/೧೦)

ಯಾರು ಸ್ವಧರ್ಮದಲ್ಲಿ ಸ್ಥಿತನಾಗಿ ಹಾಗೂ ಭೋಗಗಳ ಕಾಮನೆಯ ತ್ಯಾಗಗೈದು ತನ್ನ ಕರ್ತವ್ಯ-ಕರ್ಮಗಳ ಮೂಲಕ ಭಗವಂತನ ಪೂಜೆಮಾಡುತ್ತಾನೋ ಹಾಗೂ ಸಕಾಮಭಾವದಿಂದ ಯಾವುದೇ ಕರ್ಮಗಳನ್ನು ಮಾಡುವುದಿಲ್ಲವೋ, ಅವನಿಗೆ ಸ್ವರ್ಗ ಅಥವಾ ನರಕಗಳಿಗೆ ಹೋಗಬೇಕಾಗುವುದಿಲ್ಲ ಅರ್ಥಾತ್ – ಅವನು ಕರ್ಮ ಬಂಧನದಿಂದ ಮುಕ್ತನಾಗುತ್ತಾನೆ.

ಅಸ್ಮಿನ್‌ಲ್ಲೋಕೇ ವರ್ತಮಾನಃ ಸ್ವಧರ್ಮಸ್ಥೋಽನಘಃ ಶುಚಿಃ।
ಜ್ಞಾನಂ ವಿಶುದ್ಧಮಾಪ್ನೋತಿ ಮದ್ಭಕ್ತಿಂ ವಾ ಯದೃಚ್ಛಯಾ ॥
(೧೧/೨೦/೧೧)

ಸ್ವಧರ್ಮದಲ್ಲಿ ನೆಲೆನಿಂತ ಆ ಕರ್ಮಯೋಗಿಯು ಈ ಲೋಕದಲ್ಲಿ ಎಲ್ಲ ಕರ್ತವ್ಯ-ಕರ್ಮಗಳನ್ನು ಆಚರಿಸುತ್ತಾ ಪಾಪ-ಪುಣ್ಯಗಳಿಂದ ಮುಕ್ತನಾಗಿ ಪರಿಶ್ರಮವಿಲ್ಲದೆ ತತ್ತ್ವ ಜ್ಞಾನವನ್ನು ಅಥವಾ ಪರಮಪ್ರೇಮ (ಪರಾಭಕ್ತಿ)ವನ್ನು ಪಡೆದುಕೊಳ್ಳುತ್ತಾನೆ.

ತಾತ್ಪರ್ಯ– ಕರ್ಮಯೋಗವು ಸಾಧಕನಿಗೆ ಜ್ಞಾನಯೋಗ ಮತ್ತು ಭಕ್ತಿಯೋಗದ ಅಧಿಕಾರಿಯನ್ನಾಗಿಸುತ್ತದೆ ಮತ್ತು ಸ್ವತಂತ್ರವಾಗಿ ಶ್ರೇಯಸ್ಸನ್ನೂ ಮಾಡುತ್ತದೆ. ಇನ್ನೊಂದು ರೀತಿಯಿಂದ ಹೇಳುವುದಾದರೆ – ಕರ್ಮಯೋಗದಿಂದ ಸಾಧನ-ಜ್ಞಾನ ಅಥವಾ ಸಾಧನ-ಭಕ್ತಿಯೂ ದೊರೆಯಬಲ್ಲದು ಮತ್ತು ಸಾಧ್ಯ ಜ್ಞಾನ (ತತ್ತ್ವಜ್ಞಾನ) ಅಥವಾ ಸಾಧ್ಯ-ಭಕ್ತಿ (ಪರಮ ಪ್ರೇಮ ಅಥವಾ ಪರಾಭಕ್ತಿ)ಯ ಪ್ರಾಪ್ತಿಯೂ ಕೂಡ ಆಗಬಲ್ಲದು.

ಸಂಬಂಧ - ಇದೇ ಅಧ್ಯಾಯದ ಎರಡನೇ ಶ್ಲೋಕದಲ್ಲಿ ಭಗವಂತನು ಸಂನ್ಯಾಸ – (ಸಾಂಖ್ಯಯೋಗ)ಕ್ಕಿಂತ ಕರ್ಮಯೋಗವನ್ನು ಶ್ರೇಷ್ಠವೆಂದು ಹೇಳಿರುವನು. ಈಗ ಅದೇ ಮಾತನ್ನು ಇನ್ನೊಂದು ಪ್ರಕಾರದಿಂದ ಹೇಳುತ್ತಾನೆ —

ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ ।
ಯೋಗಯುಕ್ತೋ ಮುನಿರ್ಬ್ರಹ್ಮ ನಚಿರೇಣಾಧಿಗಚ್ಛತಿ ॥ ೬॥

ತು - ಆದರೆ, **ಮಹಾಬಾಹೋ** - ಹೇ ಮಹಾಬಾಹುವೇ!, **ಅಯೋಗತಃ** - ಕರ್ಮಯೋಗವಿಲ್ಲದೆ, **ಸಂನ್ಯಾಸಃ*** - ಸಾಂಖ್ಯಯೋಗವು **ಆಪ್ತುಮ್** - ಸಿದ್ಧವಾಗುವುದು, **ದುಃಖಮ್** - ಕಷ್ಟವಾಗಿದೆ, **ಮುನಿಃ** - ಮನನಶೀಲ, **ಯೋಗಯುಕ್ತಃ** - ಕರ್ಮಯೋಗಿಯು, **ನಚಿರೇಣ** - ಬೇಗನೇ, **ಬ್ರಹ್ಮ** - ಬ್ರಹ್ಮವನ್ನು, **ಅಧಿಗಚ್ಛತಿ** - ಪಡೆದುಕೊಳ್ಳುತ್ತಾನೆ. ॥ ೬॥

ಆದರೆ ಹೇ ಮಹಾಬಾಹೋ! ಕರ್ಮಯೋಗವಿಲ್ಲದೆ ಸಾಂಖ್ಯಯೋಗವು ಸಿದ್ಧವಾಗುವುದು ಕಷ್ಟವಾಗಿದೆ, ಮನನಶೀಲ ಕರ್ಮಯೋಗಿಯು ಬೇಗನೇ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ. ॥ ೬॥

ವ್ಯಾಖ್ಯಾ - '**ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ**'– ಸಾಂಖ್ಯಯೋಗದ ಸಫಲತೆಗಾಗಿ ಕರ್ಮಯೋಗದ ಸಾಧನೆ ಮಾಡುವುದು ಆವಶಕವಾಗಿದೆ; ಏಕೆಂದರೆ ಅದಿಲ್ಲದೆ ಸಾಂಖ್ಯಯೋಗದ ಸಿದ್ಧಿಯು ಕಷ್ಟದಿಂದಾಗುತ್ತದೆ. ಆದರೆ ಕರ್ಮಯೋಗದ ಸಿದ್ಧಿಗಾಗಿ ಸಾಂಖ್ಯಯೋಗದ ಸಾಧನೆಮಾಡುವ ಆವಶ್ಯಕತೆ ಇಲ್ಲ. ಇದೇ ಭಾವವನ್ನು ಇಲ್ಲಿ '**ತು**' ಪದದಿಂದ ಪ್ರಕಟ ಪಡಿಸಲಾಗಿದೆ.

ಸಾಂಖ್ಯಯೋಗಿಯ ಲಕ್ಷ್ಯ ಪರಮಾತ್ಮತತ್ತ್ವವನ್ನು ಅನುಭವಿಸುವುದಾಗಿದೆ. ಆದರೆ ರಾಗವಿರುವಾಗ ಈ ಸಾಧನೆಯ ಮೂಲಕ ಪರಮಾತ್ಮತತ್ತ್ವದ ಅನುಭವದ ಮಾತಾದರೋ ದೂರವುಳಿಯಿತು, ಈ ಸಾಧನೆಯನ್ನು ತಿಳಿಯುವುದೂ ಕಷ್ಟವಾಗಿದೆ.

ರಾಗವನ್ನು ಇಲ್ಲವಾಗಿಸುವ ಉಪಾಯ-ಕರ್ಮಯೋಗದ ಅನುಷ್ಠಾನ ಮಾಡುವುದಾಗಿದೆ. ಕರ್ಮಯೋಗದಲ್ಲಿ ಪ್ರತಿಯೊಂದು ಕ್ರಿಯೆ ಬೇರೆಯವರ ಹಿತಕ್ಕಾಗಿಯೇ ಮಾಡಲಾಗುತ್ತದೆ. ಬೇರೆಯವರ ಹಿತದ ಭಾವನೆ ಇರುವುದರಿಂದ ತನ್ನ ರಾಗವು ತಾನಾಗಿ ಇಲ್ಲವಾಗುತ್ತದೆ. ಅದಕ್ಕಾಗಿ ಕರ್ಮಯೋಗದ ಆಚರಣೆಯಿಂದ ರಾಗವನ್ನು ಇಲ್ಲವಾಗಿಸಿಕೊಂಡು ಸಾಂಖ್ಯಯೋಗದ ಸಾಧನೆ ಮಾಡುವುದು ಸುಲಭವಾಗುತ್ತದೆ. ಕರ್ಮಯೋಗದ ಸಾಧನೆ ಮಾಡದೆ ಸಾಂಖ್ಯಯೋಗದ ಸಿದ್ಧಿಯಾಗುವುದು ಕಷ್ಟವಾಗಿದೆ.

'**ಯೋಗಯುಕ್ತೋ ಮುನಿರ್ಬ್ರಹ್ಮ ನಚಿರೇಣಾಧಿಗಚ್ಛತಿ**' – ತನ್ನ ನಿಷ್ಕಾಮಭಾವವನ್ನು ಮತ್ತು ಬೇರೆಯವರ ಹಿತವನ್ನು ಮನನ ಮಾಡುವ ಕರ್ಮಯೋಗಿಯನ್ನು ಇಲ್ಲಿ '**ಮುನಿಃ**' ಎಂದು ಹೇಳಲಾಗಿದೆ.

ಕ್ರಿಯೆಯು ಸಣ್ಣದಿರಲಿ, ದೊಡ್ಡದಿರಲಿ ಪ್ರತಿಯೊಂದನ್ನು ಮಾಡುವಾಗ ಕರ್ಮಯೋಗಿಯು ನನ್ನ ಭಾವ ನಿಷ್ಕಾಮವಾಗಿದೆಯೋ ಅಥವಾ ಸಕಾಮವೋ? ಎಂದು ನೋಡುತ್ತಾನೆ. ಸಕಾಮಭಾವ ಬರುತ್ತಲೇ ಅವನು ಅದನ್ನು ಇಲ್ಲವಾಗಿಸುತ್ತಾನೆ; ಏಕೆಂದರೆ ಸಕಾಮ ಭಾವ ಬರುತ್ತಲೇ ಆ ಕ್ರಿಯೆಯು ತನ್ನದು ಮತ್ತು ತನಗಾಗಿ ಆಗಿ ಹೋಗುತ್ತದೆ.

ಬೇರೆಯವರ ಹಿತವು ಹೇಗಾದೀತು? ಈ ಪ್ರಕಾರ ಮನನ ಮಾಡುವುದರಿಂದ ರಾಗದ ತ್ಯಾಗವು ಸುಲಭವಾಗಿ ಆಗುತ್ತದೆ.

ಮೇಲೆ ಹೇಳಿದ ಪದಗಳಿಂದ ಭಗವಂತನು – ಕರ್ಮಯೋಗಿಯು ಬೇಗನೇ ಪರಮಾತ್ಮತತ್ತ್ವವನ್ನು ಪಡೆದುಕೊಳ್ಳುತ್ತಾನೆ ಎಂಬ ಕರ್ಮಯೋಗಿಯ ವಿಶೇಷತೆಯನ್ನು ಹೇಳುತ್ತಿದ್ದಾನೆ. ಪ್ರಪಂಚದ ರಾಗವೇ ಪರಮಾತ್ಮತತ್ತ್ವದ ಪ್ರಾಪ್ತಿಯಲ್ಲಿ ವಿಳಂಬದ ಕಾರಣ ವಾಗಿದೆ. ನಿಷ್ಕಾಮಭಾವ ಪೂರ್ವಕ ಕೇವಲ ಬೇರೆಯವರ ಹಿತಕ್ಕಾಗಿ ಕರ್ಮಮಾಡುತ್ತಾ ಇರುವುದರಿಂದ ಕರ್ಮಯೋಗಿಯ ರಾಗವು ಸರ್ವಥಾ ಅಭಾವವಾಗುತ್ತದೆ ಮತ್ತು ರಾಗವು ಸರ್ವಥಾ ಅಭಾವವಾದ ಮೇಲೆ ಸ್ವತಃಸಿದ್ಧ ಪರಮಾತ್ಮತತ್ತ್ವದ ಅನುಭೂತಿ ಉಂಟಾಗುತ್ತದೆ. ಇದೇ ಅಭಿಪ್ರಾಯವನ್ನು ಭಗವಂತನು ಇನೇ ಅಧ್ಯಾಯದ ೩೮ನೇ ಶ್ಲೋಕದಲ್ಲಿ '**ತತ್ಸ್ವಯಂ ಯೋಗಸಂಸಿದ್ಧಃ ಕಾಲೇನಾತ್ಮನಿ ವಿಂದತಿ**' ಪದಗಳಿಂದ 'ಯೋಗಸಂಸಿದ್ಧವಾಗುತ್ತಲೇ ತಾನಾಗಿ ತತ್ತ್ವಜ್ಞಾನದ ಪ್ರಾಪ್ತಿಯು ಅವಶ್ಯವಾಗಿ ಆಗುತ್ತದೆ ಎಂದು ಹೇಳಿರುವನು. ಈ ಸಾಧನೆಯಲ್ಲಿ ಬೇರೆ ಸಾಧನೆಯ ಅಪೇಕ್ಷೆ ಇಲ್ಲ, ಇದರ ಸಿದ್ಧಿಯಲ್ಲಿ ಕಠಿಣತೆ ಮತ್ತು ವಿಳಂಬವೂ ಇಲ್ಲ.'

ಇನ್ನೊಂದು ಕಾರಣ – ದೇಹಧಾರೀ-ದೇಹಾಭಿಮಾನಿ ಮನುಷ್ಯನು ಸಂಪೂರ್ಣ ಕರ್ಮಗಳನ್ನು ತ್ಯಾಗಮಾಡಲಾರನು, ಆದರೆ ಕರ್ಮಫಲದ ತ್ಯಾಗಿಯಾಗಿರುವವನು ತ್ಯಾಗಿ ಎಂದು ಹೇಳಿಸಿಕೊಳ್ಳುವನು (೧೮/೧೧). ಇದರಿಂದ-ದೇಹಧಾರಿಯು ಕರ್ಮಗಳ ತ್ಯಾಗವಾದರೋ ಮಾಡಲಾರನು ಆದರೆ ಕರ್ಮಫಲದ- ಫಲೇಚ್ಛೆಯ ತ್ಯಾಗವಾದರೋ ಮಾಡಬಲ್ಲನು.

* ಇಲ್ಲಿ 'ಸಂನ್ಯಾಸಿ' ಪದವು 'ಆಪ್ತುಮ್' ಕ್ರಿಯೆಯ ಕರ್ಮವಾಗುವುದರಿಂದ ಅದರಲ್ಲಿ ದ್ವಿತೀಯಾ ಆಗಬೇಕಾಗಿತ್ತು ಅದರೂ 'ತು' ಪದವನ್ನು ವಿಪಾತ ಸಂಜ್ಞಾ ಎಂದು ತಿಳಿದುಕೊಂಡು ಅದರಿಂದ ಕರ್ಮವು ಉಕ್ತವಾದ್ದರಿಂದ 'ಸಂನ್ಯಾಸಿ' ಪದದಲ್ಲಿ ಪ್ರಥಮಾ ಆಗಿದೆ.

ಎಂಬ ಧ್ವನಿ ಹೊರಡುತ್ತದೆ. ಅದಕ್ಕಾಗಿ ಕರ್ಮ ಯೋಗದಲ್ಲಿ ಸುಗಮತೆ ಇದೆ.

ಕರ್ಮಯೋಗದ ಮಹಿಮೆಯನ್ನು ಭಗವಂತನು – ಕರ್ಮ ಯೋಗಿಗೆ ತತ್ಕಾಲವೇ ಶಾಂತಿಯು ಪ್ರಾಪ್ತವಾಗುತ್ತದೆ – **'ತ್ಯಾಗಾಚ್ಛಾಂತಿರನಂತರಮ್'** (೧೨/೧೨) ಎಂದು ಹೇಳುವನು. ಅವನು ಸಂಸಾರಬಂಧನದಿಂದ ಸುಲಭವಾಗಿ ಮುಕ್ತನಾಗಿ ಹೋಗುತ್ತಾನೆ– **'ಸುಖಂ ಬಂಧಾತ್ಪ್ರಮುಚ್ಯತೆ'** (೫/೩). ಆದ್ದರಿಂದ ಕರ್ಮಯೋಗದ ಸಾಧನೆಯು ಸುಗಮ, ಶೀಘ್ರ ಸಿದ್ಧಿದಾಯಕ ಮತ್ತ ಯಾವುದೇ ಬೇರೆ ಸಾಧನೆಯಿಲ್ಲದೆ ಪರಮಾತ್ಮನ ಪ್ರಾಪ್ತಿಯಾಗಿಸುವಂತಹ ಸ್ವತಂತ್ರ ಸಾಧನೆಯಾಗಿದೆ.

–✹–

ಸಂಬಂಧ - ಈಗ ಭಗವಂತನು ಕರ್ಮಯೋಗಿಯ ಲಕ್ಷಣಗಳನ್ನು ವರ್ಣಿಸುತ್ತಾನೆ —

ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇಂದ್ರಿಯಃ ।
ಸರ್ವಭೂತಾತ್ಮಭೂತಾತ್ಮಾ ಕುರ್ವನ್ನಪಿ ನ ಲಿಪ್ಯತೇ ॥ ೭॥

ಜಿತೇಂದ್ರಿಯಃ - ಯಾರ ಇಂದ್ರಿಯಗಳು ತನ್ನ ವಶದಲ್ಲಿವೆಯೋ, **ವಿಶುದ್ಧಾತ್ಮಾ** - ಯಾರ ಅಂತಃಕರಣ ನಿರ್ಮಲವಾಗಿದೆಯೋ, **ವಿಜಿತಾತ್ಮಾ** - ಯಾರ ಶರೀರ ತನ್ನ ವಶದಲ್ಲಿದೆಯೋ, **ಸರ್ವಭೂತಾತ್ಮ ಭೂತಾತ್ಮಾ** - ಸಮಸ್ತ ಪ್ರಾಣಿಗಳ ಆತ್ಮನೇ ಯಾರ ಆತ್ಮಾ ಆಗಿದೆಯೋ (ಇಂತಹ), **ಯೋಗಯುಕ್ತಃ** - ಕರ್ಮಯೋಗಿಯು, **ಕುರ್ವನ್** - (ಕರ್ಮ)ಮಾಡುತ್ತಿದ್ದರೂ, **ಅಪಿ** - ಕೂಡ, **ನ, ಲಿಪ್ಯತೇ** - ಲಿಪ್ತನಾಗುವುದಿಲ್ಲ. ॥ ೭॥

ಯಾರ ಇಂದ್ರಿಯಗಳು ತನ್ನ ವಶದಲ್ಲಿವೆಯೋ, ಯಾರ ಅಂತಃಕರಣ ನಿರ್ಮಲವಾಗಿದೆಯೋ ಯಾರ ಶರೀರ ತನ್ನ ವಶದಲ್ಲಿದೆಯೋ, ಸಮಸ್ತ ಪ್ರಾಣಿಗಳ ಆತ್ಮವೇ ಯಾರ ಆತ್ಮಾ ಆಗಿದೆಯೋ ಅಂತಹ ಕರ್ಮಯೋಗಿಯು ಕರ್ಮಮಾಡುತ್ತಿದ್ದರೂ ಕೂಡ ಲಿಪ್ತನಾಗುವುದಿಲ್ಲ. ॥ ೭॥

ವ್ಯಾಖ್ಯಾ -**'ಜಿತೇಂದ್ರಿಯಃ'**–ಇಂದ್ರಿಯಗಳು ವಶದಲ್ಲಿರುವ ತಾತ್ಪರ್ಯ– ಇಂದ್ರಿಯಗಳು ರಾಗ-ದ್ವೇಷದಿಂದ ರಹಿತವಾಗುವುದು. ರಾಗ-ದ್ವೇಷದಿಂದ ರಹಿತವಾದಾಗ ಇಂದ್ರಿಯಗಳಲ್ಲಿ ಮನಸ್ಸನ್ನು ವಿಚಲಿತಗೊಳಿಸುವ ಶಕ್ತಿಯು ಇರುವುದಿಲ್ಲ.* ಸಾಧಕನು ಅವುಗಳನ್ನು ತನ್ನ ಮನಸ್ಸಿಗನುಕೂಲವಾಗಿ ಬೇಕಾದಲ್ಲಿ ತೊಡಗಿಸಬಲ್ಲನು.

ಕರ್ಮಯೋಗದ ಸಾಧಕನಿಗೆ ಇಂದ್ರಿಯಗಳು ವಶದಲ್ಲಿರುವುದು ಆವಶ್ಯಕವಾಗಿದೆ. ಅದಕ್ಕಾಗಿ ಭಗವಂತನು ಕರ್ಮಯೋಗದ ಪ್ರಕರಣದಲ್ಲಿ ಇಂದ್ರಿಯಗಳನ್ನು ವಶಪಡಿಸಿಕೊಳ್ಳುವ ಮಾತನ್ನು ವಿಶೇಷವಾಗಿ ಹೇಳುತ್ತಾನೆ; ಹೇಗೆಂದರೆ – **'ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯ'** (೩/೭). **'ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ'** (೩/೪೧). ಕರ್ಮಯೋಗಿಗೆ ಕರ್ಮಗಳೊಂದಿಗೆ ಹೆಚ್ಚು ಸಂಬಂಧವಿರುತ್ತದೆ; ಅದಕ್ಕಾಗಿ ಇಂದ್ರಿಯಗಳು ವಶದಲ್ಲಿ ಇರದಿದ್ದರೆ ಅವನು ವಿಚಲಿತನಾಗುವ ಸಂಭವವಿರುತ್ತದೆ. ಕರ್ಮಯೋಗದ ಸಾಧನೆಯಲ್ಲಿ ಬೇರೆಯವರ ಹಿತಕ್ಕಾಗಿ ಸೇವಾರೂಪದಿಂದ ಕರ್ತವ್ಯ-ಕರ್ಮಮಾಡುವುದು ಆವಶ್ಯಕವಾಗಿದೆ, ಅದಕ್ಕಾಗಿ ಇಂದ್ರಿಯಗಳು ವಶವಾಗುವುದು ತುಂಬಾ ಅಗತ್ಯವಿದೆ. ಇಂದ್ರಿಯಗಳು ವಶವಾಗದೆ ಕರ್ಮಯೋಗದ ಸಾಧನೆ ಆಗುವುದು ಕಷ್ಟವಾಗಿದೆ.

'ವಿಶುದ್ಧಾತ್ಮಾ' – ಅಂತಃಕರಣದ ಮಲಿನತೆಯಲ್ಲಿ – ಸಾಂಸಾರಿಕ ಪದಾರ್ಥಗಳ ಮಹತ್ವವೇ ಕಾರಣವಾಗಿದೆ. ಪದಾರ್ಥಗಳ ಮಹತ್ವ ವಿರುವಲ್ಲಿಯೇ ಅವುಗಳ ಕಾಮನೆಗಳು ಇರುತ್ತವೆ. ಸಾಧಕನ ಅಂತಃಕರಣದಲ್ಲಿ ಸಾಂಸಾರಿಕ ಪದಾರ್ಥಗಳ ಮಹತ್ವ ಇಲ್ಲದಿರುವಾಗಲೇ ಅವನು ನಿಷ್ಕಾಮನಾಗುತ್ತಾನೆ. ಪದಾರ್ಥಗಳ ಮಹತ್ವ ಇರುವತನಕ ಅವನು ನಿಷ್ಕಾಮನಾಗಲಾರನು.

ಪರಮಾತ್ಮಪ್ರಾಪ್ತಿಯ ದೃಢವಾದ ಒಂದು ಉದ್ದೇಶ ವಿರುವುದರಿಂದ ಅಂತಃಕರಣವು ಬೇಗ ಶುದ್ಧವಾಗುವಂತೆ ಬೇರೆ ಯಾವುದೇ ಅನುಷ್ಠಾನದಿಂದ ಆಗುವುದಿಲ್ಲ. ಅದಕ್ಕಾಗಿ ಕರ್ಮಯೋಗದಲ್ಲಿ ಒಂದು ಉದ್ದೇಶವಿರುವ ಮಹಿಮೆ ಎಷ್ಟಿದೆಯೋ ಅಷ್ಟು ಯಾವುದರಲ್ಲೂ ಇಲ್ಲ.

'ವಿಜಿತಾತ್ಮಾ' – ಕರ್ಮಯೋಗದಲ್ಲಿ ಶರೀರದ ಸುಖ-ವಿಶ್ರಾಂತಿಯ ತ್ಯಾಗ ಮಾಡುವುದರ ಆವಶ್ಯಕತೆ ತುಂಬಾ ಇದೆ. ಶರೀರದಿಂದ ಆಲಸ್ಯ-ಪ್ರಮಾದವಾದರೆ ಕರ್ಮಯೋಗದ ಅನುಷ್ಠಾನವಾಗಲಾರದು. ಆದ್ದರಿಂದ ಇಲ್ಲಿ ಭಗವಂತನು ಶರೀರವನ್ನು ವಶಪಡಿಸಿಕೊಳ್ಳುವ ಮಾತನ್ನು ಹೇಳಿರುವನು.

'ಸರ್ವಭೂತಾತ್ಮ ಭೂತಾತ್ಮಾ' – ಕರ್ಮಯೋಗಿಗೆ ಸಂಪೂರ್ಣ ಪ್ರಾಣಿಗಳೊಂದಿಗೆ ತನ್ನ ಏಕತೆಯ

* **ಶ್ರುತ್ವಾ ಸ್ಪೃಷ್ಟ್ವಾ ಚ ದೃಷ್ಟ್ವಾ ಚ ಭುಕ್ತ್ವಾ ಘ್ರಾತ್ವಾ ಚ ಯೋ ನರಃ। ನ ಹೃಷ್ಯತಿ ಗ್ಲಾಯತಿ ವಾ ಸ ವಿಜ್ಞೇಯೋ ಜಿತೇಂದ್ರಿಯಃ॥** (ಮನುಸ್ಮೃತಿ ೨/೯೮)

ಯಾವ ಪುರುಷನು ಕೇಳಿ, ಮುಟ್ಟಿ, ನೋಡಿ, ತಿಂದು ಮತ್ತು ಮೂಸಿ ಪ್ರಸನ್ನನಾಗುವುದಿಲ್ಲವೋ ಮತ್ತು ಖಿನ್ನನಾಗುವುದಿಲ್ಲವೋ ಅವನನ್ನೇ ಜಿತೇಂದ್ರಿಯನೆಂದು ತಿಳಿಯಬೇಕು.

ಅನುಭವವಾಗುತ್ತದೆ.+ ಶರೀರದ ಯಾವುದೇ ಒಂದು ಅವಯವಕ್ಕೆ ಏಟುಬಿದ್ದರೆ ಇನ್ನೊಂದು ಅವಯವವು ಅದರ ಸೇವೆ ಮಾಡಲು ಸಹಜಭಾವದಿಂದ, ಯಾವುದೇ ಅಭಿಮಾನ ವಿಲ್ಲದೆ, ಕೃತಜ್ಞತೆಯನ್ನು ಬಯಸದೆ ಸ್ವತಃ ತೊಡಗುತ್ತದೆ, ಹಾಗೆಯೇ ಕರ್ಮಯೋಗಿಯ ಮೂಲಕ ಬೇರೆಯವರಿಗೆ ಸುಖಕೊಡುವ ಪ್ರಯತ್ನವು ಸಹಜಭಾವದಿಂದ, ಯಾವುದೇ ಅಭಿಮಾನ ಅಥವಾ ಕಾಮನೆಯಿಲ್ಲದೆ, ಕೃತಜ್ಞತೆಯನ್ನು ಬಯಸದೆ ತಾನಾಗಿ ಆಗುತ್ತದೆ. ಅವನು ಸೇವೆ ಮಾಡಲು ಯಾವುದೇ ಪ್ರಾಣಿಯನ್ನೂ ತನ್ನಿಂದ ಬೇರೆಯೆಂದು ತಿಳಿಯುವುದಿಲ್ಲ, ಎಲ್ಲರನ್ನು ತನ್ನ ಅಂಗವೆಂದೇ ತಿಳಿಯುತ್ತಾನೆ.

ತನ್ನ ಶರೀರದಲ್ಲಿ ಬೇರೆ-ಬೇರೆ ಅವಯವಗಳಿಂದ ಭಿನ್ನ-ಭಿನ್ನ ವ್ಯವಹಾರಗಳು ನಡೆದರೂ ಕೂಡ ಎಲ್ಲ ಅವಯವ ಗಳೊಂದಿಗೆ ಆತ್ಮೀಯತೆ ಸಮಾನ (ಒಂದೇ) ವಿರುವಂತೆಯೇ, ಕರ್ಮಯೋಗಿಯ ಮೂಲಕ ಮರ್ಯಾದೆಗನುಸಾರ ಪ್ರಪಂಚದಲ್ಲಿ ಯಥಾಯೋಗ್ಯ ಭಿನ್ನ-ಭಿನ್ನ ವ್ಯವಹಾರಗಳು ನಡೆದರೂ ಕೂಡ ಎಲ್ಲರೊಂದಿಗೆ ಆತ್ಮೀಯತೆ ಸಮಾನ ವಾಗಿರುತ್ತದೆ.

ತನ್ನ ರಾಗವು ಇಲ್ಲವಾಗಲು **'ಸರ್ವಭೂತಾತ್ಮಭೂತಾತ್ಮಾ'** ಆಗುವುದು ಅರ್ಥಾತ್ – ಎಲ್ಲ ಪ್ರಾಣಿಗಳೊಂದಿಗೆ ತನ್ನ ಏಕತೆಯನ್ನು ತಿಳಿಯುವುದು ತುಂಬಾ ಆವಶ್ಯಕವಾಗಿದೆ. ಕರ್ಮಯೋಗಿಯ ಸ್ವಭಾವವೇ ಉದಾರತೆಯಾಗಿದೆ. **ಸರ್ವಭೂತಾತ್ಮಭೂತಾತ್ಮಾ** ಆಗದೆ ಉದಾರತೆ ಬರುವುದಿಲ್ಲ.

ವಿಶೇಷ ವಿಚಾರ

ಕ್ರಿಯೆಗಳು ಮತ್ತು ಪದಾರ್ಥಗಳೊಂದಿಗೆ ನಾವು ನಿರಂತರ ವಾಗಿ ಇರಲಾರೆವು ಮತ್ತು ಅವುಗಳು ನಮ್ಮೊಂದಿಗೆ ನಿರಂತರವಾಗಿ ಇರಲಾರವು. ಕಾರಣ-ಕ್ರಿಯೆ ಮತ್ತು ಪದಾರ್ಥಗಳಲ್ಲಿ ನಿರಂತರ ಪರಿವರ್ತನೆ ಆಗುತ್ತದೆ, ಆದರೆ ನಮ್ಮಲ್ಲಿ (ಸ್ವರೂಪದಲ್ಲಿ) ಎಂದೂ ಪರಿವರ್ತನೆ ಆಗುವುದಿಲ್ಲ. ಅದಕ್ಕಾಗಿ ಕ್ರಿಯೆ ಮತ್ತು ಪದಾರ್ಥಗಳು ನಿರಂತರ ನಮ್ಮನ್ನು ತ್ಯಾಗಮಾಡುತ್ತಾ ಇವೆ. ನಾವೂ ಕೂಡ ಇವುಗಳ ತ್ಯಾಗಮಾಡಿಯೇ ಮುಕ್ತಿಯನ್ನು ಪಡೆಯಬಲ್ಲೆವು, ಪರಮಶಾಂತಿ ಯನ್ನು ಪಡೆಯಬಲ್ಲೆವು. ಇವುಗಳೊಂದಿಗೆ ಇದ್ದು ನಾವು ಮುಕ್ತಿ ಪರಮಶಾಂತಿಯನ್ನು ಪಡೆಯಲಾರೆವು; ಏಕೆಂದರೆ, ಇವುಗಳೊಂದಿಗೆ ಇರುವ ಸ್ವಭಾವ ನಮ್ಮದಲ್ಲ ಮತ್ತು ನಮ್ಮೊಂದಿಗೆ ಇರುವ ಸ್ವಭಾವ ಇವುಗಳದ್ದಲ್ಲಾ. ಅದಕ್ಕಾಗಿ ಕ್ರಿಯೆ ಮತ್ತು ಪದಾರ್ಥಗಳನ್ನು ಬೇರೆಯವರ ಸೇವೆಯಲ್ಲಿ ತೊಡಗಿಸಬೇಕು. ಬೇರೆಯವರ ಸೇವೆಯಲ್ಲಿ ತೊಡಗಿಸು ವುದು ಮಹತ್ವವಾಗಿರದೆ ನಮ್ಮದು ವಾಸ್ತವಿಕತೆಯಾಗಿದೆ. ವಾಸ್ತವಿಕತೆಯು ಸಹಜವಾಗಿರುತ್ತದೆ ಅರ್ಥಾತ್-ಅದರಲ್ಲಿ ಪರಿಶ್ರಮ ಹಾಗೂ ಅಭಿಮಾನ ಇರುವುದಿಲ್ಲ. ಅವಾಸ್ತವಿ ಕತೆಯಲ್ಲಿಯೇ ಪರಿಶ್ರಮ ಮತ್ತು ಅಭಿಮಾನವಿರುತ್ತದೆ.

ನಮ್ಮಲ್ಲಿ ಉದಾರತೆ ಬಂದಾಗಲೇ ಕ್ರಿಯೆ ಮತ್ತು ಪದಾರ್ಥಗಳು ಬೇರೆಯವರ ಸೇವೆಯಲ್ಲಿ ತೊಡಗಬಲ್ಲವು. ಇಲ್ಲಿ ಗಮನಿಸಬೇಕಾದ ಮಾತು – ಉದಾರತೆ ನಮ್ಮ ಸ್ವರೂಪವಾಗಿದೆ.* ಅದಕ್ಕಾಗಿ ಉದಾರತೆಯಲ್ಲಿ ಪಣ ಖರ್ಚುಮಾಡುವ ಆವಶ್ಯಕತೆ ಇಲ್ಲ, ಪರಿಶ್ರಮ ಪಡುವ ಆವಶ್ಯಕತೆ ಇಲ್ಲ. ಕೇವಲ – ನಾವು ಸುಖಿಗಳನ್ನು ನೋಡಿ ಪ್ರಸನ್ನರಾಗಬೇಕು ಮತ್ತು ದುಃಖಿತರನ್ನು ಕಂಡು ಕರುಣೆ, ದಯೆ ಉಂಟಾಗಬೇಕಾದ ಆವಶ್ಯಕತೆ ಇದೆ. ದುಃಖಿಯನ್ನು ನೋಡಿ ಹೃದಯದಲ್ಲಿ – ಇವನು ಹೇಗೆ ಸುಖೀಯಾದಾನು? ಎಂಬ ಕರುಣೆ ಉಂಟಾಗಬೇಕು. ಸುಖಿಯನ್ನು ಕಂಡು ಎಲ್ಲರೂ ಸುಖಿಗಳಾಗಲೀ ಎಂಬ ಭಾವ ಉಂಟಾಗಬೇಕು ದುಃಖಿಗಳನ್ನು ಕಂಡು ಯಾರೂ ದುಃಖಿಗಳಿರಬಾರದು ಎಂಬ ಭಾವ ಉಂಟಾಗಬೇಕು.

ಭಗವಂತನು ಸಾಧನೆಯಲ್ಲಿ ಭೋಗ ಮತ್ತು ಸಂಗ್ರಹವನ್ನು ಬಾಧಕವೆಂದು ಹೇಳಿರುವನು (೨/೪೪). ಸುಖಿಗಳನ್ನು ಕಂಡು ಸಂತೋಷಗೊಂಡರೆ ಭೋಗ ಭೋಗಿಸುವ ಇಚ್ಛೆ ಇಲ್ಲವಾಗುತ್ತದೆ; ಏಕೆಂದರೆ, ಭೋಗ ಭೋಗಿಸುವುದರಲ್ಲಿ ಸಿಗುವ ಸುಖವು ನಾವು ಬೇರೆಯವರನ್ನು ಸುಖೀ ಎಂದು ನೋಡಿಯೇ ವಿಶೇಷವಾಗಿ ಸಿಗುವುದಾದರೆ ನಾವು ಭೋಗ ಭೋಗಿಸುವ ಆವಶ್ಯಕತೆ ಇರಲಾರದು. ದುಃಖಿತರನ್ನು ನೋಡಿಕೊಂಡು ದುಃಖಿತರಾಗುವುದರಿಂದ ಸಂಗ್ರಹಿಸುವ ಇಚ್ಛೆ ಇಲ್ಲವಾಗುತ್ತದೆ; ಏಕೆಂದರೆ, ನಮ್ಮ ದುಃಖಿವನ್ನು ಇಲ್ಲವಾಗಿಸಲು ನಾವು ವಸ್ತುಗಳ ಸಂಗ್ರಹ ಮಾಡುವುದು ಮತ್ತು ವ್ಯಯಮಾಡುವುದು ತಾನಾಗಿ ಬೇರೆಯವರ ದುಃಖ

+ ಬೇಕಾದರೆ ತನ್ನ ಶರೀರದಿಂದ ಅಸಂಗನಾಗಲೀ, ಬೇಕಾದರೆ ತನ್ನ ಶರೀರದಂತೆ ಸಂಪೂರ್ಣ ಪ್ರಾಣಿಗಳ ಶರೀರಗಳೊಂದಿಗೆ ಏಕತೆಯನ್ನು ತಿಳಿಯಲೀ – ಎರಡರ ಪರಿಣಾಮ ಒಂದೇ ಆಗಿದೆ. ಜ್ಞಾನಯೋಗಿಯು ತನ್ನ ಶರೀರದಿಂದ ಅಸಂಗನಾಗುತ್ತಾನೆ ಮತ್ತು ಕರ್ಮಯೋಗಿಯು ಎಲ್ಲಾ ಶರೀರಗಳೊಂದಿಗೆ ತನ್ನ ಶರೀರದ ಏಕತೆಯನ್ನು ತಿಳಿಯುತ್ತಾನೆ. ಏಕತೆಯನ್ನು ತಿಳಿಯುವುದರಿಂದ ಅವನಲ್ಲಿ ಏಕಾಕ್ಷತೆ ಬಂದು ಬಿಡುತ್ತದೆ.

* ಉದಾರತೆ ಗುಣವೂ ಆಗಿದೆ ಮತ್ತು ನಮ್ಮ ಸ್ವರೂಪವೂ ಆಗಿದೆ. ನಮ್ಮ ಬಳಿ ಯಾವ ಪದಾರ್ಥಗಳಿವೆಯೋ ಅವನ್ನು ಬೇರೆಯವರ ಸೇವೆಯಲ್ಲಿ ತೊಡಗಿಸಬೇಕು – ಈ ಭಾವದಿಂದ ಅವನ್ನು ಬೇರೆಯವರ ಸೇವೆಯಲ್ಲಿ ತೊಡಗಿಸುವ 'ಉದಾರತೆ' ಗುಣವಾಗಿದೆ. ನಮ್ಮ ಬಳಿಯಲ್ಲಿ ಯಾವ ಪದಾರ್ಥ ಗಳಿವೆಯೋ ಅವುಗಳು ನಮ್ಮವುಗಳು ಅಲ್ಲವೇ ಇಲ್ಲ – ಹೀಗೆ ತಿಳಿದುಕೊಂಡು ಅವನ್ನು ಬೇರೆಯವರ ಸೇವೆಯಲ್ಲಿ ತೊಡಗಿಸಿದರೆ ಈ 'ಉದಾರತೆ' ನಮ್ಮ ಸ್ವರೂಪವಾಗಿದೆ; ಏಕೆಂದರೆ, ಇದರಲ್ಲಿ ಪದಾರ್ಥಗಳಿಂದ ಸಂಬಂಧ ವಿಚ್ಛೇದವಾಗುತ್ತದೆ ಮತ್ತು ಸ್ವರೂಪವು ಹೇಗಿದೆಯೋ ಹಾಗೆಯೇ ಉಳಿಯುತ್ತದೆ.

ದೂರವಾಗಿಸುವುದರಲ್ಲಿ ತೊಡಗಿ ಹೋದಾವು. ನಮ್ಮ ಮೇಲೆ ಯಾವುದಾದರು ದುಃಖಬಂದಾಗ ನಾವು ಅದನ್ನು ದೂರ ಮಾಡಲು ಪ್ರಯತ್ನಮಾಡುತ್ತೇವೋ ಹಾಗೆಯೇ ಬೇರೆಯವರನ್ನು ದುಃಖಿಗಳೆಂದು ನೋಡಿ ನಮ್ಮ ಶಕ್ತಿಗನುಸಾರವಾಗಿ ಅವರ ದುಃಖ ದೂರಮಾಡುವ ಪ್ರಯತ್ನ ಆಗತೊಡಗೀತು.

ಪ್ರಸನ್ನತೆ ಮತ್ತು ಕರುಣೆಯಲ್ಲಿ ಒಂದು ವಿಲಕ್ಷಣ ರಸವಿದೆ. ಆ ರಸವು ಕ್ರಿಯೆ ಮತ್ತು ಪದಾರ್ಥಗಳಿಂದ ಸಂಬಂಧ ವಿಚ್ಛೇದಗೈದು ಜೀವಿಗೆ ಪರಮಾತ್ಮಸ್ವರೂಪೀ ನಿತ್ಯರಸದ ಜೊತೆಗೆ ಅಭಿನ್ನತೆ ಮಾಡಿ ಬಿಡುತ್ತದೆ.

'ಯೋಗಯುಕ್ತಃ' – ಜಿತೇಂದ್ರಿಯ, ವಿಶುದ್ಧಾತ್ಮಾ, ವಿಜಿತಾತ್ಮಾ ಮತ್ತು ಸರ್ವಭೂತಾತ್ಮಭೂತಾತ್ಮಾ – ಎಂದು ಹಿಂದೆ ಹೇಳಿದ ಈ ನಾಲ್ಕು ಲಕ್ಷಣಗಳಿಂದ ಕೂಡಿದ ಕರ್ಮಯೋಗಿಯನ್ನೇ ಇಲ್ಲಿ **'ಯೋಗಯುಕ್ತ'** ಎಂದು ಹೇಳಲಾಗಿದೆ.

ಸಾಧನೆಯಲ್ಲಿ ಸ್ವಾಭಾವಿಕ ಪ್ರವೃತ್ತಿ ಆಗದಿರಲು – ಉದ್ದೇಶ ಮತ್ತು ರುಚಿಯಲ್ಲಿ ಭಿನ್ನತೆಯೇ ಕಾರಣವಾಗಿದೆ. ಅಂತಃಕರಣದಲ್ಲಿ ಪ್ರಪಂಚದ ಮಹತ್ವವಿರುವವರೆಗೆ ಉದ್ದೇಶ ಮತ್ತು ರುಚಿಯ ಸಂಘರ್ಷ ಪ್ರಾಯಶಃ ಇಲ್ಲವಾಗುವುದಿಲ್ಲ. ಉದ್ದೇಶ ಅವಿನಾಶೀ ಪರಮಾತ್ಮನ ಇರುತ್ತದೆ ಮತ್ತು ರುಚಿಯು ಪ್ರಾಯಶಃ ನಾಶವುಳ್ಳ ಪ್ರಪಂಚದ ಪ್ರಾಣಿ, ಪದಾರ್ಥ, ಪರಿಸ್ಥಿತಿ ಇತ್ಯಾದಿಗಳದಾಗಿರುತ್ತದೆ. ಉದ್ದೇಶ ಹಾಗೂ ರುಚಿ ಅಭಿನ್ನವಾದಾಗ ಸಾಧನೆಯು ತನ್ನಿಂದ ತಾನೇ ತೀವ್ರಗತಿಯಿಂದ ಆಗತೊಡಗುತ್ತದೆ. ಇಲ್ಲಿ **'ಯೋಗಯುಕ್ತಃ'** ಪದವು ಯಾರ ಉದ್ದೇಶ ಮತ್ತು ರುಚಿ ಅಭಿನ್ನವಾಗಿದೆಯೋ ಅರ್ಥಾತ್ – ಉದ್ದೇಶ ಹಾಗೂ ರುಚಿ-ಎರಡೂ ಓರ್ವ ಪರಮಾತ್ಮನಲ್ಲಿಯೇ ಆಗಿಹೋಗಿದೆಯೋ ಅಂತಹ ಕರ್ಮಯೋಗಿಗಾಗಿ ಬಂದಿದೆ.

ಉತ್ಪನ್ನ ಮತ್ತು ನಷ್ಟವಾಗುವಂತಹ ಫಲವನ್ನು ಕಿಂಚಿತ್ತಾದರೂ ಬಯಸದಿರುವಾಗಲೇ ಕರ್ಮಯೋಗವಾಗತ್ತದೆ. ಫಲ ಹಾಗೂ ಉದ್ದೇಶ ಎರಡೂ ಬೇರೆ-ಬೇರೆಯಾಗಿರುತ್ತವೆ. ಕರ್ಮಯೋಗಿಯಲ್ಲಿ ಫಲದ ಇಚ್ಛೆಯಾದರೋ ಇರುವುದಿಲ್ಲ ಆದರೆ ಉದ್ದೇಶವು ಅವಶ್ಯವಾಗಿ ಇರುತ್ತದೆ. ಕರ್ಮಯೋಗಿಯ ಉದ್ದೇಶ – ಯಾವುದು ಎಲ್ಲರಿಗೆ ಸಿಗಬಲ್ಲದೋ ಮತ್ತು ಸದಾಕಾಲ ಇರುತ್ತದೋ ಅದೇ ಆಗಿರುತ್ತದೆ. ಯಾರಿಗೋ ಸಿಗುತ್ತದೆ, ಯಾರಿಗೋ ಸಿಗುವುದಿಲ್ಲ ಮತ್ತು ಎಂದೋ ಇರುತ್ತದೆ, ಎಂದೋ ಇರುವುದಿಲ್ಲ ಅದು ಅವನ ಉದ್ದೇಶವಲ್ಲ. ಈ ದೃಷ್ಟಿಯಿಂದ ಉದ್ದೇಶವು ಸದಾಕಾಲ ಪರಮತತ್ತ್ವದ್ದೇ ಆಗಿರುತ್ತದೆ. ಪರಮಾತ್ಮತತ್ತ್ವವು ಯಾವುದೇ ಕರ್ಮ, ಅಭ್ಯಾಸ ಇತ್ಯಾದಿಗಳ ಫಲವಲ್ಲ. ಫಲವು ಉಂಟಾಗಿ ನಷ್ಟವಾಗುವಂತಹುದು ಆದರೆ ಪರಮಾತ್ಮನು ನಿತ್ಯವಿರುತ್ತಾನೆ. ಉಂಟಾಗಿ, ನಾಶವಾಗುವ ವಸ್ತುವನ್ನು ಕರ್ಮಯೋಗಿಯು ಬಯಸುವುದೇ ಇಲ್ಲ; ಏಕೆಂದರೆ ಅದರ ಬಯಕೆಯೇ ಪರಮಾತ್ಮಪ್ರಾಪ್ತಿಯಲ್ಲಿ ಬಾಧಕವಾಗಿದೆ. ಏಕಮಾತ್ರ ಪರಮಾತ್ಮತತ್ತ್ವದ ಉದ್ದೇಶವಿರುವುದರಿಂದ ಕರ್ಮಯೋಗಿಯನ್ನು 'ಯೋಗಯುಕ್ತ' ಎಂದು ಹೇಳಲಾಗಿದೆ.

ಇಲ್ಲಿ ಯಾರನ್ನು **'ಯೋಗಯುಕ್ತಃ'** ಎಂದು ಹೇಳಲಾಗಿದೆಯೋ ಅವನನ್ನೆ ೬ನೇ ಅಧ್ಯಾಯದ ೪ನೇ ಶ್ಲೋಕದಲ್ಲಿ **'ಯೋಗಾರೂಢಃ'** ಎಂದು ಹೇಳಲಾಗಿದೆ.

'ಕುರ್ವನ್ನಪಿ ನ ಲಿಪ್ಯತೇ' – ಕರ್ಮಯೋಗಿಯು ಕರ್ಮ ಮಾಡುತ್ತಿದ್ದರೂ ಕರ್ಮಗಳಿಂದ ಬಂಧಿತನಾಗುವುದಿಲ್ಲ, ಕರ್ಮಗಳ ಬಂಧನಕ್ಕೆ – ಕರ್ಮಗಳ ಕುರಿತು ಮಮತೆ, ಕರ್ಮಗಳ ಫಲದ ಇಚ್ಛೆ, ಕರ್ಮಜನ್ಯ ಸುಖದ ಇಚ್ಛೆ ಹಾಗೂ ಅದರ ಭೋಗ ಮತ್ತು ಕರ್ತೃತ್ವಾಭಿಮಾನವೇ ಕಾರಣವಾಗಿದೆ.* ಸಾರಾಂಶ – ಕರ್ಮಗಳಿಂದ ಏನಾದರೂ ಪಡೆಯುವ ಇಚ್ಛೆಯೇ ಬಂಧನಕ್ಕೆ ಕಾರಣವಾಗಿದೆ. ಕಿಂಚಿತ್ತಾದರೂ ಪಡೆಯುವ ಇಚ್ಛೆಯು ಇಲ್ಲದಿರುವ ಕಾರಣ ಕರ್ಮಯೋಗಿಯು ಕರ್ಮಮಾಡುತ್ತಿದ್ದರೂ ಕೂಡ ಅವುಗಳಲ್ಲಿ ಬಂಧಿತನಾಗುವುದಿಲ್ಲ ಅರ್ಥಾತ್ – ಅವನ ಕರ್ಮಗಳು ಅಕರ್ಮವಾಗುತ್ತವೆ.

ಸಾಂಖ್ಯಯೋಗಿಯಾದರೋ **'ಗುಣಾ ಗುಣೇಷು ವರ್ತಂತೇ'** (೩/೨೮) ಗುಣಗಳೇ ಗುಣಗಳಲ್ಲಿ ವರ್ತಿಸುತ್ತಿವೆ ಹೀಗೆ ತಿಳಿದು ಕೊಂಡು ಕರ್ಮಗಳಿಂದ ಬಂಧಿತನಾಗುವುದಿಲ್ಲ, ಆದರೆ ಕರ್ಮಯೋಗಿಯು ಪರಹಿತಕ್ಕಾಗಿ ಕರ್ಮ ಮಾಡುತ್ತಿದ್ದರೂ ಕೂಡ ಕರ್ಮಗಳಿಂದ ಬಂಧಿತನಾಗುವುದಿಲ್ಲ, ಕೇವಲ ಬೇರೆಯವರಿಗಾಗಿ ಕರ್ಮಮಾಡುವುದರಿಂದ ಅವನ ಕರ್ಮಗಳೂ ಕೂಡ **'ಗುಣಾ ಗುಣೇಷು ವರ್ತಂತೇ'** ಇದರಂತೆ ಆಗುತ್ತವೆ.

ಇಲ್ಲಿ **'ಅಪಿ'** ಪದದಲ್ಲಿ ಇದೂ ಒಂದು ಭಾವವಿದೆ – ಕರ್ಮಯೋಗಿಯು ಕರ್ಮಮಾಡುತ್ತಿರುವಾಗಲಾದರೋ ನಿರ್ಲಿಪ್ತನೇ ಆಗಿದ್ದಾನೆ, ಕರ್ಮಮಾಡದೆ ಇರುವಾಗಲೂ ಅವನು ನಿರ್ಲಿಪ್ತನಾಗಿದ್ದಾನೆ (೪/೧೮). ಅವನಿಗೆ ಕರ್ಮಮಾಡುವ ಅಥವಾ ಮಾಡದಿರುವುದರಿಂದ ಯಾವುದೇ ಪ್ರಯೋಜನವಿರುವುದಿಲ್ಲ (೩/೧೮). ಅವನು ಸದಾ ನಿರ್ಲಿಪ್ತನಾಗಿರುತ್ತಾನೆ.

ತಾತ್ಪರ್ಯ – ಸಾಂಖ್ಯಯೋಗಿಯು ಜಡತೆಯ ತ್ಯಾಗಗೈದು

* ಎರಡನೇ ಅಧ್ಯಾಯದ ೪೭ನೇ ಶ್ಲೋಕದಲ್ಲಿ ಕರ್ಮಯೋಗದ ಸ್ವರೂಪವನ್ನು ವಿವೇಚನೆ ಮಾಡುತ್ತಾ ಭಗವಂತನು **'ಮಾ ಕರ್ಮಫಲಹೇತುರ್ಭೂಃ'** ಪದಗಳಿಂದ ಕರ್ಮಗಳ ಕುರಿತು ಮಮತೆ, ಕರ್ಮಜನ್ಯ ಸುಖದ ಇಚ್ಛೆ ಹಾಗೂ ಅದರ ಭೋಗ ಮತ್ತು ಕರ್ತೃತ್ವಾಭಿಮಾನ ಅಳಿಸಲು ಹೇಳಿರುವನು ಹಾಗೂ **'ಮಾ ಫಲೇಷು ಕದಾಚನ'** ಪದಗಳಿಂದ ಕರ್ಮಗಳ ಫಲದ ಇಚ್ಛೆಯನ್ನು ಅಳಿಸಲು ಹೇಳಿರುವನು.

ಚಿನ್ಮಯತೆಯೊಂದಿಗೆ ತನ್ನ ಏಕತೆಯನ್ನು ತಿಳಿಯುತ್ತಾನೆ ಮತ್ತು ಕರ್ಮ ಯೋಗಿಯು ತನ್ನದೆಂದು ಹೇಳುವ ಶರೀರ, ಮನಸ್ಸು, ಇಂದ್ರಿಯಗಳು ಇತ್ಯಾದಿಗಳ ಏಕತೆಯನ್ನು ಪ್ರಪಂಚದೊಂದಿಗೆ ತಿಳಿಯುತ್ತಾನೆ, ಅರ್ಥಾತ್-ಪದಾರ್ಥ, ಶರೀರ, ಮನ, ಇಂದ್ರಿಯಗಳು ಇತ್ಯಾದಿಗಳನ್ನು ಮತ್ತು ಅವುಗಳ ಕ್ರಿಯೆಗಳನ್ನು ತನ್ನದೆಂದು ತಿಳಿಯುವುದಿಲ್ಲ; ಆದರೆ ಅವುಗಳನ್ನು ಪ್ರಪಂಚದ್ದು ಹಾಗೂ ಪ್ರಪಂಚಕ್ಕಾಗಿ ಎಂದೇ ತಿಳಿಯುತ್ತಾನೆ. ಕರ್ಮ ಯೋಗಿಯು ಯಾವಾಗ ಪದಾರ್ಥ, ಮನ, ಬುದ್ಧಿಗಳನ್ನು ಮತ್ತು ಅವುಗಳ ಕ್ರಿಯೆಗಳನ್ನು ಕೇವಲ ಪ್ರಪಂಚದ್ದೆಂದೇ ತಿಳಿಯುತ್ತಿದ್ದರೆ, ಮತ್ತೆ ಅವುಗಳಿಂದ ಯಾರಿಗಾದರೂ ಹಿತವಾದರೆ, ಯಾರಿಗಾದರೂ ಸುಖ ದೊರೆತರೆ, ಯಾರಿಗಾದರೂ ಉಪಕಾರವಾದರೆ, ಅವನು 'ನಾನು ಮಾಡಿದೆ' 'ನನ್ನಿಂದ ಹೀಗಾಯಿತು' ಹೀಗೆ ಹೇಗೆ ತಿಳಿಯಬಲ್ಲನು? ತಿಳಿಯುವುದಿಲ್ಲ. ಅದಕ್ಕಾಗಿ ಅವನು ಕರ್ಮಗಳನ್ನು ಮಾಡುತ್ತಿದ್ದರೂ ಕರ್ತಾ ಆಗುವುದಿಲ್ಲ, ಅರ್ಥಾತ್-ಕರ್ಮಗಳಿಂದ ಲಿಪ್ತನಾಗುವುದಿಲ್ಲ.

ಪರಿತಿಷ್ಠ ಭಾವ – *ಶರೀರ, ಇಂದ್ರಿಯಗಳು ಹಾಗೂ ಅಂತಃಕರಣದಿಂದ ಸಂಬಂಧ ವಿಚ್ಛೇದವಾದ ಕಾರಣ, ಕರ್ಮಯೋಗಿಗೆ ಸಮಸ್ತ ಪ್ರಾಣಗಳೊಂದಿಗೆ ತನ್ನ ಏಕತೆಯ ಅನುಭವವಾದಾಗ ಕರ್ಮಮಾಡುತ್ತಿದ್ದರೂ ಅದರಲ್ಲಿ ಕರ್ತೃತ್ವ ಇರುವುದಿಲ್ಲ. ಕರ್ತೃತ್ವವಿಲ್ಲದಿರುವುದರಿಂದ ಅವನಿಂದ ಆಗುವ ಕರ್ಮಗಳು ಬಂಧನಕಾರಕವಾಗುವುದಿಲ್ಲ (೧೮/೧೭).*

—●—

ಸಂಬಂಧ - ಕರ್ಮಗಳು ಆಗುವ ವಿಷಯದಲ್ಲಿ ಕರ್ಮಯೋಗಿಯ ಮಾತನ್ನು ಹೇಳಿ ಈಗ ಭಗವಂತನು ಮುಂದಿನ ಎರಡು ಶ್ಲೋಕಗಳಲ್ಲಿ ಸಾಂಖ್ಯಯೋಗದ ಸಾಧನೆಯ ಮಾತನ್ನು ಹೇಳುತ್ತಾನೆ —

ನೈವ ಕಿಂಚಿತ್ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್ ।
ಪಶ್ಯನ್ಶೃಣ್ವನ್ಸ್ಪೃಶನ್ಜಿಘ್ರನ್ನಶ್ನನ್ಗಚ್ಛನ್ಸ್ವಪನ್ಶ್ವಸನ್ ॥ ೮ ॥
ಪ್ರಲಪನ್ವಿಸೃಜನ್ಗೃಹ್ಣನ್ನುನ್ಮಿಷನ್ನಿಮಿಷನ್ನಪಿ ।
ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿ ಧಾರಯನ್ ॥ ೯ ॥

ತತ್ತ್ವವಿತ್ - ತತ್ತ್ವವನ್ನು ತಿಳಿದಿರುವ, **ಯುಕ್ತ** - ಸಾಂಖ್ಯಯೋಗಿಯು, **ಪಶ್ಯನ್** - ನೋಡುತ್ತಿದ್ದರೂ, **ಶೃಣ್ವನ್** - ಕೇಳುತ್ತಿದ್ದರೂ, **ಸ್ಪೃಶನ್** - ಮುಟ್ಟುತ್ತಿದ್ದರೂ, **ಜಿಘ್ರನ್** - ಮೂಸೂತ್ತಿದ್ದರೂ, **ಅಶ್ನನ್** ತಿನ್ನುತ್ತಿದ್ದರೂ, **ಗಚ್ಛನ್** - ನಡೆಯುತ್ತಿದ್ದರೂ, **ಗೃಹ್ಣನ್** - ಸ್ವೀಕರಿಸುತ್ತಿದ್ದರೂ, **ಪ್ರಲಪನ್** - ಮಾತಾಡುತ್ತಿದ್ದರೂ, **ವಿಸೃಜನ್** - (ಮಲ-ಮೂತ್ರವನ್ನು) ತ್ಯಾಗಮಾಡುತ್ತಿದ್ದರೂ, **ಸ್ವಪನ್** - ಮಲಗಿದ್ದರೂ, **ಶ್ವಸನ್** - ಶ್ವಾಸವನ್ನು ತೆಗೆದುಕೊಳ್ಳುತ್ತಿದ್ದರೂ (ಹಾಗೂ), **ಉನ್ಮಿಷನ್** - ಕಣ್ಣು ತೆರೆಯುತ್ತಿದ್ದರೂ (ಮತ್ತು), **ನಿಮಿಷನ್** - ಮುಚ್ಚುತ್ತಿದ್ದರೂ, **ಅಪಿ** - ಕೂಡ, **ಇಂದ್ರಿಯಾಣಿ** - ಇಂದ್ರಿಯಗಳು, **ಇಂದ್ರಿಯಾರ್ಥೇಷು** - ಇಂದ್ರಿಯಗಳ ವಿಷಯದಲ್ಲಿ, **ವರ್ತಂತೇ** - ವರ್ತಿಸುತ್ತವೆ, **ಇತಿ** - ಹೀಗೆ, **ಧಾರಯನ್** - ತಿಳಿದುಕೊಂಡು, **ಕಿಂಚಿತ್** - (ನಾನು ಸ್ವತಃ) ಏನನ್ನೂ, **ಏವ** - ಕೂಡ, **ನ, ಕರೋಮಿ** - ಮಾಡುವುದಿಲ್ಲ, **ಇತಿ**- ಹೀಗೆ, **ಮನ್ಯೇತ** - ತಿಳಿಯಲಿ. ॥ ೮, ೯ ॥

ತತ್ತ್ವವನ್ನು ತಿಳಿದಿರುವ ಸಾಂಖ್ಯಯೋಗಿಯು ನೋಡುತ್ತಿದ್ದರೂ, ಕೇಳುತ್ತಿದ್ದರೂ, ಮುಟ್ಟುತ್ತಿದ್ದರೂ, ಮೂಸೂತ್ತಿದ್ದರೂ, ತಿನ್ನುತ್ತಿದ್ದರೂ, ನಡೆಯುತ್ತಿದ್ದರೂ, ಸ್ವೀಕರಿಸುತ್ತಿದ್ದರೂ, ಮಾತಾಡುತ್ತಿದ್ದರೂ, ಮಲಮೂತ್ರವನ್ನು ತ್ಯಾಗಮಾಡುತ್ತಿದ್ದರೂ, ಮಲಗಿದ್ದರೂ, ಶ್ವಾಸವನ್ನು ತೆಗೆದುಕೊಳ್ಳುತ್ತಿದ್ದರೂ ಹಾಗೂ ಕಣ್ಣು ತೆರೆದು ಮುಚ್ಚುತ್ತಿದ್ದರೂ ಕೂಡ ಇಂದ್ರಿಯಗಳು ಇಂದ್ರಿಯಗಳ ವಿಷಯದಲ್ಲಿ ವರ್ತಿಸುತ್ತಿವೆ – ಹೀಗೆ ತಿಳಿದುಕೊಂಡು 'ನಾನು ಸ್ವತಃ ಏನನ್ನೂ ಮಾಡುವುದಿಲ್ಲ' ಎಂದು ತಿಳಿಯುತ್ತಾನೆ. ॥ ೮, ೯ ॥

ವ್ಯಾಖ್ಯಾ - **'ತತ್ತ್ವವಿತ್ ಯುಕ್ತಃ'** – ಇಲ್ಲಿ ಈ ಪದಗಳು ಸಾಂಖ್ಯಯೋಗದ ವಿವೇಕಶೀಲ ಸಾಧಕನ ವಾಚಕವಾಗಿವೆ. ಅವನು ತತ್ತ್ವವಿತ್ ಮಹಾಪುರುಷನಂತೆ ಭ್ರಾಂತಿ ರಹಿತ ಅನುಭವವನ್ನು ಪಡೆಯಲು ತತ್ಪರನಾಗಿರುತ್ತಾನೆ. ಅವನಲ್ಲಿ ಎಲ್ಲ ಕ್ರಿಯೆಗಳು ಪ್ರಕೃತಿಯಲ್ಲೇ ಆಗುತ್ತಾ ಇವೆ, ಆ ಕ್ರಿಯೆಗಳು ನನ್ನೊಂದಿಗೆ ಯಾವ ಸಂಬಂಧವು ಇಲ್ಲವೇ ಇಲ್ಲ ಎಂಬ ವಿವೇಕ ಜಾಗ್ರತವಾಗಿ ಹೋಗಿದೆ.

ತನ್ನಲ್ಲಿ ಅರ್ಥಾತ್ – ಸ್ವರೂಪದಲ್ಲಿ ಎಂದೂ ಕಿಂಚಿತ್ತಾದರೂ ಯಾವುದೇ ಕ್ರಿಯೆಯ ಕರ್ತೃತ್ವವನ್ನು ನೋಡದಿರುವವನೇ **'ತತ್ತ್ವವಿತ್'** ಆಗಿದ್ದಾನೆ. ಅವನಲ್ಲಿ ನಿತ್ಯ ನಿರಂತರ ಸ್ವಾಭಾವಿಕವಾಗಿ – 'ಸ್ವರೂಪದಲ್ಲಿ ಕರ್ತೃತ್ವ ಇಲ್ಲವೇ ಇಲ್ಲ' ಈ ಎಚ್ಚರವಿರುತ್ತದೆ. ಪ್ರಕೃತಿಯ ಕಾರ್ಯ ಶರೀರ, ಇಂದ್ರಿಯಗಳು, ಮನ, ಬುದ್ಧಿ, ಪ್ರಾಣ ಇತ್ಯಾದಿಗಳಿಂದ ಅವನು ಎಂದೂ ತನ್ನ ಏಕತೆಯನ್ನು ಸ್ವೀಕರಿಸುವುದಿಲ್ಲ, ಆದಕ್ಕಾಗಿ

ಇವುಗಳಿಂದ ಆಗುವ ಕ್ರಿಯೆಗಳನ್ನು ಅವನು ತನ್ನ ಕ್ರಿಯೆಗಳೆಂದು ಹೇಗೆ ತಿಳಿಯಬಲ್ಲನು?

ನಿಜವಾಗಿ ಮೇಲೆ ಹೇಳಿದ ಸ್ಥಿತಿಯು ಸ್ವರೂಪದಿಂದ ಎಲ್ಲ ಮನುಷ್ಯರದ್ದಾಗಿದೆ; ಆದರೆ ಅವರು ಮರವೆಯಿಂದ ಸ್ವರೂಪವನ್ನು ಕರ್ತಾ ಎಂದು ತಿಳಿಯುತ್ತಾರೆ (೩/೨೭) ಪರಮಾತ್ಮನ ಯಾವ ಶಕ್ತಿಯಿಂದ ಸಮಷ್ಟಿ ಜಗತ್ತಿನ ಕ್ರಿಯೆಗಳು ಆಗುತ್ತಿವೆಯೋ, ಅದೇ ಶಕ್ತಿಯಿಂದಲೇ ವ್ಯಷ್ಟಿ ಶರೀರದ ಕ್ರಿಯೆಗಳೂ ಆಗುತ್ತಿವೆ. ಆದರೆ ಸಮಷ್ಟಿಯದ್ದೇ ಕ್ಷುದ್ರ ಅಂಶ ವ್ಯಷ್ಟಿಯೊಂದಿಗೆ ತನ್ನ ಸಂಬಂಧವನ್ನು ಒಪ್ಪಿಕೊಂಡ ಕಾರಣ ಮನುಷ್ಯನು ವ್ಯಷ್ಟಿಯ ಕೆಲವು ಕ್ರಿಯೆಗಳನ್ನು ತನ್ನ ಕ್ರಿಯೆಗಳೆಂದು ತಿಳಿಯತೊಡಗುತ್ತಾನೆ. ಈ ತಿಳಿವಳಿಕೆಯನ್ನು ಇಲ್ಲವಾಗಿಸಲೆಂದೇ ಭಗವಂತನು – ಸಾಧಕನು ತನ್ನನ್ನು ಎಂದಿಗೂ ಕರ್ತಾ ಎಂದು ತಿಳಿಯಬಾರದು ಹೀಗೆ ಹೇಳುತ್ತಾನೆ. ಯಾವುದೇ ಅಂಶದಲ್ಲಿ ಕರ್ತೃತ್ವದ ಮಾನ್ಯತೆ ಇರವತನಕ ಅವನು ಸಾಧಕನೆಂದು ಹೇಳಲಾಗುತ್ತದೆ. ತನ್ನಲ್ಲಿ ಕರ್ತೃತ್ವದ ಮಾನ್ಯತೆಯು ಸರ್ವಥಾ ಅಭಾವವಾಗಿ ತನ್ನ ಸ್ವರೂಪದ ಅನುಭವ ಉಂಟಾದಾಗ ಅವನು ತತ್ತ್ವವಿತ್ ಮಹಾಪುರುಷ ನೆಂದು ಹೇಳಲಾಗುತ್ತದೆ. ಸ್ವಪ್ನದಿಂದ ಎಚ್ಚರಗೊಂಡ ಮನುಷ್ಯನಿಗೆ ಸ್ವಪ್ನದಿಂದ ಯಾವುದೇ ಸಂಬಂಧವಿರು ವುದಿಲ್ಲವೋ ಹಾಗೆಯೇ ತತ್ತ್ವವಿತ್ ಮಹಾಪುರುಷನಿಗೆ ಶರೀರಾದಿಗಳಿಂದ ಆಗುವ ಕ್ರಿಯೆಗಳೊಂದಿಗೆ ಖಂಡಿತವಾಗಿ ಸಂಬಂಧ (ಕರ್ತೃತ್ವ) ವಿರುವುದಿಲ್ಲ.

ಪ್ರಕೃತಿ ಮತ್ತು ಪುರುಷರ ವಿಭಾಗವನ್ನು ಅರ್ಥಾತ್ – ಗುಣ ಮತ್ತು ಕ್ರಿಯೆಗಳೆಲ್ಲವು ಪ್ರಕೃತಿಯಲ್ಲಿವೆ – ಪ್ರಕೃತಿಗಿಂತ ಅತೀತ ತತ್ತ್ವದಲ್ಲಿ ಗುಣ ಹಾಗೂ ಕ್ರಿಯೆಗಳು ಇಲ್ಲ – ಎಂಬುದಾಗಿ ಸರಿಯಾಗಿ ತಿಳಿಯುವವನೇ ಇಲ್ಲಿ **'ತತ್ತ್ವವಿತ್'** ಆಗಿದ್ದಾನೆ. ಪ್ರಕೃತಿಯಿಂದ ಅತೀತ ನಿರ್ವಿಕಾರ ತತ್ತ್ವವಾದರೋ ಎಲ್ಲರ ಪ್ರಕಾಶಕ ಹಾಗೂ ಆಧಾರವಾಗಿದೆ. ಎಲ್ಲರ ಪ್ರಕಾಶವಾಗಿದ್ದರೂ ಅದು ಪ್ರಕಾಶ್ಯದ ಅಂತರ್ಗತ ಓತಪ್ರೋತವಾಗಿದೆ. ಪ್ರಕಾಶ್ಯ (ಶರೀರಾದಿ)ದಲ್ಲಿ ಬೆರೆತುಕೊಂಡಿದ್ದರೂ ಪ್ರಕಾಶಕವು ಪ್ರಕಾಶಕವಾಗಿಯೇ ಇದೆ ಮತ್ತು ಪ್ರಕಾಶ್ಯವು ಪ್ರಕಾಶ್ಯವೇ ಆಗಿದೆ. ಹೀಗೆಯೇ ಅದು ಎಲ್ಲರ ಆಧಾರವಾಗಿದ್ದರೂ ಕೂಡ ಎಲ್ಲರ (ಆಧೇಯದ) ಕಣ-ಕಣದಲ್ಲಿ ವ್ಯಾಪ್ತವಾಗಿದೆ; ಆದರೆ ಅದು ಎಂದೂ ಆಧೇಯವಾಗುವುದಿಲ್ಲ. ಕಾರಣ – ಯಾವುದು ಪ್ರಕಾಶಕ ಮತ್ತು ಆಧಾರವಾಗಿದೆಯೋ ಅದರಲ್ಲಿ ಮಾಡುವುದು ಹಾಗೂ ಆಗುವುದು ಇರುವುದಿಲ್ಲ. ಮಾಡುವುದು ಮತ್ತು ಆಗುವ ಪರಿವರ್ತನವಾದರೋ ಪ್ರಕಾಶ್ಯ ಅಥವಾ ಆಧೇಯದಲ್ಲೇ ಇದೆ. ಈ ಪ್ರಕಾರ ಪ್ರಕಾಶಕ ಮತ್ತು ಪ್ರಕಾಶ್ಯ, ಆಧಾರ ಹಾಗೂ ಆಧೇಯಗಳ ಭೇದ (ವಿಭಾಗ)ವನ್ನು ಸರಿಯಾಗಿ ತಿಳಿಯುವವನೇ **'ತತ್ತ್ವವಿತ್'** ಆಗಿದ್ದಾನೆ. ಇದನ್ನೇ ಪ್ರಕೃತಿ (ಕ್ಷೇತ್ರ) ಮತ್ತು ಪುರುಷ (ಕ್ಷೇತ್ರಜ್ಞ)ರ ವಿಭಾಗವನ್ನು ತಿಳಿಯುವ ಮಾತನ್ನು ಭಗವಂತನು ಮೊದಲು ೨ನೇ ಅಧ್ಯಾಯದ ೧೬ನೇ ಶ್ಲೋಕದಲ್ಲಿ ಮತ್ತ ಮುಂದೆ ೭ನೇ ಅಧ್ಯಾಯದ ೪, ೫ನೇ ಶ್ಲೋಕಗಳಲ್ಲಿ ಹಾಗೂ ೧೩ನೇ ಅಧ್ಯಾಯದ ೨, ೧೯, ೨೩ ಮತ್ತು ೩೭ನೇ ಶ್ಲೋಕಗಳಲ್ಲಿ ಹೇಳಿರುವನು.

'ಪಶ್ಯನ್ ಶೃಣ್ವನ್ ಸ್ಪೃಶನ್ ..... ಉನ್ಮಿಷನ್ನಿಮಿಷನ್ನಪಿ' – ಇಲ್ಲಿ ನೋಡುವುದು, ಕೇಳುವುದು, ಮುಟ್ಟುವುದು, ಮೂಸುವುದು ಮತ್ತು ತಿನ್ನುವುದು – ಈ ಐದೂ ಕ್ರಿಯೆಗಳು (ಕ್ರಮಶಃ ಕಣ್ಣು, ಕಿವಿ, ಚರ್ಮ, ಮೂಗು, ನಾಲಿಗೆ ಈ ಐದೂ) ಜ್ಞಾನೇಂದ್ರಿಯಗಳದ್ದಾಗಿವೆ. ನಡೆಯುವುದು, ಸ್ವೀಕರಿಸು ವುದು, ಮಾತಾಡುವುದು ಹಾಗೂ ಮಲ- ಮೂತ್ರದ ತ್ಯಾಗಮಾಡುವುದು ಈ ನಾಲ್ಕೂ ಕ್ರಿಯೆಗಳು (ಕ್ರಮಶಃ ಕಾಲು, ಕೈ, ಮಾತು, ಉಪಸ್ಥ ಮತ್ತು ಗುದ ಈ ಐದು) ಕರ್ಮೇಂದ್ರಿಯಗಳದ್ದಾಗಿವೆ.* ಮಲಗುವುದು ಈ ಒಂದು ಕ್ರಿಯೆ ಅಂತಃಕರಣದ್ದಾಗಿದೆ. ಶ್ವಾಸತೆಗೆದುಕೊಳ್ಳುವುದು ಈ ಒಂದು ಕ್ರಿಯೆಯು ಪ್ರಾಣದ್ದು ಮತ್ತು ಕಣ್ಣು ತೆರೆಯುವುದು – ಮುಚ್ಚುವುದು ಈ ಎರಡೂ ಕ್ರಿಯೆಗಳು 'ಕೂರ್ಮ' ಎಂಬ ಉಪಪ್ರಾಣದ್ದಾಗಿವೆ.

ಮೇಲೆ ಹದಿಮೂರು ಕ್ರಿಯೆಗಳನ್ನು ಹೇಳಿ ಭಗವಂತನು ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಅಂತಃ ಕರಣ, ಪ್ರಾಣ ಮತ್ತು ಉಪಪ್ರಾಣಗಳಿಂದ ಆಗುವ ಎಲ್ಲ ಕ್ರಿಯೆಗಳ ಉಲ್ಲೇಖಮಾಡಿರುವನು. ತಾತ್ಪರ್ಯ – ಎಲ್ಲ ಕ್ರಿಯೆಗಳು ಪ್ರಕೃತಿಯ ಕಾರ್ಯ ಶರೀರ, ಇಂದ್ರಿಯಗಳು, ಮನ, ಬುದ್ಧಿ ಪ್ರಾಣ ಇತ್ಯಾದಿಗಳ ಮೂಲಕವೇ ಆಗುತ್ತವೆ, ಸ್ವಯಂ ಮೂಲಕವಲ್ಲ. ಇನ್ನೊಂದು ಭಾವವು ಈ ರೀತಿ ಕಂಡು ಬರುತ್ತದೆ – ಸಾಂಖ್ಯಯೋಗಿಯ ಮೂಲಕ ವರ್ಣ, ಆಶ್ರಮ, ಸ್ವಭಾವ, ಪರಿಸ್ಥಿತಿ ಇತ್ಯಾದಿಗಳನುಸಾರ ಶಾಸ್ತ್ರವಿಹಿತ ಶರೀರ ನಿರ್ವಾಹದ ಕ್ರಿಯೆಗಳು, ಊಟ-ತಿಂಡಿ, ವ್ಯಾಪಾರ ಮಾಡುವುದು, ಉಪದೇಶಮಾಡುವುದು, ಬರೆಯುವುದು, ಓದುವುದು, ಕೇಳುವುದು, ಯೋಚಿಸುವುದು ಇತ್ಯಾದಿ ಕ್ರಿಯೆಗಳು ಆಗುವುದಿಲ್ಲವೆಂಬ ಮಾತಿಲ್ಲ. ಅವನ ಮೂಲಕವೂ ಈ ಎಲ್ಲ ಕ್ರಿಯೆಗಳು ಆಗಬಲ್ಲವು.

ಮನುಷ್ಯನು ತನ್ನನ್ನು ಈ ಕ್ರಿಯೆಗಳ ಕರ್ತಾ ಎಂದು ತಿಳಿಯುತ್ತಾನೆ, ಅದನ್ನು ಅವನು ತಿಳಿದು ಮಾಡುತ್ತಾನೆ ಅರ್ಥಾತ್ – ಓದುವುದು, ಬರೆಯುವುದು, ಯೋಚಿಸುವುದು,

* ಇಲ್ಲಿ ಐದೂ ಕರ್ಮೇಂದ್ರಿಯಗಳ ಕ್ರಿಯೆಗಳ ವರ್ಣನೆ ನಾಲ್ಕು ಕ್ರಿಯೆಗಳ ಅಂತರ್ಗತ ಮಾಡಲಾಗಿದೆ ಅರ್ಥಾತ್ 'ವಿಸೃಜನ್' ಕ್ರಿಯೆಯ ಅಂತರ್ಗತವೇ ಉಪಸ್ಥ ಮತ್ತು ಗುದಾ ಇವುಗಳ ಕ್ರಿಯೆಗಳ ವರ್ಣನೆ ಮಾಡಲಾಗಿದೆ.

ನೋಡುವುದು, ಊಟಮಾಡುವುದು ಇತ್ಯಾದಿ ಮನಬುದ್ಧಿ ಪೂರ್ವಕ ಮಾಡುತ್ತಾನೆ. ಆದರೆ ಅನೇಕ ಕ್ರಿಯೆಗಳು ತಿಳಿಯದೆ ಮಾಡುವಂತಹುಗಳಿರುತ್ತವೆ –ಶ್ವಾಸಗಳು ಬಂದು ಹೋಗುವುದು, ಕಣ್ಣುಗಳನ್ನು ಮುಚ್ಚಿ-ತೆರೆಯುವುದು ಇತ್ಯಾದಿಗಳು. ಹಾಗಿರುವಾಗ ಈ ಕ್ರಿಯೆಗಳ ಕರ್ತಾ ತನ್ನನ್ನು ತಿಳಿಯದಿರುವ ಮಾತನ್ನು ಈ ಶ್ಲೋಕದಲ್ಲಿ ಹೇಗೆ ಹೇಳಲಾಯಿತು? ಇದರ ಉತ್ತರ – ಸಾಮಾನ್ಯರೂಪದಿಂದ ಶ್ವಾಸಗಳು ಬಂದು ಹೋಗುವುದು ಇತ್ಯಾದಿ ಕ್ರಿಯೆಗಳು ಸ್ವಾಭಾವಿಕವಾಗಿರುತ್ತವೆ; ಆದರೆ ಪ್ರಾಣಾಯಾಮ ಇತ್ಯಾದಿಗಳಲ್ಲಿ ಮನುಷ್ಯನು ಶ್ವಾಸವನ್ನು ತೆಗೆದು ಕೊಳ್ಳುವ ಕ್ರಿಯೆಗಳು ತಿಳಿದುಮಾಡುತ್ತಾನೆ. ಹೀಗೆಯೇ ಕಣ್ಣುಗಳನ್ನು ಮುಚ್ಚಿ-ತೆರೆಯುವುದನ್ನೂ ಕೂಡ ಹೇಳಲಾಗಿದೆ. ಇನ್ನೊಂದು ಮಾತು – ಹೇಗೆ ಮನುಷ್ಯನು – **'ಶ್ವಸನ್ ಉನ್ಮಿಷನ್ ನಿಮಿಷನ್'** (ಶ್ವಾಸ ತೆಗೆದುಕೊಳ್ಳುವುದು, ಕಣ್ಣು ತೆರೆಯುವುದು – ಮುಚ್ಚುವುದು) ಈ ಕ್ರಿಯೆಗಳನ್ನು ಸ್ವಾಭಾವಿಕವೆಂದು ತಿಳಿದುಕೊಂಡು ಇವುಗಳಲ್ಲಿ ತನ್ನ ಕರ್ತೃತ್ವ ತಿಳಿಯುವುದಿಲ್ಲವೋ, ಹಾಗೆಯೇ ಬೇರೆ ಕ್ರಿಯೆಗಳನ್ನು ಕೂಡ ಸ್ವಾಭಾವಿಕವೆಂದು ತಿಳಿದು ಅವುಗಳಲ್ಲಿ ಕರ್ತೃತ್ವ ತಿಳಿಯಬಾರದು.

ಇಲ್ಲಿ **'ಪಶ್ಯನ್'** ಇತ್ಯಾದಿ ಹದಿಮೂರು ಕ್ರಿಯೆಗಳು ಹೇಳಲಾಗಿವೆ, ಇವುಗಳು ಯಾವುದೇ ಆಧಾರವಿಲ್ಲದೆ ಆಗುವ ಸಂಭವವೇ ಇಲ್ಲ. ಈ ಕ್ರಿಯೆಗಳು ಯಾವುದರ ಆಶ್ರಿತವಾಗುತ್ತವೋ, ಅರ್ಥಾತ್ – ಈ ಕ್ರಿಯೆಗಳ ಯಾವ ಆಧಾರವಾಗಿದೆಯೋ ಅದರಲ್ಲಿ ಎಂದೂ ಯಾವುದೇ ಕ್ರಿಯೆಯು ಆಗುವುದಿಲ್ಲ, ಹಾಗೆಯೇ ಪ್ರಕಾಶಿತವಾಗುವ ಈ ಸಮಸ್ತ ಕ್ರಿಯೆಗಳು ಯಾವುದೇ ಪ್ರಕಾಶವಿಲ್ಲದೆ ಸಿದ್ಧವಾಗಲಾರವು. ಯಾವ ಪ್ರಕಾಶದಿಂದ ಈ ಕ್ರಿಯೆಗಳು ಪ್ರಕಾಶಿತವಾಗುತ್ತವೋ, ಯಾವ ಪ್ರಕಾಶದ ಅಂತರ್ಗತವಾಗಿವೆಯೋ, ಆ ಪ್ರಕಾಶದಲ್ಲಿ ಎಂದೂ ಯಾವುದೇ ಕ್ರಿಯೆಯು ಆಗಿರಲಿಲ್ಲ, ಆಗಲಿಲ್ಲ, ಆಗಲಾರದು ಆಗಲು ಸಾಧ್ಯವೇ ಇಲ್ಲ ಮತ್ತು ಆಗುವ ಸಂಭವವೂ ಇಲ್ಲ, ಇಂತಹ ಆ ತತ್ತ್ವವು ಎಲ್ಲರ ಆಧಾರ, ಪ್ರಕಾಶಕ ಮತ್ತು ಸ್ವಯಂ ಪ್ರಕಾಶ ಸ್ವರೂಪವಾಗಿದೆ. ಅದು ಎಲ್ಲದರಲ್ಲಿದ್ದರೂ ಏನೂ ಮಾಡುವುದಿಲ್ಲ, ಆ ತತ್ತ್ವದ ಕಡೆಗೆ ಲಕ್ಷ್ಯವಾಗಿಸಲೆಂದೇ ಮೇಲೆ ಹೇಳಿದ ಈ ಹದಿಮೂರು ಕ್ರಿಯೆಗಳ ತಾತ್ಪರ್ಯವಾಗಿದೆ.

'ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿ ಧಾರಯನ್' – ಸ್ವರೂಪದಲ್ಲಿ ಕರ್ತೃತ್ವವು ಇಲ್ಲವೇ ಇಲ್ಲವಾದಾಗ ಕ್ರಿಯೆಗಳು ಹೇಗೆ ಮತ್ತು ಯಾವುದರಿಂದ ಆಗುತ್ತಿವೆ? ಈ ಪ್ರಶ್ನೆಯ ಉತ್ತರವನ್ನು ಕೊಡುತ್ತಾ ಭಗವಂತನು ಮೇಲೆ ಹೇಳಿದ ಪದಗಳಲ್ಲಿ – ಸಮಸ್ತ ಕ್ರಿಯೆಗಳು ಇಂದ್ರಿಯಗಳ ಮೂಲಕ ಇಂದ್ರಿಯಗಳ ವಿಷಯಗಳಲ್ಲಿ ಆಗುತ್ತಾ ಇವೆ ಎಂದು ಹೇಳುತ್ತಾನೆ. ಇಲ್ಲಿ ಭಗವಂತನ ತಾತ್ಪರ್ಯ – ಇಂದ್ರಿಯಗಳಲ್ಲಿ ಕರ್ತೃತ್ವವನ್ನು ಹೇಳಲು ಇರದೆ ಸ್ವರೂಪವನ್ನು ಕರ್ತೃತ್ವರಹಿತ (ನಿರ್ಲಿಪ್ತ) ಎಂದು ಹೇಳುವುದರಲ್ಲಿದೆ.

ಜ್ಞಾನೇಂದ್ರಿಯಗಳು ಕರ್ಮೇಂದ್ರಿಯಗಳು, ಅಂತಃಕರಣ, ಪ್ರಾಣ, ಉಪಪ್ರಾಣ ಇತ್ಯಾದಿ ಎಲ್ಲವನ್ನು ಇಲ್ಲಿ **'ಇಂದ್ರಿಯಾಣಿ'** ಪದದ ಅಂತರ್ಗತ ಪರಿಗಣಿಸಲಾಗಿದೆ. ಇಂದ್ರಿಯಗಳ ಐದು ವಿಷಯಗಳು – ಶಬ್ದ, ಸ್ಪರ್ಶ, ರೂಪ, ರಸ, ಗಂಧ. ಈ ವಿಷಯಗಳಲ್ಲೇ ಇಂದ್ರಿಯಗಳು ವರ್ತಿಸುತ್ತವೆ. ಎಲ್ಲ ಇಂದ್ರಿಯಗಳು ಮತ್ತು ಇಂದ್ರಿಯಗಳ ವಿಷಯಗಳು ಪ್ರಕೃತಿಯ ಕಾರ್ಯವಾಗಿದೆ. ಆದಕ್ಕಾಗಿ ಇಂದ್ರಿಯಗಳ ಮೂಲಕ ಆಗುವ ಎಲ್ಲ ಕ್ರಿಯೆಗಳು ಪ್ರಕೃತಿಯಲ್ಲೇ ಆಗುತ್ತಾ ಇವೆ.

(೧) **ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ** (೩/೨೭)

(೨) **ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ।** (೧೩/೨೯)

ಗುಣಗಳ ಕಾರ್ಯವಾದ್ದರಿಂದ ಇಂದ್ರಿಯಗಳನ್ನು ಹಾಗೂ ಅವುಗಳ ವಿಷಯಗಳನ್ನು 'ಗುಣ' ಎಂದೇ ಹೇಳಲಾಗುತ್ತದೆ. ಆದ್ದರಿಂದ ಗುಣಗಳೇ ಗುಣಗಳಲ್ಲಿ ವರ್ತಿಸುತ್ತವೆ – **'ಗುಣಾ ಗುಣೇಷು ವರ್ತಂತೇ'** (೩/೨೮). ಗುಣಗಳಲ್ಲದೆ ಬೇರೆ ಯಾರೂ ಕರ್ತಾ ಇಲ್ಲ– **'ನಾನ್ಯಂ ಗುಣೇಭ್ಯಃ ಕರ್ತಾರಂ ಯದಾ ದ್ರಷ್ಟಾನು ಪಶ್ಯತಿ'** (೧೪/೧೯). ತಾತ್ಪರ್ಯ – ಎಲ್ಲ ಕ್ರಿಯೆಗಳನ್ನು ಬೇಕಾದರೆ ಪ್ರಕೃತಿಯಿಂದ ಆಗುವುದೆಂದು ಹೇಳಿ, ಬೇಕಾದರೆ ಪ್ರಕೃತಿಯ ಕಾರ್ಯವಾದ ಗುಣಗಳಿಂದ ಆಗುವುದೆಂದು ಹೇಳಿ, ಬೇಕಾದರೆ ಇಂದ್ರಿಯಗಳಿಂದ ಆಗುವುದೆಂದು ಹೇಳಿರಿ, ವಾಸ್ತವವಾಗಿ ಮಾತು ಒಂದೇ ಆಗಿದೆ.

ಕ್ರಿಯೆಯ ತಾತ್ಪರ್ಯ – ಪರಿವರ್ತನೆಯಾಗಿದೆ. ಪರಿವರ್ತನ ರೂಪೀ ಕ್ರಿಯೆಯು ಪ್ರಕೃತಿಯಲ್ಲಿ ಆಗುತ್ತದೆ. ಸ್ವರೂಪದಲ್ಲಿ ಪರಿವರ್ತನರೂಪೀ ಕ್ರಿಯೆಯು ಲೇಶ ಮಾತ್ರವೂ ಇಲ್ಲ, ಕಾರಣ ಪ್ರಕೃತಿ ನಿರಂತರ ಕ್ರಿಯಾಶೀಲವಾಗಿದೆ ಮತ್ತು ಸ್ವರೂಪವು ಕರ್ತೃತ್ವದಿಂದ ರಹಿತವಾಗಿದೆ. ಪ್ರಕೃತಿಯು ಎಂದೂ ಅಕ್ರಿಯವಾಗಲಾರದು ಮತ್ತು ಸ್ವರೂಪದಲ್ಲಿ ಎಂದೂ ಕ್ರಿಯೆಯು ಆಗಲಾರದು. ಎಲ್ಲ ಕ್ರಿಯೆಗಳು ಪ್ರಕಾಶ್ಯವಾಗಿದೆ ಹಾಗೂ ಸ್ವರೂಪವು ಪ್ರಕಾಶಕವಾಗಿದೆ.

'ನೈವ ಕಿಂಚಿತ್ಕರೋಮೀತಿ ಮನ್ಯೇತ' – ಇಲ್ಲಿ 'ನಾನು (ಸ್ವರೂಪದಿಂದ) ಕರ್ತಾ ಅಲ್ಲ' ಇದರ ತಾತ್ಪರ್ಯ – ನಾನು

(ಸ್ವರೂಪ) ಮೊದಲು ಕರ್ತಾ ಆಗಿದ್ದೆ ಎಂಬುದಲ್ಲ, ಸ್ವರೂಪದಲ್ಲಿ ಕರ್ತೃತ್ವವಾದರೋ ವರ್ತಮಾನದಲ್ಲಿ ಇಲ್ಲ, ಭೂತದಲ್ಲಿರಲಿಲ್ಲ, ಭವಿಷ್ಯದಲ್ಲಿ ಇರಲಾರದು. ಎಲ್ಲ ಕ್ರಿಯೆಗಳು ಪ್ರಕೃತಿಯಲ್ಲೇ ಆಗುತ್ತವೆ; ಏಕೆಂದರೆ, ಪ್ರಕೃತಿ ಸದಾಕಾಲ ಕ್ರಿಯಾಶೀಲವಾಗಿದೆ ಮತ್ತು ಪುರುಷ ಅರ್ಥಾತ್ -ಚೇತನತತ್ತ್ವ ಸದಾ ಕ್ರಿಯಾರಹಿತವಾಗಿದೆ. ಚೇತನವು ಅನಾದಿ ಅಜ್ಞಾನದಿಂದ ಪ್ರಕೃತಿಯ ಕಾರ್ಯದೊಂದಿಗೆ ತಾದಾತ್ಮ್ಯ ಪಡೆದಾಗ ಅದು ಪ್ರಕೃತಿಯ ಕ್ರಿಯೆಗಳನ್ನು ತನ್ನ ಕ್ರಿಯೆಗಳೆಂದು ತಿಳಿಯತೊಡಗುತ್ತದೆ ಮತ್ತು ಆ ಕ್ರಿಯೆಗಳ ಕರ್ತಾ ಸ್ವತಃ ಆಗುತ್ತಾನೆ (೩/೨೭).

ಒರ್ವ ಮನುಷ್ಯನು ರೈಲಿನಲ್ಲಿ ಕುಳಿತಿರುವನು, ನಡೆಯುತ್ತಿಲ್ಲ; ಆದರೆ ರೈಲು ನಡೆಯುವುದರಿಂದ ಅವನು ನಡೆಯದೆ ನಡೆದಂತೆ ಆಗುತ್ತದೆ. ರೈಲು ಹತ್ತಿದ ಕಾರಣ ಈಗ ಅವನು ನಡೆಯುವುದರಿಂದ ರಹಿತನಾಗಲಾರನು. ಹೀಗೆಯೇ ಕ್ರಿಯಾಶೀಲ ಪ್ರಕೃತಿಯ ಕಾರ್ಯರೂಪೀ ಸ್ಥೂಲ, ಸೂಕ್ಷ್ಮ, ಕಾರಣ – ಯಾವುದೇ ಶರೀರದೊಂದಿಗೆ ತನ್ನ ಸಂಬಂಧ ಜೋಡಿಸಿಕೊಂಡಾಗ ಸ್ವಯಂ ಕರ್ಮ ಮಾಡದಿದ್ದರೂ ಅವನು ಆ ಶರೀರಗಳಿಂದ ಆಗುವ ಕ್ರಿಯೆಗಳ ಕರ್ತಾ ಆಗದೆ ಉಳಿಯಲಾರನು.

ಸಾಂಖ್ಯಯೋಗಿಯು ಶರೀರ, ಇಂದ್ರಿಯಗಳು, ಅಂತಃಕರಣ ಇತ್ಯಾದಿಗಳೊಂದಿಗೆ ಎಂದೂ ತನ್ನ ಸಂಬಂಧವನ್ನು ತಿಳಿಯುವುದಿಲ್ಲ, ಅದಕ್ಕಾಗಿ ಅವನು ಕರ್ಮಗಳ ಕರ್ತೃತ್ವವನ್ನು ತನ್ನಲ್ಲಿ ಎಂದೂ ಅನುಭವಿಸುವುದಿಲ್ಲ (೫/೧೩). ಹೇಗೆ ಶರೀರವು ಬಾಲ್ಯದಿಂದ ಯುವಕನಾಗುವುದು, ಕಪ್ಪಾಗಿರುವ ಕೂದಲು ಬಿಳಿಯಾಗುವುದು, ತಿಂದ ಊಟ ಜೀರ್ಣವಾಗುವುದು, ಶರೀರವು ಬಲಿಷ್ಠ ಅಥವಾ ನಿರ್ಬಲವಾಗುವುದು ಇತ್ಯಾದಿ ಕ್ರಿಯೆಗಳು ಸ್ವಾಭಾವಿಕ (ತನ್ನಿಂದ-ತಾನೇ) ಆಗುತ್ತವೋ, ಹಾಗೆಯೇ ಬೇರೆ ಎಲ್ಲ ಕ್ರಿಯೆಗಳನ್ನೂ ಕೂಡ ಸಾಂಖ್ಯ ಯೋಗಿಯು ಸ್ವಾಭಾವಿಕವಾಗಿ ಆಗುವವು ಎಂದು ಅನುಭವಿಸುತ್ತಾನೆ. ತಾತ್ಪರ್ಯ – ಅವನು ತನ್ನನ್ನು ಯಾವುದೇ ಕ್ರಿಯೆಯ ಕರ್ತಾ ಎಂದು ಅನುಭವಿಸುವುದಿಲ್ಲ.

'ಸ್ವಯಂಗೆ' ಕರ್ತಾ ಎಂದು ತಿಳಿಯುವವನ ನಿಂದೆಯನ್ನು ಗೀತೆಯಲ್ಲಿ ಮಾಡಲಾಗಿದೆ. (೩/೨೭). ಇದೇ ಪ್ರಕಾರ ಶುದ್ಧ ಸ್ವರೂಪವನ್ನು ಕರ್ತಾ ಎಂದು ತಿಳಿಯುವವನನ್ನು ಮಲಿನ ಅಂತಃಕರಣವುಳ್ಳವನು ಮತ್ತು ದುರ್ಮತಿ ಎಂದು ಹೇಳಲಾಗಿದೆ (೧೮/೧೬). ಆದರೆ ಸ್ವರೂಪವನ್ನು ಅಕರ್ತಾ ಎಂದು ತಿಳಿಯುವವನನ್ನು ಪ್ರಶಂಸಲಾಗಿದೆ (೧೩/೨೯).

'ಏವ' ಪದವನ್ನು ಕೊಡುವ ತಾತ್ಪರ್ಯ – ಸಾಧಕನು ಎಂದೂ ಕಿಂಚಿನ್ಮಾತ್ರವೂ ತನ್ನಲ್ಲಿ ಕರ್ತೃತ್ವದ ಮಾನ್ಯತೆ ಮಾಡಬಾರದು, ಅರ್ಥಾತ್ ಎಂದೂ ಯಾವುದೇ ಅಂಶದಲ್ಲಿ ತನ್ನನ್ನು ಯಾವುದೇ ಕರ್ಮದ ಕರ್ತಾ ಎಂದು ತಿಳಿಯಬಾರದು. ಈ ಪ್ರಕಾರ ತನ್ನಲ್ಲಿ ಕರ್ತೃತ್ವದ ಭಾವ ಇರದಿದ್ದಾಗ ಅವನಿಂದ ಆಗುವ ಕರ್ಮಗಳ ಸಂಜ್ಞೆ 'ಕರ್ಮ'ವೆಂದಿರದೆ 'ಕ್ರಿಯೆ' ಎಂದಿರುತ್ತದೆ. ಅವನ್ನು 'ಚೇಷ್ಟಾಮಾತ್ರ' ಎಂದು ಹೇಳಲಾಗುತ್ತದೆ. ಇದೇ ಲಕ್ಷ್ಯದಿಂದ ಹಿನೇ ಅಧ್ಯಾಯದ ೩೩ನೇ ಶ್ಲೋಕದಲ್ಲಿ ಜ್ಞಾನೀ ಮಹಾಪುರುಷರಿಂದ ಆಗುವ ಕ್ರಿಯೆಯನ್ನು **'ಚೇಷ್ಟತೇ'** ಪದದಿಂದ ಹೇಳಲಾಗಿದೆ.

ಇಲ್ಲಿ **'ಏವ'** ಪದವನ್ನು ಕೊಡುವ ಇನ್ನೊಂದು ತಾತ್ಪರ್ಯ– ಸ್ವಯಂ ಶರೀರದೊಂದಿಗೆ ತಾದಾತ್ಮ್ಯವಾದರೂ, ಶರೀರದೊಂದಿಗೆ ಎಷ್ಟೇ ಬೆರೆತಿದ್ದರೂ ಮತ್ತು ತನ್ನನ್ನು 'ನಾನು ಕರ್ತಾ ಆಗಿದ್ದೇನೆ' ಎಂದು ತಿಳಿದುಕೊಂಡರೂ ಸ್ವಯಂನಲ್ಲಿ ಎಂದೂ ಕರ್ತೃತ್ವ ಬರುವುದೇ ಇಲ್ಲ ಹಾಗೂ ಎಂದೂ ಬರಲಾರದು. ಆದರೆ ಪ್ರಕೃತಿಯೊಂದಿಗೆ ತಾದಾತ್ಮ್ಯಗೈದು ಇವನು ಸ್ವಯಂ ತನ್ನಲ್ಲಿ ಕರ್ತೃತ್ವವನ್ನು ತಿಳಿದುಕೊಳ್ಳುತ್ತಾನೆ; ಏಕೆಂದರೆ ಇವನಲ್ಲಿ ತಿಳಿಯುವ ಮತ್ತು ತಿಳಿಯದೇ ಇರುವ ಸಾಮರ್ಥ್ಯವಿದೆ, ಸ್ವಾತಂತ್ರ್ಯವಿದೆ. ಆದಕ್ಕಾಗಿ ಇವನು ತನ್ನನ್ನು ಕರ್ತಾ ಎಂದು ತಿಳಿದುಕೊಳ್ಳುತ್ತಾನೆ ಮತ್ತು ಇವನು ತನ್ನ ಕಡೆಗೆ ನೋಡಿದಾಗ ಅಕರ್ತೃತ್ವವೂ ಅನುಭವಕ್ಕೆ ಬರುತ್ತದೆ. ಇವೆರಡೂ ಮಾತು (ತನ್ನಲ್ಲಿ ಕರ್ತೃತ್ವ ತಿಳಿಯುವುದು, ತಿಳಿಯದಿರುವುದು) ಇದ್ದರೂ ಕೂಡ ಸ್ವಯಂನಲ್ಲಿ ಎಂದೂ ಕರ್ತೃತ್ವ ಬರುವುದೇ ಇಲ್ಲ, ೧೩ನೇ ಅಧ್ಯಾಯದ ೩೧ನೇ ಶ್ಲೋಕದಲ್ಲಿ ಭಗವಂತನು – 'ಶರೀರದಲ್ಲಿದ್ದರೂ ಅವನು ಮಾಡದೆ ಮತ್ತು ಲಿಪ್ತನಾಗದೇ ಇರುತ್ತಾನೆ ಎಂದು ಹೇಳಿದ್ದಾನೆ. ಭೋಕ್ತಾ ಆದರೋ ಪ್ರಕೃತಿಸ್ಥ ಪುರುಷನೇ ಆಗುತ್ತಾನೆ (೧೩/೨೧). ಕ್ರಿಯಾಫಲದ ಭೋಕ್ತಾ ಆಗಿದ್ದರೂ ಅವನು ನಿಜವಾಗಿ ತನ್ನ ಸ್ವರೂಪದಿಂದ ಎಂದೂ ಚ್ಯುತನಾಗುವುದಿಲ್ಲ; ಆದರೆ ತನ್ನ ಸ್ವರೂಪದ ಕಡೆಗೆ ದೃಷ್ಟಿಯೇ ಇಲ್ಲದಿರುವುದರಿಂದ ತನ್ನಲ್ಲಿ ಲಿಪ್ತತೆಯ ಭಾವ ಹುಟ್ಟಿಕೊಳ್ಳುತ್ತದೆ.'

ಪುರುಷನು ಸ್ವತಃ ಸ್ವರೂಪದಿಂದ ನಿರ್ಲಿಪ್ತನಾಗಿದ್ದರೂ, ಅವನಲ್ಲಿ ಭೋಕ್ತೃತ್ವವು ಇಲ್ಲದಿದ್ದರೂ, ಆಗದಿದ್ದರೂ, ಸುಖ-ದುಃಖಗಳ ಭೋಕ್ತಾ ಆದರೋ ಸ್ವಯಂ ಪುರುಷ (ಚೇತನ)ನೇ ಆಗುತ್ತಾನೆ, ಅರ್ಥಾತ್-ಸುಖಿ-ದುಃಖಿ ಸ್ವಯಂ ಪುರುಷ (ಚೇತನ)ನೇ ಆಗುತ್ತಾನೆ, ಜಡವಲ್ಲ; ಏಕೆಂದರೆ, ಜಡದಲ್ಲಿ ಸುಖೀ-ದುಃಖಿಯಾಗುವ ಶಕ್ತಿ ಮತ್ತು ಯೋಗ್ಯತೆ ಇಲ್ಲ, ಹಾಗಾದರೆ ಪುರುಷನಲ್ಲಿ ಭೋಕ್ತೃತ್ವವು ಇಲ್ಲವೇ ಇಲ್ಲ

ಮತ್ತು ಸುಖ-ದುಃಖದ ಭೋಕ್ತಾ ಪುರುಷನೇ ಆಗುತ್ತಾನೆ – ಈ ಎರಡೂ ಮಾತು ಹೇಗಾದವು? ಭೋಗದ ಸಮಯದಲ್ಲಿ ಆಗುವ ಭೋಗಾಕಾರ-ಸುಖ- ದುಃಖಾಕಾರ ವೃತ್ತಿಯಾದರೋ ಪ್ರಕೃತಿಯದಾಗಿರುತ್ತದೆ ಹಾಗೂ ಪ್ರಕೃತಿಯಲ್ಲೇ ಆಗುತ್ತದೆ. ಆದರೆ ಆ ವೃತ್ತಿಯೊಂದಿಗೆ ತಾದಾತ್ಮ್ಯವಾದ್ದರಿಂದ ಸುಖಿ-ದುಃಖಿಯಾಗುವುದು ಅರ್ಥಾತ್ 'ನಾನು ಸುಖಿ ಯಾಗಿದ್ದೇನೆ, ನಾನು ದುಃಖಿಯಾಗಿದ್ದೇನೆ' – ಇಂತಹ ಮಾನ್ಯತೆ ತನ್ನಲ್ಲಿ ಸ್ವಯಂ ಪುರುಷನೇ ಮಾಡುತ್ತಾನೆ. ಕಾರಣ – ಹೀಗೆ ತಿಳಿಯುವುದು ಪುರುಷನಿಲ್ಲದೆ ಆಗಲಾರದು ಅರ್ಥಾತ್ – ಹೀಗೆ ತಿಳಿಯುವುದು ಪುರುಷನಲ್ಲೇ ಆಗಬಲ್ಲದು, ಜಡದಲ್ಲಿ ಅಲ್ಲ; ಈ ದೃಷ್ಟಿಯಿಂದ ಪುರುಷನನ್ನು ಭೋಕ್ತಾ ಎಂದು ಹೇಳಲಾಗಿದೆ. ಸುಖಿ-ದುಃಖಿಯಾಗುವುದು ತನ್ನಲ್ಲಿ ತಿಳಿದಿದ್ದರೂ ಕೂಡ ಅರ್ಥಾತ್- ಸುಖದ ಸಮಯ ಸುಖೀ, ಹಾಗೂ ದುಃಖದ ಸಮಯದಲ್ಲಿ ದುಃಖಿ ಈ ಮಾನ್ಯತೆ ತನ್ನಲ್ಲಿ ಇದ್ದರೂ ಕೂಡ ಪುರುಷನು ತನ್ನ ಸ್ವರೂಪದಿಂದ ನಿರ್ಲಿಪ್ತ ಮತ್ತು ಸುಖ-ದುಃಖದ ಪ್ರಕಾಶಕ ಮಾತ್ರವೇ ಇರುತ್ತಾನೆ; ಈ ದೃಷ್ಟಿಯಿಂದ ಪುರುಷನಲ್ಲಿ ಭೋಕ್ತೃತ್ವವು ಇಲ್ಲವೇ ಇಲ್ಲ ಮತ್ತು ಇರಲಾರದು. ಕಾರಣ – ಏಕದೇಶೀಯತೆಯಿಂದಲೇ ಭೋಕ್ತೃತ್ವವು ಉಂಟಾಗುತ್ತದೆ ಹಾಗೂ ಏಕದೇಶೀಯತೆ ಅಹಂಕಾರದಿಂದ ಉಂಟಾಗುತ್ತದೆ. ಅಹಂಕಾರ ಪ್ರಕೃತಿಯ ಕಾರ್ಯವಾಗಿದೆ, ಪ್ರಕೃತಿ ಜಡವಾಗಿದೆ; ಆದ್ದರಿಂದ ಅದರ ಕಾರ್ಯವೂ ಜಡವೇ ಆಗುತ್ತದೆ. ಅರ್ಥಾತ್-ಭೋಕ್ತೃತ್ವವು ಜಡವೇ ಆಗಿರುತ್ತದೆ. ಅದಕ್ಕಾಗಿ ಭೋಕ್ತೃತ್ವವು ಪುರುಷ (ಚೇತನ)ನಲ್ಲಿ ಇಲ್ಲ, ಒಂದು ವೇಳೆ ಈ ಪುರುಷನು ಸುಖದ ಸಮಯದಲ್ಲಿ ಸುಖೀ ಮತ್ತು ದುಃಖದ ಸಮಯದಲ್ಲಿ ದುಃಖಿ ಆದರೆ ಇವನ ಸ್ವರೂಪವು ಪರಿವರ್ತನಶೀಲವೇ ಆಗುತ್ತಿತ್ತು; ಏಕೆಂದರೆ, ಸುಖದ ಮತ್ತು ದುಃಖದ ಆರಂಭ ಹಾಗೂ ಅಂತ್ಯವಾಗುತ್ತದೆ. ಹೀಗೆಯೇ ಈ ಪುರುಷನೂ ಸಹ ಆರಂಭ ಮತ್ತು ಅಂತ್ಯವುಳ್ಳವನಾಗುತ್ತಿದ್ದನು, ಇದು ಸರ್ವಥಾ ಅನುಚಿತವಾಗಿದೆ. ಕಾರಣ- ಗೀತೆಯು ಇವನನ್ನು ಅಕ್ಷರ, ಅವ್ಯಯ, ನಿರ್ಲಿಪ್ತವೆಂದು ಹೇಳಿದೆ ಮತ್ತು ತತ್ತ್ವಜ್ಞ ಪುರುಷರು ಇದರ ಸ್ವರೂಪವನ್ನು ಏಕರಸ, ಏಕರೂಪವೆಂದು ತಿಳಿದಿರುವರು. ಒಂದು ವೇಳೆ ಈ ಪುರುಷನನ್ನು ಸುಖದ ಸಮಯ ಸುಖೀ, ದುಃಖದ ಸಮಯ ದುಃಖೀ ಆಗುವವನೆಂದು ತಿಳಿದರೆ ಮತ್ತೆ ಪುರುಷನು ಸದಾ ಏಕರಸ, ಏಕರೂಪ ಇರುತ್ತಾನೆ ಎಂದು ಹೇಗೆ ಹೇಳಬಹುದು?

ವಿಶೇಷ ವಿಚಾರ

ಮೂರನೇ ಅಧ್ಯಾಯದ ೨೭ನೇ ಶ್ಲೋಕದಲ್ಲಿ **'ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ'** ಇದರಲ್ಲಿ ಬಂದಿರುವ **'ಮನ್ಯತೇ'** ಪದದಿಂದ ಯಾವ ಮಾತು ಬಂದಿತ್ತೋ ಅದರ ನಿಷೇಧವನ್ನು ಇಲ್ಲಿ **'ನೈವ ಕಿಂಚಿತ್ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್'** ಇದರಲ್ಲಿ ಬಂದಿರುವ **'ಮನ್ಯೇತ'** ಪದದಿಂದ ಮಾಡಲಾಗಿದೆ. **'ಮನ್ಯೇತ'** ಪದದ ಅರ್ಥ ತಿಳಿಯುವುದು ಎಂದಾಗಿರದೆ ಅನುಭವಿಸುವುದು ಎಂದಿದೆ; ಏಕೆಂದರೆ, ಸ್ವರೂಪದಲ್ಲಿ ಕ್ರಿಯೆಯಿಲ್ಲ ಇದು ಅನುಭವವಾಗಿದೆ, ಮಾನ್ಯತೆ ಅಲ್ಲ, ಕರ್ಮಮಾಡುವಾಗ ಅಥವಾ ಮಾಡದಿರುವಾಗ ಎರಡೂ ಅವಸ್ಥೆಗಳಲ್ಲಿ ಸ್ವರೂಪದಲ್ಲಿ ಅಕರ್ತೃತ್ವವು ಹೇಗಿದೆಯೋ ಹಾಗೆಯೇ ಇದೆ. ಅದಕ್ಕಾಗಿ ತತ್ತ್ವವಿತ್ ಪುರುಷನು – ಕರ್ಮಮಾಡುತ್ತಿರುವಾಗಲೂ ನಾನು ಅದೇ ಆಗಿದ್ದೆ ಮತ್ತು ಕರ್ಮ ಮಾಡದಿರುವಾಗಲೂ ನಾನು ಅದೇ ಆಗಿದ್ದೆ; ಆದ್ದರಿಂದ ಕರ್ಮ ಮಾಡುವುದರಿಂದ ಅಥವಾ ಮಾಡದಿರುವುದರಿಂದ ತನ್ನ ಸ್ವರೂಪ (ತನ್ನ ಸತ್ತೆ)ದಲ್ಲಿ ಏನು ವ್ಯತ್ಯಾಸವಾಯಿತು? ಅರ್ಥಾತ್ – ಸ್ವರೂಪ ವಾದರೋ ಅಕರ್ತೃತ್ವವೇ ಉಳಿಯಿತು. ಈ ಪ್ರಕಾರ ಪ್ರಕೃತಿಯ ಪರಿವರ್ತನೆಯ ಜ್ಞಾನ (ಅನುಭವ)ವಾದರೋ ಎಲ್ಲರಿಗಾಗುತ್ತದೆ; ಆದರೆ ತನ್ನ ಸ್ವರೂಪದ ಪರಿವರ್ತನೆಯ ಜ್ಞಾನ ಯಾರಿಗೂ ಆಗುವುದಿಲ್ಲ. ಸ್ವರೂಪವು ಎಲ್ಲ ಕ್ರಿಯೆಗಳ ನಿರ್ಲಿಪ್ತರೂಪದಿಂದ ಆಶ್ರಯ, ಆಧಾರ ಮತ್ತು ಪ್ರಕಾಶಕವಾಗಿದೆ. ಅದರಲ್ಲಿ ಎಂದಿಗೂ ಕಿಂಚಿತ್ತೂ ಪರಿವರ್ತನೆಯ ಸಂಭವವಿಲ್ಲ.

ಸ್ವರೂಪದಲ್ಲಿ ಎಂದೂ ಅಭಾವವಾಗುವುದಿಲ್ಲ, ಅದು ಪ್ರಕೃತಿಯೊಂದಿಗೆ ರಾಗದಿಂದ ತಾದಾತ್ಮ್ಯ ಒಪ್ಪಿಕೊಂಡಾಗ ಅವನಿಗೆ ತನ್ನಲ್ಲಿ ಅಭಾವ ಕಂಡುಬರುತ್ತದೆ. ಆ ಅಭಾವದ ಪೂರ್ತಿಗಾಗಿ ಅವನು ಪದಾರ್ಥಗಳ ಕಾಮನೆ ಮಾಡತೊಡಗುತ್ತಾನೆ. ಕಾಮನೆಯ ಪೂರ್ಣತೆಗಾಗಿ ಅವನಲ್ಲಿ ಕರ್ತೃತ್ವಬಂದುಬಿಡುತ್ತದೆ; ಏಕೆಂದರೆ, ಕಾಮನೆ ಉಂಟಾಗದೆ ಸ್ವರೂಪದಲ್ಲಿ ಕರ್ತೃತ್ವವು ಬರುವುದಿಲ್ಲ.

ಪ್ರಕೃತಿಯ ಸಂಬಂಧವಿಲ್ಲದೆ ಸ್ವಯಂ ಯಾವುದೇ ಕ್ರಿಯೆಯನ್ನು ಮಾಡಲಾರದು. ಕಾರಣ – ಕರ್ಮಗಳಾಗುವ ಕರಣಗಳು ಪ್ರಕೃತಿಯದ್ದೇ ಆಗಿವೆ. ಕರ್ತಾ ಕರಣಕ್ಕೆ ಅಧೀನನಾಗುತ್ತಾನೆ. ಚಿನಿವಾರನು ಎಷ್ಟೇ ಯೋಗ್ಯನಾಗಿದ್ದರೂ ಅವನು ಇಕ್ಕುಳ, ಸುತ್ತಿಗೆ ಮುಂತಾದ ಉಪಕರಣಗಳಿಲ್ಲದೆ ಯಾವುದೇ ಕೆಲಸ ಮಾಡಲಾರನು, ಹಾಗೆಯೇ ಕರ್ತಾ ಕರಣಗಳಿಲ್ಲದೆ ಯಾವುದೇ ಕ್ರಿಯೆ ಮಾಡಲಾರನು. ಈ ಪ್ರಕಾರ ಯೋಗ್ಯತೆ, ಸಾಮರ್ಥ್ಯ, ಕರಣ – ಇವು ಮೂರು ಪ್ರಕೃತಿಯಲ್ಲೇ ಇವೆ ಮತ್ತು ಪ್ರಕೃತಿಯ ಸಂಬಂಧದಿಂದಲೇ ತನ್ನಲ್ಲಿ ಕಂಡು ಬರುತ್ತವೆ. ಇವು ಮೂರು ಹೆಚ್ಚು-ಕಡಿಮೆಯಾಗುತ್ತವೆ ಹಾಗೂ ಸ್ವರೂಪವು ಸದಾ ಹೇಗಿದೆಯೋ – ಹಾಗೆಯೇ ಇರುತ್ತದೆ. ಆದ್ದರಿಂದ ಸ್ವರೂಪದೊಂದಿಗೆ ಇವುಗಳು ಸಂಬಂಧವೇ ಇಲ್ಲ.

ಕರ್ತೃತ್ವವು ಪ್ರಕೃತಿಯ ಸಂಬಂಧದಿಂದಿದೆ, ಅದಕ್ಕಾಗಿ

ತನ್ನನ್ನು ಕರ್ತಾ ಎಂದು ತಿಳಿಯುವುದು ಪರಧರ್ಮವಾಗಿದೆ. ಸ್ವರೂಪದಲ್ಲಿ ಕರ್ತೃತ್ವವು ಇಲ್ಲ ಅದಕ್ಕಾಗಿ ತನ್ನನ್ನು ಅಕರ್ತಾನೆಂದು ತಿಳಿಯುವುದು ಸ್ವಧರ್ಮವಾಗಿದೆ. ಬ್ರಾಹ್ಮಣನು ತನ್ನ ಬ್ರಾಹ್ಮಣತ್ವ (ನಾನು ಬ್ರಾಹ್ಮಣನಾಗಿದ್ದೇನೆ)ದಲ್ಲಿ ನಿರಂತರ ಸ್ಥಿತನಾಗುವಂತೆಯೇ ತತ್ತ್ವವಿತ್ ತನ್ನ ಅಕರ್ತೃತ್ವ (ಸ್ವಧರ್ಮ)ದಲ್ಲಿ ನಿರಂತರ ಸ್ಥಿತನಾಗಿರುತ್ತಾನೆ – ಇದೇ **'ನೈವ ಕಿಂಚಿತ್ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್'** ಪದಗಳ ಭಾವವಾಗಿದೆ.

ಪರಿತಿಪ್ಪ ಭಾವ – ವಿವೇಕಶೀಲ ಜ್ಞಾನಯೋಗಿಯು ಮೊದಲು ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಅಂತಃಕರಣ ಹಾಗೂ ಪ್ರಾಣಗಳಿಂದ ಆಗುವ ಕ್ರಿಯೆಗಳನ್ನು ಮಾಡುತ್ತಿದ್ದರೂ ಕೂಡ 'ನಾನು ಸ್ವತಃ ಏನೂ ಮಾಡುವುದಿಲ್ಲ' ಎಂದು ತಿಳಿಯುತ್ತಾನೆ, ಮತ್ತೆ ಅವನಿಗೆ ಹಾಗೇ ಅನುಭವವಾಗುತ್ತದೆ. ನಿಜವಾಗಿ ಚಿನ್ಮಯ ಸತ್ತಾಮಾತ್ರದಲ್ಲಿ ಮಾಡದಿರುವುದು ಹಾಗೂ ಆಗದಿರುವುದು ಇದೆ. ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ ಆಗುವ ಎಲ್ಲ ಕ್ರಿಯೆಗಳು ಪ್ರಕೃತಿಯಲ್ಲೇ ಆಗುತ್ತವೆ, ಸ್ವಯಂನಲ್ಲಿ ಅಲ್ಲ, ಆದ್ದರಿಂದ ಸ್ವಯಂಗೆ ಯಾವುದೇ ಕ್ರಿಯೆಯಿಂದ ಕಿಂಚಿನ್ಮಾತ್ರವೂ ಸಂಬಂಧವಿಲ್ಲ.

ಅವಿವೇಕದಿಂದ ಅಹಂಮನ್ನು ತನ್ನ ಸ್ವರೂಪವೆಂದು ತಿಳಿದಿದ್ದರಿಂದ **'ಅಹಂಕಾರವಿಮೂಢಾತ್ಮಾ'** ಆಗಿಹೋಗಿದ್ದವನು (೩/೨೭) ಅವನೇ ವಿವೇಕದಿಂದ ತನ್ನನ್ನು ಅಹಂನಿಂದ ಬೇರೆಯಾಗಿ ಅನುಭವಿಸಿದಾಗ **'ತತ್ತ್ವವಿತ್'** ಆಗಿಹೋಗುತ್ತಾನೆ, ಅರ್ಥಾತ್ – ಅವನಲ್ಲಿ ಕರ್ತೃತ್ವವು ಉಳಿಯುವುದಿಲ್ಲ. ಅವನು ನಿರಂತರ ಚಿನ್ಮಯ ತತ್ತ್ವದಲ್ಲೇ ಸ್ಥಿತನಾಗಿರುತ್ತಾನೆ.

ಅಹಂಕಾರದಿಂದ ಮೋಹಿತನಾಗಿ ಜೀವಿಯು ಅಜ್ಞಾನದಿಂದ ತನ್ನನ್ನು ಕರ್ತಾ ಎಂದು ತಿಳಿದುಕೊಂಡರೆ ಅವನು ಕರ್ಮಗಳಿಂದ ಮತ್ತು ಅವುಗಳ ಫಲಗಳಿಂದ ಬಂಧಿತನಾದಾನು ಹಾಗೂ ಎಂಭತ್ತನಾಲ್ಕು ಲಕ್ಷಯೋನಿಗಳಲ್ಲಿ ಬಿದ್ದುಬಿಟ್ಟಾನು. ಈಗ ಅವನು ತನ್ನನ್ನು ಅಹಂದಿಂದ ಬೇರೆ ಎಂದು ತಿಳಿದರೆ ಮತ್ತು ತನ್ನನ್ನು ಕರ್ತಾ ಎಂದು ತಿಳಿಯದೆ ಅರ್ಥಾತ್ – ಸ್ವಯಂ ನಿಜವಾಗಿ ಹೇಗಿದೆಯೋ ಹಾಗೆಯೇ ಅನುಭವ ಪಡೆದರೆ ಅವನು ತತ್ತ್ವವಿತ್ (ಮುಕ್ತ) ಆಗುವುದರಲ್ಲಿ ಆಶ್ಚರ್ಯ ವೇನಿದೆ? ತಾತ್ಪರ್ಯ – ಅಸತ್ಯವಾದುದನ್ನು ಸತ್ಯವೆಂದು ತಿಳಿಯುವುದರಿಂದ ಸತ್ಯವೆಂದು ಕಂಡುಬಂದರೆ ಮತ್ತೆ ನಿಜವಾಗಿ ಸತ್ಯವಾಗಿರುವುದನ್ನು ಒಪ್ಪಿಕೊಳ್ಳುವುದರಿಂದ ಹಾಗೆಯೇ ಕಂಡುಬಂದರೆ ಇದರಲ್ಲಿ ಆಶ್ಚರ್ಯವೇನಿದೆ?

ನಿಜವಾಗಿ ಸ್ವಯಂ ತನ್ನನ್ನು ಕರ್ತಾ-ಭೋಕ್ತಾ ಎಂದು ತಿಳಿದಾಗಲೂ ಅವನು ಕರ್ತಾ-ಭೋಕ್ತನಲ್ಲ – **'ಶರೀರಸ್ಥೋಽಪಿ ಕೌಂತೇಯ ನ ಕರೋತಿ ನ ಲಿಪ್ಯತೇ'** (೧೩/೩೧). ಕಾರಣ – ತನ್ನ ಸ್ವರೂಪವು ಸತ್ತಾಮಾತ್ರವಾಗಿದೆ. ಸತ್ತೆಯಲ್ಲಿ ಅಹಂ ಇಲ್ಲ ಮತ್ತು ಅಹಂಗೆ ಸತ್ತೆ ಇಲ್ಲ. ಆದ್ದರಿಂದ 'ನಾನು ಕರ್ತಾ ಆಗಿದ್ದೇನೆ' ಈ ಮಾನ್ಯತೆಯು ಎಷ್ಟೇ ದೃಢವಾದರೂ ಅಜ್ಞಾನವೇ ಆಗಿದೆ. ಅಜ್ಞಾನವನ್ನು ಅಜ್ಞಾನವೆಂದು ತಿಳಿಯುವುದರಿಂದ ಅಜ್ಞಾನವು ಇಲ್ಲವಾಗುತ್ತದೆ – ಇದು ನಿಯಮವಾಗಿದೆ. ಯಾವುದಾದರು ಗುಹೆಯಲ್ಲಿ ನೂರಾರು ವರ್ಷಗಳಿಂದ ಅಂಧಕಾರವಿದ್ದರೆ, ಪ್ರಕಾಶ ಮಾಡುತ್ತಲೇ ಅದು ಆಗಲೇ ಇಲ್ಲವಾಗುತ್ತದೆ. ಅದು ಇಲ್ಲವಾಗಲು ಅನೇಕ ವರ್ಷ-ತಿಂಗಳುಗಳು ಬೇಕಾಗುವುದಿಲ್ಲ. ಅದಕ್ಕಾಗಿ ಸಾಧಕನು 'ನಾನು ಕರ್ತಾ ಅಲ್ಲ' ಎಂದು ದೃಢವಾಗಿ ಒಪ್ಪಿಕೊಳ್ಳಬೇಕು. ಮತ್ತೆ ಈ ಮಾನ್ಯತೆಯು ಮಾನ್ಯತೆಯ ರೂಪದಲ್ಲಿ ಇರದೆ ಅನುಭವದಲ್ಲಿ ಪರಿವರ್ತಿತವಾಗಿ ಹೋದೀತು.

ಜಡ-ಚೇತನದ ತಾದಾತ್ಮ್ಯವಿರುವುದರಿಂದ 'ನಾನು' ಇದರ ಪ್ರಯೋಗ ಜಡ (ತಾದಾತ್ಮ್ಯರೂಪೀ ಅಹಂಕಾರ)ಕ್ಕಾಗಿಯೂ ಆಗುತ್ತದೆ ಮತ್ತು ಚೇತನ (ಸ್ವರೂಪ)ಕ್ಕಾಗಿಯೂ ಆಗುತ್ತದೆ. 'ನಾನು ಕರ್ತಾ ಆಗಿದ್ದೇನೆ' ಇದರಲ್ಲಿ ಜಡದ ಕಡೆಗೆ ದೃಷ್ಟಿ ಇದೆ ಮತ್ತು 'ನಾನು ಕರ್ತಾ ಅಲ್ಲ' ಇದರಲ್ಲಿ (ಜಡತೆಯ ನಿಷೇಧವಿರುವುದರಿಂದ) ಚೇತನದ ಕಡೆಗೆ ದೃಷ್ಟಿ ಇದೆ. ಯಾರ ದೃಷ್ಟಿಯು ಜಡದ ಕಡೆಗಿದೆಯೋ ಅರ್ಥಾತ್ – ಅಹಂಮನ್ನು ತನ್ನ ಸ್ವರೂಪವೆಂದು ತಿಳಿಯುವವನು – **'ಅಹಂಕಾರವಿಮೂಢಾತ್ಮಾ'** ಆಗಿದ್ದಾನೆ ಮತ್ತು ಚೇತನದ ಕಡೆಗೆ ದೃಷ್ಟಿ ಇರುವವನು – **'ತತ್ತ್ವವಿತ್'** ಆಗಿದ್ದಾನೆ.

ಸಾಧಕನು ವರ್ತಮಾನದಲ್ಲಿ 'ನಾನು ಸ್ವಯಂ ಏನೂ ಮಾಡುವುದಿಲ್ಲ' ಈ ಪ್ರಕಾರ ತನ್ನನ್ನು ಅಕರ್ತಾನೆಂದು ಅನುಭವಿಸುವ ಪ್ರಯತ್ನಮಾಡಿದಾಗ ಅವನ ಮುಂದೆ ಒಂದು ದೊಡ್ಡ ಸಮಸ್ಯೆ ಇದಿರಾಗುತ್ತದೆ. ಅವನಿಗೆ ಭೂತಕಾಲದಲ್ಲಿ ಮಾಡಿಯವ ಒಳ್ಳೆಯ ಕರ್ಮಗಳ ನೆನಪು ಆದಾಗ ನಾನು ಒಳ್ಳೆಯ ಕೆಲಸಮಾಡಿದೆ, ತುಂಬಾ ಸರಿಯಾಗಿ ಮಾಡಿದೆ ಎಂದು ಅವನು ಸಂತೋಷಪಡುತ್ತಾನೆ ಮತ್ತು ಅವನಿಗೆ ನಿಷಿದ್ಧ ಕರ್ಮಗಳ ನೆನಪುಬಂದಾಗ ನಾನು ತುಂಬಾ ಕೆಟ್ಟ ಕೆಲಸ ಮಾಡಿದೆ, ತುಂಬಾ ತಪ್ಪುಮಾಡಿದೆ ಎಂದು ಅವನಿಗೆ ದುಃಖವಾಗುತ್ತದೆ. ಈ ಪ್ರಕಾರ ಭೂತಕಾಲದಲ್ಲಿ ಮಾಡಲಾದ ಕರ್ಮಗಳ ಸಂಸ್ಕಾರಗಳು ಅವನಿಗೆ ಸುಖೀ-ದುಃಖಿಯಾಗಿಸುತ್ತವೆ. ಈ ವಿಷಯದಲ್ಲಿ ಒಂದು ಮಾರ್ಮಿಕ ಮಾತಿದೆ-ಸ್ವರೂಪದಲ್ಲಿ ಕರ್ತೃತ್ವವು ವರ್ತಮಾನದಲ್ಲಿಲ್ಲ, ಭೂತಕಾಲದಲ್ಲಿರಲಿಲ್ಲ, ಭವಿಷ್ಯದಲ್ಲಿ ಇರಲಾರದು. ಆದ್ದರಿಂದ ಸಾಧಕನು ಹೇಗೆ ವರ್ತಮಾನದಲ್ಲಿ ಅಕರ್ತಾ ಆಗಿದ್ದೇನೋ, ಹಾಗೆಯೇ ಭೂತಕಾಲದಲ್ಲಿಯೂ ಅಕರ್ತಾನೇ ಆಗಿದ್ದೆ ಇದನ್ನು ನೋಡಬೇಕು. ಕಾರಣ – ವರ್ತಮಾನವೇ ಭೂತಕಾಲಕ್ಕೆ

ಹೋಗಿದೆ. ಸ್ವರೂಪವು ಸತ್ತಾಮಾತ್ರವಾಗಿದೆ ಮತ್ತು ಸತ್ತಾಮಾತ್ರದಲ್ಲಿ ಯಾವುದೇ ಕರ್ಮಮಾಡುವುದು ಆಗುವುದಿಲ್ಲ. ಕರ್ಮಗಳು ಕೇವಲ ಅಹಂಕಾರದಿಂದ ಮೋಹಿತ ಅಂತಃಕರಣವುಳ್ಳ ಅಜ್ಞಾನೀ ಮನುಷ್ಯನಿಂದಲೇ ಆಗುತ್ತವೆ. (೩/೨೭). ಸಾಧಕನಿಗೆ ಭೂತಕಾಲದಲ್ಲಿ ಮಾಡಲಾದ ಕರ್ಮಗಳ ನೆನಪು ಬರುವುದರಿಂದ ಆಗುವ ಸುಖ-ದುಃಖ-ಚಿಂತೆಗಳೂ ನಿಜವಾಗಿ ಅಹಂಕಾರದ ಕಾರಣವೇ ಆಗಿದೆ. ವರ್ತಮಾನದಲ್ಲಿ ಅಹಂಕಾರ ವಿಮೂಢಾತ್ಮಾಆಗಿ ಆರ್ಥಾತ್ ಅಹಂಕಾರ ದೊಂದಿಗೆ ತನ್ನ ಸಂಬಂಧವನ್ನು ತಿಳಿದುಕೊಂಡು ಸಾಧಕನು ಸುಖೀ-ದುಃಖಿಯಾಗುತ್ತಾನೆ. ಸ್ಥೂಲ ದೃಷ್ಟಿಯಿಂದ ನೋಡಿದರೆ ಹೇಗೆ ಈಗ ಭೂತಕಾಲದ ಅಭಾವ ವಿದೆಯೋ ಹಾಗೆಯೇ ಭೂತಕಾಲದಲ್ಲಿ ಮಾಡಿರುವ ಕರ್ಮಗಳ ಅಭಾವವೂ ಕೂಡ ಈಗ ಪ್ರತ್ಯಕ್ಷವಾಗಿದೆ. ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ ಹೇಗೆ ಭೂತಕಾಲದಲ್ಲಿ ವರ್ತಮಾನದ ಅಭಾವವಿತ್ತೋ ಹಾಗೆಯೇ ಭೂತಕಾಲದ್ದೂ ಅಭಾವವಿತ್ತು ಇದೇ ರೀತಿ ವರ್ತಮಾನದಲ್ಲಿ ಹೇಗೆ ಭೂತಕಾಲದ ಅಭಾವವಿದೆಯೋ ಹಾಗೆಯೇ ವರ್ತಮಾನದ್ದೂ ಅಭಾವವಿದೆ. ಆದರೆ ಸತ್ತೆಯ ಭಾವ ನಿತ್ಯ-ನಿರಂತರವಾಗಿದೆ. ತಾತ್ಪರ್ಯ – ಸತ್ತಾಮಾತ್ರದಲ್ಲಿ ಭೂತ, ಭವಿಷ್ಯ, ವರ್ತಮಾನ ಈ ಮೂರರ ಸರ್ವಥಾ ಅಭಾವವಿದೆ. ಸತ್ತೆಯು ಕಾಲಾತೀತವಾಗಿದೆ. ಆದ್ದರಿಂದ ಅವನು ಯಾವುದೇ ಕಾಲದಲ್ಲಿ ಕರ್ತಾ ಅಲ್ಲ. ಆ ಕಾಲಾತೀತ, ಅಮಸ್ಥಾತೀತ ಸತ್ತೆಯಲ್ಲಿ ಯಾವುದೇ ಕಾಲವಿಶೇಷ ಮತ್ತು ಅಮಸ್ಥಾವಿಶೇಷದಿಂದ ಕರ್ತೃತ್ವ ಹಾಗೂ ಭೋಕ್ತೃತ್ವವನ್ನು ಆರೋಪಿಸುವುದು ಅಜ್ಞಾನವಾಗಿದೆ. ಆದ್ದರಿಂದ ಭೂತಕಾಲದಲ್ಲಿ ಮಾಡಲಾದ ಕರ್ಮಗಳ ಸ್ಮೃತಿಯು ಅಹಂಕಾರವಿಮೂಢಾತ್ಮಾನ ಸ್ಮೃತಿಯಾಗಿದೆ, ತತ್ತ್ವವಿದನದು ಅಲ್ಲ.

'ನೈವ ಕಿಂಚಿತ್ಕರೋಮಿ' ಇದರ ತಾತ್ಪರ್ಯ – ಕ್ರಿಯೆಯಲ್ಲ, ಸತ್ತೆಯಾಗಿದೆ. ಆದ್ದರಿಂದ ಸಾಧಕನ ದೃಷ್ಟಿಯು ಸತ್ತಾಮಾತ್ರದ ಕಡೆಗೇ ಇರಬೇಕು. ಆ ಸತ್ತೆಯು ಚಿನ್ಮಯವಾಗಿರುವುದರಿಂದ ಜ್ಞಾನಸ್ವರೂಪವಾಗಿದೆ ಮತ್ತು ನಿರ್ವಿಕಾರವಾದ್ದರಿಂದ ಆನಂದಸ್ವರೂಪವಾಗಿದೆ. ಈ ಆನಂದವು ಅಖಂಡ, ಶಾಂತ, ಏಕರಸವಾಗಿದೆ.

ಶರೀರದೊಂದಿಗೆ ತಾದಾತ್ಮ್ಯವಾದ ಕಾರಣ ಪ್ರತಿಯೊಂದು ಕ್ರಿಯೆಯಲ್ಲಿ ಸ್ವಯಂ ಇದರ ಪ್ರಾಮುಖ್ಯತೆ 'ನಾನು ನೋಡುತ್ತೇನೆ, ನಾನು ಕೇಳುತ್ತೇನೆ' ಇತ್ಯಾದಿ ಇರುತ್ತದೆ. ಕ್ರಿಯೆಯಾದರೋ ಶರೀರದಲ್ಲಾಗುತ್ತದೆ ಆದರೆ ತನ್ನದೆಂದು ತಿಳಿಯುತ್ತಾನೆ. ಸ್ವಯಂನಲ್ಲಿ ಯಾವುದೇ ಕ್ರಿಯೆಯು ಇಲ್ಲ, ಅದು ಮಾಡುವ ಹಾಗೂ ಮಾಡದಿರುವ ಎರಡರಿಂದಲೂ ರಹಿತವಾಗಿದೆ (೩/೧೮). ಆದಕ್ಕಾಗಿ ಶರೀರದ ಮೂಲಕ ಕ್ರಿಯೆಗಳಾದರೂ ಸತ್ತಾಮಾತ್ರವಾದ ತನ್ನ ಸ್ವರೂಪದಲ್ಲಿ ನಾನು ಏನೂ ಮಾಡುವುದಿಲ್ಲ -ಈ ದೃಷ್ಟಿ ಇರಬೇಕು.

—•—

ಸಂಬಂಧ - ಏಳನೇ ಶ್ಲೋಕದಲ್ಲಿ ಕರ್ಮಯೋಗಿಯ ಮತ್ತು ೮-೯ನೇ ಶ್ಲೋಕಗಳಲ್ಲಿ ಸಾಂಖ್ಯಯೋಗಿಯ ಕರ್ಮಗಳಿಂದ ನಿರ್ಲಿಪ್ತತೆಯನ್ನು ಹೇಳಿ ಈಗ ಭಗವಂತನು ಕರ್ಮಗಳಿಂದ ಭಕ್ತಿಯೋಗಿಯ ನಿರ್ಲಿಪ್ತತೆಯನ್ನು ಹೇಳುತ್ತಾನೆ —

ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥ ೧೦॥

ಯಃ - ಯಾವ (ಭಕ್ತಿಯೋಗಿಯು), **ಕರ್ಮಾಣಿ** - ಎಲ್ಲ ಕರ್ಮಗಳನ್ನು, **ಬ್ರಹ್ಮಣಿ** - ಪರಮಾತ್ಮನಲ್ಲಿ, **ಆಧಾಯ** - ಅರ್ಪಿಸಿ (ಮತ್ತು), **ಸಂಗಮ್** - ಆಸಕ್ತಿಯನ್ನು **ತ್ಯಕ್ತ್ವಾ** - ತ್ಯಾಗಮಾಡಿ, **ಕರೋತಿ** - (ಕರ್ಮ) ಮಾಡುತ್ತಾನೋ, **ಸಃ** - ಅವನು, **ಅಂಭಸಾ**- ನೀರಿನಿಂದ **ಪದ್ಮಪತ್ರಮ್**, **ಇವ** – ಕಮಲದ ಎಲೆಯಂತೆ, **ಪಾಪೇನ** - ಪಾಪದಿಂದ, **ನ, ಲಿಪ್ಯತೇ** - ಲಿಪ್ತನಾಗುವುದಿಲ್ಲ, ॥ ೧೦॥

ಯಾವ ಭಕ್ತಿಯೋಗಿಯು ಎಲ್ಲ ಕರ್ಮಗಳನ್ನು ಪರಮಾತ್ಮನಲ್ಲಿ ಅರ್ಪಿಸಿ ಮತ್ತು ಆಸಕ್ತಿಯನ್ನು ತ್ಯಾಗಮಾಡಿ ಕರ್ಮಮಾಡುತ್ತಾನೋ ಅವನು-ಕಮಲದ ಎಲೆಯು ನೀರಿನಿಂದ ಲಿಪ್ತವಾಗದಿರುವಂತೆ- ಪಾಪದಿಂದ ಲಿಪ್ತನಾಗುವುದಿಲ್ಲ.

ವ್ಯಾಖ್ಯಾ - **'ಬ್ರಹ್ಮಣ್ಯಾಧಾಯ ಕರ್ಮಾಣಿ'** – ಶರೀರ, ಇಂದ್ರಿಯಗಳು, ಮನ, ಬುದ್ಧಿ, ಪ್ರಾಣ ಇತ್ಯಾದಿಗಳೆಲ್ಲವೂ ಭಗವಂತನದ್ದೇ ಆಗಿವೆ, ತನ್ನದು ಅಲ್ಲವೇ ಅಲ್ಲ; ಆದ್ದರಿಂದ ಇವುಗಳ ಮೂಲಕ ಆಗುವ ಕ್ರಿಯೆಗಳನ್ನು ಭಕ್ತಿಯೋಗಿಯು ತನ್ನದೆಂದು ಹೇಗೆ ತಿಳಿಯಬಲ್ಲನು? ಆದಕ್ಕಾಗಿ ಅವನಲ್ಲಿ – 'ಎಲ್ಲ ಕ್ರಿಯೆಗಳು ಭಗವಂತನ ಮೂಲಕವೇ ಆಗುತ್ತಾ ಇವೆ ಮತ್ತು ಭಗವಂತನಿಗಾಗಿಯೇ ಆಗುತ್ತಿವೆ, ನಾನು ಕೇವಲ ನಿಮಿತ್ತಮಾತ್ರನಾಗಿದ್ದೇನೆ ಎಂಬ ಭಾವವಿರುತ್ತದೆ.'

ಭಗವಂತನೇ ತನ್ನ ಇಂದ್ರಿಯಗಳ ಮೂಲಕ ತಾನೇ ಎಲ್ಲ ಕ್ರಿಯೆಗಳನ್ನು ಮಾಡುತ್ತಾನೆ – ಈ ಮಾತನ್ನು ಸರಿಯಾಗಿ ಧರಿಸಿಕೊಂಡು ಸಮಸ್ತ ಕ್ರಿಯೆಗಳ ಕರ್ತೃತ್ವವನ್ನು ಭಗವಂತನಲ್ಲೇ ತಿಳಿಯುವುದೇ ಮೇಲೆ ಹೇಳಿದ ಪದಗಳ ಅರ್ಥವಾಗಿದೆ.

ಶರೀರಾದಿ ವಸ್ತುಗಳು ತನ್ನದಾಗಿರದೆ, ದೊರಕಿರುವುದು ಮತ್ತು ಅಗಲುವಂತಹವುಗಳು. ಇವು ಕೇವಲ ಭಗವಂತನಿಗಾಗಿ, ಭಗವತ್ ಪ್ರೀತ್ಯರ್ಥವಾಗಿ ಬೇರೆಯವರ ಸೇವೆ ಮಾಡಲು ದೊರಕಿವೆ. ಈ ವಸ್ತುಗಳ ಮೇಲೆ ನಮಗೆ

ಸ್ವತಂತ್ರ ಅಧಿಕಾರವಿಲ್ಲ, ಅರ್ಥಾತ್ – ಇವುಗಳನ್ನು ನಮ್ಮ ಇಚ್ಛೆಗನುಸಾರ ಇರಿಸಲಾರೆವು, ಬದಲಿಸಲಾರೆವು ಮತ್ತು ಸತ್ತ ಮೇಲೆ ಜೊತೆಗೆ ಕೊಂಡುಹೋಗಲಾರೆವು. ಅದಕ್ಕಾಗಿ ಈ ಶರೀರಾದಿಗಳನ್ನು ಹಾಗೂ ಇವುಗಳಿಂದಾಗುವ ಕ್ರಿಯೆಗಳನ್ನು ನಮ್ಮದೆಂದು ತಿಳಿಯುವುದು ಪ್ರಾಮಾಣಿಕತೆ ಅಲ್ಲ, ಆದ್ದರಿಂದ ಮನುಷ್ಯನು ಪ್ರಾಮಾಣಿಕನಾಗಿ ಯಾರ ಈ ವಸ್ತುಗಳೋ ಅವನದ್ದೇ ಅರ್ಥಾತ್ ಭಗವಂತನದೆಂದು ತಿಳಿಯಬೇಕು.

ಸಮಸ್ತ ಕ್ರಿಯೆಗಳು ಮತ್ತು ಪದಾರ್ಥಗಳನ್ನು ಕರ್ಮಯೋಗಿಯು 'ಪ್ರಪಂಚ'ಕ್ಕೆ ಜ್ಞಾನಯೋಗಿಯು 'ಪ್ರಕೃತಿ'ಗೆ, ಭಕ್ತಿಯೋಗಿಯು 'ಭಗವಂತ'ನಿಗೆ ಅರ್ಪಿಸುತ್ತಾನೆ. ಪ್ರಕೃತಿ ಮತ್ತು ಪ್ರಪಂಚ ಎರಡರ ಒಡೆಯ ಭಗವಂತನಾಗಿದ್ದಾನೆ. ಆದ್ದರಿಂದ ಕ್ರಿಯೆಗಳನ್ನು ಮತ್ತು ಪದಾರ್ಥಗಳನ್ನು ಭಗವಂತನಿಗೆ ಅರ್ಪಿಸುವುದೇ ಶ್ರೇಷ್ಠವಾಗಿದೆ.

'ಸಂಗಂ ತ್ಯಕ್ತ್ವಾ ಕರೋತಿ ಯಃ' – ಯಾವುದೇ ಪ್ರಾಣಿ, ಪದಾರ್ಥ, ಶರೀರ, ಇಂದ್ರಿಯಗಳು, ಮನ, ಬುದ್ಧಿ, ಪ್ರಾಣ, ಕ್ರಿಯಾ ಇತ್ಯಾದಿಗಳಲ್ಲಿ ಕಿಂಚಿನ್ಮಾತ್ರವೂ ರಾಗ, ಸೆಳೆತ, ಆಕರ್ಷಣ, ಪ್ರೀತಿ, ಮಹತ್ವ, ಮಮತೆ, ಕಾಮನೆ ಇತ್ಯಾದಿಗಳು ಇಲ್ಲದಿರುವುದೇ ಆಸಕ್ತಿಯ ಸರ್ವಥಾ ತ್ಯಾಗ ಮಾಡುವುದಾಗಿದೆ.

ಶಾಸ್ತ್ರೀಯ ದೃಷ್ಟಿಯಿಂದ 'ಅಜ್ಞಾನ'ವು ಜನ್ಮ-ಮರಣದ ಹೇತುವಾಗಿದ್ದರೂ ಕೂಡ ಸಾಧನೆಯ ದೃಷ್ಟಿಯಿಂದ 'ರಾಗ'ವೇ ಜನ್ಮ-ಮರಣದ ಮುಖ್ಯ ಕಾರಣವಾಗಿದೆ. **'ಕಾರಣಂ ಗುಣಸಂಗೋಽಸ್ಯ ಸದಸದ್ಯೋನಿಜನ್ಮಸು'** (೧೩/೨೧). ರಾಗದ ಮೇಲೆಯೇ ಅಜ್ಞಾನ ನಿಂತಿದೆ, ಅದಕ್ಕಾಗಿ ರಾಗವು ಇಲ್ಲವಾದಾಗ ಅಜ್ಞಾನವೂ ಇಲ್ಲವಾಗುತ್ತದೆ. ಈ ರಾಗ ಅಥವಾ ಆಸಕ್ತಿಯಿಂದಲೇ ಕಾಮನೆ ಹುಟ್ಟಿಕೊಳ್ಳುತ್ತದೆ – **'ಸಂಗಾತ್ಸಂಜಾಯತೇ ಕಾಮಃ'** (೨/೬೨). ಕಾಮನೆಯೇ ಎಲ್ಲ ಪಾಪಗಳ ಬೇರು ಆಗಿದೆ (೩/೩೭). ಅದಕ್ಕಾಗಿ ಇಲ್ಲಿ ಪಾಪಗಳ ಮೂಲಕಾರಣ ಆಸಕ್ತಿಯ ತ್ಯಾಗ ಮಾಡುವುದರ ಮಾತನ್ನು ಹೇಳಲಾಗಿದೆ; ಏಕೆಂದರೆ, ಇದು ಇರುವಾಗ ಮನುಷ್ಯನು ಪಾಪಗಳಿಂದ ಬದುಕುಳಿಯಲಾರನು ಮತ್ತು ಇದು ಇಲ್ಲದಿರುವಾಗ ಮನುಷ್ಯನು ಪಾಪಗಳಿಂದ ಲಿಪ್ತನಾಗುವುದಿಲ್ಲ.

ಯಾವುದೇ ಕ್ರಿಯೆಯನ್ನು ಮಾಡುವಾಗ ಕ್ರಿಯಾಜನ್ಯ ಸುಖವನ್ನು ಪಡೆಯುವುದರಿಂದ ಹಾಗೂ ಅದರ ಫಲದಲ್ಲಿ ಆಸಕ್ತನಾಗಿರುವುದರಿಂದ ಆ ಕ್ರಿಯೆಯ ಸಂಬಂಧ ಬಿಟ್ಟು ಹೋಗುವುದಿಲ್ಲ, ಬಿಟ್ಟುಹೋಗುವ ಬದಲು ಹೆಚ್ಚುತ್ತದೆ. ಯಾವುದೇ ಚಿಕ್ಕ ಅಥವಾ ದೊಡ್ಡ ಕ್ರಿಯೆಯ ಫಲರೂಪದಲ್ಲಿ ಯಾವುದೇ ವಸ್ತುವನ್ನು ಬಯಸುವುದೇ ಆಸಕ್ತಿಯಾಗಿರದೆ, ಕ್ರಿಯೆ ಮಾಡುತ್ತಿರುವಾಗಲೂ ತನ್ನಲ್ಲಿ ಮಹತ್ವವನ್ನು ಒಳ್ಳೆತನವನ್ನು ಆರೋಪಿಸುವುದು ಮತ್ತು ಬೇರೆಯವರಿಂದ ಒಳ್ಳೆಯವನೆಂದು ಹೇಳಿಸಿಕೊಳ್ಳುವ ಭಾವ ಇರಿಸುವುದೂ ಕೂಡ ಆಸಕ್ತಿಯೇ ಆಗಿದೆ. ಅದಕ್ಕಾಗಿ ತನಗಾಗಿ ಏನನ್ನೂ ಮಾಡುವುದಲ್ಲ, ಕರ್ಮದಿಂದ ತನಗಾಗಿ ಯಾವುದೇ ಪ್ರಕಾರದ ಕಿಂಚಿತ್ತಾದರೂ ಸುಖ ಪಡೆಯುವ ಇಚ್ಛೆ ಇದ್ದರೆ ಆ ಕರ್ಮವು ತನಗಾಗಿ ಆಗುತ್ತದೆ. ತನ್ನ ಸುಖ-ಸೌಲಭ್ಯ ಮತ್ತು ಸಮ್ಮಾನದ ಇಚ್ಛೆಯನ್ನು ಸರ್ವಥಾ ತ್ಯಾಗಗೈದು ಕರ್ಮ ಮಾಡುವುದೇ ಮೇಲೆ ಹೇಳಿದ ಪದಗಳ ಅಭಿಪ್ರಾಯವಾಗಿದೆ.

'ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ' – ಭಗವಂತನಿಗೆ ಸಮ್ಮುಖನಾಗಿ ಭಕ್ತಿಯೋಗಿಯು ಪ್ರಪಂಚದಲ್ಲಿದ್ದು ಸಮಸ್ತ ಭಗವದರ್ಪಣ ಕರ್ಮ ಮಾಡುತ್ತಾ ಇದ್ದರೂ ಕರ್ಮಗಳಿಂದ ಬಂಧಿತನಾಗುವುದಿಲ್ಲ ಇದು ಎಷ್ಟು ವಿಶೇಷವಾದ ಮಾತಾಗಿದೆ! ಕಮಲದ ಎಲೆಯು ನೀರಿನಲ್ಲೇ ಹುಟ್ಟಿ, ನೀರಿನಲ್ಲೇ ಇದ್ದರೂ ನೀರಿನಿಂದ ನಿರ್ಲಿಪ್ತವಾಗಿರುವಂತೆ ಭಕ್ತಿಯೋಗಿಯು ಪ್ರಪಂಚದಲ್ಲಿ ಇದ್ದು ಎಲ್ಲ ಕ್ರಿಯೆಗಳನ್ನು ಮಾಡುತ್ತಿದ್ದರೂ ಭಗವಂತನಿಗೆ ಸಮ್ಮುಖನಾದ ಕಾರಣ ಪ್ರಪಂಚದಲ್ಲಿ ಸರ್ವದಾ-ಸರ್ವಥಾ ನಿರ್ಲಿಪ್ತನಾಗಿರುತ್ತಾನೆ.

ಭಗವಂತನಿಂದ ವಿಮುಖನಾಗಿ ಪ್ರಪಂಚದ ಕಾಮನೆ ಮಾಡುವುದೇ ಎಲ್ಲ ಪಾಪಗಳ ಮುಖ್ಯಕಾರಣವಾಗಿದೆ. ಕಾಮನೆಯು ಆಸಕ್ತಿಯಿಂದ ಉಂಟಾಗುತ್ತದೆ. ಆಸಕ್ತಿಯು ಸರ್ವಥಾ ಅಭಾವವಾದಾಗ ಕಾಮನೆ ಉಳಿಯಲಾರದು, ಅದರಿಂದ ಪಾಪವಾಗುವ ಸಂಭವವೂ ಇರುವುದಿಲ್ಲ.

ಹೊಗೆಯಿಂದ ಕೂಡಿದ ಅಗ್ನಿಯಂತೆ ಎಲ್ಲ ಕರ್ಮಗಳು ಯಾವುದಾದರೂ ದೋಷದಿಂದ ಕೂಡಿರುತ್ತವೆ (೧೮/೪೮). ಆದರೆ ಆಸೆ, ಕಾಮನೆ, ಆಸಕ್ತಿಗಳ ತ್ಯಾಗಮಾಡಿದವನಿಗೆ ಈ ದೋಷಗಳು ಅಂಟುವುದಿಲ್ಲ, ಆಸಕ್ತಿರಹಿತನಾಗಿ ಭಗವದರ್ಥ ಕರ್ಮಮಾಡುವುದರ ಪ್ರಭಾವದಿಂದ ಸಂಪೂರ್ಣಸಂಚಿತ ಪಾಪಗಳು ವಿಲೀನವಾಗುತ್ತವೆ (೯/೨೭, ೨೮). ಆದ್ದರಿಂದ ಭಕ್ತಿಯೋಗಿಗೆ ಯಾವುದೇ ಪ್ರಕಾರದಿಂದಲೂ ಪಾಪಗಳೊಂದಿಗೆ ಸಂಬಂಧ ಇರುವುದಿಲ್ಲ.

ಇಲ್ಲಿ **'ಪಾಪೇನ'** ಪದವು ಮುಂದಿನ ಜನ್ಮಾರಂಭಕ್ಕೆ ಕಾರಣವಾಗುವ ಕರ್ಮಗಳಿಂದ ಉಂಟಾಗುವ ಪಾಪ-ಪುಣ್ಯರೂಪೀ ಫಲದ ವಾಚಕವಾಗಿದೆ. ಭಕ್ತಿಯೋಗಿಯು ಆ ಪಾಪ-ಪುಣ್ಯರೂಪೀ ಫಲಗಳಿಂದ ಎಂದೂ ಲಿಪ್ತನಾಗುವುದಿಲ್ಲ ಅರ್ಥಾತ್ – ಬಂಧಿತವಾಗುವುದಿಲ್ಲ, ಇದೇ ಮಾತನ್ನು ೯ನೇ ಅಧ್ಯಾಯದ ೨೮ನೇ ಶ್ಲೋಕದಲ್ಲಿ **'ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ'** ಪದಗಳಿಂದ ಹೇಳಲಾಗಿದೆ.

ಪರಿಶಿಷ್ಟ ಭಾವ–ಇಲ್ಲಿ ಸಗುಣ ಈಶ್ವರನಿಗೆ 'ಬ್ರಹ್ಮ'ವೆಂದು ಹೇಳುವ ತಾತ್ಪರ್ಯ – ಈಶ್ವರನು ಸಗುಣ, ನಿರ್ಗುಣ, ಸಾಕಾರ- ನಿರಾಕಾರ ಎಲ್ಲವೂ ಆಗಿದ್ದಾನೆ; ಏಕೆಂದರೆ ಅವನು

ಸಮಗ್ರನಾಗಿದ್ದಾನೆ. ಸಮಗ್ರದಲ್ಲಿ ಎಲ್ಲವೂ ಬಂದುಬಿಡುತ್ತದೆ (೭/೨೯,೩೦) ಶ್ರೀಮದ್ಭಾಗವತದಲ್ಲಿಯೂ ಬ್ರಹ್ಮ (ನಿರ್ಗುಣ-ನಿರಾಕಾರ), ಪರಮಾತ್ಮಾ (ಸಗುಣ-ನಿರಾಕಾರ) ಮತ್ತು ಭಗವಂತ (ಸಗುಣ-ಸಾಕಾರ) ಮೂರನ್ನೂ ಒಂದೇ ಎಂದು ಹೇಳಿದೆ.* ತಾತ್ಪರ್ಯ 'ಸಗುಣ'ದ ಅಂತರ್ಗತ ಬ್ರಹ್ಮ, ಪರಮಾತ್ಮಾ, ಭಗವಂತ – ಈ ಮೂರೂ ಬಂದುಬಿಡುತ್ತವೆ, ಆದರೆ 'ನಿರ್ಗುಣ'ದ ಅಂತರ್ಗತ ಕೇವಲ ಬ್ರಹ್ಮವೇ ಬರುತ್ತದೆ; ಏಕೆಂದರೆ ನಿರ್ಗುಣದಲ್ಲಿ ಗುಣಗಳ ನಿಷೇಧವಿದೆ. ಆದ್ದರಿಂದ ನಿರ್ಗುಣ ಸೀಮಿತವಾಗಿದೆ ಮತ್ತು ಸಗುಣ ಸಮಗ್ರವಾಗಿದೆ.

ವೈಷ್ಣವರು ಸಗುಣ-ಸಾಕಾರ ಭಗವಂತನ ಉತ್ಸವವನ್ನು 'ಬ್ರಹ್ಮೋತ್ಸವ' ಎಂದು ಹೇಳುತ್ತಾರೆ. ಅರ್ಜುನನೂ ಕೂಡ ಭಗವಾನ್ ಶ್ರೀಕೃಷ್ಣನಿಗೆ 'ಬ್ರಹ್ಮ' ಹೆಸರಿನಿಂದ ಹೇಳಿಯವನು. **'ಪರಂ ಬ್ರಹ್ಮ ಪರಂಧಾಮ ಪವಿತ್ರಂ ಪರಮಂ ಭವಾನ್'** (೧೦/೧೨). ಗೀತೆಯಲ್ಲಿ ಬ್ರಹ್ಮನ ಮೂರು ಹೆಸರು ಹೇಳಿದೆ **'ಓಂ' 'ತತ್' 'ಸತ್'** (೧೭/೨೩). ನಾಮ-ನಾಮಿಯ ಸಂಬಂಧವಾದ್ದರಿಂದ ಇದೂ ಸಗುಣವೇ ಆಯಿತು.

—●—

ಸಂಬಂಧ - ಈಗ ಭಗವಂತನು ಕರ್ಮಯೋಗಿಯ ಕರ್ಮಮಾಡುವ ಶೈಲಿಯನ್ನು ಹೇಳುತ್ತಾನೆ —

ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ ।
ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ ॥ ೧೧॥

ಯೋಗಿನಃ - ಕರ್ಮಯೋಗಿಗಳು, **ಸಂಗಮ್** - ಆಸಕ್ತಿಯನ್ನು, **ತ್ಯಕ್ತ್ವಾ** - ತ್ಯಜಿಸಿ, **ಕೇವಲೈಃ** - ಕೇವಲ (ಮಮತಾರಹಿತರಾಗಿ), **ಇಂದ್ರಿಯೈಃ** - ಇಂದ್ರಿಯಗಳು, **ಕಾಯೇನ** - ಶರೀರ, **ಮನಸಾ** - ಮನಸ್ಸು (ಮತ್ತು), **ಬುದ್ಧ್ಯಾ** - ಬುದ್ಧಿಯ ಮೂಲಕ, **ಆತ್ಮಶುದ್ಧಯೇ**, **ಅಪಿ** - ಅಂತಃಕರಣದ ಶುದ್ಧಿಗಾಗಿಯೇ, **ಕರ್ಮ** - ಕರ್ಮ, **ಕುರ್ವಂತಿ** - ಮಾಡುತ್ತಾರೆ. ॥ ೧೧॥

ಕರ್ಮಯೋಗಿಗಳು ಆಸಕ್ತಿಯನ್ನು ತ್ಯಜಿಸಿ ಕೇವಲ ಮಮತಾರಹಿತರಾಗಿ, ಇಂದ್ರಿಯಗಳು, ಶರೀರ, ಮನ, ಬುದ್ಧಿ ಇವುಗಳ ಮೂಲಕ ಅಂತಃಕರಣದ ಶುದ್ಧಿಗಾಗಿಯೇ ಕರ್ಮಮಾಡುತ್ತಾರೆ. ॥ ೧೧॥

ವ್ಯಾಖ್ಯಾ - **'ಯೋಗಿನಃ'** ಪದವು ಕರ್ಮಯೋಗಿಗಾಗಿ ಬಂದಿದೆ. ಭಗವದರ್ಪಣ ಬುದ್ಧಿಯಿಂದ ಕರ್ಮಮಾಡುವ ಯೋಗಿಗಳಿಗೆ ಭಕ್ತಿಯೋಗಿ ಎಂದು ಹೇಳುತ್ತಾರೆ. ಆದರೆ ಕೇವಲ ಪ್ರಪಂಚದ ಸೇವೆಗಾಗಿ ನಿಷ್ಕಾಮ ಭಾವಪೂರ್ವಕ ಕರ್ಮಮಾಡುವವರನ್ನು ಕರ್ಮಯೋಗಿ ಎಂದು ಹೇಳುತ್ತಾರೆ. ಕರ್ಮಯೋಗಿಯು ತನ್ನದೆಂದು ಹೇಳಿಕೊಳ್ಳುವ ಶರೀರ, ಇಂದ್ರಿಯಗಳು, ಮನಸ್ಸು ಇತ್ಯಾದಿಗಳಿಂದ ಕರ್ಮ ಮಾಡುತ್ತಿದ್ದರೂ ಅವನ್ನು ತನ್ನದೆಂದು ತಿಳಿಯದೆ ಪ್ರಪಂಚದ್ದೆಂದೇ ತಿಳಿಯುತ್ತಾನೆ. ಕಾರಣ – ಶರೀರಾದಿಗಳ ಏಕತೆ ಪ್ರಪಂಚದೊಂದಿಗೆ ಇದೆ.

'ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ' – ಯಾವುದನ್ನು ಸಾಧಾರಣ ಮನುಷ್ಯರು ತಮ್ಮದೆಂದು ಹೇಳುತ್ತಾರೋ ಆ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ ನಿಜವಾಗಿ ಯಾವುದೇ ದೃಷ್ಟಿಯಿಂದ ನಮ್ಮದಾಗಿರದೆ ನಮಗೆ ದೊರೆತುದಾಗಿವೆ ಮತ್ತು ಅಗಲುವಂತಹುದಾಗಿವೆ. ಇವನ್ನು ತನ್ನದೆಂದು ತಿಳಿಯುವುದು ಸರ್ವಥಾ ಅಜ್ಞಾನವಾಗಿದೆ. ಇವೆಲ್ಲಕ್ಕೆ ಪ್ರಪಂಚದೊಂದಿಗೆ ಸ್ವತಃಸಿದ್ಧ ಏಕತೆ ಇದೆ.

ವಿಚಾರಪೂರ್ವಕ ನೋಡಿದರೆ ಶರೀರಾದಿ ಪದಾರ್ಥಗಳು ಯಾವುದೇ ದೃಷ್ಟಿಯಿಂದಲೂ ನಮ್ಮದಾಗಿಲ್ಲ. ಯಜಮಾನಿಕೆಯ ದೃಷ್ಟಿಯಿಂದ ನೋಡಿದರೆ ಇವು ಭಗವಂತನದ್ದಾಗಿವೆ. ಕಾರಣದ ದೃಷ್ಟಿಯಿಂದ ನೋಡಿದರೆ ಇವು ಪ್ರಕೃತಿಯಾಗಿವೆ ಕಾರ್ಯದ ದೃಷ್ಟಿಯಿಂದ ನೋಡಿದರೆ ಇವು ಪ್ರಪಂಚದ್ದು (ಪ್ರಪಂಚದಿಂದ ಅಭಿನ್ನ) ಆಗಿವೆ. ಈ ಪ್ರಕಾರ ಯಾವುದೇ ದೃಷ್ಟಿಯಿಂದ ಇವುಗಳನ್ನು ನಮ್ಮದೆಂದು ತಿಳಿಯುವುದು, ಇವುಗಳಲ್ಲಿ ಮಮತೆ ಇಡುವುದು ತಪ್ಪಾಗಿದೆ. ಮಮತೆಯನ್ನು ಸರ್ವಥಾ ಇಲ್ಲವಾಗಿಸಲೆಂದೇ ಇಲ್ಲಿ **'ಕೇವಲೈಃ'** ಪದ ಉಪಯೋಗವಾಗಿದೆ.

ಇಲ್ಲಿ **'ಕೇವಲೈಃ'** ಪದವು ಬಹುವಚನವಾದ್ದರಿಂದ ಇಂದ್ರಿಯಗಳದ್ದೇ ವಿಶೇಷಣವಾಗಿದೆ; ಆದರೆ ಇಂದ್ರಿಯಗಳಿಂದಲೇ ಮಮತೆಯನ್ನು ದೂರವಾಗಿಸಲು ಹೇಳಲಾದರೆ, ಶರೀರ, ಮನ, ಬುದ್ಧಿಗಳಿಂದ ಅಲ್ಲ ಹೀಗೆ ಸಂಭವವೇ ಇಲ್ಲ. ಶರೀರಾದಿಗಳ ಸಂಬಂಧ ಸಮಷ್ಟಿ ಪ್ರಪಂಚದೊಂದಿಗೆ ಇದೆ. ವ್ಯಷ್ಟಿಯು ಎಂದೂ ಸಮಷ್ಟಿಯಿಂದ ಬೇರೆಯಾಗಲಾರದು. ಅದಕ್ಕಾಗಿ ವ್ಯಷ್ಟಿ (ಶರೀರಾದಿ)ಯಿಂದ ಸಂಬಂಧ ಜೋಡಿಸಿದಾಗ ಸಮಷ್ಟಿ (ಪ್ರಪಂಚ)ಯೊಂದಿಗೆ ತನ್ನಿಂದ ತಾನೇ ಸಂಬಂಧ ಬೆಳೆಯುತ್ತದೆ. ಮಗಳ ವಿವಾಹವಾದಾಗ ಅರ್ಥಾತ್ ಸಂಬಂಧ ಬೆಳೆದಾಗ ಅವಳ ಅತ್ತೆ-ಮಾವ ಮುಂತಾದ ಗಂಡನ ಮನೆಯವರೆಲ್ಲರ ಸಂಬಂಧ ತಾನಾಗಿ

* **ವದಂತಿ ತತ್ತತ್ತ್ವವಿದಸ್ತತ್ತ್ವಂ ಯಜ್ಜ್ಞಾನಮದ್ವಯಮ್। ಬ್ರಹ್ಮೇತಿ ಪರಮಾತ್ಮೇತಿ ಭಗವಾನಿತಿ ಶಬ್ದ್ಯತೇ॥** (೧/೨/೧೧).

ಬೆಳೆಯುತ್ತದೆ, ಹಾಗೆಯೇ ಪ್ರಪಂಚದ ಯಾವುದೇ ವಸ್ತು (ಶರೀರಾದಿ)ಗಳೊಂದಿಗೆ ಸಂಬಂಧ ಬೆಳೆದಾಗ ಅರ್ಥಾತ್ – ಅವನ್ನು ತನ್ನದೆಂದು ತಿಳಿದಾಗ ಇಡೀ ಪ್ರಪಂಚದೊಂದಿಗೆ ಸಂಬಂಧ ತಾನಾಗಿ ಬೆಳೆಯುತ್ತದೆ. ಆದ್ದರಿಂದ ಇಲ್ಲಿ **'ಕೇವಲೈಃ'** ಪದವು ಶರೀರ, ಇಂದ್ರಿಯಗಳು, ಮನ, ಬುದ್ಧಿ ಎಲ್ಲದರಲ್ಲಿಯೂ ಸಾಧಕನು ಮಮತೆಯನ್ನು ದೂರವಾಗಿಸುವ ಪ್ರೇರಣೆ ಮಾಡುತ್ತದೆ.*

ನಿಜವಾಗಿ ಕರ್ತೃವು ಸ್ವತಃ ನಿರ್ಮಮನಾಗುವುದು ಆವಶ್ಯಕವಾಗಿದೆ. ಕರ್ತೃವು ಸ್ವಯಂ ನಿರ್ಮಮನಾದರೆ ಶರೀರ, ಇಂದ್ರಿಯ, ಮನಸ್ಸು, ಬುದ್ಧಿ ಇತ್ಯಾದಿಗಳೆಲ್ಲದರ ಮಮತೆ ಸರ್ವಥಾ ಇಲ್ಲವಾಗುತ್ತದೆ. ಕಾರಣ – ನಿಜವಾಗಿ ಶರೀರ ಇಂದ್ರಿಯಾದಿಗಳು ಸ್ವರೂಪದಿಂದ ಸರ್ವಥಾ ಭಿನ್ನವಾಗಿವೆ; ಆದ್ದರಿಂದ ಇವುಗಳಲ್ಲಿ ಮಮತೆಯನ್ನು ಕೇವಲ ಒಪ್ಪಿಕೊಂಡ ದ್ದಾಗಿದೆ. ನಿಜವಾಗಿ ಇಲ್ಲವೇ ಇಲ್ಲ.

ಕರ್ಮಯೋಗದ ಸಾಧನೆಯಲ್ಲಿ ಫಲದ ಇಚ್ಛೆಯ ತ್ಯಾಗ ಮುಖ್ಯವಾಗಿದೆ. (೫/೧೨) ಸಾಧಾರಣ ಜನರು ಫಲದ ಪ್ರಾಪ್ತಿಗಾಗಿ ಕರ್ಮಮಾಡುತ್ತಾರೆ, ಆದರೆ ಕರ್ಮಯೋಗಿಯು ಫಲದ ಆಸಕ್ತಿಯನ್ನು ಇಲ್ಲವಾಗಿಸಲು ಕರ್ಮಮಾಡುತ್ತಾನೆ. ಆದರೆ ಶರೀರ, ಇಂದ್ರಿಯಗಳು, ಮನ, ಬುದ್ಧಿ ಪ್ರಾಣ ಇತ್ಯಾದಿಗಳನ್ನು ತನ್ನದೆಂದು ತಿಳಿಯುತ್ತಾ ಇರುವವನು ಫಲದ ಇಚ್ಛೆಯನ್ನು ತ್ಯಾಗಮಾಡಲಾರನು.+ ಕಾರಣ – ಅವನಲ್ಲಿ ಶರೀರಾದಿಗಳು ನನ್ನದೇ ಆಗಿದ್ದರೆ ಅವುಗಳಿಂದ ಮಾಡಲಾದ ಕರ್ಮಗಳ ಫಲವೂ ನನಗೆ ಸಿಗಬೇಕು ಎಂಬ ಭಾವ ವಿರುತ್ತದೆ. ಈ ಪ್ರಕಾರ ಶರೀರಾದಿಗಳನ್ನು ನನ್ನವು ಎಂದು ತಿಳಿಯುವುದರಿಂದ ತಾನಾಗಿ ಫಲದ ಇಚ್ಛೆ ಉಂಟಾಗುತ್ತದೆ. ಅದಕ್ಕಾಗಿ ಫಲದ ಇಚ್ಛೆಯನ್ನು ಇಲ್ಲವಾಗಿಸಲು ಶರೀರಾದಿಗಳನ್ನು ನನ್ನವು ಎಂಬುದಾಗಿ ಎಂದಿಗೂ ತಿಳಿಯದಿರುವುದು ಅತ್ಯಂತ ಆವಶ್ಯಕವಾಗಿದೆ.

'ಕೇವಲೈಃ' ಪದದ ತಾತ್ಪರ್ಯ – ಮಳೆ ಸುರಿಯುವುದರಿಂದ ಜನರಿಗೆ ಹಿತವಾಗುತ್ತದೆ; ಆದರೆ 'ನಾನು ನೀರನ್ನು ಸುರಿಸುತ್ತೇನೆ ಅದರಿಂದ ಬೇರೆಯವರ ಹಿತವಾದೀತು, ಬೇರೆಯವರಿಗೆ ಸುಖವಾದೀತು' ಎಂಬ ಭಾವ ಮಳೆಗೆ ಇರುವುದಿಲ್ಲ. ಹೀಗೆಯೇ ಇಂದ್ರಿಯಾದಿಗಳ ಮೂಲಕ ಆಗುವ ಹಿತದಲ್ಲಿಯೂ ತನ್ನತನ ತಿಳಿಯಬಾರದು. ಆದರೆ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ ಇವುಗಳ ಮೂಲಕ ಯಾರಿಗಾದರು ಅಭೀಷ್ಟ ಈಡೇರಿತು, ಯಾರಿಗೋ ಬಯಸಿದ ಮಾತು ನಡೆಯಿತು – ಈ ಕ್ರಿಯೆಗಳಿಂದ ತನ್ನ ಮನಸ್ಸಿನಲ್ಲಿ ಸಂತೋಷವಾದರೆ ಮನ, ಬುದ್ಧಿ ಇತ್ಯಾದಿಗಳಲ್ಲಿ ಕೇವಲತನ ಉಳಿಯದೆ ಅದರೊಂದಿಗೆ ಸಂಬಂಧ ಬೆಳೆದುಹೋಯಿತು, ಮಮತೆ ಉಂಟಾಯಿತು.

'ಸಂಗಂ ತ್ಯಕ್ತ್ವಾತ್ಮಶುದ್ಧಯೇ' – [ಹಿಂದಿನ ೧೦ನೇ ಶ್ಲೋಕದಲ್ಲಿಯೂ **'ಸಂಗಂ ತ್ಯಕ್ತ್ವಾ'** ಪದಗಳು ಬಂದಿವೆ; ಆದ್ದರಿಂದ ಇದರ ವ್ಯಾಖ್ಯೆ ಅಲ್ಲೇ ನೋಡಬೇಕು.]

ಸಾಧಾರಣವಾಗಿ ಮಲ, ವಿಕ್ಷೇಪ, ಆವರಣ ದೋಷಗಳು ದೂರವಾಗಲು, ಅಂತಃಕರಣದ ಶುದ್ಧಿಯೆಂದು ತಿಳಿಯಲಾಗುತ್ತದೆ. ಆದರೆ ವಾಸ್ತವವಾಗಿ ಶರೀರ, ಇಂದ್ರಿಯ, ಮನ, ಬುದ್ಧಿಯಿಂದ ಮಮತೆಯು ಸರ್ವಥಾ ಇಲ್ಲವಾಗುವುದೇ ಅಂತಃಕರಣದ ಶುದ್ಧಿಯಾಗಿದೆ. 'ನಾವು ನಿನ್ನವು, ನೀನು ನಮ್ಮವನಾಗಿರುವೆ' ಎಂದು ಎಂದಿಗೂ ಶರೀರಾದಿಗಳು – ಹೇಳುವುದಿಲ್ಲ, ನಾವೇ ಅವುಗಳನ್ನು ನಮ್ಮವು ಎಂದು ತಿಳಿಯುತ್ತೇವೆ. ಅವುಗಳನ್ನು ತನ್ನವು ಎಂದು ತಿಳಿಯುವುದೇ ಅಶುದ್ಧಿಯಾಗಿದೆ – **'ಮಮತಾ ಮಲ ಜರಿ ಜಾಇ'** (ಮಾನಸ –೭/೧೧೭ಕ). ಆದ್ದರಿಂದ ಶರೀರಾದಿಗಳ ಕುರಿತು ಅಹಂತೆ, ಮಮತೆ ಪೂರ್ವಕ ಒಪ್ಪಿಕೊಂಡ ಸಂಬಂಧವನ್ನು ಸರ್ವಥಾ ಅಭಾವವಾಗಿಸುವುದೇ ಆತ್ಮಶುದ್ಧಿಯಾಗಿದೆ.

ಈ ಶ್ಲೋಕದಲ್ಲಿ ಬಂದಿರುವ **'ಕೇವಲೈಃ'** ಪದದಿಂದ ಶರೀರ, ಇಂದ್ರಿಯಗಳು, ಮನ-ಬುದ್ಧಿಗಳನ್ನು ತನ್ನವು ಎಂದು ತಿಳಿಯದಿರುವ ಮಾತು ಬಂದಿದೆ. **'ಕೇವಲೈಃ'** ಪದದಲ್ಲಿ ತನ್ನತನ ದೂರವಾಗಿಸುವ ಉದ್ದೇಶವಿದೆ ಮತ್ತು **'ಆತ್ಮಶುದ್ಧಯೇ'** ಪದದಲ್ಲಿ ತನ್ನತನವನ್ನು ಸರ್ವಥಾ ದೂರವಾಗಿಸುವ ಮಾತು ಬಂದಿದೆ. ತಾತ್ಪರ್ಯ – ಅಂತಃಕರಣದ ಶುದ್ಧಿಗಾಗಿ (ತನ್ನತನವನ್ನು ಸರ್ವಥಾ ದೂರವಾಗಿಸುವ ಉದ್ದೇಶದಿಂದ) ಶರೀರ, ಇಂದ್ರಿಯಗಳು, ಮನ, ಬುದ್ಧಿಗಳನ್ನು ತನ್ನವು ಎಂದು ತಿಳಿಯದಿದ್ದರೂ ಇವುಗಳಲ್ಲಿ ಸೂಕ್ಷ್ಮ ತನ್ನತನ ಉಳಿದುಬಿಡುತ್ತದೆ. ಆ ಸೂಕ್ಷ್ಮ ತನ್ನತನವನ್ನು ಸರ್ವಥಾ ಅಳಿಸುವುದೇ ಆತ್ಮಶುದ್ಧಿ ಅರ್ಥಾತ್ ಅಂತಃಕರಣದ ಶುದ್ಧಿಯಾಗಿದೆ.

ಅಹಂತೆಯಲ್ಲಿಯೂ ಮಮತೆ ಇರುತ್ತದೆ. ಮಮತೆಯು ಸರ್ವಥಾ ಅಳಿದುಹೋಗಿ ಅಹಂತೆಯಲ್ಲಿಯೂ ಮಮತೆ ಉಳಿಯದಿದ್ದಾಗ ಸರ್ವಥಾ ಶುದ್ಧಿಯಾಗುತ್ತದೆ.

'ಕರ್ಮ ಕುರ್ವಂತಿ' – ಶರೀರ, ಇಂದ್ರಿಯಗಳು, ಮನ, ಬುದ್ಧಿಗಳಲ್ಲಿ ತನ್ನತನವೆನ್ನು ಸರ್ವಥಾ ದೂರವಾಗಿಸಲು ಕರ್ಮಯೋಗಿಯು ಕರ್ಮಗಳನ್ನು ಮಾಡುತ್ತಾನೆ.

---

* ಇಲ್ಲಿ **'ಅರ್ಥವಶಾದ್ ವಿಭಕ್ತಿ ಪರಿಣಾಮಃ'** ಇದಕ್ಕನುಸಾರ **'ಕೇವಲೈಃ'** ಪದದ ವಿಭಕ್ತಿಯ ಪರಿಣಾಮಮಾಡಿಕೊಳ್ಳಬೇಕು, ಅರ್ಥಾತ್ – 'ಕೇವಲೇನ ಕಾಯೇನ' 'ಕೇವಲೇನ ಮನಸಾ' 'ಕೇವಲಯಾ ಬುದ್ಧ್ಯಾ' ಈ ಪ್ರಕಾರ ವಿಭಕ್ತಿಯನ್ನು ಬದಲಿಸಿಕೊಳ್ಳಬೇಕು.

+ ಮನುಷ್ಯನು ಫಲವನ್ನು ಇಚ್ಛಿಸದಿದ್ದರೂ ಶರೀರಾದಿಗಳನ್ನು ತನ್ನದೆಂದು ತಿಳಿಯುವುದರಿಂದ ಅವನು ಕರ್ಮಫಲದ ಹೇತುವಾಗುತ್ತಾನೆ. ಅದನ್ನು ಭಗವಂತನು ನಿಷೇಧ ಮಾಡಿರುವನು – **'ಮಾ ಕರ್ಮಫಲಹೇತುರ್ಭೂಃ'** (೨/೪೭).

ಮನುಷ್ಯನು ಕರ್ಮಮಾಡುತ್ತಿರುವಾಗ ತನಗಾಗಿ ಯಾವುದೇ ಪ್ರಕಾರದ ಸುಖವನ್ನು ಬಯಸುವವರೆಗೆ ಅರ್ಥಾತ್ -ಯಾವುದೇ ಫಲದ ಇಚ್ಛೆಯನ್ನು ಇರಿಸಿಕೊಂಡು, ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿ ಕರ್ಮ ಸಾಮಗ್ರಿಯನ್ನು ತನ್ನದೆಂದು ತಿಳಿಯುವವರೆಗೆ ಅವನು ಕರ್ಮಬಂಧನದಿಂದ ಮುಕ್ತನಾಗಲಾರನು. ಅದಕ್ಕಾಗಿ ಕರ್ಮಯೋಗಿಯು ಫಲದ ಇಚ್ಛೆಯನ್ನು ತ್ಯಾಗಗೈದು, ಕರ್ಮ ಸಾಮಗ್ರಿಯನ್ನು ತನ್ನದೆಂದು ತಿಳಿಯದೆ ಕೇವಲ ಬೇರೆಯವರ ಹಿತಕ್ಕಾಗಿ ಕರ್ಮಮಾಡುತ್ತಾನೆ. ಕಾರಣ – ಯೋಗಾರೂಢನಾಗುವ ಇಚ್ಛೆಯುಳ್ಳ ಮನನಶೀಲ ಯೋಗಿಗೆ (ಬೇರೆಯವರಿಗಾಗಿ) ಕರ್ಮ ಮಾಡುವುದೇ ಕಾರಣವೆಂದು ಹೇಳಲಾಗುತ್ತದೆ – **'ಆರುರುಕ್ಷೋ ರ್ಮುನಿರ್ಯೋಗಂ ಕರ್ಮ ಕಾರಣಮುಚ್ಯತೇ'** (೬/೩). ಈ ಪ್ರಕಾರ ಬೇರೆಯವರ ಹಿತಕ್ಕಾಗಿ ಅವನು ಹೇಗೆ-ಹೇಗೆ ಕರ್ಮ ಮಾಡುತ್ತಾನೋ ಹಾಗೆ-ಹಾಗೇ ಮಮತಾ ಆಸಕ್ತಿ ಇಲ್ಲವಾಗುತ್ತಾ ಹೋಗುತ್ತದೆ ಮತ್ತು ಅಂತಃಕರಣದ ಶುದ್ಧಿ ಆಗುತ್ತಾ ಹೋಗುತ್ತದೆ.

ಪರಿಶಿಷ್ಟ ಭಾವ – ಶುದ್ಧ ಮಾಡುವುದರಿಂದ ಅಂತಃಕರಣವು ಶುದ್ಧವಾಗುವುದಿಲ್ಲ; ಏಕೆಂದರೆ, ಶುದ್ಧ ಮಾಡುವುದರಿಂದ ಅಂತಃಕರಣದ ಜೊತೆಗೆ ಸಂಬಂಧ ಇದ್ದುಕೊಂಡಿರುತ್ತದೆ. 'ನನ್ನ ಅಂತಃಕರಣ ಶುದ್ಧವಾಗಲಿ' ಈ ಭಾವ ಇರುವವರೆಗೆ ಅಂತಃಕರಣದ ಶುದ್ಧಿ ಆಗಲಾರದು; ಏಕೆಂದರೆ, ಮಮತೆಯೇ ಮುಖ್ಯ ಅಶುದ್ಧಿ ಯಾಗಿದೆ. ಇದಕ್ಕಾಗಿ ರಾಮಾಯಣದಲ್ಲಿ– **'ಮಮತಾ ಮಲ ಜರಿ ಜಾಇ'** (ಮಾನಸ – ಉತ್ತರ ೧೧೭ಕ). ಭಗವಂತನೂ ಇಲ್ಲಿ **'ಕೇವಲೈಃ'** ಪದದಿಂದ ಅಂತಃಕರಣದೊಂದಿಗೆ ಮಮತೆ ಇಡದಿರುವ ಮಾತನ್ನು ಹೇಳಿರುವನು. ಶರೀರ, ಇಂದ್ರಿಯಗಳು, ಮನ, ಬುದ್ಧಿಗಳಲ್ಲಿ ಮಮತೆಯು ಸರ್ವಥಾ ಅಭಾವವಾಗುವುದೇ ಅಂತಃಕರಣದ ಶುದ್ಧಿಯಾಗಿದೆ. ಆದ್ದರಿಂದ ಅಂತಃಕರಣದಲ್ಲಿ ಮಮತೆ (ತನ್ನತನ) ಸರ್ವಥಾ ಇಲ್ಲವಾಗುವ ಉದ್ದೇಶದಿಂದ ಕರ್ಮಯೋಗಿಗಳು ಅನಾಸಕ್ತಭಾವದಿಂದ ಕರ್ಮಮಾಡುತ್ತಾರೆ. ಅವರು ತಮಗಾಗಿ ಯಾವ ಕರ್ಮವನ್ನು ಮಾಡುವುದಿಲ್ಲ. ಕಾರಣ-ಮಮತೆ ಇರುವುದರಿಂದ ಕರ್ಮಗಳಾಗುತ್ತವೆ ಕರ್ಮಯೋಗ ಆಗುವುದಿಲ್ಲ. ತನಗಾಗಿ ಯಾವುದೇ ಕರ್ಮಮಾಡದಿರುವುದರಿಂದ ಕರ್ಮಯೋಗಿಯ ಗತಿ ಸ್ವರೂಪದ ಕಡೆ ಉಂಟಾಗುತ್ತದೆ.

ಕರ್ಮಯೋಗಿಯು ಮೊದಲಿಗೆ ಮಮತಾ ರಹಿತನಾಗುವ ಉದ್ದೇಶವಿಟ್ಟುಕೊಂಡು ಕರ್ಮಮಾಡುತ್ತಾನೆ, ಮತ್ತೆ ಅವನ ಉದ್ದೇಶದ ಸಿದ್ಧಿ ಆಗಿಹೋಗುತ್ತದೆ.

–●–

ಸಂಬಂಧ - ಈಗ ಭಗವಂತನು ಮುಂದಿನ ಶ್ಲೋಕದಲ್ಲಿ ಅನ್ವಯ ಮತ್ತು ವ್ಯತಿರೇಕ-ರೀತಿಯಿಂದ ಕರ್ಮಯೋಗದ ಮಹಿಮೆಯನ್ನು ವರ್ಣಿಸುತ್ತಾನೆ —

ಯುಕ್ತಃ ಕರ್ಮಫಲಂ ತ್ಯಕ್ತ್ವಾ ಶಾಂತಿಮಾಪ್ನೋತಿ ನೈಷ್ಠಿಕೀಮ್ ।
ಅಯುಕ್ತಃ ಕಾಮಕಾರೇಣ ಫಲೇ ಸಕ್ತೋ ನಿಬಧ್ಯತೇ ॥ ೧೨॥

ಯುಕ್ತಃ - ಕರ್ಮಯೋಗಿಯು, **ಕರ್ಮಫಲಮ್** - ಕರ್ಮಫಲವನ್ನು, **ತ್ಯಕ್ತ್ವಾ** - ತ್ಯಾಗಮಾಡಿ, **ನೈಷ್ಠಿಕೀಮ್** - ನೈಷ್ಠಿಕೀ, **ಶಾಂತಿಮ್** - ಶಾಂತಿಯನ್ನು, **ಆಪ್ನೋತಿ** - ಪಡೆಯುತ್ತಾನೆ (ಆದರೆ), **ಅಯುಕ್ತಃ** - ಸಕಾಮ ಮನುಷ್ಯನು, **ಕಾಮಕಾರೇಣ** - ಕಾಮನೆಯ ಕಾರಣ, **ಫಲೇ** - ಫಲದಲ್ಲಿ, **ಸಕ್ತಃ** - ಆಸಕ್ತನಾಗಿ, **ನಿಬಧ್ಯತೇ** - ಬಂಧಿತನಾಗುತ್ತಾನೆ. ॥ ೧೨॥

ಕರ್ಮಯೋಗಿಯು ಕರ್ಮಫಲವನ್ನು ತ್ಯಾಗಮಾಡಿ ನೈಷ್ಠಿಕೀ ಶಾಂತಿಯನ್ನು ಪಡೆಯುತ್ತಾನೆ. ಆದರೆ ಸಕಾಮ ಮನುಷ್ಯನು ಕಾಮನೆಯ ಕಾರಣ ಫಲದಲ್ಲಿ ಆಸಕ್ತನಾಗಿ ಬಂಧಿತನಾಗುತ್ತಾನೆ. ॥ ೧೨॥

ವ್ಯಾಖ್ಯಾ - **'ಯುಕ್ತಃ'** ಈ ಪದದ ಅರ್ಥ ಪ್ರಸಂಗಕ್ಕನುಸಾರ ತೆಗೆದುಕೊಳ್ಳಲಾಗುತ್ತದೆ. ಇದೇ ಅಧ್ಯಾಯದ ೮ನೇ ಶ್ಲೋಕದಲ್ಲಿ ತನ್ನನ್ನು ಅಕರ್ತಾ ಎಂದು ತಿಳಿಯುವ ಸಾಂಖ್ಯಯೋಗಿಗಾಗಿ **'ಯುಕ್ತಃ'** ಪದ ಬಂದಿದೆ, ಹಾಗೆಯೇ ಇಲ್ಲಿ ಕರ್ಮಫಲದ ತ್ಯಾಗಮಾಡುವ ಕರ್ಮಯೋಗಿಯ ಕುರಿತು **'ಯುಕ್ತಃ'** ಪದವು ಬಂದಿದೆ.

'ಸಮತೆ' ಯ ಉದ್ದೇಶವಿರುವ ಎಲ್ಲ ಪುರುಷರು ಯುಕ್ತ ಅರ್ಥಾತ್ ಯೋಗಿಗಳಾಗಿದ್ದಾರೆ. ಇಲ್ಲಿ ಕರ್ಮ ಯೋಗಿಯ ಪ್ರಕರಣ ನಡೆಯುತ್ತಿದೆ, ಅದಕ್ಕಾಗಿ ಇಲ್ಲಿ **'ಯುಕ್ತಃ'** ಪದವು ಇಂತಹ ಕರ್ಮಯೋಗಿಗಾಗಿ ಬಂದಿದೆ. ಅವನ ಬುದ್ಧಿಯು ವ್ಯವಸಾಯಾತ್ಮಿಕಾ ಆದ್ದರಿಂದ ಅವನಲ್ಲಿ ಸಾಂಸಾರಿಕ ಕಾಮನೆಗಳ ಅಭಾವವಿರುತ್ತದೆ.

'ಕರ್ಮಫಲಂ ತ್ಯಕ್ತ್ವಾ'– ಇಲ್ಲಿ ಕರ್ಮಫಲದ ತ್ಯಾಗ ಮಾಡುವ ತಾತ್ಪರ್ಯ– ಫಲದ ಇಚ್ಛೆ, ಆಸಕ್ತಿಯ ತ್ಯಾಗ ಮಾಡುವುದಾಗಿದೆ; ಏಕೆಂದರೆ ನಿಜವಾದ ತ್ಯಾಗವು ಕರ್ಮ ಫಲದ್ದಾಗಿರದೆ ಕರ್ಮಫಲದ ಇಚ್ಛೆಯದಾಗಿರುತ್ತದೆ. ಕರ್ಮಫಲದ ಇಚ್ಛೆಯ ತ್ಯಾಗಮಾಡುವ ಅರ್ಥ – ಯಾವುದೇ ಕರ್ಮ ಮತ್ತು ಕರ್ಮಫಲದಿಂದ ತನಗಾಗಿ ಎಂದೂ

ಕಿಂಚಿತ್ತಾದರೂ ಯಾವುದೇ ಪ್ರಕಾರದ ಸುಖ ಪಡೆಯುವ ಇಚ್ಛೆ ಇರಿಸದಿರುವುದು. ಕರ್ಮಮಾಡುವುದರಿಂದ ಒಂದು ತಾತ್ಕಾಲಿಕ ಫಲ(ಸುಖ)ಸಿಗುತ್ತದೆ ಮತ್ತೊಂದು ಪರಿಣಾಮದಲ್ಲಿ ಫಲ ಸಿಗುತ್ತದೆ – ಇವೆರಡೂ ಫಲಗಳ ಇಚ್ಛೆಯನ್ನು ತ್ಯಾಗಮಾಡುವುದಾಗಿದೆ. ತನ್ನದು ಏನೂ ಇಲ್ಲ, ತನಗಾಗಿ ಏನನ್ನೂ ಮಾಡುವುದಿಲ್ಲ ಮತ್ತು ತನಗೆ ಏನೂ ಬೇಡ – ಈ ಪ್ರಕಾರ ಕರ್ತೃವು ಸರ್ವಥಾ ನಿಷ್ಕಾಮನಾದಾಗ ಕರ್ಮಫಲದ ಇಚ್ಛೆಯ ತ್ಯಾಗವಾಗುತ್ತದೆ.

ಸಂಚಿತ-ಕರ್ಮಗಳನುಸಾರ ಪ್ರಾರಬ್ಧ ಉಂಟಾಗುತ್ತದೆ, ಪ್ರಾರಬ್ಧಕ್ಕನುಸಾರ ಮನುಷ್ಯನ ಜನ್ಮವಾಗುತ್ತದೆ ಮತ್ತು ಮನುಷ್ಯಜನ್ಮದಲ್ಲಿ ಹೊಸ ಕರ್ಮಗಳಾದ್ದರಿಂದ ಹೊಸ ಕರ್ಮ ಸಂಸ್ಕಾರಗಳು ಸಂಚಿತವಾಗುತ್ತವೆ. ಆದರೆ ಕರ್ಮಫಲದ ಆಸಕ್ತಿಯ ತ್ಯಾಗಗೈದು ಕರ್ಮ ಮಾಡುವುದರಿಂದ ಕರ್ಮಗಳು ಹುರಿದ ಬೀಜದಂತೆ ಸಂಸ್ಕಾರ ಉಂಟುಮಾಡಲು ಅಸಮರ್ಥವಾಗುತ್ತವೆ ಮತ್ತು ಅವುಗಳ ಸಂಜ್ಞೆ 'ಅಕರ್ಮ' ಆಗುತ್ತದೆ (೪/೨೦). ವರ್ತಮಾನದಲ್ಲಿ ನಿಷ್ಕಾಮಭಾವ ಪೂರ್ವಕ ಮಾಡಲಾದ ಕರ್ಮಗಳ ಪ್ರಭಾವದಿಂದ ಅವನ ಹಳೆಯ ಕರ್ಮ ಸಂಸ್ಕಾರಗಳೂ (ಸಂಚಿತ-ಕರ್ಮ ಕೂಡ ಮುಗಿದು ಹೋಗುತ್ತವೆ (೪/೨೩). ಈ ಪ್ರಕಾರ ಅವನ ಪುನರ್ಜನ್ಮದ ಕಾರಣವೂ ಮುಗಿದು ಹೋಗುತ್ತದೆ.

ಕರ್ಮಫಲಗಳು ನಾಲ್ಕು ಪ್ರಕಾರವಾಗಿವೆ –

(೧) **ದೃಷ್ಟ ಕರ್ಮಫಲ** – ವರ್ತಮಾನದಲ್ಲಿ ಮಾಡಲಾದ ಹೊಸ ಕರ್ಮಗಳ ಫಲ. ಅದು ತತ್ಕಾಲ ಪ್ರತ್ಯಕ್ಷ ಸಿಕ್ಕಿದಂತೆ ಕಾಣುತ್ತದೆ; ಊಟ ಮಾಡಿದಾಗ ತೃಪ್ತಿಯಾಗುವುದು ಇತ್ಯಾದಿ.

(೨) **ಅದೃಷ್ಟ ಕರ್ಮಫಲ** – ವರ್ತಮಾನದಲ್ಲಿ ಮಾಡಲಾದ ಹೊಸ ಕರ್ಮಗಳ ಫಲ. ಅದು ಈಗಲಾದರೋ ಸಂಚಿತರೂಪದಿಂದ ಸಂಗ್ರಹವಾಗುತ್ತದೆ, ಆದರೆ ಭವಿಷ್ಯದಲ್ಲಿ ಈ ಲೋಕ ಮತ್ತು ಪರ ಲೋಕದಲ್ಲಿ ಅನುಕೂಲತೆ ಅಥವಾ ಪ್ರತಿಕೂಲತೆಯ ರೂಪದಲ್ಲಿ ಸಿಗುವುದು.

(೩) **ಪ್ರಾಪ್ತ ಕರ್ಮಫಲ** – ಪ್ರಾರಬ್ಧಕ್ಕನುಸಾರ ವರ್ತಮಾನದಲ್ಲಿ ದೊರೆತ ಶರೀರ, ಜಾತಿ, ವರ್ಣ, ಧನ, ಸಂಪತ್ತು ಅನುಕೂಲ ಅಥವಾ ಪ್ರತಿಕೂಲ ಪರಿಸ್ಥಿತಿ ಇತ್ಯಾದಿ.

(೪) **ಅಪ್ರಾಪ್ತ ಕರ್ಮಫಲ** – ಪ್ರಾರಬ್ಧ-ಕರ್ಮದ ಫಲರೂಪದಲ್ಲಿ ಅನುಕೂಲ ಅಥವಾ ಪ್ರತಿಕೂಲ ಪರಿಸ್ಥಿತಿ ಭವಿಷ್ಯದಲ್ಲಿ ಸಿಗುವಂತಹುದು.

ಮೇಲೆ ಹೇಳಿದ ನಾಲ್ಕು ಪ್ರಕಾರದ ಕರ್ಮಫಲಗಳಲ್ಲಿ ದೃಷ್ಟ ಮತ್ತು ಅದೃಷ್ಟ ಕರ್ಮಫಲಗಳು 'ಕ್ರಿಯಮಾಣ-ಕರ್ಮ'ದ ಅಧೀನವಾಗಿವೆ ಹಾಗೂ ಪ್ರಾಪ್ತ ಮತ್ತು ಅಪ್ರಾಪ್ತ ಕರ್ಮಫಲಗಳು 'ಪ್ರಾರಬ್ಧ-ಕರ್ಮ'ದ ಅಧೀನವಾಗಿವೆ. ಕರ್ಮಫಲದ ತ್ಯಾಗ ಮಾಡುವ ಅರ್ಥ – ದೃಷ್ಟ ಕರ್ಮಫಲದ ಆಗ್ರಹವಿರಿಸದಿರುವುದು ಹಾಗೂ ದೊರಕಿದಾಗ ಪ್ರಸನ್ನ ಅಥವಾ ಅಪ್ರಸನ್ನನಾಗದಿರುವುದು; ಅದೃಷ್ಟ ಕರ್ಮಫಲದ ಆಸೆ ಇರಿಸದಿರುವುದು; ಪ್ರಾಪ್ತ ಕರ್ಮಫಲದಲ್ಲಿ ಮಮತೆ ಇಡದಿರುವುದು ಹಾಗೂ ದೊರಕಿದಾಗ ಸುಖಿ ಅಥವಾ ದುಃಖಿಯಾಗದಿರುವುದು ಮತ್ತು ಅಪ್ರಾಪ್ತ ಕರ್ಮಫಲದ ಕುರಿತು ನನ್ನ ದುಃಖ ಇಲ್ಲವಾಗಲೀ ಹಾಗೂ ಸುಖವಾಗಲೀ ಎಂಬ ಕಾಮನೆ ಮಾಡದಿರುವುದು.

ಸಾಧಾರಣ ಮನುಷ್ಯರು ಯಾವುದಾದರೊಂದು ಕಾಮನೆಗಾಗಿಯೇ ಕರ್ಮಗಳನ್ನು ಪ್ರಾರಂಭಿಸುತ್ತಾರೆ ಮತ್ತು ಕರ್ಮಗಳು ಮುಗಿಯುವವರೆಗೆ ಆ ಕಾಮನೆಯ ಚಿಂತನೆ ಮಾಡುತ್ತಿರುತ್ತಾರೆ. ವ್ಯಾಪಾರಿಯು ಹಣದ ಇಚ್ಛೆಯಿಂದ ವ್ಯಾಪಾರವನ್ನು ಪ್ರಾರಂಭಿಸಿದರೆ ಅವನ ವೃತ್ತಿಗಳು ಲಾಭವಾಗಲಿ-ನಷ್ಟವಾಗದಿರಲಿ ಎಂದು ಧನದ ಲಾಭ-ನಷ್ಟದ ಕಡೆಗೆ ಇರುತ್ತವೆ. ಧನದ ಲಾಭವಾದರೆ ಅವನು ಸಂತೋಷ ಪಡುತ್ತಾನೆ ಮತ್ತು ನಷ್ಟವಾದರೆ ದುಃಖಿಯಾಗುತ್ತಾನೆ. ಇದೇ ರೀತಿ ಎಲ್ಲ ಮನುಷ್ಯರು ಪತ್ನೀ, ಪುತ್ರ, ಧನ, ಮಾನ, ದೊಡ್ಡಸ್ತಿಕೆ ಇತ್ಯಾದಿ ಯಾವುದಾದರು ಅನುಕೂಲ ಫಲದ ಇಚ್ಛೆಯನ್ನು ಇಟ್ಟು ಕೊಂಡೇ ಕರ್ಮಮಾಡುತ್ತಾರೆ. ಆದರೆ ಕರ್ಮಯೋಗಿಯು ಫಲದ ಇಚ್ಛೆಯ ತ್ಯಾಗಗೈದು ಕರ್ಮ ಮಾಡುತ್ತಾನೆ.

ಒಂದು ವೇಳೆ ಯಾವುದೇ ಇಚ್ಛೆ ಇಲ್ಲದಿದ್ದರೆ ಕರ್ಮವೇಕೆ ಮಾಡಬೇಕು? ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ. ಇದರ ಉತ್ತರ-ಎಲ್ಲಕ್ಕಿಂತ ಮೊದಲಿನ ಮಾತು – ಯಾರೇ ಮನುಷ್ಯನು ಯಾವುದೇ ಅವಸ್ಥೆಯಲ್ಲಿ ಕರ್ಮಗಳನ್ನು ಸರ್ವಥಾ ತ್ಯಾಗಮಾಡಲಾರನು (೩/೫). ಒಂದು ವೇಳೆ ಮನುಷ್ಯನು ಅನೇಕ ಅಂಶಗಳಲ್ಲಿ ಕರ್ಮಗಳನ್ನು ಸ್ವರೂಪದಿಂದ ತ್ಯಾಗಮಾಡಬಲ್ಲನು ಎಂದು ತಿಳಿದು ಕೊಂಡರೂ ಕೂಡ ಮನುಷ್ಯನೊಳಗೆ ಪ್ರಪಂಚದ ಕುರಿತು ರಾಗ ವಿರುವವರೆಗೆ ಅವನು· ಶಾಂತಿಯಿಂದ (ಕರ್ಮಮಾಡದೆ) ಇರಲಾರನು. ಅವನಿಂದ ವಿಷಯದ ಚಿಂತನೆ ಅವಶ್ಯವಾದೀತು ಅದು ಕರ್ಮವೇ ಆಗಿದೆ. ವಿಷಯಗಳ ಚಿಂತನೆ ಆಗುವುದರಿಂದ ಅವನು ಕ್ರಮಶಃ ಪತನದ ಕಡೆಗೆ ಹೋದಾನು (೨/೬೨, ೬೩). ಅದಕ್ಕಾಗಿ ರಾಗದ ಸರ್ವಥಾ ಅಭಾವವಾಗುವವರೆಗೆ ಮನುಷ್ಯನು ಕರ್ಮಗಳಿಂದ ಬಿಡುಗಡೆ ಹೊಂದಲಾರನು. ಕರ್ಮಮಾಡುವುದರಿಂದ ಹಳೆಯ ರಾಗ ಇಲ್ಲವಾಗುತ್ತದೆ ಮತ್ತು ನಿಃಸ್ವಾರ್ಥ ಭಾವದಿಂದ ಕೇವಲ ಪರರ ಹಿತಕ್ಕಾಗಿ ಕರ್ಮಮಾಡುವುದರಿಂದ ಹೊಸ ರಾಗವು ಹುಟ್ಟುವುದಿಲ್ಲ.

ವಿಚಾರ ಪೂರ್ವಕವಾಗಿ ನೋಡಿದರೆ ಕರ್ಮಫಲದ ಇಚ್ಛೆಯನ್ನು ಇರಿಸಿಕೊಂಡು ಕರ್ಮಮಾಡುವುದು ದೊಡ್ಡ ಮೂರ್ಖತನವಾಗಿದೆ. ಮೊದಲ ಮಾತು – ಪ್ರತಿಯೊಂದು

ಕರ್ಮಗಳು ಆರಂಭ ಮತ್ತು ಸಮಾಪ್ತವಾಗುವಾಗ ಅದರ ಫಲವು ಹೇಗೆ ನಿತ್ಯವಾಗಬಲ್ಲದು? ಫಲವೂ ಪ್ರಾಪ್ತವಾಗಿ ನಷ್ಟವಾಗುತ್ತದೆ. ತಾತ್ಪರ್ಯ-ಕರ್ಮ ಮತ್ತು ಕರ್ಮಫಲವು ಎರಡೂ ನಾಶವುಳ್ಳವುಗಳೇ. ಒಂದೋ ಫಲವೂ ಇರಲಾರದು, ಅಥವಾ ನಮ್ಮದೆಂದು ಹೇಳಿಕೊಳ್ಳುವ ಶರೀರವು ಉಳಿಯದು. ಮತ್ತೊಂದು ಮಾತು – ಇಚ್ಛೆ ಇರಲೀ, ಇಲ್ಲದಿರಲಿ ಸಿಗುವಂತಹ ಫಲವು ಸಿಕ್ಕಿಯೇ ಸಿಗುತ್ತದೆ. ಇಚ್ಛಿಸುವುದರಿಂದ ಹೆಚ್ಚು ಫಲ ಸಿಗುವುದು ಮತ್ತು ಇಚ್ಛಿಸದೆ ಇರುವುದರಿಂದ ಕಡಿಮೆ ಫಲ ಸಿಗುವುದು ಎಂಬ ಮಾತಿಲ್ಲ. ಆದ್ದರಿಂದ ಫಲದ ಕಾಮನೆ ಮಾಡುವುದು ಮೂರ್ಖತನವಾಗಿದೆ.

ನಿಷ್ಕಾಮಭಾವದಿಂದ ಅರ್ಥಾತ್ ಫಲದ ಕಾಮನೆಯನ್ನಿರಿಸದೆ ಲೋಕಹಿತಾರ್ಥವಾಗಿ ಕರ್ಮಮಾಡುವುದರಿಂದ ಕರ್ಮಗಳಿಂದ ಸಂಬಂಧ ವಿಚ್ಛೇದವಾಗುತ್ತದೆ. ಕರ್ಮಯೋಗಿಯ ಕರ್ಮಗಳು ಉದ್ದೇಶಹೀನ ಅರ್ಥಾತ್-ಹುಚ್ಚುರ ಕರ್ಮಗಳಂತೆ ಆಗಿರದೆ ಪರಮಾತ್ಮ ತತ್ತ್ವದ ಪ್ರಾಪ್ತಿಯ ಮಹಾನ್ ಉದ್ದೇಶವಿಟ್ಟುಕೊಂಡೇ ಅವನು ಲೋಕಹಿತಾರ್ಥ ಎಲ್ಲ ಕರ್ಮಗಳನ್ನು ಮಾಡುತ್ತಾನೆ. ಅವನ ಕರ್ಮಗಳ ಲಕ್ಷ್ಯ ಪರಮಾತ್ಮ ತತ್ತ್ವವಾಗಿರುತ್ತದೆ, ಸಾಂಸಾರಿಕ ಪದಾರ್ಥಗಳು ಅಲ್ಲ. ಶರೀರದಲ್ಲಿ ಮಮತೆ ಇಲ್ಲದಿರುವುದರಿಂದ ಅವನಲ್ಲಿ ಆಲಸ್ಯ, ಅಕರ್ಮಣ್ಯತೆ, ಮುಂತಾದ ದೋಷಗಳು ಬರದೆ ಅವನು ಕರ್ಮಗಳನ್ನು ವ್ಯವಸ್ಥಿತವಾಗಿ, ತತ್ಪರತೆಯೊಂದಿಗೆ ಮಾಡುತ್ತಾನೆ.

ಮಾರ್ಮಿಕ ಮಾತು

ಯಾವ ಕರ್ಮಗಳನ್ನು ಮಾಡುವುದರಿಂದ ನಾಶವುಳ್ಳ ಪದಾರ್ಥಗಳ ಪ್ರಾಪ್ತಿಯಾಗುತ್ತದೋ, ಅವೇ ಕರ್ಮಗಳನ್ನು ನಿಷ್ಕಾಮ ಭಾವಪೂರ್ವಕ ಏಕಮಾತ್ರ ಪರಮಾತ್ಮತತ್ತ್ವದ ಪ್ರಾಪ್ತಿಯ ಉದ್ದೇಶ ವಿಟ್ಟುಕೊಂಡು ಲೋಕಹಿತಾರ್ಥವಾಗಿ ಮಾಡುವುದರಿಂದ ನಿತ್ಯಸಿದ್ಧ ಪರಮಾತ್ಮತತ್ತ್ವದ ಅನುಭೂತಿಯಲ್ಲಿ ಕಾರಣವಾಗಬಲ್ಲವು. ೩ನೇ ಅಧ್ಯಾಯದ ೨೦ನೇ ಶ್ಲೋಕದಲ್ಲಿ-ಕರ್ಮಗಳ ಮೂಲಕವೇ ಜನಕಾದಿ ಕರ್ಮಯೋಗಿಗಳಿಗೆ ಪರಮಾತ್ಮ ಪ್ರಾಪ್ತಿರೂಪೀ ಸಿದ್ಧಿಯು ದೊರಕಿದೆ ಎಂದು ಹೇಳಲಾಗಿದೆ ಮತ್ತು ೬ನೇ ಅಧ್ಯಾಯದ ೩ನೇ ಶ್ಲೋಕದಲ್ಲಿ– ಯೋಗದಲ್ಲಿ ಆರೂಢನಾಗಲು ಕರ್ಮಮಾಡುವುದು ಅವಶ್ಯಕವಾಗಿದೆ ಎಂದು ಹೇಳಿದೆ. ಇವೆಲ್ಲ ಮಾತುಗಳಿಂದ ಪರಮಾತ್ಮ ತತ್ತ್ವದ ಪ್ರಾಪ್ತಿಯು ಕರ್ಮಗಳಿಂದ ಆಗುತ್ತದೆ ಎಂಬ ಅರ್ಥ ಹೊರಡುತ್ತದೆ. ಪಾರ್ವತೀ, ಮನು-ಶತರೂಪಾ ಮುಂತಾದವರಿಗೂ ತಪರೂಪೀ ಕರ್ಮಗಳಿಂದಲೇ ಭಗವತ್ ಪ್ರಾಪ್ತಿಯಾಯಿತು. ಜಪ, ಧ್ಯಾನ, ಸತ್ಸಂಗ, ಸ್ವಾಧ್ಯಾಯ, ಶ್ರವಣ, ಮನನ ಇತ್ಯಾದಿ ಸಾಧನೆಗಳಿಂದ ತತ್ತ್ವದ ಸಾಕ್ಷಾತ್ಕಾರವಾಗುತ್ತದೆ ಎಂಬ ಮಾತೂ ಬರುತ್ತದೆ. ಇದಕ್ಕೆ ವಿರುದ್ಧವಾಗಿ, ತಪಾದಿ ಕರ್ಮಗಳಿಂದ ಭಗವತ್ ಪ್ರಾಪ್ತಿಯಾಗುವುದಿಲ್ಲ, ಪರಮಾತ್ಮನು ಯಾವುದೇ ಕರ್ಮದ ಫಲವಲ್ಲ (೧೧/೫೩) ಎಂಬ ಮಾತು ಬರುತ್ತದೆ. ಇವೆರಡೂ ಮಾತಿನ ಸಾಮಂಜಸ್ಯ ಹೇಗಾಗಬಹುದು?

ಇದರ ಉತ್ತರ – ವಾಸ್ತವವಾಗಿ ಪರಮಾತ್ಮನ ಪ್ರಾಪ್ತಿಯು ಯಾವುದೇ ಕರ್ಮದಿಂದ ಆಗುವುದಿಲ್ಲ, ಅವನು ಯಾವುದೇ ಕರ್ಮದ ಫಲವಲ್ಲ. ಪರಮಾತ್ಮನು ಪ್ರತಿಯೊಂದು ದೇಶ, ಕಾಲ, ವಸ್ತು, ವ್ಯಕ್ತಿ, ಘಟನೆ, ಪರಿಸ್ಥಿತಿ ಇತ್ಯಾದಿಗಳಲ್ಲಿ ಸದಾ-ಸರ್ವದಾ ವಿದ್ಯಮಾನನಾಗಿದ್ದಾನೆ, ಎಲ್ಲರಿಗೆ ಪ್ರಾಪ್ತನಾಗಿದ್ದಾನೆ ಮತ್ತು ಸದಾ ಸರ್ವದಾ ಅವನಲ್ಲೇ ಎಲ್ಲ ಪ್ರಾಣಿಗಳ ಸ್ಥಿತಿ ಇದೆ. ಪರಮಾತ್ಮನಿಂದ ಯಾವ ಮನುಷ್ಯನು ಎಂದೂ ಬೇರೆಯಾಗಿರಲಿಲ್ಲ, ಆಗಿಲ್ಲ, ಆಗಲಾರನು ಮತ್ತು ಆಗಲೂ ಸಾಧ್ಯವಿಲ್ಲ. ಆದರೆ ಜಡ ಪ್ರಕೃತಿಯ ಕಾರ್ಯ ಶರೀರ, ಇಂದ್ರಿಯಗಳು, ಮನ, ಬುದ್ಧಿ, ಪದಾರ್ಥ ಇತ್ಯಾದಿಗಳೊಂದಿಗೆ ಅಹಂತೆ, ಮಮತೆಯಿಂದ ತನ್ನ ಸಂಬಂಧವನ್ನು ಒಪ್ಪಿಕೊಂಡಿರುವುದರಿಂದ ಮನುಷ್ಯನು ಪರಮಾತ್ಮನಿಂದ ವಿಮುಖನಾಗುತ್ತಾನೆ. ನಿಜವಾಗಿ ತನ್ನದಾದ ಪರಮಾತ್ಮನನ್ನು ತನ್ನವನೆಂದು ಒಪ್ಪದೆ, ತನ್ನದಲ್ಲದ ಆ ನಾಶವುಳ್ಳ ಪದಾರ್ಥಗಳನ್ನು ತನ್ನದೆಂದು ತಿಳಿಯತೊಡಗುತ್ತಾನೆ. ಆದ್ದರಿಂದ ಜಡಪದಾರ್ಥಗಳೊಂದಿಗೆ ಇರುವ ಜೀವಿಯ ರಾಗಯುಕ್ತ ಸಂಬಂಧವನ್ನು ಇಲ್ಲವಾಗಿಸುವುದರಲ್ಲಿ ಎಲ್ಲ ಸಾಧನೆಗಳ ಸಾರ್ಥಕತೆಯಾಗಿದೆ.

ಜಡತೆಯಿಂದ ಸರ್ವಥಾ ಸಂಬಂಧ ಕಡಿದುಹೋಗುತ್ತಲೇ ನಿತ್ಯಪ್ರಾಪ್ತ ಪರಮಾತ್ಮನ ಅನುಭವ ಉಂಟಾಗುತ್ತದೆ. ಆದ್ದರಿಂದ ತಪಸ್ಸು ಮುಂತಾದ ಸಾಧನೆಗಳನ್ನು ಮಾಡುತ್ತಾ-ಮಾಡುತ್ತಾ ಜಡತೆಯಿಂದ ಸಂಬಂಧ ವಿಚ್ಛೇದವಾದಾಗಲೇ ಪರಮಾತ್ಮನ ಪ್ರಾಪ್ತಿಯಾಗುತ್ತದೆ. ಅದೇ ಸಂಬಂಧ ವಿಚ್ಛೇದವು ನಿಷ್ಕಾಮಭಾವದಿಂದ ಕೇವಲ ಲೋಕಹಿತಕ್ಕಾಗಿ ಕರ್ತವ್ಯ-ಕರ್ಮ ಮಾಡಿದಾಗ ತುಂಬಾ ಸುಲಭವಾಗಿ ಆಗುತ್ತದೆ.

ಪರಮಾತ್ಮನನ್ನು ಯಾವುದೇ ಸಾಧನೆಯಿಂದ ಕೊಂಡುಕೊಳ್ಳಲಾಗುವುದಿಲ್ಲ; ಏಕೆಂದರೆ ಪ್ರಕೃತಿಯ ಸಮಸ್ತ ಪದಾರ್ಥಗಳು ಒಟ್ಟಿಗೆ ಸೇರಿದರೂ ಚಿನ್ಮಯ ಮತ್ತು ಅವಿನಾಶೀ ಪರಮಾತ್ಮನೊಂದಿಗೆ ಕಿಂಚಿತ್ತಾದರೂ ಸಮಾನವಾಗಲಾರವು. ಇನ್ನೊಂದು ಮಾತು – ಬೆಲೆಕೊಟ್ಟು ಪಡೆದಿರುವ ವಸ್ತುವು ಬೆಲೆಗಿಂತ ಅಗ್ಗವಾಗಿರುತ್ತದೆ. ಒಂದು ವೇಳೆ ಕರ್ಮಗಳಿಂದ ಪರಮಾತ್ಮನು ಸಿಕ್ಕಿದರೆ ಅವನು ಕರ್ಮಗಳಿಗಿಂತ ಅಗ್ಗವೆಂದೇ ಸಿದ್ಧವಾದೀತು.

ಇಲ್ಲಿ ಇನ್ನೊಂದು ಮಾರ್ಮಿಕವಾದ ಮಾತನ್ನು ತಿಳಿದುಕೊಳ್ಳಬೇಕು – ಪ್ರಾಯಶಃ ಸಾಧಕನು ಯಾವ ಶರೀರ

ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿಗಳೊಂದಿಗೆ ಸಾಧನೆ ಮಾಡುವಾಗ, ಅದರ ಸಂಬಂಧ, ಮಹತ್ವ ಮತ್ತು ಆಶ್ರಯ ಇಟ್ಟುಕೊಂಡೇ ಸಾಧನೆ ಮಾಡುತ್ತಾನೆ; ಈ ಶರೀರಾದಿ ಗಳೊಂದಿಗೆ ಕಿಂಚಿತ್ತಾದರೂ ಸಂಬಂಧ ಇರುವವರೆಗೆ ಜಡತೆಯೊಂದಿಗೆ ಸಂಬಂಧ ಇರುತ್ತದೆ. ಜಡತೆ ಯೊಂದಿಗೆ ಸಂಬಂಧ ಇರುವಾಗ ಪರಮಾತ್ಮನ ತತ್ತ್ವದ ಅನುಭವ ವಾಗುವುದಿಲ್ಲ. ಪರಮಾತ್ಮತತ್ತ್ವದ ಪ್ರಾಪ್ತಿಯು ಜಡತೆಯಿಂದ ಆಗದೆ ಜಡತೆಯ ತ್ಯಾಗದಿಂದಾಗುತ್ತದೆ.

ಈ ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿಗಳು ಪ್ರಪಂಚದ ಜಾತಿಯದ್ದೇ ಆಗಿವೆ. ಆದ್ದರಿಂದ ಇವುಗಳನ್ನು ಪ್ರಪಂಚದ್ದೇ ಎಂದು ತಿಳಿದುಕೊಂಡು ಅದರ ಸೇವೆಯಲ್ಲೇ ತೊಡಗಿಸಬೇಕು. (ಇದು ಕರ್ಮಯೋಗವಾಗಿದೆ.) ಆದರೆ ಈ ಶರೀರಾದಿಗಳಿಂದ ಕಿಂಚಿನ್ಮಾತ್ರವೂ ತನ್ನ ಸಂಬಂಧವನ್ನು ತಿಳಿಯಬಾರದು, ಇವುಗಳಿಗೆ ಮಹತ್ವ ಕೊಡಬಾರದು, ಇವುಗಳ ಆಶ್ರಯ ಪಡೆಯಬಾರದು; ಏಕೆಂದರೆ ಅಸತ್ತಿನ ಸಂಬಂಧವಿರುವಾಗ ಅಸತ್ತಿನ ಸರ್ವಥಾ ನಿವೃತ್ತಿಯಾಗ ಲಾರದು. ಅಸತ್ತಿನೊಂದಿಗೆ ಸಂಬಂಧ ವಿಚ್ಛೇದಮಾಡಲಿಕ್ಕಾಗಿ ನಿಷ್ಕಾಮಭಾವದಿಂದ ಮಾಡಲಾದ ಎಲ್ಲ ಕರ್ಮಗಳು (ಸಾಧನೆಗಳು) ಸಹಾಯಕವಾಗುತ್ತವೆ. ಅಸತ್ತಿನಿಂದ ಸರ್ವಥಾ ಸಂಬಂಧ ವಿಚ್ಛೇದವಾಗುತ್ತಲೇ ಪರಮಾತ್ಮನೊಂದಿಗೆ ಇರುವ ವಿಮುಖತೆ ಇಲ್ಲವಾಗುತ್ತದೆ ಮತ್ತು ನಿತ್ಯಪ್ರಾಪ್ತ ಪರಮಾತ್ಮತತ್ತ್ವದ ಅನುಭೂತಿ ಉಂಟಾಗುತ್ತದೆ.

'ಶಾಂತಿಮಾಪ್ನೋತಿ ನೈಷ್ಠಿಕೀಮ್' – ಪ್ರಾಪಂಚಿಕ ಪದಾರ್ಥಗಳ ಕಾಮನೆಯ ಮತ್ತು ಮಮತೆಯ ತ್ಯಾಗದಿಂದ ಶಾಂತಿಸಿಗುತ್ತದೆ ಇದು ಅನುಭವಸಿದ್ಧವಾದ ಮಾತಾಗಿದೆ. ಸುಷುಪ್ತಿಯಲ್ಲಿ ಪ್ರಪಂಚದ ವಿಸ್ಮೃತಿ ಆದಾಗ ಅದರಲ್ಲಿಯೂ ಶಾಂತಿಯ ಅನುಭವವಾಗುತ್ತದೆ. ಒಂದು ವೇಳೆ ಜಾಗ್ರತಿಯಲ್ಲಿಯೂ ಪ್ರಪಂಚದ ಸಂಬಂಧ ವಿಚ್ಛೇದ (ಕಾಮನೆ-ಮಮತೆಯ ತ್ಯಾಗ) ಆಗಿ ಹೋದರೆ ಮತ್ತೆ ಹೇಳುವುದೇನಿದೆ? ಹೀಗೆಯೇ ನಿದ್ದೆಬರುವುದು, ಯಾವುದಾದರು ಕಾರ್ಯ ಪೂರ್ಣವಾಗುವುದು, ಮಗಳ ಮದುವೆಯಾಗುವುದು ಇತ್ಯಾದಿಗಳಿಂದಲೂ ಒಂದು ಶಾಂತಿ ಸಿಗುತ್ತದೆ. ತಾತ್ಪರ್ಯ – ಪ್ರಾಪಂಚಿಕ ಕಾಮನೆ, ಮಮತೆ, ಆಸಕ್ತಿಯ ತ್ಯಾಗಮಾಡಿದಾಗಲೇ ಶಾಂತಿಯು ಪ್ರಾಪ್ತವಾಗುತ್ತದೆ. ಆದರೆ ಈ ಶಾಂತಿಯ ಉಪಭೋಗ ಪಡೆಯುವುದರಿಂದ ಅರ್ಥಾತ್ ಇದರಿಂದ ಸುಖ ಪಡೆಯುವುದರಿಂದ ಮತ್ತು ಇದನ್ನೇ ಲಕ್ಷ್ಯವೆಂದು ತಿಳಿಯುವುದರಿಂದ ಸಾಧಕನು ಈ ಶಾಂತಿಯ ಫಲಸ್ವರೂಪವಾಗಿ ಸಿಗುವ 'ನೈಷ್ಠಿಕೀಶಾಂತಿ'* ಅರ್ಥಾತ್-ಪರಮ ಶಾಂತಿಯಿಂದ ವಂಚಿತನಾಗುತ್ತಾನೆ. ಕಾರಣ ಈ ಶಾಂತಿಯು ಧ್ಯೇಯವಾಗಿರದೆ ಪರಮಶಾಂತಿಯ ಕಾರಣವಾಗಿದೆ – **'ಯೋಗಾ ರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ'** (೬/೩).

ಪ್ರಪಂಚದ ಸಂಬಂಧ ವಿಚ್ಛೇದದಿಂದ ಆಗುವ ಶಾಂತಿಯು ಸತ್ತ್ವಗುಣದೊಂದಿಗೆ ಸಂಬಂಧವಿರುವ ಸಾತ್ತ್ವಿಕೀ ಶಾಂತಿ ಯಾಗಿದೆ. ಸಾಧಕನು ಈ ಶಾಂತಿಯ ಭೋಗಪಡೆಯುವವರೆಗೆ ಮತ್ತು ಈ ಶಾಂತಿಯಿಂದ 'ನನ್ನಲ್ಲಿ ಶಾಂತಿ ಇದೆ' ಈ ಪ್ರಕಾರ ತನ್ನ ಸಂಬಂಧವನ್ನು ತಿಳಿಯುವವರೆಗೆ ಪರಿಚ್ಛಿನ್ನತೆ ಇರುತ್ತದೆ (೧೪/೬) ಮತ್ತು ಪರಿಚ್ಛಿನ್ನತೆ ಇರುವವರೆಗೆ ಅಖಂಡ ಏಕರಸ ವಾಗಿರುವ ನಿಜವಾದ ಶಾಂತಿಯ ಅನುಭವವಾಗುವುದಿಲ್ಲ.

'ಅಯುಕ್ತ ಕಾಮಕಾರೇಣ ಫಲೇ ಸಕ್ತೋ ನಿಬಧ್ಯತೇ' – ಯಾರು ಕರ್ಮಯೋಗಿಯಾಗಿರದೆ ಕರ್ಮಿಯಾಗಿದ್ದಾನೋ, ಅಂತಹ ಸಕಾಮ ಪುರುಷನಿಗಾಗಿ ಇಲ್ಲಿ **'ಅಯುಕ್ತ'** ಪದವಿದೆ.

ಸಕಾಮ ಪುರುಷನು ಹೊಸ-ಹೊಸ ಕಾಮನೆಗಳ ಕಾರಣ ಫಲದಲ್ಲಿ ಆಸಕ್ತನಾಗಿ ಜನ್ಮ-ಮರಣರೂಪೀ ಬಂಧನದಲ್ಲಿ ಬಿದ್ದು ಹೋಗುತ್ತಾನೆ. ಕೇವಲ ಕಾಮನೆಯಿಂದ ಯಾವ ಪದಾರ್ಥವೂ ಸಿಗುವುದಿಲ್ಲ, ಒಂದೊಮ್ಮೆ ಸಿಕ್ಕಿದರೆ ಸದಾಕಾಲ ಜೊತೆಗೆ ಇರುವುದಿಲ್ಲ– ಈ ಮಾತು ಪ್ರತ್ಯಕ್ಷವಾಗಿದ್ದರೂ ಕೂಡ ಪದಾರ್ಥಗಳ ಕಾಮನೆಯನ್ನಿರಿಸುವುದು ಪ್ರಮಾದವೇ ಆಗಿದೆ.

ಪದಾರ್ಥಗಳನ್ನು ಸ್ವರೂಪತಃ ಬಿಟ್ಟುಬಿಡಬೇಕೆಂಬ ಇದರ ಅರ್ಥವಲ್ಲ, ಒಂದು ವೇಳೆ ಸ್ವರೂಪತಃ ಬಿಟ್ಟುಬಿಟ್ಟಾಗಲೇ ಮುಕ್ತಿ ಯಾಗುವುದಾದರೆ ಸಾಯುವವರು (ಶರೀರ ಬಿಡುವವರು) ಎಲ್ಲರೂ ಮುಕ್ತರಾಗಿ ಹೋಗುತ್ತಿದ್ದರು. ಪದಾರ್ಥಗಳಾದರೋ ತನ್ನಿಂದ-ತಾನೇ ಸ್ವರೂಪದಿಂದ ಆಗಲುತ್ತಾ ಹೋಗುತ್ತಿವೆ. ಆದ್ದರಿಂದ ನಿಜವಾಗಿ ಆ ಪದಾರ್ಥಗಳಲ್ಲಿ ಇರುವ ಕಾಮನೆ, ಮಮತೆ ಆಸಕ್ತಿಯನ್ನು ಬಿಡುವುದೇ ಆಗಿದೆ; ಏಕೆಂದರೆ ಪದಾರ್ಥಗಳೊಂದಿಗೆ ಕಾಮನೆ-ಮಮತೆ-ಆಸಕ್ತಿಯಿಂದ ಒಪ್ಪಿಕೊಂಡಿರುವ ಸಂಬಂಧವೇ ಜನ್ಮ-ಮರಣರೂಪೀ ಬಂಧನದ ಕಾರಣ ವಾಗಿದೆ. ಕರ್ಮಯೋಗದ ಆಚರಣೆಯಿಂದ (ಕರ್ಮಗಳ ಪ್ರವಾಹವು ಕೇವಲ ಪರರ ಹಿತಕ್ಕಾಗಿ ಆಗುವುದರಿಂದ) ಈ ಒಪ್ಪಿಕೊಂಡಿರುವ ಸಂಬಂಧವು ಸುಲಭವಾಗಿ ಬಿಟ್ಟು ಹೋಗುತ್ತದೆ.

ಪರಿಶಿಷ್ಟ ಭಾವ – ನಿಜವಾಗಿ ಮುಕ್ತಿಗಾಗಿ ಅಥವಾ ಪರಮಾತ್ಮನ ಪ್ರಾಪ್ತಿಗಾಗಿ ಸಾಧನೆಮಾಡುವುದೂ ಕೂಡ ಫಲಾಸಕ್ತಿಯೇ ಆಗಿದೆ. ಮನುಷ್ಯನಿಗೆ ಪ್ರತಿಯೊಂದು ಕಾರ್ಯವನ್ನು ಫಲದ ಕಾಮನೆಯಿಂದಲೇ ಮಾಡುವ

---

* ಈ 'ನೈಷ್ಠಿಕೀ ಶಾಂತಿಯು' ಪರಮಾತ್ಮಪ್ರಾಪ್ತಿರೂಪೀಯೇ ಆಗಿದೆ. ಇದನ್ನೇ ಗೀತೆಯಲ್ಲಿ ಕೆಲವೆಡೆ 'ಶಶ್ವಚ್ಛಾಂತಿಮ್' (೯/೩೧) ಪದದಿಂದ, ಕೆಲವೆಡೆ 'ಪರಾಂಶಾಂತಿಮ್' (೪/೩೯;೧೮/೬೨) ಪದದಿಂದಮತ್ತುಕೆಲವೆಡೆ 'ಶಾಂತಿಮ್' (೫/೨೯;೨/೭೦,೭೧) ಪದಗಳಿಂದಹೇಳಲಾಗಿದೆ.

ಅಭ್ಯಾಸವಿರುತ್ತದೆ. ಅದಕ್ಕಾಗಿ ಮುಕ್ತಿಗಾಗಿ, ಪರಮಾತ್ಮನ ಪ್ರಾಪ್ತಿಗಾಗಿ ಸಾಧನೆ ಮಾಡಬೇಕು ಎಂದು ಹೇಳಲಾಗುತ್ತದೆ. ನಿಜವಾಗಿ ಸಾಧನೆಯು ಅಸಾಧನೆಯನ್ನು ಇಲ್ಲವಾಗಿಸಲು ಇದೆ. ಮುಕ್ತಿ ಸ್ವತಃ ಸಿದ್ಧವಾಗಿದೆ. ಪರಮಾತ್ಮನು ನಿತ್ಯಪ್ರಾಪ್ತನಾಗಿದ್ದಾನೆ. ಪರಮಾತ್ಮನ ಪ್ರಾಪ್ತಿಯು ಯಾವುದೇ ಕ್ರಿಯೆಯ ಫಲವಲ್ಲ. ಆದ್ದರಿಂದ ಏನಾದರು ಮಾಡುವುದರಿಂದ ಪರಮಾತ್ಮನ ಪ್ರಾಪ್ತಿಯಾದೀತು ಹೀಗೆ ಇಚ್ಛಿಸುವುದೂ ಕೂಡ ಫಲೇಚ್ಛೆಯೇ ಆಗಿದೆ.

ನಾನು ಈ ಸಾಧನೆಯನ್ನು ಮಾಡಿದರೆ ಇದರ ಫಲ ಉಂಟಾದೀತು ಎಂಬುದನ್ನೂ ಸಾಧಕನು ನೋಡಬಾರದು. ಫಲವನ್ನು ನೋಡುವುದೂ ಫಲಾಸಕ್ತಿಯಾಗಿದೆ. ಆದರಿಂದ ವರ್ತಮಾನದಲ್ಲಿ ಸಾಧನೆಯು ಸರಿಯಾಗುವುದಿಲ್ಲ. ಆದ್ದರಿಂದ ಫಲವನ್ನು ನೋಡದೆ ತನ್ನ ಸಾಧನೆಯನ್ನು ನೋಡಬೇಕು. ಸಾಧನೆಯನ್ನು ತತ್ಪರನಾಗಿ ಮಾಡಬೇಕು, ಮತ್ತೆ ಸಿದ್ಧಿಯು ತನ್ನಿಂತ-ತಾನೇ ಆದೀತು. ಸಾಧಕನು ಸಿದ್ಧಿಯ ಕಡೆಗೆ ನೋಡುತ್ತಾ ಇದ್ದರೆ ಸಿದ್ಧಿಯಾಗಲಾರದು.

ಸಾವು ನಿರ್ವಿಕಲ್ಪ, ನಿಷ್ಕಾಮವಾಗಿ ಹೋದರೆ ತುಂಬಾ ಸುಖಿಸಿಗಬಹುದು – ಈ ಪ್ರಕಾರ ಮೂಲದಲ್ಲಿ ಸುಖ ಪಡೆಯುವ ಇಚ್ಛೆಯೇ ಫಲೇಚ್ಛೆಯಾಗಿದೆ. ಅದು ಸಾಧಕನಿಗೆ ನಿರ್ವಿಕಲ್ಪ, ನಿಷ್ಕಾಮವಾಗಲು ಬಿಡುವುದಿಲ್ಲ.

—●—

ಸಂಬಂಧ - ಕರ್ಮಯೋಗದ ವರ್ಣನೆಮಾಡಿ ಈಗ ಭಗವಂತನು ಪುನಃ ಸಾಂಖ್ಯಯೋಗವನ್ನು ವಿಸ್ತಾರವಾಗಿ ವರ್ಣಿಸುತ್ತಾನೆ —

ಸರ್ವಕರ್ಮಾಣಿ ಮನಸಾ ಸಂನ್ಯಸ್ಯಾಸ್ತೇ ಸುಖಂ ವಶೀ ।
ನವದ್ವಾರೇ ಪುರೇ ದೇಹೀ ನೈವ ಕುರ್ವನ್ನ ಕಾರಯನ್ ॥ ೧೩॥

ವಶೀ - ಯಾರ ಇಂದ್ರಿಯಗಳು ಮತ್ತು ಮನಸ್ಸು ವಶವಾಗಿವೆಯೋ (ಅಂತಹ). **ದೇಹೀ** - ದೇಹಧಾರಿ ಪುರುಷನು, **ನವದ್ವಾರೇ** - ಒಂಭತ್ತು ದ್ವಾರವುಳ್ಳ, **ಪುರೇ** - (ಶರೀರರೂಪೀ) ಪುರದಲ್ಲಿ, **ಸರ್ವಕರ್ಮಾಣಿ** -ಸಂಪೂರ್ಣ ಕರ್ಮಗಳನ್ನು, **ಮನಸಾ** - (ವಿವೇಕ ಪೂರ್ವಕ) ಮನಸ್ಸಿನಿಂದ, **ಸಂನ್ಯಸ್ಯ** - ತ್ಯಾಗಮಾಡಿ, **ಏವ** -ನಿಃಸಂದೇಹವಾಗಿ, **ನ, ಕುರ್ವನ್** - ಮಾಡದೆ (ಮತ್ತು), **ನ, ಕಾರಯನ್** - ಮಾಡಿಸದೆ, **ಸುಖಮ್** - ಸುಖವಾಗಿ (ತನ್ನ ಸ್ವರೂಪದಲ್ಲಿ), **ಆಸ್ತೇ** - ಸ್ಥಿತನಾಗಿರುತ್ತಾನೆ. ॥ ೧೩॥

ಯಾರ ಇಂದ್ರಿಯಗಳು ಮತ್ತು ಮನಸ್ಸು ವಶವಾಗಿವೆಯೋ ಅಂತಹ ದೇಹಧಾರಿ ಪುರುಷನು ಒಂಭತ್ತು ದ್ವಾರವುಳ್ಳ ಶರೀರರೂಪೀ ಪುರದಲ್ಲಿ ಸಂಪೂರ್ಣಕರ್ಮಗಳನ್ನು ವಿವೇಕಪೂರ್ವಕ ಮನಸ್ಸಿನಿಂದ ತ್ಯಾಗಮಾಡಿ ನಿಃಸಂದೇಹವಾಗಿ ಮಾಡದೆ ಮತ್ತು ಮಾಡಿಸದೆ ಸುಖವಾಗಿ ತನ್ನ ಸ್ವರೂಪದಲ್ಲಿ ಸ್ಥಿತನಾಗಿರುತ್ತಾನೆ. ॥ ೧೩॥

ವ್ಯಾಖ್ಯಾ - **'ವಶೀ ದೇಹೀ'** – ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿಗಳಲ್ಲಿ ಮಮತೆ ಆಸಕ್ತಿ ಇರುವುದರಿಂದಲೇ ಇವು ಮನುಷ್ಯನ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸುತ್ತವೆ. ಮಮತೆ-ಆಸಕ್ತಿ ಇಲ್ಲದಿರುವಾಗ ಇವು ತನ್ನಿಂದ-ತಾನೇ ತನ್ನ ವಶದಲ್ಲಿರುತ್ತವೆ. ಸಾಂಖ್ಯ ಯೋಗಿಯ ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿಗಳಲ್ಲಿ ಮಮತೆ-ಆಸಕ್ತಿ ಇಲ್ಲದಿರುವುದರಿಂದ ಇವು ಸರ್ವಥಾ ಅವನ ವಶದಲ್ಲಿರುತ್ತವೆ. ಅದಕ್ಕಾಗಿ ಇಲ್ಲಿ ಅವನಿಗೆ **'ವಶೀ'** ಎಂದು ಹೇಳಲಾಗಿದೆ.

ಯಾವುದೇ ಮನುಷ್ಯನಿಗೆ ಪ್ರಕೃತಿಯ ಕಾರ್ಯ (ಶರೀರ-ಇಂದ್ರಿಯಾದಿ)ದೊಂದಿಗೆ ಕಿಂಚಿತ್ತಾದರೂ ಪ್ರಯೋಜನ ವಿರುವವರೆಗೆ ಅವನು ಪ್ರಕೃತಿಗೆ 'ಅವಶ' ಅರ್ಥಾತ್ – ವಶೀಭೂತ ನಾಗಿರುತ್ತಾನೆ – **'ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿ ಜೈರ್ಗುಣೈಃ'** (೩/೫). ಪ್ರಕೃತಿಯು ಸದಾಕಾಲ ಕ್ರಿಯಾಶೀಲವಾಗಿರುತ್ತದೆ. ಆದ್ದರಿಂದ ಪ್ರಕೃತಿಯೊಂದಿಗೆ ಸಂಬಂಧ ಇರುವ ಕಾರಣ ಮನುಷ್ಯನು ಕರ್ಮರಹಿತ ನಾಗಲಾರನು. ಆದರೆ ಪ್ರಕೃತಿಯ ಕಾರ್ಯ ಸ್ಥೂಲ, ಸೂಕ್ಷ್ಮ ಮತ್ತು ಕಾರಣ – ಈ ಮೂರು ಶರೀರಗಳಿಂದ ಮಮತೆ – ಆಸಕ್ತಿ ಪೂರ್ವಕ ಯಾವುದೇ ಸಂಬಂಧ ಇಲ್ಲದಿರುವುದರಿಂದ ಸಾಂಖ್ಯಯೋಗಿಯು ಅವುಗಳ ಕ್ರಿಯೆಗಳ ಕರ್ತಾ ಆಗುವುದಿಲ್ಲ. ಸಾಂಖ್ಯಯೋಗಿಗೆ ಶರೀರದೊಂದಿಗೆ ಕಿಂಚಿತ್ತಾದರೂ ಸಂಬಂಧ ಇಲ್ಲದಿದ್ದರೂ ಜನರ ದೃಷ್ಟಿಯಿಂದ ಅವನು ಶರೀರಧಾರಿಯಂತೆ ಕಾಣುತ್ತಾನೆ. ಆದಕ್ಕಾಗಿ ಅವನನ್ನು **'ದೇಹೀ'** ಎಂದು ಹೇಳಲಾಗಿದೆ.

'ನವದ್ವಾರೇ ಪುರೇ' – ಶಬ್ದಾದಿ ವಿಷಯಗಳನ್ನು ಸೇವಿಸಲು ಎರಡು ಕಿವಿ, ಎರಡು ಕಣ್ಣುಗಳು, ಎರಡು ಮೂಗಿನ ಹೊಳ್ಳೆಗಳು, ಒಂದು ಮುಖ ಹೀಗೆ ಏಳು ದ್ವಾರಗಳು ಶರೀರದ ಮೇಲ್ಭಾಗದಲ್ಲಿ ಇವೆ ಮತ್ತು ಮಲಮೂತ್ರ ತ್ಯಾಗಮಾಡಲು ಗುದ ಮತ್ತು ಉಪಸ್ಥ ಈ ಎರಡು ದ್ವಾರಗಳು ಶರೀರದ ಕೆಳಭಾಗದಲ್ಲಿವೆ. ಈ ಒಂಭತ್ತು ದ್ವಾರಗಳುಳ್ಳ ಶರೀರವನ್ನು **'ಪುರ'** ಅರ್ಥಾತ್ – ನಗರವೆಂದು ಹೇಳುವ ತಾತ್ಪರ್ಯ – ನಗರ ಮತ್ತು ಅದರಲ್ಲಿರುವ ಮನುಷ್ಯನು ಬೇರೆ-ಬೇರೆಯಾಗಿರುತ್ತಾರೋ, ಹಾಗೆಯೇ ಈ ಶರೀರ ಮತ್ತು ಇದರಲ್ಲಿ ವಾಸಿಸುವ ಭಾವವುಳ್ಳ ಜೀವಾತ್ಮನು-ಬೇರೆ-ಬೇರೆಯಾಗಿದ್ದಾರೆ. ನಗರದಲ್ಲಿ ವಾಸಿಸುವ ಮನುಷ್ಯನು

ನಗರದಲ್ಲಾಗುವ ಕ್ರಿಯೆಗಳನ್ನು ತನ್ನ ಕ್ರಿಯೆಯೆಂದು ತಿಳಿಯುವುದಿಲ್ಲವೋ ಹಾಗೆಯೇ ಸಾಂಖ್ಯ ಯೋಗಿಯು ಶರೀರದಲ್ಲಾಗುವ ಕ್ರಿಯೆಗಳನ್ನು ತನ್ನ ಕ್ರಿಯೆಗಳೆಂದು ತಿಳಿಯುವುದಿಲ್ಲ.

'ಸರ್ವಕರ್ಮಾಣಿ ಮನಸಾ ಸಂನ್ಯಸ್ಯ' – ಇದೇ ಅಧ್ಯಾಯದ ೮, ೯ನೇ ಶ್ಲೋಕಗಳಲ್ಲಿ ಶರೀರ, ಇಂದ್ರಿಯಗಳು, ಮನ, ಬುದ್ಧಿ ಮತ್ತು ಪ್ರಾಣಗಳಿಂದ ಆಗುವ ಹದಿಮೂರು ಕ್ರಿಯೆಗಳನ್ನು ವರ್ಣಿಸಲಾಗಿದೆಯೋ, ಅವೆಲ್ಲ ಕ್ರಿಯೆಗಳ ಬೋಧಕವಾಗಿ ಇಲ್ಲಿ **'ಸರ್ವ ಕರ್ಮಾಣಿ'** ಪದವಿದೆ.

ಇಲ್ಲಿ **'ಮನಸಾ ಸಂನ್ಯಸ್ಯ'** ಪದಗಳ ಅಭಿಪ್ರಾಯ – ವಿವೇಕ ಪೂರ್ವಕ ಮನಸ್ಸಿನಿಂದ ತ್ಯಾಗಮಾಡುವುದಾಗಿದೆ. ಒಂದು ವೇಳೆ ಈ ಪದಗಳ ಅರ್ಥವನ್ನು ಕೇವಲ ಮನಸ್ಸಿನಿಂದ ತ್ಯಾಗಮಾಡುವುದು ಎಂದು ತಿಳಿದುಕೊಂಡರೆ ದೋಷ ಬರುತ್ತದೆ; ಏಕೆಂದರೆ ಮನಸ್ಸಿನಿಂದ ತ್ಯಾಗಮಾಡುವುದೂ ಮನಸ್ಸಿನ ಒಂದು ಕ್ರಿಯೆಯಾಗಿದೆ ಮತ್ತು ಗೀತೆಯು ಮನಸ್ಸಿನಿಂದಾಗುವ ಕ್ರಿಯೆಗಳನ್ನೂ 'ಕರ್ಮ'ವೆಂದು ಒಪ್ಪುತ್ತದೆ **'ಶರೀರ ವಾಙ್ಮನೋಭಿರ್ಯತ್ಕರ್ಮ ಪ್ರಾರಭತೇ ನರಃ'** (೧೮/೧೫). ಶರೀರದಿಂದಾಗುವ ಕ್ರಿಯೆಗಳ ಕರ್ತೃತ್ವವನ್ನು ಮನಸ್ಸಿನಿಂದ ತ್ಯಾಗಮಾಡಿದ ಮೇಲೆಯೂ ಮನಸ್ಸಿನ (ತ್ಯಾಗರೂಪೀ) ಕ್ರಿಯೆಯ ಕರ್ತೃತ್ವವು ಉಳಿದೇ ಹೋಯಿತು. ಆದ್ದರಿಂದ **'ಮನಸಾ ಸಂನ್ಯಸ್ಯ'** – ಪದಗಳ ತಾತ್ಪರ್ಯ – ವಿವೇಕಪೂರ್ವಕ ಮನಸ್ಸಿನಿಂದ ಕ್ರಿಯೆಗಳ ಕರ್ತೃತ್ವದ ತ್ಯಾಗಮಾಡುವುದು, ಅರ್ಥಾತ್ – ಕರ್ತೃತ್ವ ದಿಂದ ಒಪ್ಪಿಕೊಂಡಿರುವ ಸಂಬಂಧವನ್ನು ತ್ಯಾಗಮಾಡುವುದು. ಎಲ್ಲಿ ಕರ್ತೃತ್ವದ ಸಂಬಂಧ ಒಪ್ಪಿಕೊಂಡಿದೆಯೋ ಅಲ್ಲೇ ಆ ಸಂಬಂಧದ ತ್ಯಾಗಮಾಡುವುದಾಗಿದೆ. ಸಾಂಖ್ಯಯೋಗಿಯು ತನ್ನಲ್ಲಿ ಕರ್ತೃತ್ವವನ್ನು ಒಪ್ಪಿಕೊಳ್ಳದೆ ಅದನ್ನು ಶರೀರದಲ್ಲಿಯೇ ಬಿಟ್ಟುಬಿಡುತ್ತಾನೆ. ಅರ್ಥಾತ್ ಕರ್ತೃತ್ವವು ಶರೀರದಲ್ಲಿಯೇ ಇದೆ, ತನ್ನಲ್ಲಿ ಎಂದೂ ಇಲ್ಲ.

'ನೈವ ಕುರ್ವನ್ನ ಕಾರಯನ್' – ಸಾಂಖ್ಯಯೋಗಿಯಲ್ಲಿ ಕರ್ತೃತ್ವ ಮತ್ತು ಕಾರಯಿತೃತ್ವ ಎರಡೂ ಇರುವುದಿಲ್ಲ, ಅರ್ಥಾತ್ – ಅವನು ಮಾಡುವವನೂ ಮತ್ತು ಮಾಡಿಸುವವನೂ ಅಲ್ಲ.

ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿಗಳಲ್ಲಿ ಕಿಂಚಿತ್ತೂ ಅಹಂತೆ-ಮಮತೆಗಳ ಸಂಬಂಧ ಇಲ್ಲದಿರುವುದಿರಂದ ಅವನಿಂದ ಆಗುವ ಕ್ರಿಯೆಗಳ ಕರ್ತಾ ಎಂದು ತನ್ನನ್ನು ಸಾಂಖ್ಯಯೋಗಿಯು ಹೇಗೆ ತಿಳಿಯಬಲ್ಲನು? ಅರ್ಥಾತ್ – ಎಂದೂ ತಿಳಿಯಲಾರನು. ಇದೇ ಅಧ್ಯಾಯದ ೮ನೇ ಶ್ಲೋಕದಲ್ಲಿಯೂ **'ನೈವ ಕಿಂಚಿತ್ ಕರೋಮಿ'** ಪದಗಳಿಂದ ಇದೇ ಮಾತನ್ನು ಹೇಳಲಾಗಿದೆ. ೧೩ನೇ ಅಧ್ಯಾಯದ ೩೧ನೇ ಶ್ಲೋಕದಲ್ಲಿಯೂ ಭಗವಂತನು **'ಶರೀರಸ್ಥೋಽಪಿ ಕೌಂತೇಯ ನ ಕರೋತಿ'** ಪದಗಳಿಂದ ಶರೀರದಲ್ಲಿದ್ದರೂ ಈ ಅವಿನಾಶೀ ಆತ್ಮನು ಏನನ್ನೂ ಮಾಡುವುದಿಲ್ಲ ಎಂದು ಹೇಳಿರುವನು.

ಜೀವಾತ್ಮನು ಸ್ವತಃ ಯಾವುದೇ ಕರ್ಮಮಾಡುವುದಿಲ್ಲ; ಆದರೆ ಅವನು ಪ್ರೇರಕನಾಗಿ ಕರ್ಮವನ್ನೇನೋ ಮಾಡಿಸಬಲ್ಲನಲ್ಲ? ಎಂಬ ಪ್ರಶ್ನೆ ಇಲ್ಲಿ ಉಂಟಾಗುತ್ತದೆ. ಇದರ ಉತ್ತರ ಸೂರ್ಯನು ಉದಯಿಸಿದಾಗ ಸಂಪೂರ್ಣ ಜಗತ್ತಿನಲ್ಲಿ ಪ್ರಕಾಶವು ಹರಡಿಕೊಳ್ಳುತ್ತದೆ, ಯಾರೋ ಕೃಷಿಮಾಡುತ್ತಾನೆ, ಯಾರೋ ವೇದಪಾರಾಯಣ ಮಾಡುತ್ತಾನೆ, ಯಾರೋ ವ್ಯಾಪಾರ ಮಾಡುತ್ತಾನೆ ಇತ್ಯಾದಿ ತಮ್ಮ- ತಮ್ಮ ಕೆಲಸದಲ್ಲಿ ಜನರು ತೊಡಗುತ್ತಾರೆ. ಆದರೆ ಸೂರ್ಯನು ವಿಹಿತ ಅಥವಾ ನಿಷಿದ್ಧ ಯಾವುದೇ ಕ್ರಿಯೆಯ ಪ್ರೇರಕನಾಗುವುದಿಲ್ಲ, ಅವನಿಂದ ಎಲ್ಲರಿಗೆ ಪ್ರಕಾಶಸಿಗುತ್ತದೆ, ಆದರೆ ಆ ಪ್ರಕಾಶವನ್ನು ಯಾರಾದರು ಸದುಪಯೋಗ ಅಥವಾ ದುರುಪಯೋಗ ಮಾಡಿಕೊಂಡರೆ ಇದರಲ್ಲಿ ಭಗವಾನ್ ಸೂರ್ಯನ ಯಾವುದೇ ಪ್ರೇರಣೆ ಇರುವುದಿಲ್ಲ, ಒಂದು ವೇಳೆ ಅವನ ಪ್ರೇರಣೆ ಇದ್ದಿದ್ದರೆ ಪಾಪ ಅಥವಾ ಪುಣ್ಯಕರ್ಮಗಳ ಭಾಗಿಯೂ ಅವನೇ ಆಗಬೇಕಾಗುತ್ತದೆ. ಹೀಗೆಯೇ ಚೇತನ ತತ್ತ್ವದಿಂದ ಪ್ರಕೃತಿಗೆ ಅಸ್ತಿತ್ವ ಮತ್ತು ಶಕ್ತಿಯಾದರೋ ಪ್ರಾಪ್ತವಾಗುತ್ತದೆ, ಆದರೆ ಅದು ಯಾವುದೇ ಕ್ರಿಯೆಯ ಪ್ರೇರಕವಾಗುವುದಿಲ್ಲ. ಇದೇ ಮಾತನ್ನು ಭಗವಂತನು ಇಲ್ಲಿ **'ನ ಕಾರಯನ್'** ಪದಗಳಿಂದ ಹೇಳಿರುವನು.

'ಆಸ್ತೇ ಸುಖಮ್' – ಎಲ್ಲ ಮನುಷ್ಯರಿಗೆ ಸ್ವರೂಪದಲ್ಲಿ ಸ್ವಾಭಾವಿಕವಾದ ಸ್ಥಿತಿ ಇದೆ; ಆದರೆ ಅವರು ತನ್ನ ಸ್ಥಿತಿಯನ್ನು ಶರೀರ, ಇಂದ್ರಿಯಗಳು, ಮನ, ಬುದ್ಧಿ ಪ್ರಾಣ ಇತ್ಯಾದಿಗಳಲ್ಲಿ ಒಪ್ಪಿಕೊಳ್ಳುತ್ತಾರೆ, ಅದರಿಂದ ಅವರಿಗೆ ಈ ಸ್ವಾಭಾವಿಕ ಸ್ಥಿತಿಯ ಅನುಭವವಾಗುವುದಿಲ್ಲ. ಆದರೆ ಸಾಂಖ್ಯಯೋಗಿಗೆ ನಿರಂತರ ಸ್ವರೂಪದಲ್ಲಿ ತನ್ನ ಸ್ವಾಭಾವಿಕ ಸ್ಥಿತಿಯ ಅನುಭವವಾಗುತ್ತಾ ಇರುತ್ತದೆ. ಸ್ವರೂಪವು ಸದಾ-ಸರ್ವದಾ ಸುಖಿ ಸ್ವರೂಪವಾಗಿದೆ. ಆ ಸುಖವು ಅಖಂಡ-ಏಕರಸ ಮತ್ತು ಪರಿಚ್ಛಿನ್ನತೆಯಿಂದ ರಹಿತವಾಗಿದೆ.

ಒಂದು ವಸ್ತುವು ಇನ್ನೊಂದು ವಸ್ತುವಿನಲ್ಲಿ ಹೇಗೆ ಸ್ಥಿತಿ ಇರುತ್ತದೋ, ಸ್ವರೂಪದಲ್ಲಿ ಅಂತಹ ಸ್ಥಿತಿ ಇರುವುದಿಲ್ಲ, ಕಾರಣ – ಸ್ವರೂಪವು ಹೇಗಿದೆಯೋ-ಹಾಗೆಯೇ ಇರುತ್ತದೆ. ಆ ಸ್ವರೂಪದಲ್ಲಿ ಮನುಷ್ಯನ ಸ್ಥಿತಿಯು ಸ್ವತಃ-ಸ್ವಾಭಾವಿಕವಾಗಿದೆ; ಆದ್ದರಿಂದ ಅದರಲ್ಲಿ ಸ್ಥಿತಿಉಂಟಾಗಲು ಯಾವುದೇ ಶ್ರಮ, ಉದ್ಯೋಗ ಇರುವುದಿಲ್ಲ, ಸ್ವರೂಪವನ್ನು ಗುರುತಿಸಿದಾಗ ಒಂದೇ ಸ್ವರೂಪ ಉಳಿದು ಹೋಗುತ್ತದೆ. ಕೇವಲ ಪರಿಚಯವನ್ನು ತಿಳಿಸಲಿಕ್ಕಾಗಿಮಾತ್ರ ಇಲ್ಲಿ **'ಆಸ್ತೇ'** ಪದದ ಪ್ರಯೋಗವಾಗಿದೆ. ಇದನ್ನೇ ೧೪ನೇ ಅಧ್ಯಾಯದ ೨೪ನೇ ಶ್ಲೋಕದಲ್ಲಿ **'ಸ್ವಸ್ಥ'** ಪದದಿಂದ ಹೇಳಲಾಗಿದೆ.

ಇಲ್ಲಿ **'ಆಸ್ತೇ'** ಎಂಬ ಕ್ರಿಯೆಯು ಯಾವ ತತ್ತ್ವದ ಸತ್ತೆಯನ್ನು ಪ್ರಕಟಪಡಿಸುತ್ತಿದೆಯೋ ಅದು ಎಲ್ಲ ಆಧಾರಗಳ ಆಧಾರವಾಗಿದೆ. ಎಲ್ಲ ಉತ್ಪನ್ನ ತತ್ತ್ವಗಳು ಆ ಅನುತ್ಪನ್ನ ತತ್ತ್ವದ ಆಶ್ರಿತವಾಗಿವೆ. ಆ ಸರ್ವಾಧಿಷ್ಠಾನರೂಪೀ ತತ್ತ್ವಕ್ಕೆ ಯಾವುದೇ ಆಧಾರದ ಆವಶ್ಯಕತೆ ಏನಿದೆ? ಆ ಸ್ವತಃ ಸಿದ್ಧ ತತ್ತ್ವದಲ್ಲಿ ಸ್ವಾಭಾವಿಕ ಸ್ಥಿತಿಯನ್ನೇ ಇಲ್ಲಿ **'ಆಸ್ತೇ'** ಪದದಿಂದ ಹೇಳಲಾಗಿದೆ. ಇದನ್ನೇ ಮುಂದೆ ೨೦ನೇ ಶ್ಲೋಕದಲ್ಲಿ **'ಬ್ರಹ್ಮವಿದ್ ಬ್ರಹ್ಮಣಿ ಸ್ಥಿತಃ'** ಪದಗಳಿಂದ ಹೇಳಲಾಗಿದೆ.

ಪರಿಶಿಷ್ಟ ಭಾವ – 'ನೈವ ಕುರ್ವನ್ನ ಕಾರಯನ್' – ತತ್ತ್ವ ಪ್ರಾಪ್ತಿಯಲ್ಲಿ ಮಾಡುವ ಭಾವವೇ ಬಾಧಕವಾಗಿದೆ. ಮಾಡುವುದರ ಭಾವದಿಂದಲೇ ಕರ್ತೃತ್ವ ಬರುತ್ತದೆ ಮತ್ತು ಕರ್ತೃತ್ವದಿಂದ ವ್ಯಕ್ತಿತ್ವ ಬರುತ್ತದೆ. ಕ್ರಿಯೆಯು ಪ್ರಕೃತಿಯಲ್ಲಿದೆ, ಸ್ವರೂಪದಲ್ಲಿ ಸ್ವತಃ ಅಕ್ರಿಯತೆ ಇದೆ. ಆದ್ದರಿಂದ ಮಾಡುವುದರಿಂದ ಪ್ರಕೃತಿಯೊಂದಿಗೆ ಸಂಬಂಧ ಬೆಳೆಯುತ್ತದೆ ಮತ್ತು ಏನನ್ನೂ ಮಾಡದಿರುವುದರಿಂದ ಸ್ವರೂಪದಲ್ಲಿ ಸ್ವತಃ ಸ್ಥಿತಿ ಉಂಟಾಗುತ್ತದೆ. 'ನಾನು ಏನನ್ನೂ ಮಾಡುವುದಿಲ್ಲ' ಈ ಭಾವವೂ ಮಾಡುವುದರ ಅಂತರ್ಗತವೇ ಆಗಿದೆ. ಆದ್ದರಿಂದ ಮಾಡುವುದರಿಂದಲೂ ಸಂಬಂಧವಿರಬಾರದು ಮತ್ತು ಮಾಡದಿರುವುದರಿಂದಲೂ ಸಂಬಂಧವಿರಬಾರದು – **'ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ'** (೩/೧೮). ಸ್ವರೂಪವು ಮಾಡುವುದು ಮತ್ತು ಮಾಡದಿರುವುದು ಎರಡರಿಂದಲೂ ರಹಿತ ಅರ್ಥಾತ್ ನಿರಪೇಕ್ಷ ತತ್ತ್ವವಾಗಿದೆ.

'ವಶೀ' – ಗುಣಗಳ ಸಂಗದಿಂದಲೇ ಜೀವಿಯು **'ಅವಶ'** ಅರ್ಥಾತ್ ಪರಾಧೀನನಾಗುತ್ತಾನೆ (೩/೫). ಜ್ಞಾನಯೋಗದಿಂದ ಅವಶತೆ ಇಲ್ಲವಾಗುತ್ತದೆ ಮತ್ತು ಜೀವನು 'ವಶೀ' ಅರ್ಥಾತ್ – ಸ್ವಾಧೀನ, ನಿರಪೇಕ್ಷ ಜೀವನನಾಗುತ್ತಾನೆ.

—●—

ಸಂಬಂಧ - ಹಿಂದಿನ ಶ್ಲೋಕದಲ್ಲಿ ಸಾಂಖ್ಯಯೋಗಿಯು ಕರ್ಮಮಾಡುವುದಿಲ್ಲ ಹಾಗೂ ಮಾಡಿಸುವುದೂ ಇಲ್ಲ ಎಂದು ಹೇಳಲಾಗಿದೆ; ಆದರೆ ಭಗವಂತನಾದರೋ ಕರ್ಮಮಾಡಿಸುತ್ತಿರಬಹುದು? ಇದರ ಉತ್ತರವಾಗಿ ಮುಂದಿನ ಶ್ಲೋಕ ಹೇಳುತ್ತಾನೆ —

ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।
ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥ ೧೪॥

ಪ್ರಭುಃ - ಪರಮೇಶ್ವರನು, **ಲೋಕಸ್ಯ** - ಮನುಷ್ಯರ, **ನ, ಕರ್ತೃತ್ವಮ್** - ಕರ್ತೃತ್ವವನ್ನು ರಚಿಸುವುದಿಲ್ಲ, **ನ, ಕರ್ಮಾಣಿ** ಕರ್ಮಗಳ (ಮತ್ತು), **ಕರ್ಮಫಲಸಂಯೋಗಮ್** - ಕರ್ಮಫಲದೊಂದಿಗೆ ಸಂಯೋಗವನ್ನು, **ನ, ಸೃಜತಿ** - ರಚಿಸುವುದಿಲ್ಲ, **ತು** - ಆದರೆ, **ಸ್ವಭಾವಃ** - ಸ್ವಭಾವವೇ, **ಪ್ರವರ್ತತೇ** - ವರ್ತಿಸುತ್ತದೆ. ॥ ೧೪॥

ಪರಮೇಶ್ವರನು ಮನುಷ್ಯರ ಕರ್ತೃತ್ವವನ್ನಾಗಲೀ, ಕರ್ಮವನ್ನಾಗಲೀ, ಕರ್ಮಫಲ ಸಂಯೋಗವನ್ನಾಗಲಿ ರಚಿಸುವುದಿಲ್ಲ, ಆದರೆ ಸ್ವಭಾವವೇ ವರ್ತಿಸುತ್ತಿದೆ. ॥ ೧೪॥

ವ್ಯಾಖ್ಯಾ - **'ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ'**– ಸೃಷ್ಟಿಯ ರಚನೆಯ ಕಾರ್ಯ ಸಗುಣ ಭಗವಂತನದ್ದಾಗಿದೆ. ಅದಕ್ಕಾಗಿ **'ಪ್ರಭುಃ'** ಪದವನ್ನು ಕೊಡಲಾಗಿದೆ. ಭಗವಂತನು ಸರ್ವ ಸಮರ್ಥನಾಗಿದ್ದಾನೆ ಮತ್ತು ಎಲ್ಲರ ಶಾಸಕ, ನಿಯಾಮಕನಾಗಿದ್ದಾನೆ. ಸೃಷ್ಟಿರಚನೆಯ ಕಾರ್ಯ ಮಾಡಿದರೂ ಕೂಡ ಅವನು ಅಕರ್ತನೇ ಆಗಿದ್ದಾನೆ (೪/೧೩).

ಯಾವುದೇ ಕರ್ಮದ ಕರ್ತೃತ್ವದ ಸಂಬಂಧವನ್ನು ಭಗವಂತನು ಮಾಡಿದುದಲ್ಲ, ಮನುಷ್ಯನು ಸ್ವತಃ ಕರ್ಮಗಳ ಕರ್ತೃತ್ವವನ್ನು ರಚಿಸುತ್ತಾನೆ. ಸಮಸ್ತ ಕರ್ಮಗಳು ಪ್ರಕೃತಿಯಿಂದ ಮಾಡಲಾಗುತ್ತವೆ; ಆದರೆ ಮನುಷ್ಯನು ಅಜ್ಞಾನವಶನಾಗಿ ಪ್ರಕೃತಿಯೊಂದಿಗೆ ತಾದಾತ್ಮ್ಯವನ್ನು ಪಡೆದು, ಅದರ ಮೂಲಕ ಆಗುವ ಕರ್ಮಗಳ ಕರ್ತಾ ಆಗುತ್ತಾನೆ (೩/೨೭) ಕರ್ತೃತ್ವದ ಸಂಬಂಧವನ್ನು ಭಗವಂತನೇ ಮಾಡಿದ್ದರೆ, ಭಗವಂತನು ಇದೇ ಅಧ್ಯಾಯದ ೮ನೇ ಶ್ಲೋಕದಲ್ಲಿ **'ನೈವ ಕಿಂಚಿತ್ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್'** ಹೀಗೆ ಹೇಗೆ ಹೇಳುತ್ತಿದ್ದನು? ತಾತ್ಪರ್ಯ-ಕರ್ತೃತ್ವವನ್ನು ಭಗವಂತನು ರಚಿಸಿದುದಲ್ಲ, ಜೀವಿಯು ತನ್ನದೆಂದು ಒಪ್ಪಿಕೊಂಡದ್ದಾಗಿದೆ ಆದ್ದರಿಂದ ಜೀವಿಯು ಇದನ್ನು ತ್ಯಾಗಮಾಡಬಲ್ಲನು.

ಭಗವಂತನು ಇಂತಹ ಜೀವಿಯು ಇಂತಹ ಶುಭ ಅಥವಾ ಅಶುಭ ಕರ್ಮಮಾಡಲೇಬೇಕು ಹೀಗೆ ವಿಧಾನವನ್ನೂ ಮಾಡುವುದಿಲ್ಲ, ಹೀಗೆ ವಿಧಾನ ಮಾಡಿಬಿಟ್ಟಿದ್ದರೆ ವಿಧಿ-ನಿಷೇಧಗಳನ್ನು ಹೇಳುವ ಶಾಸ್ತ್ರ, ಗುರುಗಳು, ಶಿಕ್ಷಣ ಇತ್ಯಾದಿ ಎಲ್ಲವೂ ವ್ಯರ್ಥವಾಗುತ್ತಿದ್ದವು. ಅವುಗಳ ಯಾವ ಸಾರ್ಥಕತೆಯೂ ಉಳಿಯುತ್ತಿರಲಿಲ್ಲ ಮತ್ತು ಕರ್ಮಫಲವನ್ನೂ ಜೀವಿಗೆ ಭೋಗಿಸಬೇಕಾಗುತ್ತಿರಲಿಲ್ಲ. **'ನ ಕರ್ಮಾಣಿ'** ಪದಗಳಿಂದ – ಮನುಷ್ಯನು ಕರ್ಮಮಾಡುವುದರಲ್ಲಿ ಸ್ವತಂತ್ರನಾಗಿದ್ದಾನೆ ಎಂಬುದು ಸಿದ್ಧವಾಗುತ್ತದೆ.

'ನ ಕರ್ಮಫಲ ಸಂಯೋಗಮ್' – ಜೀವಿಯು ಹೇಗೆ ಕರ್ಮ ಮಾಡುತ್ತಾನೋ ಹಾಗೆಯೇ ಅವನಿಗೆ ಭೋಗಿಸಬೇಕಾಗುತ್ತದೆ. ಜಡವಾದ ಕಾರಣ ಕರ್ಮಗಳು ಸ್ವತಃ ತನ್ನ ಫಲವನ್ನು ಉಣ್ಣಿಸಲು ಅಸಮರ್ಥವಾಗಿವೆ. ಆದ್ದರಿಂದ ಕರ್ಮಗಳ ಫಲದ ವಿಧಾನ ಭಗವಂತನು ಮಾಡುತ್ತಾನೆ –

'**ಲಭತೇ ಚ ತತಃ ಕಾಮಾನ್ಮಯೈವ ವಿಹಿತಾನ್ಹಿ ತಾನ್**' (೭/೨೨) ಭಗವಂತನು ಕರ್ಮಗಳ ಫಲವನ್ನೇನೋ ಕೊಡುತ್ತಾನೆ, ಆದರೆ ಆ ಫಲದೊಂದಿಗೆ ಸಂಬಂಧವನ್ನು ಭಗವಂತನು ಜೋಡಿಸದೆ ಜೀವಿಯು ಸ್ವತಃ ಜೋಡಿಸಿಕೊಳ್ಳುವನು. ಜೀವಿಯು ಅಜ್ಞಾನವಶನಾಗಿ ಕರ್ಮಗಳ ಕರ್ತಾ ಆಗಿ ಮತ್ತು ಕರ್ಮಫಲದಲ್ಲಿ ಆಸಕ್ತನಾಗಿ ಕರ್ಮಫಲದೊಂದಿಗೆ ತನ್ನ ಸಂಬಂಧವನ್ನು ಜೋಡಿಸಿ ಕೊಳ್ಳುವನು ಮತ್ತು ಇದರಿಂದ ಸುಖೀ-ದುಃಖೀಯಾಗುತ್ತಾನೆ. ಆವನು ಕರ್ಮಫಲದೊಂದಿಗೆ ಸ್ವತಃ ತನ್ನ ಸಂಬಂಧವನ್ನು ಜೋಡಿಸದಿದ್ದರೆ ಕರ್ಮಫಲದ ಸಂಬಂಧದಿಂದ ಮುಕ್ತನಾಗಿರಬಲ್ಲನು. ಇಂತಹ ಕರ್ಮ ಫಲದೊಂದಿಗೆ ಸಂಬಂಧವನ್ನಿರಿಸಿಕೊಳ್ಳದ ಪುರುಷರಿಗೆ ನಿನೆನೇ ಅಧ್ಯಾಯದ ಇಪ್ಪತ್ತೇಳನೇ ಶ್ಲೋಕದಲ್ಲಿ '**ಸಂನ್ಯಾಸಿನಾಮ್**' ಪದ ಬಂದಿದೆ. ಅವರಿಗೆ ಕರ್ಮಗಳ ಫಲ ಈ ಲೋಕ ಅಥವಾ ಪರಲೋಕದಲ್ಲಿ ಎಲ್ಲಿಯೂ ಸಿಗುವುದಿಲ್ಲ. ಒಂದು ವೇಳೆ ಕರ್ಮಫಲದ ಸಂಬಂಧವನ್ನು ಭಗವಂತನು ಜೋಡಿಸಿದ್ದರೆ ಜೀವನು ಎಂದೂ ಕರ್ಮಫಲದಿಂದ ಮುಕ್ತನಾಗಲಾರನು.

ಎರಡನೇ ಅಧ್ಯಾಯದ ಇಪ್ಪತ್ತೇಳನೇ ಶ್ಲೋಕದಲ್ಲಿ ಭಗವಂತನು '**ಮಾ ಕರ್ಮಫಲಹೇತುರ್ಭೂಃ**' ಅರ್ಥಾತ್ – ಕರ್ಮಫಲಕ್ಕೆ ಹೇತುವೂ ಆಗಬೇಡ ಎಂದು ಹೇಳಿರುವನು. ತಾತ್ಪರ್ಯ – ಸುಖೀ-ದುಃಖೀಯಾಗುವುದು ಅಥವಾ ಆಗದಿರುವುದು, ಕರ್ಮ ಫಲಕ್ಕೆ ಹೇತುವಾಗುವುದು ಅಥವಾ ಆಗದಿರುವುದು ಮನುಷ್ಯನ ಕೈಯಲ್ಲಿದೆ. ಕರ್ಮಫಲದ ಸಂಬಂಧವನ್ನು ಭಗವಂತನು ಮಾಡಿದ್ದರೆ ಮನುಷ್ಯನು ಎಂದೂ ಸುಖ-ದುಃಖಿದಲ್ಲಿ ಸಮನಾಗಲಾರನು ಹಾಗೂ ನಿಷ್ಕಾಮಭಾವದಿಂದ ಕರ್ಮವನ್ನೂ ಮಾಡಲಾರನು. ಅದನ್ನು ಮಾಡುವ ಮಾತನ್ನು ಭಗವಂತನು ಗೀತೆಯಲ್ಲಿ ಅಲ್ಲಲ್ಲಿ ಹೇಳಿರುವನು (೪/೨೦; ೫/೧೦; ೧೪/೨೪ ಇತ್ಯಾದಿ).

ಪ್ರಶ್ನೆ – ಶ್ರುತಿಯಲ್ಲಿ ಹೇಳಿದೆ – ಭಗವಂತನು ಯಾರ ಊರ್ಧ್ವ ಗತಿಯನ್ನು ಮಾಡಲು ಬಯಸುವನೋ, ಅವನಿಂದ ಶುಭ ಕರ್ಮಗಳನ್ನು, ಮಾಡಿಸುತ್ತಾನೆ ಹಾಗೂ ಯಾರ ಅಧೋಗತಿ ಮಾಡಲು ಬಯಸುತ್ತಾನೋ ಅವನಿಂದ ಅಶುಭಕರ್ಮ ಮಾಡಿಸುತ್ತಾನೆ* ಯಾವಾಗ ಭಗವಂತನೇ ಶುಭಾಶುಭ ಕರ್ಮಗಳನ್ನು ಮಾಡಿಸುತ್ತಾನಾದರೆ ಮತ್ತೆ 'ಭಗವಂತನು ಯಾರ ಕರ್ತೃತ್ವ, ಕರ್ಮ ಮತ್ತು ಕರ್ಮಫಲ ಸಂಯೋಗವನ್ನು ರಚಿಸುವುದಿಲ್ಲ' ಹೀಗೆ ಹೇಳುವುದು ಶ್ರುತಿಗೆ ವಿರೋಧವಾಯಿತಲ್ಲ?

ಉತ್ತರ – ನಿಜವಾಗಿ ಮೇಲೆ ಹೇಳಿದ ಶ್ರುತಿಯ ಮಾತಿನ ತಾತ್ಪರ್ಯ – ಶುಭಾ ಶುಭ ಕರ್ಮಗಳನ್ನು, ಮಾಡಿಸಿ ಮನುಷ್ಯನಿಗೆ ಊರ್ಧ್ವಗತಿ ಮತ್ತು ಅಧೋಗತಿ ಮಾಡಿಸುವುದಾಗಿರದೆ ಪ್ರಾರಬ್ಧಕ್ಕನುಸಾರ ಕರ್ಮಫಲವನ್ನು ಉಣಿಸಿ ಜೀವಿಯನ್ನು ಶುದ್ಧ ಮಾಡುವುದರಲ್ಲಿ ಇದೆ.+ ಅರ್ಥಾತ್ – ಮನುಷ್ಯನು ಶುಭಾ-ಶುಭಕರ್ಮಗಳ ಫಲವನ್ನು ಹೇಗೆ ಭೋಗಿಸಬಲ್ಲನೋ, ಭಗವಂತನು ಕೃಪೆಯಿಂದ ಅವನನ್ನು ಕರ್ಮ ಬಂಧನದಿಂದ ಮುಕ್ತನನ್ನಾಗಿಸಿ, ತನ್ನ ವಾಸ್ತವಿಕ ಪ್ರೇಮವನ್ನು ಕರುಣಿಸಲು (ಅವನ ಪ್ರಾರಬ್ಧಕ್ಕನುಸಾರ) ಹಾಗೆಯೇ ಪರಿಸ್ಥಿತಿ ಮತ್ತು ಬುದ್ಧಿಯನ್ನುಂಟುಮಾಡುತ್ತಾನೆ. ಯಾರಾದರು ಮನುಷ್ಯನಿಗೆ ಪ್ರಾರಬ್ಧಕ್ಕನುಸಾರ ಧನದ ಪ್ರಾಪ್ತಿಯಾಗುವುದಿದ್ದರೆ ಅವನನ್ನು ವ್ಯಾಪಾರಾದಿಗಳಲ್ಲಿ ಹಾಗೆಯೇ (ತೊಡಗಿಸಲು) ಪ್ರೇರಣೆ ಕೊಡುತ್ತಾನೆ, ಅರ್ಥಾತ್ ಆಗ ಅವನಿಗೆ ಅಂತಹುದೇ ಬುದ್ಧಿ ಉಂಟಾಗುತ್ತದೆ ಮತ್ತು ಯಾರಿಗಾದರು ಪ್ರಾರಬ್ಧಕ್ಕನುಸಾರ ನಷ್ಟವಾಗುವುದಿದ್ದರೆ ಅವನಿಗೆ ವ್ಯಾಪಾರಾದಿಗಳಲ್ಲಿ ಅಂತಹುದೇ ಪ್ರೇರಣೆ ಕೊಡುತ್ತಾನೆ. ತಾತ್ಪರ್ಯ – ಮನುಷ್ಯನು ಯಾವ ಪ್ರಕಾರದಿಂದ ತನ್ನ ಶುಭಾ-ಶುಭ ಕರ್ಮಗಳ ಫಲವನ್ನು ಭೋಗಿಸಬಲ್ಲನೋ, ಭಗವತ್ ಪ್ರೇರಣೆಯಿಂದ ಅಂತಹುದೇ ಪರಿಸ್ಥಿತಿ ಮತ್ತು ಬುದ್ಧಿ ಉಂಟಾಗುತ್ತದೆ.

'ಭಗವಂತನು ಯಾರ ಊರ್ಧ್ವಗತಿ ಅಥವಾ ಅಧೋಗತಿಯನ್ನು ಮಾಡಲು ಬಯಸುತ್ತಾನೋ ಅವನಿಂದ ಶುಭ ಮತ್ತು ಅಶುಭ ಕರ್ಮ ಮಾಡಿಸುತ್ತಾನೆ' – ಎಂಬುದಾಗಿ ಶ್ರುತಿಯನ್ನು ಅರ್ಥವಿಸಿದರೆ, ಮನುಷ್ಯನು ಕರ್ಮ ಮಾಡುವುದರಲ್ಲಿ ಸರ್ವಥಾ ಪರಾಧೀನನಾದಾನು ಹಾಗೂ ಶಾಸ್ತ್ರಗಳು, ಸಂತ-ಮಹಾತ್ಮರು ಮುಂತಾದವುಗಳ ವಿಧಿ- ನಿಷೇಧ, ಗುರುಗಳ ಉಪದೇಶ ಇತ್ಯಾದಿಗಳು ಎಲ್ಲವೂ ವ್ಯರ್ಥವಾದಿತು. ಆದ್ದರಿಂದ ಇಲ್ಲಿ ಶ್ರುತಿಯ ತಾತ್ಪರ್ಯ ಕರ್ಮಗಳ ಫಲವನ್ನು ಉಣಿಸಿ ಮನುಷ್ಯನನ್ನು ಶುದ್ಧಮಾಡುವುದೇ ಆಗಿದೆ.

'**ಸ್ವಭಾವಸ್ತು ಪ್ರವರ್ತತೆ**' – ಕರ್ತೃತ್ವ, ಕರ್ಮ ಮತ್ತು ಕರ್ಮಫಲದ ಸಂಬಂಧ – ಈ ಮೂರನ್ನೂ ಮನುಷ್ಯನು ತನ್ನ ಸ್ವಭಾವಕ್ಕೆ ವಶನಾಗಿ ಮಾಡುತ್ತಾನೆ. ಇಲ್ಲಿ '**ಸ್ವಭಾವಃ**' ಪದವು ವ್ಯಷ್ಟಿ ಪ್ರಕೃತಿಯು ವಾಚಕವಾಗಿದೆ. ಇದನ್ನು ಸ್ವತಃ ಜೀವನೇ

---

* '**ಏಷ ಹ್ಯೇವ ಸಾಧು ಕರ್ಮ ಕಾರಯತಿ ತಂ ಯಮೇಭ್ಯೋ ಲೋಕೇಭ್ಯ ಉನ್ನಿನೀಷತ ಏಷ ಹ್ಯೇವಾಸಾಧು ಕರ್ಮ ಕಾರಯತಿ ತಂ ಯಮಧೋ ನಿನೀಷತೇ**'॥ (ಕೌಷೀತಕಿ ಬ್ರಾಹ್ಮಣೋಪನಿಷದ ೩/೮)

\+ ಮೂಲದಲ್ಲಿ ಶುಭ (ಪುಣ್ಯ) ಮತ್ತು ಅಶುಭ (ಪಾಪ) ಕರ್ಮಗಳನ್ನು ಮನುಷ್ಯನು ಕಾಮನೆಯ ವಶೀಭೂತನಾಗಿಯೇ ಮಾಡುತ್ತಾನೆ (೩/೩೭). ಅದರ ಫಲ ಕ್ರಮಶಃ ಊರ್ಧ್ವಗತಿ (ಸ್ವರ್ಗಾದಿ ಲೋಕಗಳ ಪ್ರಾಪ್ತಿ) ಮತ್ತು ಅಧೋಗತಿ (ನರಕಗಳ ಪ್ರಾಪ್ತಿ)ಯಾಗುತ್ತದೆ. ಮನುಷ್ಯನು ಮುಕ್ತನಾಗಿ ಭಗವಂತನು ಕೊಟ್ಟಿರುವ ಸ್ವತಂತ್ರತೆಯನ್ನು ಸದುಪಯೋಗ ಮಾಡಿಯೇ ಕಾಮನೆ ಮಾಡುತ್ತಾನೆ.

ರೂಢಿಸಿಕೊಂಡಿರುವನು. ರಾಗ-ದ್ವೇಷಗಳು ಇರುವ ವರೆಗೆ ಸ್ವಭಾವ ಶುದ್ಧವಾಗುವುದಿಲ್ಲ. ಸ್ವಭಾವವು ಶುದ್ಧವಾಗುವವರೆಗೆ ಜೀವನು ಸ್ವಭಾವಕ್ಕೆ ವಶೀಭೂತನಾಗಿರುತ್ತಾನೆ.

ಮೂರನೇ ಅಧ್ಯಾಯದ ಐದನೇ ಶ್ಲೋಕದಲ್ಲಿ **'ಪ್ರಕೃತಿಂ ಯಾಂತಿ ಭೂತಾನಿ'** ಪದಗಳಿಂದ ಭಗವಂತನು – 'ಮನುಷ್ಯನಿಗೆ ತನ್ನ ಪ್ರಕೃತಿ ಅರ್ಥಾತ್ ಸ್ವಭಾವಕ್ಕೆ ವಶೀಭೂತನಾಗಿ ಕರ್ಮಮಾಡಬೇಕಾಗುತ್ತದೆ' ಎಂದು ಹೇಳಿರುವನು. ಅದೇ ಮಾತನ್ನು ಭಗವಂತನು ಇಲ್ಲಿ **'ತು ಸ್ವಭಾವಃ ಪ್ರವರ್ತತೇ'** ಎಂಬ ಪದಗಳಿಂದ ಹೇಳುತ್ತಿರುವನು.

ಪ್ರಕೃತಿ ಅರ್ಥಾತ್ ಸ್ವಭಾವದೊಂದಿಗೆ ಜೀವಿಯ ಸಂಬಂಧ ಒಪ್ಪಿಕೊಂಡಿರುವವರೆಗೆ ಕರ್ತೃತ್ವ, ಕರ್ಮ ಮತ್ತು ಕರ್ಮಫಲ ದೊಂದಿಗೆ ಸಂಯೋಗ – ಈ ಮೂರರಲ್ಲಿ ಜೀವಿಗೆ ಪರತಂತ್ರತೆ ಇದ್ದುಕೊಂಡಿರುತ್ತದೆ. ಅದು ಜೀವಿಯೇ ಮಾಡಿಕೊಂಡಿರುವುದು.

ಮೇಲೆ ಹೇಳಿದ ಪದಗಳಿಂದ ಭಗವಂತನು ಹೇಳುತ್ತಿದ್ದಾನೆ ಕರ್ತೃತ್ವ, ಕರ್ಮ, ಕರ್ಮಫಲ ಸಂಯೋಗ (ಭೋಕ್ತೃತ್ವ) ಮೂರನ್ನೂ ಜೀವನು ತಾನೇ ಮಾಡಿಕೊಂಡಿರುವುದು, ಅದಕ್ಕಾಗಿ ಅವನು ಸ್ವತಃ ಇವುಗಳ ತ್ಯಾಗಗೈದು ನಿರ್ಲಿಪ್ತತೆಯನ್ನು ಅನುಭವಿಸಬಲ್ಲನು.

ಪರಿಶಿಷ್ಟ ಭಾವ – *ಕರ್ತೃತ್ವ, ಕರ್ಮ ಮತ್ತು ಕರ್ಮಫಲದ ಸಂಯೋಗ ಪರಮಾತ್ಮನ ಸೃಷ್ಟಿ ಇರದೆ ಜೀವಿಯ ಸೃಷ್ಟಿಯಾಗಿದೆ. ಅದಕ್ಕಾಗಿ ಇದರ ತ್ಯಾಗದ ಜವಾಬ್ದಾರಿ ಮನುಷ್ಯನ ಮೇಲೆಯೇ ಇದೆ.*

'ಸ್ವಭಾವಸ್ತು ಪ್ರವರ್ತತೇ' – *ನಿಜವಾಗಿ ಪ್ರಪಂಚದೊಂದಿಗೆ ಸಂಬಂಧ ವಿಚ್ಛೇದ ಸ್ವಾಭಾವಿಕವಾಗಿದೆ; ಆದರೆ ಅಸ್ವಾಭಾವಿಕತೆಯಲ್ಲಿ ಸ್ವಾಭಾವಿಕತೆಯನ್ನು ನೋಡುವ ಕಾರಣ ಪ್ರಪಂಚದ ಸಂಬಂಧವೂ ಸ್ವಾಭಾವಿಕವಾಗಿ ಕಂಡುಬರಲು ತೊಡಗಿತು. ಈ ಸ್ವಭಾವ ಸ್ವತಃ ಆಗಿರದೆ ಮಾಡಿಕೊಂಡಿರುವ (ಕೃತ್ರಿಮ)ವಾಗಿದೆ.*

—✺—

ಸಂಬಂಧ - *ಯಾವಾಗ ಭಗವಂತನು ಯಾರ ಕರ್ತೃತ್ವ, ಕರ್ಮ ಮತ್ತು ಕರ್ಮಫಲ ಸಂಯೋಗದ ರಚನೆಮಾಡುವುದಿಲ್ಲವಾದರೆ ಮತ್ತೆ ಅವನು ಯಾರದಾದರೂ ಕರ್ಮಗಳ ಫಲಭಾಗಿ ಹೇಗಾಗಬಲ್ಲನು? ಈ ಮಾತನ್ನು ಮುಂದಿನ ಶ್ಲೋಕದಲ್ಲಿ ಸ್ಪಷ್ಟಪಡಿಸುತ್ತಾನೆ —*

ನಾದತ್ತೇ ಕಸ್ಯಚಿತ್ಪಾಪಂ ನ ಚೈವ ಸುಕೃತಂ ವಿಭುಃ ।
ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ ॥ ೧೫॥

ವಿಭುಃ - ಸರ್ವವ್ಯಾಪಿ ಪರಮಾತ್ಮನು, **ಕಸ್ಯಚಿತ್** - ಯಾರ, **ಪಾಪಮ್** - ಪಾಪಕರ್ಮವನ್ನು, **ನ, ಆದತ್ತೇ** - ಸ್ವೀಕರಿಸುವುದಿಲ್ಲ **ಚ** - ಮತ್ತು **ಸುಕೃತಮ್, ಏವ** - ಶುಭ ಕರ್ಮಗಳನ್ನು ಕೂಡ, (ಆದರೆ), **ಅಜ್ಞಾನೇನ** - ಅಜ್ಞಾನದಿಂದ, **ಜ್ಞಾನಮ್** - ಜ್ಞಾನವು, **ಆವೃತಮ್** - ಮುಚ್ಚಿಹೋಗಿದೆ, **ತೇನ** - ಅದರಿಂದ, **ಜಂತವಃ** - ಎಲ್ಲ ಜೀವರು, **ಮುಹ್ಯಂತಿ** - ಮೋಹಿತರಾಗುತ್ತಾರೆ. ॥ ೧೫॥

ಸರ್ವವ್ಯಾಪೀ ಪರಮಾತ್ಮನು ಯಾರ ಪಾಪಕರ್ಮವನ್ನೂ, ಮತ್ತು ಶುಭಕರ್ಮವನ್ನೂ ಕೂಡ ಸ್ವೀಕರಿಸುವುದಿಲ್ಲ. ಆದರೆ ಅಜ್ಞಾನದಿಂದ ಜ್ಞಾನವು ಮುಚ್ಚಿಹೋಗಿದೆ, ಅದರಿಂದ ಎಲ್ಲ ಜೀವರು ಮೋಹಿತರಾಗುತ್ತಾರೆ. ॥ ೧೫॥

ವ್ಯಾಖ್ಯಾ - **'ನಾದತ್ತೇ ಕಸ್ಯಚಿತ್ಪಾಪಂ ನ ಚೈವ ಸುಕೃತಂ ವಿಭುಃ'** – ಹಿಂದಿನ ಶ್ಲೋಕದಲ್ಲಿ ಯಾರನ್ನು **'ಪ್ರಭುಃ'** ಎಂಬ ಪದದಿಂದ ಹೇಳಲಾಗಿದೆಯೋ ಅದೇ ಪರಮಾತ್ಮನನ್ನು ಇಲ್ಲಿ **'ವಿಭುಃ'** ಪದದಿಂದ ಹೇಳಲಾಗಿದೆ.

ಕರ್ಮಫಲಕ್ಕೆ ಭಾಗಿಯಾಗುವುದು ಎರಡು ಪ್ರಕಾರದಿಂದಾಗುತ್ತದೆ – ಕರ್ಮಮಾಡುವವನೂ ಕೂಡ ಕರ್ಮಫಲಕ್ಕೆ ಭಾಗಿಯಾಗುತ್ತಾನೆ ಮತ್ತು ಬೇರೆಯವರಿಂದ ಕರ್ಮ ಮಾಡಿಸುವವನೂ ಕೂಡ ಕರ್ಮಫಲಕ್ಕೆ ಭಾಗಿಯಾಗುತ್ತಾನೆ. ಆದರೆ ಪರಮಾತ್ಮನು ಯಾರ ಕರ್ಮವನ್ನು ಮಾಡುವವನಲ್ಲ ಮತ್ತು ಕರ್ಮಮಾಡಿಸುವವನೂ ಅಲ್ಲ; ಆದ್ದರಿಂದ ಅವನು ಯಾರದ್ದೆ ಕರ್ಮದ ಫಲಭಾಗಿಯಾಗಲಾರನು.

ಸೂರ್ಯನು ಸಮಸ್ತ ಜಗತ್ತಿಗೆ ಪ್ರಕಾಶಕೊಡುತ್ತಾನೆ ಮತ್ತು ಆ ಪ್ರಕಾಶದೊಳಗೆ ಮನುಷ್ಯರು ಪಾಪ ಹಾಗೂ ಪುಣ್ಯ ಕರ್ಮಗಳನ್ನು ಮಾಡುತ್ತಾರೆ; ಆದರೆ ಆ ಕರ್ಮಗಳೊಂದಿಗೆ ಸೂರ್ಯನಿಗೆ ಕಿಂಚಿತ್ತಾದರೂ ಸಂಬಂಧವಿಲ್ಲ. ಇದೇ ಪ್ರಕಾರ ಪರಮಾತ್ಮತತ್ತ್ವದಿಂದ ಪ್ರಕೃತಿ ಅಸ್ತಿತ್ವವನ್ನು ಪಡೆಯುತ್ತದೆ, ಅರ್ಥಾತ್ – ಇಡೀ ಜಗತ್ತು ಅಸ್ತಿತ್ವಪಡೆಯುತ್ತದೆ. ಅವನ ಸತ್ತೆಯನ್ನು ಪಡೆದುಕೊಂಡು ಪ್ರಕೃತಿ ಮತ್ತು ಅದರ ಕಾರ್ಯ ಜಗತ್ತು-ಶರೀರಾದಿ ಕ್ರಿಯೆಗಳನ್ನು ಮಾಡುತ್ತವೆ. ಆ ಶರೀರಾದಿಗಳಿಂದ ಆಗುವ ಪಾಪ-ಪುಣ್ಯಗಳ ಸಂಬಂಧವು ಪರಮಾತ್ಮತತ್ತ್ವದೊಂದಿಗೆ ಕಿಂಚಿತ್ತೂ ಇಲ್ಲ. ಕಾರಣ – ಭಗವಂತನು ಎಲ್ಲ ಮನುಷ್ಯರಿಗೆ ಸ್ವಾತಂತ್ರ್ಯ ಕೊಟ್ಟಿರುವನು. ಆದ್ದರಿಂದ ಮನುಷ್ಯನು ಆ ಕರ್ಮಗಳ ಫಲಭಾಗಿ ತಾನೆಂದೂ ತಿಳಿಯಬಲ್ಲನು ಹಾಗೂ ಭಗವಂತನನ್ನೂ ತಿಳಿಯಬಲ್ಲನು. ಅರ್ಥಾತ್-ಸಮಸ್ತ ಕರ್ಮಗಳನ್ನೂ ಮತ್ತು ಕರ್ಮಫಲಗಳನ್ನು ಭಗವಂತನಿಗೂ ಅರ್ಪಿಸಬಲ್ಲನು. ಯಾರು ಭಗವಂತನು ಕೊಟ್ಟಿರುವ ಸ್ವಾತಂತ್ರ್ಯತೆಯ ದುರುಪಯೋಗ ಮಾಡಿ ಕರ್ಮಗಳ ಕರ್ತಾ ಮತ್ತು ಭೋಕ್ತಾ ತಾನೆಂದು

ತಿಳಿದುಕೊಳ್ಳುತ್ತಾನೋ, ಅವನು ಬಂಧನದಲ್ಲಿ ಬೀಳುತ್ತಾನೆ. ಅವನ ಕರ್ಮ ಮತ್ತು ಕರ್ಮಫಲವನ್ನು ಭಗವಂತನು ಸ್ವೀಕರಿಸುವುದಿಲ್ಲ, ಆದರೂ ಆ ಸ್ವತಂತ್ರತೆಯನ್ನೂ ಸದುಪಯೋಗ ಮಾಡಿಕೊಂಡು ಕರ್ಮ ಮತ್ತು ಕರ್ಮಫಲವನ್ನು ಭಗವಂತನಿಗೆ ಅರ್ಪಿಸುವವನು ಮುಕ್ತನಾಗುತ್ತಾನೆ. ಅವನ ಕರ್ಮ ಮತ್ತು ಕರ್ಮಫಲವನ್ನು ಭಗವಂತನು ಸ್ವೀಕರಿಸುತ್ತಾನೆ.

ಏಳನೇ ಅಧ್ಯಾಯದ ೨೫ನೇ ಶ್ಲೋಕದಲ್ಲಿ **'ಸರ್ವಸ್ಯ'** ಪದದಿಂದ ಮತ್ತು ೨೬ನೇ ಶ್ಲೋಕದಲ್ಲಿ **'ಕಶ್ಚನ'** ಪದದಿಂದ ಸಾಮಾನ್ಯ ಮನುಷ್ಯರ ಮಾತು ಹೇಳಲಾಗಿದೆಯೋ ಹಾಗೆಯೇ ಇಲ್ಲಿ **'ಕಸ್ಯಚಿತ್'** ಪದದಿಂದ ತನ್ನನ್ನು ಕರ್ತಾ ಹಾಗೂ ಭೋಕ್ತಾ ಎಂದು ತಿಳಿದುಕೊಂಡು ಕರ್ಮಮಾಡುವ ಸಾಮಾನ್ಯ ಮನುಷ್ಯರ ಮಾತನ್ನು ಹೇಳಲಾಗಿದೆ, ಭಕ್ತರ ಮಾತಲ್ಲ. ಕಾರಣ ಭಾವಗ್ರಾಹಿಯಾದ್ದರಿಂದ ಭಗವಂತನು ಭಕ್ತರಿಂದ ಅರ್ಪಿಸಲಾದ ಪತ್ರ, ಪುಷ್ಪ ಇತ್ಯಾದಿ ಪದಾರ್ಥಗಳನ್ನು ಮತ್ತು ಸಂಪೂರ್ಣ ಕರ್ಮಗಳನ್ನು ಸ್ವೀಕರಿಸುತ್ತಾನೆ (೯/೨೬, ೨೭).

'ಅಜ್ಞಾನೇನಾವೃತಂ ಜ್ಞಾನಮ್' – ಸ್ವರೂಪದ ಜ್ಞಾನವು ಎಲ್ಲ ಮನುಷ್ಯರಲ್ಲಿ ಸ್ವತಃ ಸಿದ್ಧವಾಗಿದೆ; ಆದರೆ ಅಜ್ಞಾನದಿಂದ ಈ ಜ್ಞಾನವು ಮುಚ್ಚಿಹೋಗಿದೆ. ಆ ಅಜ್ಞಾನದ ಕಾರಣ ಜೀವನು ಮೂಢತೆಯನ್ನು ಪಡೆದಿರುವನು. ತನ್ನನ್ನು ಕರ್ಮಗಳ ಕರ್ತಾ ಎಂದು ತಿಳಿಯುವುದು ಮೂಢತೆಯಾಗಿದೆ. (೩/೨೭) ಭಗವಂತನಿಂದ ಎಲ್ಲ ಮನುಷ್ಯರಿಗೆ ವಿವೇಕ ಕೊಡಲಾಗಿದೆ. ಅದರ ಮೂಲಕ ಈ ಮೂಢತೆಯ ನಾಶ ಮಾಡಬಹುದು. ಅದಕ್ಕಾಗಿ ಈ ಅಧ್ಯಾಯದ ೮ನೇ ಶ್ಲೋಕದಲ್ಲಿ – ಸಾಂಖ್ಯಯೋಗಿಯು ಎಂದೂ ತನ್ನನ್ನು ಯಾವುದೇ ಕರ್ಮದ ಕರ್ತಾ ಎಂದು ತಿಳಿಯುವುದಿಲ್ಲ ಮತ್ತು ೯ನೇ ಶ್ಲೋಕದಲ್ಲಿ ಸಂಪೂರ್ಣ ಕರ್ಮಗಳ ಕರ್ತೃತ್ವವನ್ನು ವಿವೇಕಪೂರ್ವಕ ಮನಸ್ಸಿನಿಂದ ಬಿಟ್ಟು ಬಿಡಬೇಕೆಂದು ಹೇಳಲಾಗಿದೆ.

ಶರೀರಾದಿ ಸಮಸ್ತ ಪದಾರ್ಥಗಳಲ್ಲಿ ನಿರಂತರ ಪರಿವರ್ತನೆಯಾಗುತ್ತಾ ಇದೆ. ಸ್ವರೂಪದಲ್ಲಿ ಎಂದೂ ಯಾವುದೇ ಪರಿವರ್ತನೆ ಆಗುವುದಿಲ್ಲ. ಸ್ವರೂಪದಿಂದ ಅಪರಿವರ್ತನಶೀಲನಾಗಿದ್ದರೂ ತನ್ನನ್ನು ಪರಿವರ್ತನಶೀಲ ಪದಾರ್ಥಗಳೊಂದಿಗೆ ಒಂದೆಂದು ತಿಳಿಯುವುದು ಅಜ್ಞಾನವಾಗಿದೆ. ಶರೀರಾದಿ ಎಲ್ಲ ಪದಾರ್ಥಗಳು ಬದಲಾಗುತ್ತವೆ – ಇಂತಹ ಅನುಭವ ಯಾರಿಗಿದೆಯೋ ಅವನು ಸ್ವತಃ ಎಂದೂ ಬದಲಾಗುವುದಿಲ್ಲ. ಆದಕ್ಕಾಗಿ ಸ್ವತಃ ಬದಲಾಗುವ ಅನುಭವ ಯಾರಿಗೂ ಆಗುವುದಿಲ್ಲ. ಆದ್ದರಿಂದ 'ನಾನು ಬದಲಾಗುವವನಲ್ಲ' ಈ ಪ್ರಕಾರ ಪರಿವರ್ತನಶೀಲ ಪದಾರ್ಥಗಳಿಂದ ತನ್ನ ಅಸಂಗತೆಯ ಅನುಭವ ಪಡೆಯುವುದರಿಂದ ಅಜ್ಞಾನವು ಇಲ್ಲವಾಗುತ್ತದೆ ಹಾಗೂ ತತ್ತ್ವಜ್ಞಾನ ತನ್ನಿಂದ-ತಾನೇ ಪ್ರಕಟವಾಗುತ್ತದೆ. ಕಾರಣ – ಪ್ರಕೃತಿಯ ಕಾರ್ಯದೊಂದಿಗೆ ತನ್ನ ಸಂಬಂಧವನ್ನು ತಿಳಿಯುವುದರಿಂದಲೇ ತತ್ತ್ವಜ್ಞಾನ ಮುಚ್ಚಿರುತ್ತದೆ.

'ಅಜ್ಞಾನ' ಶಬ್ದದಲ್ಲಿ ಇರುವ **'ನಞ್'** ಸಮಾಸವು ಜ್ಞಾನದ ವಾಚಕವಿರದೆ ಅಲ್ಪಜ್ಞಾನ ಅರ್ಥಾತ್ ಅರೆ ಜ್ಞಾನದ ವಾಚಕವಾಗಿದೆ. ಕಾರಣ-ಜ್ಞಾನದ ಅಭಾವ ಎಂದೂ ಆಗುವುದಿಲ್ಲ, ಬೇಕಾದರೆ ಅನುಭವ ಆಗಲಿ ಆಗದಿರಲಿ ಅದಕ್ಕಾಗಿ ಅರೆ ಜ್ಞಾನವನ್ನೇ ಅಜ್ಞಾನ ವೆಂದು ಹೇಳಲಾಗಿದೆ. ಇಂದ್ರಿಯಗಳ ಮತ್ತು ಬುದ್ಧಿಯ ಜ್ಞಾನವೇ ಅರ್ಧ ಜ್ಞಾನವಾಗಿದೆ. ಈ ಅರೆಜ್ಞಾನಕ್ಕೆ ಮಹತ್ವಕೊಡುವುದರಿಂದ ಇದರ ಪ್ರಭಾವದಿಂದ ಪ್ರಭಾವಿತನಾಗುವುದರಿಂದ ನಿಜವಾದ ಜ್ಞಾನದ ಕಡೆಗೆ ದೃಷ್ಟಿಯೇ ಹೋಗುವುದಿಲ್ಲ ಇದೇ ಅಜ್ಞಾನದ ಮೂಲಕ ಜ್ಞಾನವು ಮುಚ್ಚಿಹೋಗುವುದಾಗಿದೆ.

ಇಂದ್ರಿಯಗಳ ಜ್ಞಾನ ಸೀಮಿತವಾಗಿದೆ, ಇಂದ್ರಿಯಗಳ ಜ್ಞಾನಕ್ಕಿಂತ ಬುದ್ಧಿಯ ಜ್ಞಾನ ಅಸೀಮವಾಗಿದೆ. ಆದರೆ ಬುದ್ಧಿಯ ಜ್ಞಾನವು, ಮನ ಹಾಗೂ ಇಂದ್ರಿಯಗಳ ಜ್ಞಾನ (ತಿಳಿಯುವುದು ಮತ್ತು ತಿಳಿಯದಿರುವುದು)ವನ್ನೂ ಪ್ರಕಾಶಿಸುತ್ತದೆ ಅರ್ಥಾತ್-ಬುದ್ಧಿಯು ತನ್ನ ವಿಷಯ ಪದಾರ್ಥಗಳನ್ನೇ ಪ್ರಕಾಶಿಸುತ್ತದೆ. ಬುದ್ಧಿಯು ಯಾವ ಪ್ರಕೃತಿಯ ಕಾರ್ಯವಾಗಿದೆಯೋ, ಆ ಪ್ರಕೃತಿಯನ್ನು ಬುದ್ಧಿಯು ಪ್ರಕಾಶಿಸಲಾರದು. ಬುದ್ಧಿಯು ಪ್ರಕೃತಿಯನ್ನೂ ಕೂಡ ಪ್ರಕಾಶಿಸಲಾಗದಿದ್ದಾಗ ಪ್ರಕೃತಿಗಿಂತ ಅತೀತವಾಗಿರುವ ಚೇತನ ತತ್ತ್ವವನ್ನು ಹೇಗೆ ಪ್ರಕಾಶಿಸಬಲ್ಲದು? ಅದಕ್ಕಾಗಿ ಬುದ್ಧಿಯ ಜ್ಞಾನವೂ ಅರೆ ಜ್ಞಾನವೇ ಆಗಿದೆ.

'ತೇನ ಮುಹ್ಯಂತಿ ಜಂತವಃ' – ಭಗವಂತನು **'ಜಂತವಃ'** ಪದವನ್ನು ಕೊಟ್ಟು ತನ್ನ ವಿವೇಕಕ್ಕೆ ಮಹತ್ವ ಕೊಡದಿರುವ ಮನುಷ್ಯರು ನಿಜವಾಗಿ ಜಂತು ಅರ್ಥಾತ್-ಪಶುಗಳೇ ಆಗಿದ್ದಾರೆ ಎಂದು ಮನುಷ್ಯರನ್ನು ನಿಂದಿಸುವಂತಿದೆ.* ಏಕೆಂದರೆ ಅವರ ಮತ್ತು ಪಶುಗಳ ಜ್ಞಾನದಲ್ಲಿ ಯಾವ ವ್ಯತ್ಯಾಸವೂ ಇಲ್ಲ, ಆಕೃತಿಮಾತ್ರದಿಂದ ಯಾರೂ ಮನುಷ್ಯರಾಗಲಾರರು. ತನ್ನ ವಿವೇಕಕ್ಕೆ ಮಹತ್ವಕೊಡುವವನೇ ಮನುಷ್ಯನಾಗಿದ್ದಾನೆ. ಇಂದ್ರಿಯಗಳಿಂದ ಭೋಗಗಳಾದರೋ

---

* **ಆಹಾರನಿದ್ರಾಭಯಮೈಥುನಾನಿ ಸಮಾನಿ ಚೈತಾನಿ ನೃಣಾಂ ಪಶೂನಾಮ್।**
ಜ್ಞಾನಂ ನರಾಣಾಮಧಿಕೋ ವಿಶೇಷೋ ಜ್ಞಾನೇನಹೀನಾಃ ಪಶುಭಿಃ ಸಮಾನಾಃ॥ (ಚಾಣಕ್ಯನೀತಿ ೧೭/೧೭)

ಆಹಾರ, ನಿದ್ರಾ, ಭಯ, ಮೈಥುನ – ಈ ನಾಲ್ಕು ಮನುಷ್ಯರಲ್ಲಿ ಮತ್ತು ಪಶುಗಳಲ್ಲಿ ಸಮಾನವಾಗಿದೆ. ಮನುಷ್ಯರಲ್ಲಿರುವ ವಿವೇಕವೇ ವಿಶೇಷವಾಗಿದೆ. ವಿವೇಕದಿಂದ ಶೂನ್ಯನಾದ ಮನುಷ್ಯನು ಪಶುವಿನಂತೆ ಆಗಿದ್ದಾನೆ.

ಪಶುಗಳೂ ಭೋಗಿಸುತ್ತಾರೆ; ಆದರೆ ಆ ಭೋಗಗಳನ್ನು ಭೋಗಿಸುವುದು ಮನುಷ್ಯನ ಗುರಿಯಲ್ಲ. ಮನುಷ್ಯನ ಜೀವನದ ಗುರಿ ಸುಖ-ದುಃಖಗಳಿಂದ ರಹಿತವಾದ ತತ್ತ್ವವನ್ನು ಪಡೆದುಕೊಳ್ಳುವುದಾಗಿದೆ. ತನ್ನ ಕರ್ತವ್ಯ ಮತ್ತು ಅಕರ್ತವ್ಯದ ಜ್ಞಾನವು ಸರಿಯಾಗಿರುವ ಮನುಷ್ಯನೇ ಸಾಧಕನೆಂದು ಹೇಳಲು ಯೋಗ್ಯನಾಗಿದ್ದಾನೆ.

ತನ್ನನ್ನು ಕರ್ಮಗಳ ಕರ್ತಾ ಎಂದು ತಿಳಿಯುವುದು ಹಾಗೂ ಕರ್ಮಫಲಕ್ಕೆ ಕಾರಣನಾಗಿ ಸುಖೀ-ದುಃಖಿಯಾಗುವುದೇ ಅಜ್ಞಾನದಿಂದ ಮೋಹಿತನಾಗುವುದಾಗಿದೆ. ಪಾಪ-ಪುಣ್ಯಗಳನ್ನು ನಾವು ಮಾಡಬೇಕಾಗತ್ತವೆ, ಇವುಗಳಿಂದ ನಾವು ಹೇಗೆ ಬಿಡುಗಡೆಯಾಗಬಲ್ಲೆವು? ಸುಖೀ-ದುಃಖಿ ಯಾಗುವುದು ನಮ್ಮ ಕರ್ಮಗಳ ಫಲವಾಗಿದೆ, ಇವುಗಳಿಂದ ನಾವು ಹೇಗೆ ಅತೀತರಾಗಬಲ್ಲೆವು? ಈ ಪ್ರಕಾರದ ಧೋರಣೆ ಇಟ್ಟುಕೊಳ್ಳುವುದೇ ಅಜ್ಞಾನದಿಂದ ಮೋಹಿತನಾಗುವುದಾಗಿದೆ.

ಜೀವಿಯು ಸ್ವರೂಪದಿಂದ ಅಕರ್ತಾ ಹಾಗೂ ಸುಖ-ದುಃಖಿಗಳಿಂದ ರಹಿತನಾಗಿದ್ದಾನೆ. ಕೇವಲ ತನ್ನ ಮೂರ್ಖತೆಯ ಕಾರಣ ಅವನು ಕರ್ತಾ ಆಗುತ್ತಾನೆ ಮತ್ತು ಕರ್ಮಫಲದೊಂದಿಗೆ ಸಂಬಂಧ ಜೋಡಿಸಿಕೊಂಡು ಸುಖೀ- ದುಃಖಿಯಾಗುತ್ತಾನೆ. ಈ ಮೂಢತೆ (ಅಜ್ಞಾನ)ಯನ್ನೇ ಇಲ್ಲಿ **'ತೇನ'** ಪದದಿಂದ ಹೇಳಲಾಗಿದೆ. ಈ ಮೂಢತೆಯಿಂದ ಅಜ್ಞಾನೀ ಮನುಷ್ಯನು ಸುಖೀ-ದುಃಖಿಯಾಗುತ್ತಿದ್ದಾನೆ, ಈ ಮಾತನ್ನು ಇಲ್ಲಿ **'ತೇನ ಮುಹ್ಯಂತಿ ಜಂತವಃ'** ಪದಗಳಿಂದ ಹೇಳಲಾಗಿದೆ.

ಪರಿಶಿಷ್ಟ ಭಾವ – ಅಂಧಕಾರಕ್ಕೆ ಸೂರ್ಯನನ್ನು ಮುಚ್ಚುವ ಸಾಮರ್ಥ್ಯವಿಲ್ಲದಂತೆ ಅಜ್ಞಾನದಲ್ಲಿ ಜ್ಞಾನವನ್ನು ಮುಚ್ಚುವ ಸಾಮರ್ಥ್ಯವಿಲ್ಲ. ಅಸ್ವಾಭಾವಿಕವನ್ನೇ ಸ್ವಾಭಾವಿಕವೆಂದು ತಿಳಿದುಕೊಂಡಿರುವುದೇ ಅಜ್ಞಾನವಾಗಿದೆ. ಅದರಿಂದ ಮನುಷ್ಯನು ಮೋಹಿತನಾಗುತ್ತಾನೆ. ಆದ್ದರಿಂದ ಅಜ್ಞಾನದಿಂದ ಜ್ಞಾನವನ್ನು ಮುಚ್ಚುವ ಮಾತು ಕೇವಲ ಮೂಢತೆಯ ವಶದಿಂದ ಮಾಡಲಾದ ಮಾನ್ಯತೆಯಾಗಿದೆ, ವಾಸ್ತವಿಕತೆಯಲ್ಲ. ಮನುಷ್ಯನು ಬಯಸಿದರೆ ತನ್ನ ವಿವೇಕಕ್ಕೆ ಮಹತ್ತ್ವವನ್ನು ಕೊಟ್ಟು ಈ ಮೂಢತೆಯನ್ನು ಇಲ್ಲವಾಗಿಸಬಲ್ಲನು *(೫/೧೬)*.

ವಾಸ್ತವವಾಗಿ ಜ್ಞಾನವು ಮುಚ್ಚಿರದೆ ಬುದ್ಧಿಯು ಮುಚ್ಚಿರುತ್ತದೆ. ಆದರೆ ಮನುಷ್ಯನಿಗೆ ಜ್ಞಾನವೇ ಮುಚ್ಚಿರುವಂತೆ ಕಾಣುತ್ತದೆ, ಆದಕ್ಕಾಗಿ ಇಲ್ಲಿ **'ಆವೃತ'** ಶಬ್ದ ಕೊಡಲಾಗಿದೆ. ಇದೇ ಮಾತನ್ನು ೫ನೇ ಅಧ್ಯಾಯದ ೩೯ನೇ ಶ್ಲೋಕದಲ್ಲಿಯೂ **'ಆವೃತಂ ಜ್ಞಾನಮೇತೇನ'** ಪದಗಳಿಂದ ಹೇಳಲಾಗಿದೆ. ಅಜ್ಞಾನವು ಅಭಾವರೂಪವಾಗಿದೆ, ಅದಕ್ಕೆ ಅಸ್ತಿತ್ವ ವಿರುವುದಿಲ್ಲ. ಯಾವುದರ ಅಭಾವವಿದೆಯೋ ಅದರಿಂದ ಆವರಣವಾಗಲಾರದು. ಆದ್ದರಿಂದ ವಿಪರೀತ ಜ್ಞಾನ ಅರ್ಥಾತ್- ಅಸ್ವಾಭಾವಿಕತೆಯಲ್ಲಿ ಸ್ವಾಭಾವಿಕತೆಯ ಆರೋಪವೇ ಅಜ್ಞಾನವಾಗಿದೆ+ ಒಂದೊಮ್ಮೆ ಅಸ್ವಾಭಾವಿಕತೆಯು ಇಲ್ಲವಾಗಿ ಸ್ವಾಭಾವಿಕತೆಯು ಉಂಟಾದರೆ ಸರ್ವವ್ಯಾಪೀ ಪರಮಾತ್ಮನೊಂದಿಗೆ ಏಕತೆಯ ಅನುಭವ ಆಗಿ ಹೋದೀತು. ವ್ಯಕ್ತಿತ್ವವೇ ಪಾಪ-ಪುಣ್ಯವನ್ನು, ಸುಕೃತ- ದುಷ್ಕೃತವನ್ನೂ ಸ್ವೀಕರಿಸುತ್ತದೆ; ಆದ್ದರಿಂದ ಸರ್ವವ್ಯಾಪೀ ಪರಮಾತ್ಮನೊಂದಿಗೆ ಏಕತೆಯ ಅನುಭವ ಉಂಟಾದಾಗ ಅರ್ಥಾತ್ – ವ್ಯಕ್ತಿತ್ವ ಇಲ್ಲವಾದಾಗ ಪಾಪ-ಪುಣ್ಯಗಳ ಸ್ವೀಕಾರವಾಗಲಾರದು. ಅಜ್ಞಾನ ಅರ್ಥಾತ್ – ವಿಪರೀತಜ್ಞಾನ (ಅಸ್ವಾಭಾವಿಕತೆಯಲ್ಲಿ ಸ್ವಾಭಾವಿಕ ಬುದ್ಧಿ)ದ ಕಾರಣ ಮನುಷ್ಯನು 'ಜಂತು' ಆಗುತ್ತಾನೆ **'ತೇನ ಮುಹ್ಯಂತಿ ಜಂತವಃ'**. ಇದೇ ರೀತಿ ಜಡದಿಂದ ಸಂಬಂಧ ಒಪ್ಪಿಕೊಂಡ ಕಾರಣ ಜೀವಿಯು 'ಜಗತ್' (ಜಡ)ವಾಗುತ್ತಾನೆ *(೭/೧೩)*.

ಯಾವುದು ನಮ್ಮಲ್ಲಿ ಬೆರೆತು ಹೋಗಿದೆಯೋ ಆ ಪರಮಾತ್ಮನಾಗಿದ್ದರೂ ನಮ್ಮಿಂದ ಬೇರೆ ಎಂದು ತಿಳಿದುಕೊಂಡೆವು ಮತ್ತು ಯಾವುದು ನಮ್ಮಿಂದ ಬೇರೆಯಾಗಿದೆಯೋ ಆ ಶರೀರವನ್ನು ನಮ್ಮಲ್ಲಿ ಬೆರೆತಂತೆ ತಿಳಿದುಕೊಂಡಿದ್ದೇವೆ – ಇದೇ ಅಜ್ಞಾನವಾಗಿದೆ.

–❀–

ಸಂಬಂಧ - ಹಿಂದಿನ ಶ್ಲೋಕದಲ್ಲಿ ಭಗವಂತನು – ಅಜ್ಞಾನದ ಮೂಲಕ ಜ್ಞಾನವು ಮುಚ್ಚಿ ಹೋದ ಕಾರಣದಿಂದ ಎಲ್ಲ ಜೀವರು ಮೋಹಿತರಾಗುತ್ತಿದ್ದಾರೆ ಎಂದು ಹೇಳಿರುವನು. ತನ್ನ ವಿವೇಕದಿಂದ ಆ ಜ್ಞಾನದ ನಾಶಮಾಡಿದ ಮೇಲೆ ಯಾವ ಜ್ಞಾನದ ಉದಯವಾಗುತ್ತದೋ ಅದರ ಮಹಿಮೆಯನ್ನು ಮುಂದಿನ ಶ್ಲೋಕದಲ್ಲಿ ಹೇಳುತ್ತಾನೆ —

ಜ್ಞಾನೇನ ತು ತದಜ್ಞಾನಂ ಯೇಷಾಂ ನಾಶಿತಮಾತ್ಮನಃ ।
ತೇಷಾಮಾದಿತ್ಯವಜ್ಜ್ಞಾನಂ ಪ್ರಕಾಶಯತಿ ತತ್ಪರಮ್ ॥ ೧೬॥

ತು - ಆದರೆ, **ಯೇಷಾಮ್** - ಯಾರು, **ಆತ್ಮನಃ** - ತನ್ನ ಯಾವ, **ಜ್ಞಾನೇನ** - ಜ್ಞಾನದಿಂದ, **ತತ್** - ಆ, **ಅಜ್ಞಾನಮ್** - ಅಜ್ಞಾನವನ್ನು, **ನಾಶಿತಮ್** - ನಾಶಮಾಡಿರುವನೋ, **ತೇಷಾಮ್** - ಅವನ, **ತತ್** - ಆ, **ಜ್ಞಾನಮ್** - ಜ್ಞಾನವು, **ಆದಿತ್ಯವತ್**

+ **ಅನಿತ್ಯಾಶುಚಿದುಃಖಾನಾತ್ಮಸು ನಿತ್ಯಶುಚಿಸುಖಾತ್ಮಖ್ಯಾತಿರವಿದ್ಯಾ।** (ಯೋ.ದ. ೨/೫)
ಅನಿತ್ಯದಲ್ಲಿ ನಿತ್ಯ, ಅಪವಿತ್ರದಲ್ಲಿ ಪವಿತ್ರ, ದುಃಖದಲ್ಲಿ ಸುಖ ಮತ್ತು ಅನಾತ್ಮದಲ್ಲಿ ಆತ್ಮಭಾವದ ಅನುಭೂತಿಯೇ ಅವಿದ್ಯೆಯಾಗಿದೆ.

- ಸೂರ್ಯನಂತೆ, **ಪರಮ್** - ಪರಮತತ್ತ್ವ ಪರಮಾತ್ಮನನ್ನು, **ಪ್ರಕಾಶಯತಿ** - ಪ್ರಕಾಶಿಸುತ್ತದೆ. ॥ ೧೬॥

ಆದರೆ ಯಾರು ತನ್ನ ಯಾವ ಜ್ಞಾನದಿಂದ ಆ ಅಜ್ಞಾನವನ್ನು ನಾಶಮಾಡಿರುವರೋ, ಅವರ ಆ ಜ್ಞಾನವು ಸೂರ್ಯನಂತೆ ಪರಮತತ್ತ್ವ ಪರಮಾತ್ಮನನ್ನು ಪ್ರಕಾಶಿಸುತ್ತದೆ. ॥ ೧೬॥

ವ್ಯಾಖ್ಯಾ - **'ಜ್ಞಾನೇನ ತು ತದಜ್ಞಾನಂ ಯೇಷಾಂ ನಾಶಿತ ಮಾತ್ಮನಃ'** - ಹಿಂದಿನ ಶ್ಲೋಕದಲ್ಲಿ ಹೇಳಿದ ಮಾತಿಗಿಂತ ವಿಲಕ್ಷಣವಾದ ಮಾತನ್ನು ಹೇಳಲು ಇಲ್ಲಿ **'ತು'** ಪದದ ಪ್ರಯೋಗವಾಗಿದೆ.

ಹಿಂದಿನ ಶ್ಲೋಕದಲ್ಲಿ ಯಾವುದನ್ನು **'ಅಜ್ಞಾನೇನ'** ಪದದಿಂದ ಹೇಳಲಾಗಿತ್ತೋ, ಅದನ್ನೇ ಇಲ್ಲಿ **'ತತ್ ಅಜ್ಞಾನಮ್'** ಪದದಿಂದ ಹೇಳಲಾಗಿದೆ.

ತನ್ನ ಸತ್ಯವನ್ನು ಮತ್ತು ಶರೀರವನ್ನು ಬೇರೆ-ಬೇರೆಯಾಗಿ ತಿಳಿಯುವುದು 'ಜ್ಞಾನ'ವಾಗಿದೆ ಮತ್ತು ಒಂದೆಂದು ತಿಳಿಯುವುದು 'ಅಜ್ಞಾನ'ವಾಗಿದೆ.

ಉತ್ಪತ್ತಿವಿನಾಶಶೀಲ ಪ್ರಪಂಚದ ಯಾವುದೋ ಅಂಶದಲ್ಲಿ ನಾವು ನಮ್ಮನ್ನು ಇರಿಸಿಕೊಂಡೆವು ಅರ್ಥಾತ್ – ನಾನೆಂದು (ಅಹಂತೆ) ಮಾಡಿಕೊಂಡೆವು ಮತ್ತು ಯಾವುದೋ ಅಂಶದಲ್ಲಿ ನಮ್ಮೊಳಗೆ ಇರಿಸಿಕೊಂಡೆವು ಅರ್ಥಾತ್ – ನನ್ನದೆಂಬ (ಮಮತೆ) ಮಾಡಿಕೊಂಡೆವು. ತನ್ನ ಅಸ್ತಿತ್ವವಾದರೋ ನಿರಂತರ ಅನುಭವವಾಗುತ್ತದೆ ಮತ್ತು ನಾನು – ನನ್ನದು ಬದಲಾಗುವುದನ್ನು ಪ್ರತ್ಯಕ್ಷವಾಗಿ ನೋಡುತ್ತೇವೆ. ಮೊದಲು ನಾನು ಬಾಲಕನಾಗಿದ್ದೆ, ಆಟಿಕೆಗಳು ನನ್ನದಾಗಿದ್ದುವು; ಈಗ ನಾನು ಯುವಕ ಅಥವಾ ವೃದ್ಧನಾಗಿದ್ದೇನೆ ಹಾಗೂ ಪತ್ನೀ, ಪುತ್ರ, ಧನ, ಮನೆ ಇತ್ಯಾದಿಗಳು ನನ್ನದಾಗಿವೆ. ಈ ಪ್ರಕಾರ ನಾನು-ನನ್ನದೆಂಬುದರಲ್ಲಿ ಪರಿವರ್ತನೆಯ ಜ್ಞಾನ ನಮಗಿದೆ, ಆದರೆ ನಮ್ಮ ಅಸ್ತಿತ್ವದ ಪರಿವರ್ತನೆಯ ಜ್ಞಾನ ನಮಗಿಲ್ಲ. ಈ ಜ್ಞಾನ ಅರ್ಥಾತ್ ವಿವೇಕವಾಗಿದೆ.

ನಾನು-ನನ್ನದೆಂಬುದನ್ನು ಜಡತೆಯೊಂದಿಗೆ ಸೇರಿಸದೆ ಸಾಧಕನು – 'ನಾನು-ನನ್ನತನವನ್ನು ಯಾವುದರೊಂದಿಗೆ ಸೇರಿಸುತ್ತಾನೋ ಅದೆಲ್ಲ ಬದಲಾಗುತ್ತದೆ; ಆದರೆ ನಾನು-ನನ್ನದು ಹೇಳಿಕೊಳ್ಳುವ ನಾನು (ನನ್ನ ಅಸ್ತಿತ್ವ) ಅದೇ ಆಗಿದ್ದೇನೆ, ಎಂಬ ತನ್ನ ವಿವೇಕಕ್ಕೆ ಮಹತ್ವಕೊಡಬೇಕು. ಜಡವು ಬದಲಾಗುವುದು ಮತ್ತು ಅಭಾವವಾಗುವುದು ತಿಳಿವಳಿಕೆಗೆ ಬರುತ್ತದೆ, ಆದರೆ ಸ್ವಯಂ ಇದರ ಬದಲಾಗುವುದು ಮತ್ತು ಅಭಾವವು ಯಾರ ತಿಳಿವಳಿಕೆಗೂ ಬರುವುದಿಲ್ಲ; ಸ್ವಯಂನಲ್ಲಿ ಸ್ವಲ್ಪವೂ ಪರಿವರ್ತನೆ ಹಾಗೂ ಅಭಾವ ಎಂದೂ ಆಗುವುದಿಲ್ಲ ನಾನು ಶರೀರವಲ್ಲ ಮತ್ತು ಬದಲಾಗುವ ವಸ್ತು ನನ್ನದಲ್ಲ ಈ ವಿವೇಕ ಮೂಲಕ ನಾನು-ನನ್ನತನವನ್ನು ತ್ಯಾಗಮಾಡಿಬಿಡ ಬೇಕು. ಇದೇ ವಿವೇಕದಿಂದ ಅಜ್ಞಾನದ ನಾಶ ಮಾಡುವುದಾಗಿದೆ. ಪರಿವರ್ತನಶೀಲತೆಯ ಜೊತೆಗೆ ಅಪರಿವರ್ತನ ಶೀಲತೆಯ ಸಂಬಂಧ ಅಜ್ಞಾನದಿಂದ ಅರ್ಥಾತ್ ವಿವೇಕಕ್ಕೆ ಮಹತ್ವ ಕೊಡದಿರುವುದರಿಂದ ಆಗಿದೆ. ಯಾರು ವಿವೇಕವನ್ನು ಜಾಗ್ರತಗೊಳಿಸಿ ಪರಿವರ್ತನ ಶೀಲ ನಾನು-ನನ್ನದೆಂಬ ಸಂಬಂಧ ವಿಚ್ಛೇದ ಮಾಡಿಕೊಂಡಿರುವನೋ ಅವನ ಆ ವಿವೇಕವು ಸಚ್ಚಿದಾನಂದ ಘನ ಪರಮಾತ್ಮನನ್ನು ಪ್ರಕಾಶಿತ ಗೊಳಿಸುತ್ತದೆ, ಅರ್ಥಾತ್ - ಅನುಭವ ಮಾಡಿಸುತ್ತದೆ.

'ತೇಷಾಮಾದಿತ್ಯವಜ್ಜ್ಞಾನಂ ಪ್ರಕಾಶಯತಿ ತತ್ಪರಮ್' – ವಿವೇಕವು ಸರ್ವಥಾ ಜಾಗ್ರತವಾದಾಗ ಪರಿವರ್ತನಶೀಲದ ನಿವೃತ್ತಿ ಆಗುತ್ತದೆ. ಪರಿವರ್ತನಶೀಲತೆಯ ನಿವೃತ್ತಿಯಾದಾಗ ತನ್ನ ಸ್ವರೂಪದ ಸ್ವಚ್ಛ ಬೋಧವಾಗುತ್ತದೆ, ಆದು ಆಗುತ್ತಲೇ ಸರ್ವತ್ರ ಪರಿಪೂರ್ಣ ಪರಮಾತ್ಮತತ್ತ್ವವು ಪ್ರಕಾಶಿಸುತ್ತದೆ ಅರ್ಥಾತ್ – ಅದರೊಂದಿಗೆ ಅಭಿನ್ನತೆಯ ಅನುಭವ ವಾಗುತ್ತದೆ.

ಇಲ್ಲಿ **'ಪರಮ್'** ಪದವು ಪರಮಾತ್ಮತತ್ತ್ವಕ್ಕಾಗಿ ಉಪಯೋಗವಾಗಿದೆ. ಎರಡನೇ ಅಧ್ಯಾಯದ ೫೯ನೇ ಶ್ಲೋಕ ಗಳಲ್ಲಿ ಹಾಗೂ ೧೩ನೇ ಅಧ್ಯಾಯದ ೩೪ನೇ ಶ್ಲೋಕದಲ್ಲಿಯೂ ಪರಮಾತ್ಮತತ್ತ್ವಕ್ಕಾಗಿ **'ಪರಮ್'** ಪದ ಬಂದಿದೆ.

'ಪ್ರಕಾಶಯತಿ' ಪದದ ತಾತ್ಪರ್ಯ – ಸೂರ್ಯನು ಉದಯಿಸಿದಾಗ ಹೊಸ ವಸ್ತುವಿನ ನಿರ್ಮಾಣವಾಗದೆ ಕತ್ತಲೆಯಿಂದ ಮುಚ್ಚಿಹೋದ ಕಾರಣ ಕಾಣದಿರುವ ವಸ್ತುವು ಕಂಡುಬರುತ್ತದೆ. ಇದೇ ಪ್ರಕಾರ ಪರಮಾತ್ಮತತ್ತ್ವವು ಸ್ವತಃ ಸಿದ್ಧವಾಗಿದೆ, ಆದರೆ ಅಜ್ಞಾನದ ಕಾರಣ ಅದರ ಅನುಭವ ಆಗುತ್ತಿರಲಿಲ್ಲ. ವಿವೇಕದಿಂದ ಅಜ್ಞಾನವು ಇಲ್ಲವಾಗುತ್ತಲೇ ಆ ಸ್ವತಃ ಸಿದ್ಧ ಪರಮಾತ್ಮತತ್ತ್ವದ ಅನುಭವವು ಆಗತೊಡಗುತ್ತದೆ.

ಪರಿಶಿಷ್ಟ ಭಾವ – ಅಜ್ಞಾನದ ನಾಶವು ವಿವೇಕದಿಂದಲೇ ಆಗುತ್ತದೆ, ಉದ್ಯೋಗದಿಂದ ಅಲ್ಲ – **'ಯತತೋಽಪ್ಯಕೃತಾತ್ಮಾನೋ ನೈನಂ ಪಶ್ಯತ್ಯಚೇತಸಃ'** (೧೫/೧೧) ಕಾರಣ – ಅಜ್ಞಾನದ ನಾಶ ಕ್ರಿಯಾಸಾಧ್ಯ, ಪರಿಶ್ರಮ ಸಾಧ್ಯವಲ್ಲ. ಪರಿಶ್ರಮ ಪಡುವುದರಿಂದ ಶರೀರದೊಂದಿಗೆ ಸಂಬಂಧ ಉಳಿದುಕೊಳ್ಳುತ್ತದೆ; ಏಕೆಂದರೆ ಶರೀರ ದೊಂದಿಗೆ ಸಂಬಂಧ ಜೋಡಿಸಿದಲ್ಲದೆ ಪರಿಶ್ರಮವಾಗುವುದಿಲ್ಲ. ಇನ್ನೊಂದು ಮಾತು – ಅಜ್ಞಾನವನ್ನು ಇಲ್ಲವಾಗಿಸಲು ಮಾಡುವ ಉದ್ಯೋಗದಿಂದ ಅಜ್ಞಾನವು ದೃಢವಾಗುತ್ತದೆ; ಏಕೆಂದರೆ, ಅದರ ಅಸ್ತಿತ್ವವನ್ನು ಒಪ್ಪಿಕೊಂಡೇ ಅದನ್ನು ಇಲ್ಲವಾಗಿಸಲು ಉದ್ಯೋಗ ಮಾಡುತ್ತಾರೆ.

ಅಸ್ವಾಭಾವಿಕತೆಯಲ್ಲಿ ಸ್ವಾಭಾವಿಕತೆಯ ವಿಪರೀತ ಭಾವನೇ (ಅಜ್ಞಾನ) ತನ್ನಲ್ಲೇ ಇದೆ. ಆದ್ದರಿಂದ ವಿವೇಕಕ್ಕೆ ಆದರ ಕೊಡುವುದರಿಂದ ಆದರ ನಿರಾಕರಣೆಯಾಗುತ್ತದೆ.

—•—

ಸಂಬಂಧ - ಯಾವ ಸ್ಥಿತಿಯಲ್ಲಿ ಸರ್ವತ್ರ ಪರಿಪೂರ್ಣ ಪರಮಾತ್ಮತತ್ತ್ವದ ಅನುಭವವಾಗುತ್ತದೋ ಆ ಸ್ಥಿತಿ ಪ್ರಾಪ್ತಿಯ ಸಾಧನೆಯನ್ನು ಮುಂದಿನ ಶ್ಲೋಕದಲ್ಲಿ ಹೇಳುತ್ತಾನೆ —

ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾಸ್ತತ್ಪರಾಯಣಾಃ ।
ಗಚ್ಛಂತ್ಯಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ ॥ ೧೭॥

ತದಾತ್ಮಾನಃ - ಯಾರ ಮನಸ್ಸು ತದಾಕಾರವಾಗಿದೆಯೋ **ತದ್ಬುದ್ಧಯಃ** - ಯಾರ ಬುದ್ಧಿಯು ತದಾಕಾರವಾಗಿದೆಯೋ, **ತನ್ನಿಷ್ಠಾಃ**- ಯಾರ ನಿಷ್ಠೆ ಪರಮಾತ್ಮನಲ್ಲಿದೆಯೋ (ಅಂತಹ), **ತತ್ಪರಾಯಣಾಃ** - ಪರಮಾತ್ಮಪರಾಯಣ ಸಾಧಕರು, **ಜ್ಞಾನನಿರ್ಧೂತ ಕಲ್ಮಷಾಃ**- ಜ್ಞಾನದಿಂದ ಪಾಪರಹಿತರಾಗಿ, **ಅಪುನರಾವೃತ್ತಿಮ್** - ಅಪುನರಾವೃತ್ತಿ (ಪರಮಗತಿ)ಯನ್ನು, **ಗಚ್ಛಂತಿ** - ಪಡೆಯುತ್ತಾರೆ. ॥ ೧೭॥

ಯಾರ ಮನಸ್ಸು ಮತ್ತು ಬುದ್ಧಿಯು ತದಾಕಾರವಾಗಿದೆಯೋ, ಯಾರ ನಿಷ್ಠೆ ಪರಮಾತ್ಮನಲ್ಲಿದೆಯೋ, ಅಂತಹ ಪರಮಾತ್ಮಪರಾಯಣ ಸಾಧಕರು ಜ್ಞಾನದಿಂದ ಪಾಪರಹಿತರಾಗಿ ಅಪುನರಾವೃತ್ತಿ (ಪರಮಗತಿ)ಯನ್ನು ಪಡೆಯುತ್ತಾರೆ. ॥

ವ್ಯಾಖ್ಯಾ - [ಪರಮಾತ್ಮತತ್ತ್ವದ ಅನುಭವ ಪಡೆಯಲು ಎರಡು ಪ್ರಕಾರದ ಸಾಧನೆಗಳಿವೆ – ಒಂದು, ವಿವೇಕದಿಂದ ಅಸತ್ತಿನ ತ್ಯಾಗ ಗೈದು ಸತ್ತಿನಲ್ಲಿ ಸ್ವರೂಪ ಸ್ಥಿತಿ ತನ್ನಿಂದ-ತಾನೇ ಉಂಟಾಗುತ್ತದೆ; ಮತ್ತೊಂದು – ಸತ್ತಿನ ಚಿಂತನೆ ಮಾಡುತ್ತಾ ಮಾಡುತ್ತಾ ಸತ್ತಿನ ಪ್ರಾಪ್ತಿಯಾಗುತ್ತದೆ. ಚಿಂತನೆಯಿಂದ ಸತ್ತಿನ ಪ್ರಾಪ್ತಿಯೇ ಆಗುತ್ತದೆ. ಅಸತ್ತಿನ ಪ್ರಾಪ್ತಿ ಕರ್ಮಗಳಿಂದ ಆಗುತ್ತದೆ, ಚಿಂತನೆಯಿಂದಲ್ಲ, ಉತ್ಪತ್ತಿ ವಿನಾಶಶೀಲ ವಸ್ತುವು ಕರ್ಮಗಳಿಂದ ದೊರೆಯುತ್ತದೆ ಮತ್ತು ನಿತ್ಯ ಪರಿಪೂರ್ಣ ತತ್ತ್ವವು ಚಿಂತನೆಯಿಂದ ದೊರೆಯುತ್ತದೆ. ಚಿಂತನೆಯಿಂದ ಪರಮಾತ್ಮನು ಹೇಗೆ ಪ್ರಾಪ್ತನಾಗುತ್ತಾನೆ ಇದರ ವಿಧಿಯನ್ನು ಈ ಶ್ಲೋಕದಲ್ಲಿ ಹೇಳುತ್ತಾನೆ.]

'ತದ್ಬುದ್ಧಯಃ' – ನಿಶ್ಚಯ ಮಾಡುವ ವೃತ್ತಿಯ ಹೆಸರು 'ಬುದ್ಧಿ' ಯಾಗಿದೆ. ಸಾಧಕನು ಮೊದಲಿಗೆ ಬುದ್ಧಿಯಿಂದ ಸರ್ವತ್ರ ಒಂದೇ ಪರಮಾತ್ಮತತ್ತ್ವವು ಪರಿಪೂರ್ಣವಾಗಿದೆ ಎಂದು ನಿಶ್ಚಯಿಸಿಕೊಳ್ಳಬೇಕು. ಪ್ರಪಂಚವು ಉತ್ಪನ್ನವಾಗುವ ಮೊದಲು ಪರಮಾತ್ಮನಿದ್ದನು, ನಷ್ಟವಾದ ಮೇಲೆಯೂ ಇರುವನು. ನಡುವಿನಲ್ಲಿಯೂ ಪ್ರಪಂಚದ ಪ್ರವಾಹ ನಡೆಯುತ್ತಿದೆಯೋ, ಅದರಲ್ಲಿಯೂ ಪರಮಾತ್ಮನು ಹೇಗಿರುವನೋ– ಹಾಗೆಯೇ ಇದ್ದಾನೆ. ಈ ಪ್ರಕಾರ ಪರಮಾತ್ಮನ ಅಸ್ತಿತ್ವ (ಇರುವಿಕೆ)ದಲ್ಲಿ ಅಚಲಸ್ಥಿತಿ ಉಂಟಾಗುವುದೇ **'ತದ್ಬುದ್ಧಯಃ'** ಪದದ ಅರ್ಥವಾಗಿದೆ.

'ತದಾತ್ಮಾನಃ' – ಇಲ್ಲಿ ಆತ್ಮಾ ಶಬ್ದವು ಮನಸ್ಸಿನವಾಚಕವಾಗಿದೆ. ಬುದ್ಧಿಯಲ್ಲಿ ಒಂದು ಪರಮಾತ್ಮತತ್ತ್ವದ ನಿಶ್ಚಯವಾದಾಗ ಮನಸ್ಸಿನಿಂದ ಸ್ವಾಭಾವಿಕವಾಗಿ ಪರಮಾತ್ಮತತ್ತ್ವದ ಚಿಂತನೆ ಆಗ ತೊಡಗುತ್ತದೆ. ಎಲ್ಲ ಕ್ರಿಯೆಗಳು ಮಾಡುತ್ತಿರುವಾಗಲೂ ಸತ್ತಾರೂಪದಿಂದ ಎಲ್ಲ ಕಡೆಗಳಲ್ಲಿ ಒಂದು ಪರಮಾತ್ಮತತ್ತ್ವವೇ ಇದೆ ಎಂಬ ಈ ಚಿಂತನೆಯು ಅವಿಂಡವಾಗಿರುತ್ತದೆ. ಚಿಂತನೆಯಲ್ಲಿ ಪ್ರಪಂಚದ ಸತ್ತೆಯು ಬರುವುದೇ ಇಲ್ಲ.

'ತನ್ನಿಷ್ಠಾಃ' – ಸಾಧಕನ ಮನಸ್ಸು ಮತ್ತು ಬುದ್ಧಿಯು ಪರಮಾತ್ಮನಲ್ಲಿ ತೊಡಗಿದಾಗ ಅವನು ಎಲ್ಲಾ ಸಮಯದಲ್ಲಿ ಪರಮಾತ್ಮನಲ್ಲಿ ತನ್ನ (ಸ್ವಯಂ) ಸ್ವಾಭಾವಿಕ ಸ್ಥಿತಿಯನ್ನು ಅನುಭವಿಸುತ್ತಾನೆ. ಮನ-ಬುದ್ಧಿಗಳು ಪರಮಾತ್ಮನಲ್ಲಿ ತೊಡಗುವವರೆಗೆ, ಅರ್ಥಾತ್ – ಮನಸ್ಸಿನಿಂದ ಪರಮಾತ್ಮನ ಚಿಂತನೆ ಮತ್ತು ಬುದ್ಧಿಯಿಂದ ಪರಮಾತ್ಮನ ನಿಶ್ಚಯವಾಗುವವರೆಗೆ ಪರಮಾತ್ಮನಲ್ಲಿ ತನ್ನ ಸ್ವಾಭಾವಿಕ ಸ್ಥಿತಿ ಇದ್ದರೂ ಕೂಡ ಅದರ ಅನುಭವವಾಗುವುದಿಲ್ಲ.

'ತತ್ಪರಾಯಣಾಃ' – ಪರಮಾತ್ಮನಿಂದ ಬೇರೆಯಾದ ಸತ್ತೆಯು ಇಲ್ಲದಿರುವುದೇ ಪರಮಾತ್ಮನಲ್ಲಿ ಪರಾಯಣನಾಗುವುದಾಗಿದೆ. ಪರಮಾತ್ಮನಲ್ಲಿ ತನ್ನ ಸ್ಥಿತಿಯನ್ನು ಅನುಭವಿಸಿದಾಗ ತನ್ನ ಸತ್ತೆಯು ಪರಮಾತ್ಮನ ಸತ್ತೆಯಲ್ಲಿ ಲೀನವಾಗುತ್ತದೆ ಮತ್ತು ಸ್ವತಃ ಪರಮಾತ್ಮ ಸ್ವರೂಪವೇ ಆಗುತ್ತಾನೆ.

ಸಾಧಕ ಮತ್ತು ಸಾಧನೆಯ ಏಕತೆ ಆಗುವವರೆಗೆ ಸಾಧನೆ ಖಂಡವಾಗುತ್ತದೆ, ಅವಿಂಡವಾಗಿರುವುದಿಲ್ಲ, ಸಾಧಕತನ ಅರ್ಥಾತ್ ಅಹಂಭಾವ ಅಳಿದುಹೋದಾಗ ಸಾಧನೆಯು ಸಾಧ್ಯ ರೂಪವೇ ಆಗುತ್ತದೆ; ಏಕೆಂದರೆ ನಿಜವಾಗಿ ಸಾಧನೆ ಮತ್ತು ಸಾಧ್ಯ ಎರಡರಲ್ಲಿಯೂ ನಿತ್ಯ ಏಕತೆ ಇದೆ.

'ಜ್ಞಾನನಿರ್ಧೂತಕಲ್ಮಷಾಃ' – ಜ್ಞಾನ ಅರ್ಥಾತ್ ಸತ್-ಅಸತ್ತಿನ ವಿವೇಕದ ಜಾಗೃತಿ ಆದಾಗ ಅಸತ್ತಿನ ಸರ್ವಥಾ ನಿವೃತ್ತಿ ಆಗಿ ಹೋಗುತ್ತದೆ. ಅಸತ್ತಿನ ಸಂಬಂಧದಿಂದಲೇ ಪಾಪ-ಪುಣ್ಯರೂಪೀ ಕಲ್ಮಷ ಉಂಟಾಗುತ್ತದೆ, ಅದರಿಂದ ಮನುಷ್ಯನು ಬಂಧಿತನಾಗುತ್ತಾನೆ. ಅಸತ್ತಿನಿಂದ ಸರ್ವಥಾ ಸಂಬಂಧ ವಿಚ್ಛೇದವಾದಾಗ ಪಾಪ-ಪುಣ್ಯಗಳು ಇಲ್ಲವಾಗುತ್ತವೆ.

'ಗಚ್ಛಂತ್ಯಪುನರಾವೃತ್ತಿಮ್'–ಅಸತ್ತಿನ ಸಂಗವೇ ಪುನರಾ

ವೃತ್ತಿ (ಪುನರ್ಜನ್ಮ)ಯ ಕಾರಣವಾಗಿದೆ – **'ಕಾರಣಂ ಗುಣಸಂಗೋಽಸ್ಯ ಸದಸದ್ಯೋನಿಜನ್ಮಸು'** (೧೩/೨೧). ಅಸತ್ತಿನ ಸಂಗವು ಸರ್ವಥಾ ಇಲ್ಲವಾದಾಗ ಪುನರಾವೃತ್ತಿಯ ಪ್ರಶ್ನೆಯೇ ಉಂಟಾಗುವುದಿಲ್ಲ.

ಏಕದೇಶೀಯವಾಗಿರುವ ವಸ್ತುವೇ ಬಂದು-ಹೋಗುವುದಾಗಿರುತ್ತದೆ. ಸರ್ವತ್ರ ಪರಿಪೂರ್ಣ ವಸ್ತುವು ಎಲ್ಲಿಂದ ಬರುವುದು, ಎಲ್ಲಿಗೆ ಹೋಗುವುದು? ಪರಮಾತ್ಮನು ಸಮಸ್ತ ದೇಶ, ಕಾಲ, ವಸ್ತು, ಪರಿಸ್ಥಿತಿ ಇತ್ಯಾದಿಗಳಲ್ಲಿ ಏಕರಸ ಪರಿಪೂರ್ಣನಾಗಿರುತ್ತಾನೆ. ಅವನು ಎಲ್ಲಿಗೂ ಬರುವುದು ಹೋಗುವುದು ಇರುವುದಿಲ್ಲ. ಅದಕ್ಕಾಗಿ ಪರಮಾತ್ಮ ಸ್ವರೂಪವೇ ಆದ ಮಹಾಪುರುಷನೂ ಕೂಡ ಎಲ್ಲಿಗೂ ಬರುವುದು ಹೋಗುವುದು ಇರುವುದಿಲ್ಲ. ಶ್ರುತಿ ಹೇಳುತ್ತದೆ **'ನ ತಸ್ಯ ಪ್ರಾಣಾ ಉತ್ಕ್ರಾಮಂತಿ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ'** (ಬೃಹದಾರಣ್ಯಕ ೪/೪/೬) ಅವನ ಪ್ರಾಣಗಳು ಉತ್ಕ್ರಮಣವಾಗುವುದಿಲ್ಲ; ಅವನು ಬ್ರಹ್ಮವೇ ಆಗಿ ಬ್ರಹ್ಮವನ್ನು ಪಡೆಯುತ್ತಾನೆ.

ಅವನದೆಂದು ಹೇಳಿಕೊಳ್ಳುವ ಶರೀರದಿಂದಾಗಿಯೇ ಅವನ ಪುನರ್ಜನ್ಮವಾಗುವುದಿಲ್ಲವೆಂದು ಹೇಳಲಾಗುತ್ತದೆ. ನಿಜವಾಗಿ ಇಲ್ಲಿ **'ಗಚ್ಛಂತಿ'** ಪದದ ತಾತ್ಪರ್ಯ – ನಿಜವಾದ ಬೋಧವಾಗುವುದು, ಅದು ಆಗುತ್ತಲೇ ನಿತ್ಯಪ್ರಾಪ್ತ ಪರಮಾತ್ಮತತ್ತ್ವದ ಅನುಭವವಾಗುತ್ತದೆ.

ಪರಿಶಿಷ್ಟ ಭಾವ – ಅಸ್ವಾಭಾವಿಕತೆಯಲ್ಲಿ ಸ್ವಾಭಾವಿಕತೆಯ ಭಾವನೆ ಇಲ್ಲವಾದಾಗ ಓರ್ವ ಪರಮಾತ್ಮನಲ್ಲದೆ ಬೇರೆ ಯಾವುದರ ಸ್ವತಂತ್ರ ಸತ್ತೆಯು ಇರುವುದಿಲ್ಲ ಮತ್ತು ಸಾಧಕನು ಪರಮಾತ್ಮ ಸ್ವರೂಪವೇ ಆಗುತ್ತಾನೆ. ಅದು ನಿಜವಾಗಿ ಸ್ವತಃ ಸಿದ್ಧವಾಗಿದೆ. ಆದ್ದರಿಂದ ಅವನು ಸಂಸಾರ ಬಂಧನದಲ್ಲಿ ಬೀಳುವ ಪ್ರಶ್ನೆಯೇ ಉಂಟಾಗುವುದಿಲ್ಲ – **'ಸರ್ಗೇಽಪಿ ನೋಪಜಾಯಂತೇ ಪ್ರಲಯೇ ನ ವ್ಯಥಂತಿ ಚ'** (೧೪/೨).

–✱–

ಸಂಬಂಧ - ಹಿಂದಿನ ಶ್ಲೋಕದಲ್ಲಿ ವರ್ಣಿಸಿರುವ ಸಾಧನೆಗಳಿಂದ ಸಿದ್ಧನಾದ ಮಹಾಪುರುಷನ ಜ್ಞಾನವು ವ್ಯವಹಾರಕಾಲದಲ್ಲಿ ಹೇಗಿರುತ್ತದೆ? ಇದನ್ನು ಮುಂದಿನ ಶ್ಲೋಕದಲ್ಲಿ ಹೇಳುತ್ತಾನೆ —

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥ ೧೮॥

ಪಂಡಿತಾಃ - ಜ್ಞಾನೀ ಮಹಾಪುರುಷರು, **ವಿದ್ಯಾವಿನಯಸಂಪನ್ನೇ** - ವಿದ್ಯಾವಿನಯ ಸಂಪನ್ನನಾದ, **ಬ್ರಾಹ್ಮಣೇ** - ಬ್ರಾಹ್ಮಣನಲ್ಲಿ, **ಚ** - ಮತ್ತು, **ಶ್ವಪಾಕೇ** - ಚಾಂಡಾಲನಲ್ಲಿ, **ಚ** - ಹಾಗೂ, **ಗವಿ** - ಹಸುವಿನಲ್ಲಿ, **ಹಸ್ತಿನಿ** - ಆನೆಯಲ್ಲಿ (ಮತ್ತು), **ಶುನಿ** - ನಾಯಿಯಲ್ಲಿ, **ಏವ** - ಕೂಡ, **ಸಮದರ್ಶಿನಃ** - ಸಮರೂಪೀ ಪರಮಾತ್ಮನನ್ನು ನೋಡುತ್ತಾರೆ. ॥ ೧೮॥

ಜ್ಞಾನೀ ಮಹಾಪುರುಷರು ವಿದ್ಯಾವಿನಯ ಸಂಪನ್ನನಾದ ಬ್ರಾಹ್ಮಣನಲ್ಲಿ ಮತ್ತು ಚಾಂಡಾಲನಲ್ಲಿ ಹಾಗೂ ಹಸುವಿನಲ್ಲಿ, ಆನೆಯಲ್ಲಿ, ನಾಯಿಯಲ್ಲಿಯೂ ಕೂಡ ಸಮರೂಪೀ ಪರಮಾತ್ಮನನ್ನು ನೋಡುತ್ತಾರೆ. ॥ ೧೮॥

ವ್ಯಾಖ್ಯಾ – **'ವಿದ್ಯಾವಿನಯಸಂಪನ್ನೇ..... ಪಂಡಿತಾಃ ಸಮದರ್ಶಿನಃ'**–ಇಲ್ಲಿ ಬ್ರಾಹ್ಮಣನಿಗಾಗಿ ಎರಡು ವಿಶೇಷಣಗಳನ್ನು ಕೊಡಲಾಗಿದೆ. ವಿದ್ಯಾ ಮತ್ತು ವಿನಯಯುಕ್ತ ಅರ್ಥಾತ್ ಇಂತಹ ಬ್ರಾಹ್ಮಣನು ವಿದ್ವಾಂಸನೂ ಮತ್ತು ವಿನಮ್ರ ಸ್ವಭಾವವುಳ್ಳವನೂ (ಬ್ರಾಹ್ಮಣತ್ವದ ಅಭಿಮಾನದಿಂದ ರಹಿತ) ಆಗಿದ್ದಾನೋ ಅವನು. ಬ್ರಾಹ್ಮಣನಾದ್ದರಿಂದ ಅವನು ಜಾತಿಯಿಂದ ಶ್ರೇಷ್ಠನಾಗಿಯೇ ಇದ್ದಾನೆ. ಜೊತೆ-ಜೊತೆಗೆ ವಿದ್ಯಾ ಮತ್ತು ವಿನಯದಿಂದಲೂ ಸಂಪನ್ನನಾಗಿದ್ದಾನೆ ಇದು ಬ್ರಾಹ್ಮಣತ್ವದ ಪೂರ್ಣತೆಯಾಗಿದೆ. ಪೂರ್ಣತೆ ಇದ್ದಲ್ಲಿ ಅಭಿಮಾನವಿರುವುದಿಲ್ಲ. ಪೂರ್ಣತೆ ಇಲ್ಲದ ಕಡೆಯಲ್ಲೇ ಅಭಿಮಾನ ವಿರುತ್ತದೆ.

ಬ್ರಾಹ್ಮಣ ಮತ್ತು ಚಾಂಡಾಲನಲ್ಲಿ ಹಾಗೂ ಹಸು, ಆನೆ, ನಾಯಿಯಲ್ಲಿ ವ್ಯಾವಹಾರಿಕ ವಿಷಮತೆ ಅನಿವಾರ್ಯವಾಗಿದೆ. ಇವುಗಳೊಂದಿಗೆ ಸಮಾನವಾದ ವರ್ತನೆ ಶಾಸ್ತ್ರವೂ ಹೇಳುವುದಿಲ್ಲ, ಉಚಿತವೂ ಅಲ್ಲ, ಮಾಡಲು ಸಾಧ್ಯವೂ ಇಲ್ಲ. ವಿದ್ಯಾವಿನಯ ಸಂಪನ್ನ ಬ್ರಾಹ್ಮಣನ ಪೂಜೆ ಮಾಡಲಾಗುತ್ತದೆ, ಚಾಂಡಾಲನದ್ದಲ್ಲ; ಹಾಲು ಹಸುವಿನದ್ದೆ ಕುಡಿಯಲಾಗುತ್ತದೆ, ನಾಯಿಯದಲ್ಲ; ಸವಾರಿ ಆನೆಯ ಮೇಲೆ ಮಾಡಲಾಗುತ್ತದೆ, ನಾಯಿಯ ಮೇಲಲ್ಲ. ಈ ಐದೂ ಪ್ರಾಣಿಗಳ ಉದಾಹರಣೆಯನ್ನು ಕೊಟ್ಟು ಭಗವಂತನು – ಇವುಗಳಲ್ಲಿ ವ್ಯವಹಾರದ ಸಮತೆ ಸಂಭವವಿಲ್ಲದಿದ್ದರೂ ತತ್ತ್ವತಃ ಎಲ್ಲದರಲ್ಲಿ ಒಂದೇ ಪರಮಾತ್ಮತತ್ತ್ವ ಪರಿಪೂರ್ಣವಾಗಿದೆ. ಮಹಾಪುರುಷರ ದೃಷ್ಟಿಯು ಆ ಪರಮಾತ್ಮತತ್ತ್ವದಲ್ಲೇ ಸದಾ- ಸರ್ವದಾ ಇರುತ್ತದೆ. ಅದಕ್ಕಾಗಿ ಅವನ ದೃಷ್ಟಿಯು ಎಂದೂ ವಿಷಮವಾಗುವುದಿಲ್ಲ.

ದೃಷ್ಟಿಯು ವಿಷಮವಾಗದೆ ವ್ಯವಹಾರದಲ್ಲಿ ಭಿನ್ನತೆ ಹೇಗಾದೀತು? ಎಂಬ ಪ್ರಶ್ನೆ ಇಲ್ಲಿ ಉಂಟಾಗಬಹುದು. ಇದರ ಉತ್ತರ – ನಮ್ಮ ಶರೀರದ ಎಲ್ಲ ಅಂಗ (ತಲೆ, ಕಾಲು, ಕೈ, ಗುದ,

ಇತ್ಯಾದಿ)ಗಳಲ್ಲಿ ನಮ್ಮ ದೃಷ್ಟಿ ಅರ್ಥಾತ್ – ತನ್ನತನ ಮತ್ತು ಹಿತದ ಭಾವನೆ ಸಮಾನವಾಗಿರುತ್ತದೆ, ಆದರೂ ಕೂಡ ನಾವು ಅವುಗಳ ವ್ಯವಹಾರದಲ್ಲಿ ಭೇದವಿರಿಸಿಕೊಳ್ಳುತ್ತೇವೆ; ಯಾರಿಗಾದರು ಕಾಲುತಗಲಿದರೆ ಕ್ಷಮೆ ಬೇಡುತ್ತೇವೆ, ಆದರೆ ಯಾರಿಗಾದರು ಕೈ ಸೊಂಕಿದರೆ ಕ್ಷಮೆ ಬೇಡುವುದಿಲ್ಲ, ನಮಸ್ಕಾರ ತಲೆ ಮತ್ತು ಕೈಗಳಿಂದ ಮಾಡುತ್ತೇವೆ, ಕಾಲಿನಿಂದಲ್ಲ, ಕೈ ಗುದಕ್ಕೆ ತಗಲಿದರೆ ಕೈ ತೊಳೆಯುತ್ತೇವೆ, ಕೈ ಕೈತಾಕಿದರೆ ಇಲ್ಲ, ಇಷ್ಟೇ ಇಲ್ಲ, ಒಂದೇ ಕೈಯ ಬೆರಳುಗಳಲ್ಲಿಯೂ ವ್ಯವಹಾರದಲ್ಲಿ ಭೇದವಿರುತ್ತದೆ. ಯಾರಿಗಾದರು ತೋರುಬೆರಳು ತೋರುವುದು ಮತ್ತು ಅಂಗುಷ್ಠ ತೋರಿಸುವುದರ ಭೇದವಾದರೋ ಎಲ್ಲರು ತಿಳಿದಿದ್ದಾರೆ, ಈ ಪ್ರಕಾರ ಶರೀರದ ಬೇರೆ-ಬೇರೆ ಅಂಗಗಳ ವ್ಯವಹಾರದಲ್ಲಿ ಭೇದವಿರುತ್ತದೆ, ಆದರೆ ಆತ್ಮೀಯತೆಯಲ್ಲಿ ಭೇದವಿರುವುದಿಲ್ಲ, ಅದಕ್ಕಾಗಿ ಶರೀರದ ಯಾವುದೇ ನೋವಿನ ಅಂಗದ ಉಪೇಕ್ಷೆ ಮಾಡುವುದಿಲ್ಲ, ವ್ಯವಹಾರದಲ್ಲಿ ಭೇದವಿದ್ದರೂ ನೋವು ಇಲ್ಲವಾಗಿಸಲು ಸಮಾನತೆಯ ವ್ಯವಹಾರ ಮಾಡುತ್ತೇವೆ. ಶರೀರದ ಎಲ್ಲ ಅಂಗಗಳ ಸುಖ-ದುಃಖದಲ್ಲಿ ನಮಗೆ ಒಂದೇ ಭಾವವಿರುತ್ತದೆ. (೬/೩೨) ಇದೇ ಪ್ರಕಾರ ಪ್ರಾಣಿಗಳಲ್ಲಿ ಊಟ- ತಿಂಡಿ, ಗುಣ, ಆಚರಣೆ, ಜಾತಿ ಇತ್ಯಾದಿಗಳ ಭೇದ ಇರುವುದರಿಂದ ಅವರೊಂದಿಗೆ ಜ್ಞಾನೀ ಮಹಾಪುರುಷರ ವ್ಯವಹಾರದಲ್ಲಿಯೂ ಭೇದವಿರುತ್ತದೆ ಮತ್ತು ಇರಲೂ ಬೇಕು. ಆದರೆ ಆ ಎಲ್ಲ ಪ್ರಾಣಿಗಳಲ್ಲಿ ಒಂದೇ ಪರಮಾತ್ಮತತ್ತ್ವ ಪರಿಪೂರ್ಣವಾದ ಕಾರಣ ಮಹಾಪುರಷನ ದೃಷ್ಟಿಯಲ್ಲಿ ಭೇದವಿರುವುದಿಲ್ಲ, ಆ ಪ್ರಾಣಿಗಳ ಕುರಿತು ಮಹಾಪುರುಷರ ಆತ್ಮೀಯತೆ, ಪ್ರೇಮ, ಹಿತ, ದಯೆ ಇತ್ಯಾದಿಗಳ ಭಾವದಲ್ಲಿ ಎಂದೂ ವ್ಯತ್ಯಾಸವಾಗುವುದಿಲ್ಲ, ಅವರ ಅಂತಃಕರಣದಲ್ಲಿ ರಾಗ-ದ್ವೇಷ, ಮಮತೆ, ಆಸಕ್ತಿ ಅಭಿಮಾನ, ಪಕ್ಷಪಾತ, ವಿಷಮತೆ ಇತ್ಯಾದಿಗಳು ಸರ್ವಥಾ ಅಭಾವವಾಗಿರುತ್ತದೆ. ನಮ್ಮ ಶರೀರದ ಯಾವುದೇ ಅಂಗದ ದುಃಖವನ್ನು ದೂರಾಗಿಸುವ ಪ್ರಯತ್ನವು ಸ್ವಾಭಾವಿಕವಾಗಿರುತ್ತದೋ ಹಾಗೆಯೇ ಸುಳವು ಸಿಕ್ಕಿದಾಗ ಬೇರೆ ಪ್ರಾಣಿಯ ದುಃಖದೂರಾಗಿಸುವ ಮತ್ತು ಸುಖವನ್ನು ಕೊಡುವ ಪ್ರಯತ್ನವೂ ಅವನಿಂದ ಸ್ವಾಭಾವಿಕವಾಗುತ್ತದೆ. ಅದಕ್ಕಾಗಿ ಭಗವಂತನು ಇಲ್ಲಿ ಮಹಾಪುರುಷರನ್ನು ಸಮದರ್ಶಿ ಎಂದು ಹೇಳಿರುವನು, ಸಮವರ್ತಿ ಎಂದು ಹೇಳಲಿಲ್ಲ, ಗೀತೆಯಲ್ಲಿ ಬೇರೆಡೆಗಳಲ್ಲಿಯೂ ಸಮವಾಗಿ ನೋಡುವ ಅಥವಾ ಸಮಬುದ್ಧಿಯದೇ ಮಾತು ಬಂದಿದೆ. – **'ಸಮಬುದ್ಧಿರ್ವಿಶಿಷ್ಯತೇ'** (೬/೯); **'ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ'** (೬/೩೨); **'ಸರ್ವತ್ರ ಸಮದರ್ಶನಃ'** (೬/೨೯); **'ಸರ್ವತ್ರ ಸಮಬುದ್ಧಯಃ'** (೧೨/೪); **'ಸಮಂ ಸರ್ವೇಷು ಭೂತೇಷು..... ಯಃ ಪಶ್ಯತಿ ಸ ಪಶ್ಯತಿ'** (೧೩/೨೭) ಮತ್ತು **'ಸಮಂ ಪಶ್ಯನ್ ಹಿ ಸರ್ವತ್ರ'** (೧೩/೨೮).

ಶ್ರೀಶಂಕರಾಚಾರ್ಯರು ಹೇಳುತ್ತಾರೆ –

'ಭಾವಾದ್ದ್ವೈತಂ ಸದಾ ಕುರ್ಯಾತ್ ಕ್ರಿಯಾದ್ದ್ವೈತಂ ನ ಕುತ್ರಚಿತ್' (ತತ್ತ್ವೋಪದೇಶ)

ಭಾವದಲ್ಲೇ ಸದಾ ಅದ್ವೈತವಿರಬೇಕು, ಕ್ರಿಯೆ (ವ್ಯವಹಾರ)ಯಲ್ಲಿ ಎಲ್ಲೂ ಇರಬಾರದು.

ಸಮತೆಯ ಸಂಬಂಧೀ ವಿಶೇಷ ವಿಚಾರ

ಇಂದಿನ ದಿನಗಳಲ್ಲಿ ಸಮತೆಯ ಕುರಿತು ವಿಶೇಷ ಚರ್ಚೆ ನಡೆಯುತ್ತಿದೆ. ಎಲ್ಲರೊಡನೆ ಸಮತೆಯ ವ್ಯವಹಾರ ಮಾಡಿ – ಹೀಗೆ ಪ್ರಚಾರ ಮಾಡಲಾಗುತ್ತದೆ. ಆದರೆ ನಿಜವಾಗಿ ಸಮತೆ ಯಾವುದಕ್ಕೆ ಹೇಳುತ್ತಾರೆ ಮತ್ತು ಅದು ಯಾವಾಗ ಬರುತ್ತದೆ – ಇದನ್ನು ತಿಳಿದು ಕೊಳ್ಳುವ ಆವಶ್ಯಕತೆ ತುಂಬಾ ಇದೆ.

ಸಮತೆ ಎಂದರೆ ಯಾವುದೋ ಆಟ-ತಮಾಷೆಯಾಗಿರದೆ ಪರಮಾತ್ಮನ ಸಾಕ್ಷಾತ್ ಸ್ವರೂಪವಾಗಿದೆ. ಯಾರ ಮನಸ್ಸು ಸಮತೆಯಲ್ಲಿ ಸ್ಥಿತವಾಗುತ್ತದೋ ಅವರು ಇಲ್ಲೇ ಬದುಕಿರುವಾಗಲೇ ಜಗತ್ತನ್ನು ಗೆದ್ದು ಪರಬ್ರಹ್ಮ ಪರಮಾತ್ಮನ ಅನುಭವ ಪಡೆದುಕೊಳ್ಳುತ್ತಾರೆ (೫/೧೯). ಬೇರೆಯವರ ದುಃಖವನ್ನು ತನ್ನ ದುಃಖವೆಂದು ಮತ್ತು ಬೇರೆಯವರ ಸುಖವನ್ನು ತನ್ನ ಸುಖವೆಂದಾದಾಗ ಈ ಸಮತೆ ಬರುತ್ತದೆ. ಗೀತೆಯಲ್ಲಿ ಭಗವಂತನು – ಹೇ ಅರ್ಜುನಾ! ಯಾವ ಪುರುಷನು ತನ್ನ ಶರೀರದಂತೆ ನನ್ನನ್ನು ಎಲ್ಲ ಕಡೆಗಳಲ್ಲಿ ಸಮನಾಗಿ ನೋಡುತ್ತಾನೋ ಮತ್ತು ಸುಖ ಅಥವಾ ದುಃಖಿಗಳನ್ನು ಎಲ್ಲ ಕಡೆಗಳಲ್ಲಿ ಸಮವಾಗಿ ನೋಡುತ್ತಾನೋ, ಆ ಯೋಗಿಯು ಶ್ರೇಷ್ಠನೆಂದು ತಿಳಿಯಲಾಗಿದೆ. (೬/೩೨).

ಶರೀರದ ಯಾವುದಾದರು ಅವಯವದಲ್ಲಿ ನೋವು ಉಂಟಾದಾಗ ಅದನ್ನು ದೂರ ಮಾಡಲು ಆಸಕ್ತಿ ಉಂಟಾಗುವಂತೆ ಯಾವುದೇ ಪ್ರಾಣಿಗೆ ದುಃಖ, ಸಂತಾಪ ಇತ್ಯಾದಿಗಳು ಉಂಟಾದಾಗ ಅದನ್ನು ದೂರಮಾಡಲು ಇಚ್ಛೆ ಉಂಟಾದರೆ ಸಮತೆ ಬರುತ್ತದೆ. ಸಂತರ ಲಕ್ಷಣಗಳಲ್ಲಿಯೂ ಬಂದಿದೆ – **'ಪರ ದುಖ ದುಖ ಸುಖ ಸುಖ ದೇಖೇ ಪರ'** (ಮಾನಸ ೭/೩೮/೧).

ತನ್ನ ಸುಖದ ಲಾಲಸೆ ಇರುವವರಿಗೆ ಬೇಕಾದರೆ ಎಷ್ಟೇ ಉದ್ಯೋಗಮಾಡಿದರೂ ಸಮತೆಯು ಬರಲಾರದು. ಆದರೆ ಹೃದಯದಲ್ಲಿ ಬೇರೆಯವರಿಗೆ ಸುಖ ಹೇಗೆ ಕೊಡಲಿ? ಅವರಿಗೆ ವಿಶ್ರಾಂತಿ ಹೇಗಾದೀತು? ಅವರಿಗೆ ಹೇಗೆ ಲಾಭವಾದೀತು? ಅವರ ಶ್ರೇಯಸ್ಸು ಹೇಗಾದೀತು? ಎಂಬ ಕಾತರತೆ ಉಂಟಾದಾಗ ಸಮತೆಯು ತನ್ನಿಂದ- ತಾನೇ ಬಂದುಬಿಟ್ಟೀತು. ಇದನ್ನು ಮೊಟ್ಟಮೊದಲು ತಮ್ಮ ಮನೆಯಿಂದ ಪ್ರಾರಂಭಿಸಬೇಕು. ಯಾರಿಗೂ ಕಿಂಚಿನ್ಮಾತ್ರವೂ ದುಃಖ

ಅಥವಾ ಕಷ್ಟವಾಗದಿರಲಿ, ಯಾರಿಗೂ ಎಂದೂ ಅನಿಷ್ಟವಾಗದಿರಲಿ ಎಂಬ ಭಾವ ಹೃದಯದಲ್ಲಿರಬೇಕು. ಬೇಕಾದರೆ ನನಗೆ ಎಷ್ಟೇ ಕಷ್ಟವಾಗಲೀ, ಆದರೆ ನನ್ನ ತಂದೆ-ತಾಯಿ, ಪತ್ನೀ-ಪುತ್ರರು, ಅಣ್ಣ-ಅತ್ತಿಗೆ ಮುಂತಾದವರಿಗೆ ಸುಖವಾಗಬೇಕು. ಮನೆಯವರಿಗೆ ಸುಖಕೊಡುವುದರಿಂದ ನಮ್ಮ ಹೃದಯದಲ್ಲಿ ಶಾಂತಿ ಉಂಟಾದೀತು. ಎಲ್ಲಿ ನಮ್ಮ ಮನೆಯ ಸಂಬಂಧವೂ ಇಲ್ಲವೋ ಅಲ್ಲಿ ಸುಖವನ್ನು ಕೊಟ್ಟರೆ ವಿಶೇಷವಾದ ಆನಂದದ ಅಲೆಗಳು ಬರಲು ತೊಡಗುವವು. ಆದರೆ ಮಮತೆಯಿಂದ ಸುಖಕೊಡುವುದರಿಂದ ನಮ್ಮ ಉನ್ನತಿಯಾಗಲಾರದು. ಎಲ್ಲಿ ನಮಗೆ ಮಮತೆ ಇಲ್ಲವೋ ಅಲ್ಲಿ ಸುಖಕೊಡುವುದು ಅಥವಾ ಎಲ್ಲಿ ನಾವು ಮಮತೆಯಿಂದ ಸುಖಕೊಡುತ್ತೇವೋ ಅಲ್ಲಿಂದ ನಮ್ಮ ಮಮತೆಯನ್ನು ದೂರಮಾಡಿದರೆ ಎರಡರ ಪರಿಣಾಮವೂ ಒಂದೇ ಆದೀತು.

ಚಿತ್ರಕೂಟದಲ್ಲಿ ಲಕ್ಷ್ಮಣನು ಭಗವಾನ್ ಶ್ರೀರಾಮನ ಮತ್ತು ಸೀತೆಯ ಸೇವೆ ಹೇಗೆ ಮಾಡುತ್ತಿದ್ದನು ಎಂಬುದನ್ನು ಹೇಳುವಾಗ ಗೋಸ್ವಾಮಿ ತುಲಸೀದಾಸರು ಹೇಳುತ್ತಾರೆ –

ಸೇವಹಿ ಲಖಿನು ಸೀಯ ರಘುಬೀರಹಿ ।
ಜಿಮಿ ಅಬಿವೇಕಿ ಪುರುಷ ಸರೀರಹಿ ॥

(ಮಾನಸ ೨/೧೪೨/೧).

ಅರ್ಥಾತ್ – ಲಕ್ಷ್ಮಣನು ಭಗವಾನ್ ಶ್ರೀರಾಮ ಮತ್ತು ಸೀತೆಯ ಸೇವೆಯನ್ನು ಅಜ್ಞಾನೀ ಮನುಷ್ಯರು ತಮ್ಮ ಶರೀರದ ಸೇವೆ ಮಾಡುತ್ತಾರೋ ಹಾಗೆಯೇ ಮಾಡುತ್ತಿದ್ದನು.

ತನ್ನ ಶರೀರದ ಸೇವೆ ಮಾಡುವುದು, ಅದಕ್ಕೆ ಸುಖ ಕೊಡುವುದು ಬುದ್ಧಿವಂತಿಕೆಯಲ್ಲ. ತನ್ನ ಶರೀರದ ಸೇವೆಯಾದರೋ ಪಶುಗಳೂ ಕೂಡ ಮಾಡುತ್ತವೆ. ಕೋತಿಯು ತನ್ನ ಮರಿ ಸತ್ತು ಹೋದರೆ ಅದರ ಶರೀರವನ್ನು ಎತ್ತಿಕೊಂಡೇ ಓಡಾಡುವಷ್ಟು ಮಮತೆ ಮರಿಯಮೇಲೆ ಇರುತ್ತದೆ. ಆದರೆ ಯಾವುದಾದರು ತಿನ್ನುವಸ್ತು ಸಿಕ್ಕಿದಾಗ ಅದು ಸ್ವತಃ ತಿಂದು ಬಿಡುತ್ತದೆ, ಮರಿಗೂ ಕೊಡುವುದಿಲ್ಲ, ಮರಿಯು ತಿನ್ನುವ ಪ್ರಯತ್ನ ಮಾಡಿದರೆ ಅದಕ್ಕೆ ಏಟು ಕೊಡುತ್ತದೆ, ಅದು ಚೀ-ಚೀ ಎಂದು ಅರಚುತ್ತಾ ಓಡಿಹೋಗುತ್ತದೆ. ಆದ್ದರಿಂದ ಮಮತೆ ಇರುವಾಗ ಸಮತೆ ಬರಲು ಸಂಭವವೇ ಇಲ್ಲ.

ಯಾರಿಂದ ನಮಗೆ ಏನನ್ನೂ ಪಡೆಯುವುದು ಇರುವುದಿಲ್ಲವೋ, ಯಾರಿಂದ ನಮಗೆ ಯಾವುದೇ ಸ್ವಾರ್ಥವಿಲ್ಲವೋ, ಅಂತಹ ವ್ಯಕ್ತಿಯೊಂದಿಗೂ ಅವರ ಹಿತವಾಗುವಂತೆ ನಾವು ಪ್ರೇಮಪೂರ್ವಕ ಚೆನ್ನಾಗಿ ವರ್ತಿಸಬೇಕು. ಯಾರಾದರು ವ್ಯಕ್ತಿ ದಾರಿ ತಿಳಿಯದೆ, ದಾರಿತಪ್ಪಿ ಅಲೆಯುತ್ತಿದ್ದು, ನಮ್ಮ ಬಳಿ ದಾರಿಕೇಳಿದರೆ ಅವನಿಗೆ ತುಂಬಾ ಸಂತೋಷದಿಂದ ಮಾರ್ಗತೋರಿಸಿದರೆ ಅಥವಾ ಸ್ವಲ್ಪ ದೂರ ಅವನೊಂದಿಗೆ ನಡೆದು ಹೋದರೆ ನಮ್ಮ ಹೃದಯದಲ್ಲಿ ಪ್ರತ್ಯಕ್ಷ ಸುಖದ, ಶಾಂತಿಯ ಅನುಭವವಾದೀತು. ಆದರೆ ನಾವು ತಿಳಿದಿದ್ದು ಅವನಿಗೆ ದಾರಿತೋರಿಸದಿದ್ದರೆ ನಮ್ಮ ಹೃದಯಕ್ಕೆ ಸುಖವಾಗಲಾರದು. ಇದು ಅನುಭವದ ಮಾತಾಗಿದೆ, ಯಾರಾದರು ಮಾಡಿ ನೋಡಲಿ. ಯಾರಿಗಾದರು ಬಾಯಾರಿಕೆಯಾಗಿದ್ದರೆ ಅವನಿಗೆ ತಮ್ಮಾ! ಈ ಕಡೆ ಬಾ ತಣ್ಣಗಿನ ನೀರಿದೆ ಎಂದು ಹೇಳಿದಾಗ ನಮ್ಮ ಹೃದಯವನ್ನು ನೋಡಿಕೊಳ್ಳಿ; ನಮ್ಮ ಹೃದಯಕ್ಕೆ ಸಂತೋಷವಾದೀತು, ಸುಖವಾದೀತು. ಈ ಸುಖವು ನಮ್ಮ ಶ್ರೇಯಸ್ಸು ಮಾಡುವಂತಹುದು. ಬೇರೆಯವರು ದುಃಖಪಟ್ಟರೂ ನಾನು ಸುಖಪಡೆಯುವೆನು ಎಂಬ ಸುಖವು ಪತನ ಮಾಡುವಂತಹುದು. ಇದರಿಂದ ವ್ಯವಹಾರದಲ್ಲಿ ನಮ್ಮ ಉನ್ನತಿ ಆಗಲಾರದು ಮತ್ತು ಪರಮಾರ್ಥದಲ್ಲಿಯೂ ಆಗಲಾರದು. ನಾವು ಸತ್ಸಂಗವನ್ನು ಏರ್ಪಡಿಸುತ್ತೇವೆ. ಅದರಲ್ಲಿ ಬರುವ ಜನರಿಗೆ ಪ್ರೇಮಪೂರ್ವಕ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿದರೆ ಅವರಲ್ಲಿ ಪ್ರೇಮಪೂರ್ವಕವಾಗಿ – ಬನ್ನಿ ಇಲ್ಲಿ ಕುಳಿತು ಕೊಳ್ಳಿ. ಎಲ್ಲಿಂದ ಅವರು ಸರಿಯಾಗಿ ಕೇಳಬಲ್ಲರೋ, ಸುಖವಾಗಿ ಕುಳಿತುಕೊಳ್ಳಬಲ್ಲರೋ ಅಲ್ಲೇ ಕುಳ್ಳಿರಿಸಬೇಕು. ಅವರು ಸರಿಯಾಗಿ ಹೇಗೆ ಕೇಳಬಲ್ಲರು ಈ ಭಾವವನ್ನು ಇರಿಸಿ ಕೊಂಡು ವರ್ತಿಸಿರಿ. ಹೀಗೆ ಮಾಡಿದರೆ ನಮ್ಮ ಹೃದಯಕ್ಕೆ ಪ್ರತ್ಯಕ್ಷ ಶಾಂತಿ ಆದೀತು. ಆದರೆ ಅಧಿಕಾರವಾಣಿಯಿಂದ ಅಜ್ಞಾಪಿಸುವಂತೆ ಇಲ್ಲಿ ಕುಳಿತುಕೊಳ್ಳಿ, ಅಲ್ಲಿ ಅಲ್ಲ, ಎಂದಾಗ ಮಾತು ಅದೇ ಆದರೂ ಹೃದಯಕ್ಕೆ ಶಾಂತಿ ಸಿಗದು. ಒಳಗಿರುವ ಅಭಿಮಾನವು ಬೇರೆಯವರಿಗೆ ಚುಚ್ಚೀತು, ಕೆಡಕೆನಿಸೀತು. ಹೀಗೆ ವರ್ತಿಸಿ, ಸಮತೆ ಬರಬೇಕೆಂದು ಬಯಸಿದರೆ ಅದು ಎಂದೂ ಬರಲಾರದು.

ಎಲ್ಲರ ಹಿತದಲ್ಲಿ ಪ್ರೀತಿ ಉಂಟಾಗಿರುವವನಿಗೆ ಭಗವಂತನು ಪ್ರಾಪ್ತನಾಗುತ್ತಾನೆ – **'ತೇ ಪ್ರಾಪ್ನುವಂತಿ ಮಾಮೇವ ಸರ್ವಭೂತ ಹಿತೇ ರತಾಃ'** (೧೨/೪). ಕಾರಣ – ಭಗವಂತನು ಎಲ್ಲ ಪ್ರಾಣಿಗಳ ಪರಮ ಸುಹೃದ್ ಆಗಿದ್ದಾನೆ (೫/೨೯). ಅವನು ಪ್ರಾಣಿಮಾತ್ರರ ಪಾಲನೆ-ಪೋಷಣೆ ಮಾಡುತ್ತಾನೆ. ಅತಿ ಆಸ್ತಿಕನಿರಲೀ ಅಥವಾ ಅತಿ ನಾಸ್ತಿಕನಿರಲಿ ಇಬ್ಬರಿಗೂ ಭಗವಂತನ ವಿಧಾನ ಒಂದೇ ರೀತಿಯಾಗಿದೆ. ಓರ್ವ ವ್ಯಕ್ತಿ ತುಂಬಾ ಆಸ್ತಿಕನಾಗಿದ್ದು ಭಗವಂತನನ್ನು ತುಂಬಾ ನಂಬುತ್ತಾನೆ ಮತ್ತು ಅವನನ್ನು ಪಡೆಯಲು ಸಾಧನೆ-ಭಜನೆ ಮಾಡುತ್ತಾನೆ, ಇನ್ನೋರ್ವ ವ್ಯಕ್ತಿಯು ಪ್ರಪಂಚದಲ್ಲಿ ಭಗವಂತನನ್ನು ಇಲ್ಲವಾಗುವಂತೆ ಬಯಸುವ ನಾಸ್ತಿಕನಿದ್ದಾನೆ. ಭಗವಂತನನ್ನು ಒಪ್ಪಿಕೊಳ್ಳುವುದರಿಂದ ಮತ್ತು ಭಗವಂತನ ಕಾರಣದಿಂದಲೇ ಜಗತ್ತು ದುಃಖಿಪಡುತ್ತದೆ, ಭಗವಂತನೆಂಬ ಹೆಸರಿನ ಯಾವುದೇ ವಸ್ತುವೇ ಇಲ್ಲ ಇಂತಹ ಭಾವ ಹೃದಯದಲ್ಲಿದ್ದು ಹೀಗೆಯೇ ಪ್ರಚಾರ ಮಾಡುತ್ತಾನೆ. ಇಂತಹ

ಅತಿ ನಾಸ್ತಿಕ ವ್ಯಕ್ತಿಯ ಬಾಯಾರಿಕೆಯನ್ನು ಕೂಡ ನೀರು ಇಂಗಿಸುತ್ತದೆ ಮತ್ತು ಇದೇ ನೀರು ಅತಿ ಆಸ್ತಿಕ ವ್ಯಕ್ತಿಯ ಬಾಯಾರಿಕೆಯನ್ನು ಇಂಗಿಸುತ್ತದೆ. ಆಸ್ತಿಕನ ಬಾಯಾರಿಕೆಯನ್ನು ಸರಿಯಾಗಿ ತಣಿಸಿ ನಾಸ್ತಿಕನ ಬಾಯಾರಿಕೆಯನ್ನು ತಣಿಸದಿರುವ ಭೇದ ನೀರಿಗಿರುವುದಿಲ್ಲ. ಅದು ಸಮಾನವಾಗಿ ಎಲ್ಲರ ಬಾಯಾರಿಕೆಯನ್ನು ತಣಿಸುತ್ತದೆ. ಹೀಗೆಯೇ ಸೂರ್ಯನು ಸಮಾನರೀತಿಯಿಂದ ಪ್ರಕಾಶ ಕೊಡುತ್ತಾನೆ. ಗಾಳಿಯು ಸಮಾನವಾಗಿ ಎಲ್ಲರಿಗೂ ಉಸಿರಾಡಲು ಬೀಸುತ್ತದೆ. ಭೂಮಿಯು ಎಲ್ಲರಿಗೂ ಸಮಾನವಾಗಿ ವಾಸಿಸಲು ಜಾಗ ಕೊಡುತ್ತದೆ. ಈ ಪ್ರಕಾರ ಭಗವಂತನಿಂದ ರಚಿತವಾದ ಪ್ರತಿಯೊಂದು ವಸ್ತು ಎಲ್ಲರಿಗೆ ಸಮಾನವಾಗಿ ದೊರೆಯುತ್ತದೆ.

ಸಮಾನತೆಯ ಅರ್ಥ ಸಮಾನವಾಗಿ ಎಲ್ಲರೊಂದಿಗೆ ಊಟ-ವಿವಾಹಾದಿಗಳ ವ್ಯವಹಾರ ಮಾಡುವುದು ಎಂಬುದು ಅಲ್ಲ. ವ್ಯವಹಾರದಲ್ಲಿನ ಸಮತೆಯಾದರೋ ಮಹಾನ್ ಪತನವಾಗಿಸುವಂತಹ ವಸ್ತುವಾಗಿದೆ. ಸಮಾನ ವ್ಯವಹಾರ ಯಮರಾಜನ, ಸಾವಿನದಾಗಿದೆ; ಏಕೆಂದರೆ, ಅವನ ವರ್ತನೆಯಲ್ಲಿ ವಿಷಮತೆ ಇಲ್ಲ. ಬೇಕಾದರೆ ಮಹಾತ್ಮನಿರಲಿ, ಗೃಹಸ್ಥನಿರಲೀ, ಸಾಧುವಾಗಿರಲೀ ಪಶು ಇರಲೀ, ದೇವತೆಯಾಗಿರಲಿ, ಸಾವು ಎಲ್ಲರದು ಒಂದೇ ರೀತಿಯಿಂದಾಗುತ್ತದೆ. ಅದಕ್ಕಾಗಿ ಯಮರಾಜನನ್ನು 'ಸಮವರ್ತೀ' (ಸಮಾನವಾಗಿ ವರ್ತಿಸುವವನು) ಎಂದು ಹೇಳಲಾಗಿದೆ.* ಆದ್ದರಿಂದ ಯಾರು ಸಮಾನವಾಗಿ ವರ್ತಿಸುತ್ತಾರೋ ಅವರೂ ಯುವರಾಜರೇ ಆಗಿದ್ದಾರೆ.

ಪಶುಗಳಲ್ಲಿಯೂ ಸಮಾನ ವರ್ತನೆ ಕಂಡುಬರುತ್ತದೆ. ನಾಯಿಯು ಬ್ರಾಹ್ಮಣನ ಅಡಿಗೆಮನೆಗೆ ಹೋಗುವಾಗ ಕಾಲು ತೊಳೆದು ಹೋಗುವುದಿಲ್ಲ. ಬ್ರಾಹ್ಮಣರ ಅಡಿಗೆ ಇರಲಿ, ಹರಿಜನರ ಅಡಿಗೆ ಇರಲಿ, ಅದಾದರೋ ಹೇಗಿದೆಯೋ ಹಾಗೆಯೇ ನುಗ್ಗುತ್ತದೆ; ಏಕೆಂದರೆ ಇದು ಅದರ ಸಮತೆಯಾಗಿದೆ. ಆದರೆ ಮನುಷ್ಯರಿಗೆ ಇದು ಸಮತೆಯಿರದೆ ಪಶುತ್ವವಾಗಿದೆ. ಬೇರೆಯವರ ದುಃಖ ಹೇಗೆ ದೂರವಾದೀತು? ಬೇರೆಯವರಿಗೆ ಹೇಗೆ ಸುಖವಾದೀತು? ಇದು ಸಮಾನತೆ ಆಗಿದೆ. ಇಂತಹ ಸಮಾನತೆ ಇಟ್ಟುಕೊಂಡು ವರ್ತನೆಯಲ್ಲಿ ಪವಿತ್ರತೆ, ನಿರ್ಮಲತೆ ಇರಿಸಿಕೊಳ್ಳಬೇಕು. ವರ್ತನೆಯಲ್ಲಿ ಪವಿತ್ರತೆ ಇರಿಸಿಕೊಳ್ಳುವುದರಿಂದ ಅಂತಃಕರಣ ಪವಿತ್ರ, ನಿರ್ಮಲವಾಗುತ್ತದೆ. ಆದರೆ ವರ್ತನೆಯಲ್ಲಿ ಅಪವಿತ್ರತೆ ಇಟ್ಟುಕೊಳ್ಳುವುದರಿಂದ, ಊಟ- ತಿಂಡಿ ಇತ್ಯಾದಿ ಒಂದೇ ಮಾಡುವುದರಿಂದ ಅಂತಃಕರಣದಲ್ಲಿ ಅಪವಿತ್ರತೆ ಬರುತ್ತದೆ, ಅದರಿಂದ ಅಶಾಂತಿ ಬೆಳೆಯುತ್ತದೆ. ಕೇವಲ ಹೊರಗಿನ ವರ್ತನೆ ಸಮಾನವಾಗಿರುವುದು ಶಾಸ್ತ್ರ ಮತ್ತು ಸಮಾಜದ ಮರ್ಯಾದೆಯ ವಿರುದ್ಧವಾಗಿದೆ. ಇದರಿಂದ ಸಮಾಜದಲ್ಲಿ ಸಂಘರ್ಷ ಉಂಟಾಗುತ್ತದೆ.

ವರ್ಣಗಳಲ್ಲಿ ಬ್ರಾಹ್ಮಣರು ಎತ್ತರದಲ್ಲಿದ್ದಾರೆ, ಶೂದ್ರರು ಕೆಳಗಿದ್ದಾರೆ – ಹೀಗೆ ಶಾಸ್ತ್ರಗಳ ಸಿದ್ಧಾಂತವಲ್ಲ. ಬ್ರಾಹ್ಮಣರು ಉಪದೇಶದಿಂದ, ಕ್ಷತ್ರಿಯರು ರಕ್ಷಣೆಯಿಂದ, ವೈಶ್ಯರು ಧನ-ಸಂಪತ್ತಿನಿಂದ, ಆವಶ್ಯಕ ವಸ್ತುಗಳ ಮೂಲಕ ಮತ್ತು ಶೂದ್ರರು ಶಾರೀರಿಕ ಪರಿಶ್ರಮದಿಂದ ಎಲ್ಲ ವರ್ಣದವರ ಸೇವಮಾಡಲಿ. ಬೇರೆಯವರು ತಮ್ಮ ಕರ್ತವ್ಯ-ಪಾಲನೆಯಲ್ಲಿ ಪರಿಶ್ರಮ ಪಡದಿರಲಿ. ತಮ್ಮ ಕರ್ತವ್ಯ ಪಾಲನೆಯಲ್ಲಿ ಎಲ್ಲರು ಸಮಾನರೀತಿಯಿಂದ ಪರಿಶ್ರಮಮಾಡಬೇಕು ಎಂಬುದು ಇದರ ಅರ್ಥವಲ್ಲ. ಯಾರ ಬಳಿಯಲ್ಲಿ ಯಾವ ಪ್ರಕಾರದ ಶಕ್ತಿ, ವಿದ್ಯೆ, ವಸ್ತು, ಕಲಾ ಇತ್ಯಾದಿಗಳಿವೆಯೋ ಅವುಗಳ ಮೂಲಕ ನಾಲ್ಕೂ ವರ್ಣದವರು ಎಲ್ಲ ವರ್ಣದವರ ಸೇವೆ ಮಾಡಲಿ, ಅವರ ಕಾರ್ಯದಲ್ಲಿ ಸಹಾಯಕರಾಗಲೀ. ಆದರೆ ನಾಲ್ಕೂ ವರ್ಣಗಳ ಸೇವೆ ಮಾಡುವುದರಲ್ಲಿ ಭೇದಭಾವವಿರಿಸ ಬಾರದು.

ಇಂದಿನ ಕಾಲದಲ್ಲಿ ವರ್ಣಾಶ್ರಮವನ್ನು ಅಳಿಸಿ ಗುಂಪುಗಾರಿಕೆ ನಡೆಯುತ್ತಿದೆ. ಇಂದು ಎಷ್ಟು ಗುಂಪು ಗಾರಿಕೆಯಲ್ಲಿ ಜಗಳಗಳಾಗುತ್ತವೋ ಅಷ್ಟು ವರ್ಣಾಶ್ರಮದಲ್ಲಿ ಜಗಳವಿಲ್ಲ. ಇದು ಪ್ರತ್ಯಕ್ಷವಾದ ವಿಷಯ. ಹಿಂದೆ ಜನರು ನಾಲ್ಕೂ ವರ್ಣಗಳ ಮತ್ತು ಆಶ್ರಮಗಳ ಮರ್ಯಾದೆಯಲ್ಲಿ ನಡೆಯುತ್ತಿದ್ದರು ಮತ್ತು ಸುಖ ಶಾಂತಿಯಿಂದ ಇರುತ್ತಿದ್ದರು. ಇಂದು ವರ್ಣಾಶ್ರಮದ ಮರ್ಯಾದೆಯನ್ನು ಇಲ್ಲವಾಗಿಸಿ ಅನೇಕ ಪಂಗಡ (ಪಾರ್ಟಿ)ಗಳನ್ನು ಕಟ್ಟುತ್ತಿದ್ದಾರೆ, ಅದರಿಂದ ಸಂಘರ್ಷಕ್ಕೆ ಹೆಚ್ಚಳ ಸಿಗುತ್ತಾ ಇದೆ. ಹಳ್ಳಿಗಳಲ್ಲಿ ಎಲ್ಲ ಜನರಿಗೆ ನೀರು ಸಿಗುವುದು ಕಷ್ಟವಾಗಿದೆ. ಯಾರ ಅಧಿಕಾರದಲ್ಲಿ ಬಾವಿ ಇದೆಯೋ ಅವರು ಹೇಳುತ್ತಾರೆ – ನೀನು ಆ ಪಾರ್ಟಿಗೆ ಓಟು ಕೊಟ್ಟಿರುವೆ, ಆದ್ದರಿಂದ ನಿನಗೆ ಇಲ್ಲಿ ನೀರು ಸಿಗಲಾರದು. ತಂದೆ- ತಾಯಿ-ಮಗ ಮೂವರೂ ಬೇರೆ-ಬೇರೆ ಪಾರ್ಟಿಗಳಿಗೆ ಓಟು ಕೊಡುತ್ತಾರೆ ಮತ್ತು ಮನೆಯಲ್ಲಿ ಜಗಳವಾಡುತ್ತಾರೆ. ನೀನು ಆ ಪಾರ್ಟಿಯವ, ನಾನು ಈ ಪಾರ್ಟಿಯವ ಎಂದು ಒಳಗಿಂದೊಳಗೆ ವೈರಕಟ್ಟಿಕೊಂಡಿರುವರು. ಎಷ್ಟು ಮಹಾನ್ ಅನರ್ಥವಾಗುತ್ತಾ ಇದೆ.

ಒಂದು ವೇಳೆ ಸಮತೆಯನ್ನು ತರುವುದಿದ್ದರೆ ಇನ್ನೊಬ್ಬ ವ್ಯಕ್ತಿ ಯ್ಯಾವುದೇ ವರ್ಣ, ಆಶ್ರಮ, ಧರ್ಮ, ಸಂಪ್ರದಾಯ, ಮತ ಇತ್ಯಾದಿಗಳಿಗೆ ಸೇರಿರಲಿ; ಅವನಿಗೆ ಸುಖಕೊಡುವುದು, ಅವನ ದುಃಖದೂರವಾಗಿಸುವುದು, ಅವನ ನಿಜವಾದ ಹಿತಮಾಡುವುದಾಗಿದೆ. ನೀವು ರಾಮ-ರಾಮ ಹೇಳುತ್ತೀರಿ, ನಾವು ಕೃಷ್ಣ-ಕೃಷ್ಣ ಎಂದು ಹೇಳುತ್ತೇವೆ, ನೀವು

* ಸಮವರ್ತಿ ಪರೇತರಾಟ್ (ಅಮರ ಕೋಶ ೧/೧/೫೮)

ವೈಷ್ಣವರಾಗಿದ್ದೀರಿ, ನಾವು ಶೈವರಾಗಿದ್ದೇವೆ; ನೀವು ಮುಸಲ್ಮಾನರಾಗಿದ್ದೀರಿ, ನಾವು ಹಿಂದುಗಳಾಗಿದ್ದೇವೆ ಇತ್ಯಾದಿ ಭೇದಗಳು ಅವರಲ್ಲಿ ಇರಬಲ್ಲವು. ಆದರೆ ಇದರಿಂದ ಯಾವ ಬಾಧೆಯು ಬರುವುದಿಲ್ಲ, ಅವರು ನಮ್ಮ ಪಾರ್ಟಿಯವರಲ್ಲ, ಅದಕ್ಕಾಗಿ ಅವರಿಗೆ ಬೇಕಾದರೆ ದುಃಖವಾಗುತ್ತಾ ಇರಲಿ, ಆದರೆ ನಮಗೆ ಮತ್ತು ನಮ್ಮ ಪಾರ್ಟಿಯವರಿಗೆ ಸುಖವಾಗಲೀ ಎಂಬ ಭಾವವಿರುವಾಗ ಬಾಧೆ ಉಂಟಾಗುತ್ತದೆ. ಈ ಭಾವವು ಪತನವಾಗಿಸುವುದಾಗಿದೆ. ಅದಕ್ಕಾಗಿ ಎಂದಿಗೂ ಯಾವುದೇ ವರ್ಣ ಇತ್ಯಾದಿಗಳ ಮನುಷ್ಯರಿಗೆ ಕಷ್ಟವಾದರೂ ಅವರ ಹಿತದ ಚಿಂತೆ ಸಮಾನರೀತಿಯಿಂದಿರಬೇಕು ಮತ್ತು ಅವರಿಗೆ ಸುಖವಾದರೆ ಅದರಿಂದ ಪ್ರಸನ್ನತೆ ಸಮಾನರೀತಿಯಿಂದ ಇರಬೇಕು. ಬ್ರಾಹ್ಮಣರಲ್ಲಿ ಮತ್ತು ಹರಿಜನರಲ್ಲಿ ಸಂಘರ್ಷ ವುಂಟಾದಾಗ ಅದರಲ್ಲಿ ಹರಿಜನರ ಸೋಲು ಹಾಗೂ ಬ್ರಾಹ್ಮಣರ ಗೆಲುವು ಆದಾಗ ನಮ್ಮ ಮನಸ್ಸಿನಲ್ಲಿ ಸಂತೋಷವಾದರೆ, ಅಥವಾ ಬ್ರಾಹ್ಮಣರ ಸೋಲು, ಹರಿಜನರ ಗೆಲುವಾದಾಗ ನಮ್ಮ ಮನಸ್ಸಿನಲ್ಲಿ ದುಃಖವಾದರೆ ಇದು ವಿಷಮತೆಯಾಗಿದೆ. ಈ ವಿಷಮತೆ ತುಂಬಾ ಹಾನಿಕಾರವಾಗಿದೆ. ಬ್ರಾಹ್ಮಣರು ಹಾಗೂ ಹರಿಜನರು ಇಬ್ಬರ ಕುರಿತು ನಮ್ಮ ಮನಸ್ಸಿನಲ್ಲಿ ಹಿತದ ಸಮಾನ ಭಾವನೆ ಇರಬೇಕು. ಯಾರ ಅಹಿತವೂ ನಮಗೆ ಸಹನವಾಗಬಾರದು. ಯಾರದೇ ದುಃಖವು ನಮಗೆ ಸಮಾನರೀತಿಯಿಂದ ಕಿಡುಕಿನಿಸಬೇಕು. ಬ್ರಾಹ್ಮಣನು ದುಃಖಿಯಾಗಿದ್ದರೆ ಅವನಿಗೆ ಸುಖಕೊಡಬೇಕು ಮತ್ತು ಹರಿಜನನು ದುಃಖಿಯಾಗಿದ್ದರೆ ಅವನಿಗೆ ಸುಖಕೊಡಬಾರದು ಇಂತಹ ಪಕ್ಷಪಾತವಿರದೆ ಹರಿಜನರಿಗೆ ಸುಖಕೊಡುವ ವಿಶೇಷ ಪ್ರಯತ್ನಮಾಡುತ್ತಿರಬೇಕು. ಹರಿಜನರಿಗೆ ಸುಖಕೊಡುವ ಪ್ರಯತ್ನ ಮಾಡುತ್ತಿರುವಾಗ ಬ್ರಾಹ್ಮಣರ ದುಃಖವನ್ನು ಉಪೇಕ್ಷಿಸಬಾರದು. ಈ ಪ್ರಕಾರ ಯಾವುದೇ ವರ್ಣ, ಆಶ್ರಮ, ಧರ್ಮ ಸಂಪ್ರದಾಯ ಇತ್ಯಾದಿಗಳಲ್ಲಿ ಪಕ್ಷಪಾತವಿರಬಾರದು. ಎಲ್ಲರ ಕುರಿತು ಸಮಾನ ರೀತಿಯಿಂದ ಹಿತದ ವರ್ತನೆ ಆಗಬೇಕು. ಒಂದು ವೇಳೆ ಯಾರಾದರು ಕೆಳವರ್ಗದವನಿದ್ದರೆ, ಅವನನ್ನು ನಾವು ಮೇಲೆತ್ತಲು ಬಯಸಿದರೆ, ಆ ವರ್ಗದ ಜನರ ಭಾವಗಳನ್ನು ಮತ್ತು ಆಚರಣೆಗಳನ್ನು ಶುದ್ಧ ಮತ್ತ ಶ್ರೇಷ್ಠವಾಗಿಸಬೇಕು; ಅವರ ಬಳಿ ವಸ್ತುಗಳ ಕೊರತೆ ಇದ್ದರೆ ಅದನ್ನು ಪೂರ್ಣಗೊಳಿಸಬೇಕು, ಅವರಿಗೆ ಸಹಾಯಮಾಡಬೇಕು; ಆದರೆ ಅವರನ್ನು ಪುಸಲಾಯಿಸಿ ಅವರ ಹೃದಯಗಳಲ್ಲಿ ಬೇರೆ ವರ್ಗದ ಕುರಿತು ಈರ್ಷ್ಯೆ, ದ್ವೇಷದ ಭಾವ ತುಂಬುವುದು ಅತ್ಯಂತ ಅಹಿತಕರ, ಘಾತುಕವಾಗಿದೆ ಹಾಗೂ ಲೋಕ ಪರಲೋಕದಲ್ಲಿ ಪತನ ಮಾಡುವಂತಹುದಾಗಿದೆ. ಕಾರಣ – ಈರ್ಷ್ಯೆ, ದ್ವೇಷ, ಅಭಿಮಾನ ಇತ್ಯಾದಿಗಳು ಮನುಷ್ಯನ ಮಹಾನ್ ಪತನ ಮಾಡುವಂತಹುಗಳು. ಒಂದು ವೇಳೆ ಇಂತಹ ಭಾವ ಬ್ರಾಹ್ಮಣರದಲ್ಲಿದ್ದರೂ ಅವರ ಪತನವಾದೀತು, ಹರಿಜನರಲ್ಲಿದ್ದರೂ ಅವರ ಪತನವಾದೀತು. ಉತ್ಥಾನವಾದರೋ ಸದ್ಭಾವಗಳಿಂದ, ಸದ್ಗುಣಗಳಿಂದ, ಸದಾಚಾರದಿಂದ ಆಗುತ್ತದೆ.

ಅನ್ನ, ವಸ್ತ್ರ ಮನೆ ಇತ್ಯಾದಿ ಜೀವನ ನಿರ್ವಾಹದ ವಸ್ತುಗಳು ಯಾರ ಬಳಿ ಕೊರತೆಯಾಗಿವೆಯೋ ಅವರಿಗೆ ಈ ವಸ್ತುಗಳನ್ನು ವಿಶೇಷವಾಗಿ ಕೊಡಬೇಕು. ಬೇಕಾದರೆ ವರ್ಣ, ಆಶ್ರಮ, ಧರ್ಮ, ಸಂಪ್ರದಾಯ ಇತ್ಯಾದಿಗಳ ಯಾರೇ ಇರಲಿ ಅವರಿಗೆ ಕೊಡಬೇಕು. ಎಲ್ಲರ ಜೀವನ ನಿರ್ವಾಹ ಸುಖವಾಗಿ ಆಗಬೇಕು. ಎಲ್ಲರೂ ಸುಖಿಗಳಾಗಲಿ, ಎಲ್ಲರೂ ನಿರೋಗಿಗಳಾಗಲೀ, ಎಲ್ಲರ ಹಿತವಾಗಲಿ, ಎಂದೂ ಯಾವುದೇ ಕಿಂಚಿನ್ಮಾತ್ರವೂ ದು-ಖವಾಗದಿರಲೀ.* ಇಂತಹ ಭಾವವಿರಿಸಿ ಕೊಂಡು ಯಥಾಯೋಗ್ಯ ವರ್ತಿಸುವುದೇ ಸಮತೆ ಯಾಗಿದೆ. ಅದು ಸಮಸ್ತ ಮನುಷ್ಯರಿಗೆ ಹಿತಕರವಾಗಿದೆ.

ಪರಿಶಿಷ್ಟ ಭಾವ – ಬ್ರಾಹ್ಮಣ, ಚಾಂಡಾಲ, ಹಸು, ಆನೆ, ನಾಯಿ – ಇವೆಲ್ಲವೂ ಒಂದೇ ಸಮನೆ ಬದಲಾಗುತ್ತಿವೆ ಮತ್ತು ಅಭಾವದಲ್ಲಿ ಸಂದು ಹೋಗುತ್ತಿದ್ದಾರೆ. ಆದರೆ ಅವರಲ್ಲಿರುವ ಭಾವರೂಪೀ *ಸತ್-ತತ್ತ್ವವು* ಎಂದೂ ಬದಲಾಗದ ನಿತ್ಯ-ನಿರಂತರ ಹೇಗಿದೆಯೋ ಹಾಗೆಯೇ ಇದೆ. ಜ್ಞಾನಿಗಳು ಆ *ಸತ್-ತತ್ತ್ವ*ವನ್ನೇ ನೋಡುತ್ತಾರೆ. ಮರಳಿನಲ್ಲಿ ಬೆರೆತ ಸಕ್ಕರೆಯನ್ನು ಇರುವೆಯು ಅರಿಸಿ ತೆಗೆಯುವಂತೆ ಜ್ಞಾನಿಗಳ ವಿವೇಕವತಿ ಸೂಕ್ಷ್ಮ ದೃಷ್ಟಿಯು ಅಸತ್ ಪ್ರಪಂಚದಲ್ಲಿರುವ *ಸತ್-ತತ್ತ್ವ*ವನ್ನು ಅರಿಸಿಕೊಳ್ಳುತ್ತದೆ. ತಾತ್ಪರ್ಯ – ಬ್ರಾಹ್ಮಣ ನಿರಲಿ, ಚಾಂಡಾಲ, ಆಕಳು, ನಾಯಿ, ಆನೆಯಾಗಿರಲಿ ಅಥವಾ ಇರುವೆಯಾಗಿರಲಿ ಅತಿ ವಿಷಮ ಪ್ರಾಣಿಗಳಲ್ಲಿಯೂ ಅವರ ದೃಷ್ಟಿ ಸದಾಕಾಲ ಸಮವಾಗಿರುತ್ತದೆ. ವ್ಯವಹಾರ ವಿಷಮ *(ಯಥಾಯೋಗ್ಯ)* ವಾಗಿದ್ದರೂ ಅವರ ದೃಷ್ಟಿ ವಿಷಮವಾಗುವುದಿಲ್ಲ.

—●—

ಸಂಬಂಧ - ಈಗ ಭಗವಂತನು ಹಿಂದಿನ ಶ್ಲೋಕದಲ್ಲಿ ವರ್ಣಿಸಿರುವ ಸಮತೆಯ ವಿಶೇಷ ಮಹಿಮೆಯನ್ನು ವರ್ಣಿಸುತ್ತಾನೆ —

ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ ।
ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ಬ್ರಹ್ಮಣಿ ತೇ ಸ್ಥಿತಾಃ ॥ ೧೯॥

* ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ। ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಭಾಗ್ಭವೇತ್॥

ಯೇಷಾಮ್ - ಯಾರ, **ಮನಃ** - ಅಂತಃಕರಣವು, **ಸಾಮ್ಯೇ** - ಸಮತೆಯಲ್ಲಿ, **ಸ್ಥಿತಮ್** - ಸ್ಥಿತವಾಗಿದೆಯೋ, **ತೈಃ** - ಅವರು, **ಇಹ, ಏವ** - ಈ ಜೀವಿತ ಅವಸ್ಥೆಯಲ್ಲಿಯೇ, **ಸರ್ಗಃ** - ಸಮಸ್ತ ಜಗತ್ತನ್ನು **ಜಿತಃ**-ಗೆದ್ದುಕೊಂಡಿರುವರು ಅರ್ಥಾತ್ – ಅವರು ಜೀವನ್ಮುಕ್ತರಾಗಿ ಹೋಗಿದ್ದಾರೆ, **ಹಿ** - ಏಕೆಂದರೆ, **ಬ್ರಹ್ಮ** - ಬ್ರಹ್ಮವು, **ನಿರ್ದೋಷಮ್** - ನಿರ್ದೋಷ (ಮತ್ತು), **ಸಮಮ್**-ಸಮವಾಗಿದೆ, **ತಸ್ಮಾತ್** - ಆದಕ್ಕಾಗಿ, **ತೇ** - ಅವರು, **ಬ್ರಹ್ಮಣಿ** - ಬ್ರಹ್ಮನಲ್ಲಿಯೇ, **ಸ್ಥಿತಾಃ** - ಸ್ಥಿತರಾಗಿದ್ದಾರೆ. ॥ ೧೯॥

ಯಾರ ಅಂತಃಕರಣವು ಸಮತೆಯಲ್ಲಿ ಸ್ಥಿತವಾಗಿದೆಯೋ ಅವರು ಈ ಜೀವಿತ ಅವಸ್ಥೆಯಲ್ಲಿಯೇ ಸಮಸ್ತ ಜಗತ್ತನ್ನು ಗೆದ್ದುಕೊಂಡಿರುವರು, ಅರ್ಥಾತ್ – ಅವರು ಜೀವನ್ಮುಕ್ತರಾಗಿ ಹೋಗಿದ್ದಾರೆ; ಏಕೆಂದರೆ ಬ್ರಹ್ಮವು ನಿರ್ದೋಷ ಮತ್ತು ಸಮವಾಗಿದೆ. ಆದಕ್ಕಾಗಿ ಅವರು ಬ್ರಹ್ಮನಲ್ಲಿಯೇ ಸ್ಥಿತರಾಗಿದ್ದಾರೆ. ॥ ೧೯॥

ವ್ಯಾ.ಪ್ಯಾ - '**ಯೇಷಾಂ ಸಾಮ್ಯೇ ಸ್ಥಿತಂ ಮನಃ**' – ಪರಮಾತ್ಮ ತತ್ತ್ವ ಅಥವಾ ಸ್ವರೂಪದಲ್ಲಿ ಸ್ವಾಭಾವಿಕ ಸ್ಥಿತಿಯ ಅನುಭವವಾದಾಗ, ಮನ-ಬುದ್ಧಿಗಳಲ್ಲಿ ರಾಗ-ದ್ವೇಷ, ಕಾಮನೆ, ವಿಷಮತೆ ಇತ್ಯಾದಿಗಳು ಸರ್ವಥಾ ಅಭಾವವಾಗಿ ಹೋದಾಗ, ಮನ-ಬುದ್ಧಿಗಳಲ್ಲಿ ಸ್ವತಃ-ಸ್ವಾಭಾವಿಕವಾದ ಸಮತೆ ಬರುತ್ತದೆ, ತರಬೇಕಾಗುವುದಿಲ್ಲ. ಹೊರಗಿನಿಂದ ನೋಡಿದಾಗ ಮಹಾ ಪುರುಷರು ಮತ್ತು ಸಾಧಾರಣ ಪುರುಷರಲ್ಲಿ ಊಟ-ತಿಂಡಿ, ನಡೆದಾಡುವುದು ಮುಂತಾದ ವ್ಯವಹಾರಗಳು ಒಂದೇ ರೀತಿಯಾಗಿ ಕಂಡುಬಂದರೂ ಮಹಾಪುರುಷರ ಅಂತಃಕರಣದಲ್ಲಿ ನಿರಂತರ ಸಮತೆ, ನಿರ್ದೋಷತೆ, ಶಾಂತಿ ಇವುಗಳು ಇರುತ್ತವೆ. ಸಾಧಾರಣ ಪುರುಷರ ಅಂತಃಕರಣದಲ್ಲಿ ವಿಷಮತೆ, ದೋಷ, ಅಶಾಂತಿ ಇತ್ಯಾದಿಗಳು ಇರುತ್ತವೆ.

ಪೂರ್ವ ಮತ್ತು ಪಶ್ಚಿಮ ಎರಡೂ ಕಡೆ ಪರ್ವತಗಳಿದ್ದರೆ ಪೂರ್ವ ದಲ್ಲಿ ಸೂರ್ಯನು ಉದಯಿಸುವುದು ಕಾಣುವುದಿಲ್ಲ; ಆದರೆ ಪಶ್ಚಿಮದ ಪರ್ವತದ ತುದಿಯಲ್ಲಿ ಪ್ರಕಾಶ ಕಾಣುವುದರಿಂದ ಸೂರ್ಯನು ಉದಯವಾದ ಬಗ್ಗೆ ಯಾವ ಸಂದೇಹವು ಇರುವುದಿಲ್ಲ, ಕಾರಣ-ಸೂರ್ಯೋದಯವಾಗದೆ ಪಶ್ಚಿಮದ ಪರ್ವತದಲ್ಲಿ ಪ್ರಕಾಶ ಕಾಣುವುದು ಸಂಭವವೇ ಇಲ್ಲ. ಹೀಗೆಯೇ ಯಾರ ಮನ-ಬುದ್ಧಿಯಲ್ಲಿ ಮಾನ-ಅಪಮಾನ, ನಿಂದಾ-ಸ್ತುತಿ, ಸುಖ-ದುಃಖ ಇತ್ಯಾದಿಗಳ ಯಾವುದೇ ಪರಿಣಾಮ ಬೀಳುವುದಿಲ್ಲವೋ ಹಾಗೂ ಯಾರ ಮನ-ಬುದ್ಧಿಗಳು ರಾಗ-ದ್ವೇಷ, ಹರ್ಷ-ಶೋಕ ಮುಂತಾದ ವಿಕಾರಗಳಿಂದ ಸರ್ವಥಾ ರಹಿತವಾಗಿವೆಯೋ, ಅವನಿಗೆ ಸ್ವರೂಪದಲ್ಲಿ ಸ್ವಾಭಾವಿಕ ಸ್ಥಿತಿಯು ಅವಶ್ಯವಾಗಿ ಉಂಟಾಗುತ್ತದೆ. ಕಾರಣ – ಸ್ವರೂಪದಲ್ಲಿ ಸ್ವಾಭಾವಿಕ ಸ್ಥಿತಿಯಿರದೆ ಮನ-ಬುದ್ಧಿಯಲ್ಲಿ ಅಚಲ ಮತ್ತು ಏಕರಸ ಸಮತೆಯು ಇರುವುದು ಸಂಭವವೇ ಇಲ್ಲ.

'**ಇಹೈವ ತೈರ್ಜಿತಃ ಸರ್ಗಃ**' ಇಲ್ಲಿ '**ತೈಃ**' ಪದದಲ್ಲಿ ಬಹುವಚನ ಕೊಡುವ ತಾತ್ಪರ್ಯ – ಎಲ್ಲ ಮನುಷ್ಯರು ಪರಮಾತ್ಮತತ್ತ್ವದ ಪ್ರಾಪ್ತಿಯನ್ನು ಮಾಡಿಕೊಳ್ಳಬಲ್ಲರು ಮತ್ತು ಇಡೀ ಜಗತ್ತಿನ ಮೇಲೆ ವಿಜಯವನ್ನು ಪಡೆಯಬಲ್ಲರು.

'**ಇಹ ಏವ**' – ಪದಗಳ ತಾತ್ಪರ್ಯ – ಮನುಷ್ಯನು ಬದುಕಿರುವಾಗ ವರ್ತಮಾನದಲ್ಲಿಯೇ ಇಲ್ಲಿಯೇ ಜಗತ್ತನ್ನು ಗೆಲ್ಲಬಲ್ಲನು. ಅರ್ಥಾತ್ ಜಗತ್ತಿನಿಂದ ಮುಕ್ತನಾಗಬಲ್ಲನು.

ಶರೀರ, ಇಂದ್ರಿಯಗಳು, ಮನ, ಬುದ್ಧಿ, ಪ್ರಾಣ, ಪದಾರ್ಥ, ಘಟನೆ, ಪರಿಸ್ಥಿತಿ ಇತ್ಯಾದಿ ಎಲ್ಲವೂ 'ಪರ'ವಾಗಿವೆ ಮತ್ತು ಯಾರು ಇವುಗಳ ಅಧೀನನಾಗಿರುತ್ತಾನೋ ಅವನಿಗೆ ಪರಾಧೀನನೆಂದು ಹೇಳುತ್ತಾರೆ. ಈ ಶರೀರಾದಿ ವಸ್ತುಗಳಲ್ಲಿ ಮಹತ್ವಬುದ್ಧಿ ಇರುವುದೇ ಹಾಗೂ ಇವುಗಳ ಆವಶ್ಯಕತೆಯ ಅನುಭವವಾಗುವುದು ಅರ್ಥಾತ್- ಇವುಗಳನ್ನು ಕಾಮಿಸುವುದೇ ಇವುಗಳ ಅಧೀನವಾಗುವುದಾಗಿದೆ. ಪರಾಧೀನ ಮನುಷ್ಯನು ನಿಜವಾಗಿ ಪರಾಜಿತನೇ ಆಗಿದ್ದಾನೆ. ಪರಾಧೀನತೆ ಬಿಟ್ಟು ಹೋಗುವವರೆಗೆ ಅವನು ಪರಾಜಿತನೇ ಆಗಿರುತ್ತಾನೆ

ಮನಸ್ಸಿನಲ್ಲಿ ಸಾಂಸಾರಿಕ ವಸ್ತುಗಳ ಕಾಮನೆ ಇರುವವನು ಒಂದೊಮ್ಮೆ ಬೇರೆ ಪ್ರಾಣಿ, ರಾಜ್ಯ ಇತ್ಯಾದಿಗಳ ಮೇಲೆ ವಿಜಯವನ್ನು ಪಡೆದರೂ ಅವನು ನಿಜವಾಗಿ ಪರಾಜಿತನೇ ಆಗಿದ್ದಾನೆ. ಕಾರಣ – ಅವನು ಆ ಪದಾರ್ಥಗಳಲ್ಲಿ ಮಹತ್ವಬುದ್ಧಿ ಇರಿಸುತ್ತಾನೆ ಮತ್ತು ತನ್ನನ್ನು ಅವುಗಳ ಅಧೀನನೆಂದು ತಿಳಿಯುತ್ತಾನೆ. ಶರೀರದಿಂದ ವಿಜಯವಾದರೋ ಪಶುವೂ ಪಡೆದುಕೊಳ್ಳುತ್ತದೆ, ಆದರೆ ನಿಜವಾದ ವಿಜಯವು ಹೃದಯದಿಂದ ವಸ್ತುಗಳ ಅಧೀನತೆಯನ್ನು ದೂರಮಾಡಿದಾಗಲೇ ದೊರೆಯತ್ತದೆ.

ಪರಾಜಿತ ವ್ಯಕ್ತಿಯೇ ಬೇರೆಯವರನ್ನು ಪರಾಜಿತನಾಗಿಸಲು ಬಯಸುತ್ತಾನೆ, ಬೇರೆಯವರನ್ನು ತನ್ನ ಅಧೀನನಾಗಿಸಿಕೊಳ್ಳಲು ಬಯಸುತ್ತಾನೆ. ನಿಜವಾಗಿ ತಾನು ಪರಾಜಿತನಾಗದೆ ಬೇರೆಯವರನ್ನು ಪರಾಜಿತ ಮಾಡಲಾರನು; ಯಾರಾದರು ರಾಜನು ಅಥವಾ ವಿದ್ವಾಂಸರು ಯಾರೇ ಬೇರೆಯವರ ಮೇಲೆ ವಿಜಯವನ್ನು ಪಡೆಯಬೇಕೆಂದು ಬಯಸಿದರೆ ಅವನು ಮೊಟ್ಟಮೊದಲು ತನ್ನ ಸೈನ್ಯ, ಸಾಮರ್ಥ್ಯ, ಬುದ್ಧಿ ವಿದ್ಯೆ ಇವುಗಳ ಆಸರೆ ಪಡೆಯಬೇಕಾಗುತ್ತದೆ.

ಕಾಮನೆ ಉಂಟಾದಾಗಲೇ ಮನುಷ್ಯನು ಪರಾಧೀನನಾಗುತ್ತಾನೆ. ಕಾಮನೆಯು ಪೂರ್ಣವಾಗದಿದ್ದರೂ ಅಥವಾ ಪೂರ್ಣವಾದರೂ ಎರಡೂ ಅವಸ್ಥೆಗಳಲ್ಲಿ ಈ ಪರಾಧೀನತೆಯು ಹೇಗಿರುತ್ತದೋ ಹಾಗೆಯೇ ಇರುತ್ತದೆ. ಕಾಮನೆಯ ಪೂರ್ಣತೆಯಾಗದಿದ್ದರೂ ಮನುಷ್ಯನು ವಸ್ತುವಿನ ಅಭಾವದ ಕಾರಣ ಪರಾಧೀನತೆಯನ್ನು ಅನುಭವಿಸುತ್ತಾನೆ

ಮತ್ತು ಕಾಮನೆಯು ಪೂರ್ಣವಾದರೂ ಅರ್ಥಾತ್ – ವಸ್ತುವು ದೊರೆತಾಗಲೂ ಅವನು ಆ ವಸ್ತುವಿಗೆ ಪರಾಧೀನನಾಗಿರುತ್ತಾನೆ; ಏಕೆಂದರೆ ಉತ್ಪತ್ತಿ-ವಿನಾಶಶೀಲ ವಸ್ತುಗಳೆಲ್ಲವು 'ಪರ'ವಾಗಿವೆ. ಕಾಮನೆಯು ಪೂರ್ಣವಾಗದಿದ್ದಾಗ ಮನುಷ್ಯನಿಗೆ ಪರಾಧೀನತೆಯ ಅನುಭವವಾಗುತ್ತದೆ. ಆದರೆ ಕಾಮನೆಯು ಪೂರ್ತಿಯಾದಾಗ ಪರಾಧೀನನಾಗಿದ್ದರೂ ಮನುಷ್ಯನಿಗೆ ಪರಾಧೀನತೆಯ ಅನುಭವವಾಗದೆ ಸ್ವಾಧೀನತೆಯ ಅನುಭವವಾಗುವಷ್ಟು ಕತ್ತಲೆ ಬುದ್ಧಿಯಲ್ಲಿ ಆವರಿಸುತ್ತದೆ.

ಜ್ಞಾನೀ ಮಹಾಪುರುಷನಲ್ಲಿ ಕಾಮನೆಯು ಸರ್ವಥಾ ಅಭಾವವಾದ್ದರಿಂದ ಅವನು ಪೂರ್ಣತಃ ಸ್ವಾಧೀನನಾಗುತ್ತಾನೆ. ಸ್ವಾಧೀನ ಪುರುಷನೇ ವಿಜಯಿಯಾಗುತ್ತಾನೆ. ಆದರೆ ಸ್ವಾಧೀನ ಪುರುಷನ ಮನಸ್ಸಿನಲ್ಲಿ ಎಂದೂ ಯಾರಿಗೂ ಪರಾಜಿತ ಗೊಳಿಸುವ ಭಾವವೇ ಬರುವುದಿಲ್ಲ. ಅವನು ಜಗತ್ತಿನ ಕಿಂಚಿನ್ಮಾತ್ರವೂ ಆವಶ್ಯಕತೆಯನ್ನು ಅನುಭವಿಸದೆ ಜಗತ್ತೇ ಅವನ ಆವಶ್ಯಕತೆಯ ಅನುಭವ ಮಾಡುತ್ತದೆ.

ಜಗತ್ತನ್ನು ಗೆದ್ದಿರುವಂತಹ ಸಮದರ್ಶಿ ಮಹಾಪುರುಷನನ್ನು ಜಗತ್ತಿನ ದೊಡ್ಡ-ದೊಡ್ಡ ಸುಖ (ಪ್ರಲೋಭನೆ)ಗಳೂ ಕೂಡ ಸೆಳೆಯಲಾರವು ಮತ್ತು ದೊಡ್ಡ-ದೊಡ್ಡ ದುಃಖಗಳೂ ಕೂಡ ಕದಲಿಸಲಾರವು (೬/೨೨).

ಅವನ ಮನಸ್ಸಿನಲ್ಲಿ ಜಗತ್ತಿನ ಯಾವುದೇ ಪ್ರಾಣಿ, ಪದಾರ್ಥ, ಪರಿಸ್ಥಿತಿ ಇತ್ಯಾದಿಗಳ ಕಿಂಚಿನ್ಮಾತ್ರವೂ ಕಾಮನೆ, ವಾಸನಾ, ಸ್ಪೃಹೆ, ತೃಷ್ಣೆ ಮುಂತಾದವುಗಳು ಇರುವುದಿಲ್ಲ. ಅವನಿಗೆ ಅನುಕೂಲತೆ – ಪ್ರತಿಕೂಲತೆಗಳ ಜ್ಞಾನವಾಗುತ್ತದೆ ಹಾಗೂ ಅದಕ್ಕನುಸಾರ ಯಥೋಚಿತ ಚೇಷ್ಟೆಗಳು ಆಗುತ್ತವೆ. ಆದರೂ ಅನುಕೂಲತೆ-ಪ್ರತಿಕೂಲತೆಗಳು ಅವನ ಅಂತಃಕರಣದಲ್ಲಿ ಯಾವುದೇ ಪ್ರಭಾವ ಬೀರುವುದಿಲ್ಲ.

'ನಿರ್ದೋಷಂ ಹಿ ಸಮಂ ಬ್ರಹ್ಮ' – ಪರಮಾತ್ಮ ತತ್ತ್ವದಲ್ಲಿ ದೋಷ, ವಿಕಾರ ಅಥವಾ ವಿಷಮತೆ ಇಲ್ಲವೇ ಇಲ್ಲ. ಎಷ್ಟೇ ದೋಷಗಳು ಅಥವಾ ವಿಷಮತೆಗಳು ಬರುತ್ತವೋ ಅವೆಲ್ಲವು ಪ್ರಕೃತಿಯೊಂದಿಗೆ ರಾಗಪೂರ್ವಕ ಸಂಬಂಧ ಒಪ್ಪಿಕೊಂಡಿದ್ದರಿಂದ ಬರತ್ತವೆ. ಪರಮಾತ್ಮ ತತ್ತ್ವವು ಪ್ರಕೃತಿಯ ಸಂಬಂಧದಿಂದ ಸರ್ವಥಾ ನಿರ್ಲಿಪ್ತವಾಗಿದೆ, ಅದಕ್ಕಾಗಿ ಅದರಲ್ಲಿ ಕಿಂಚಿನ್ಮಾತ್ರವೂ ದೋಷ ಅಥವಾ ವಿಷಮತೆ ಇಲ್ಲ.

'ತಸ್ಮಾತ್ ಬ್ರಹ್ಮಣಿ ತೇ ಸ್ಥಿತಾಃ' – ಪರಮಾತ್ಮತತ್ತ್ವವು ನಿರ್ದೋಷ ಮತ್ತು ಸಮವಾಗಿದೆ, ಅದಕ್ಕಾಗಿ ಯಾವ ಮಹಾಪುರುಷರ ಅಂತಃಕರಣವು ನಿರ್ದೋಷ ಹಾಗೂ ಸಮವಾಗಿದೆಯೋ ಅವರು ಪರಮಾತ್ಮತತ್ತ್ವದಲ್ಲಿಯೇ ಸ್ಥಿತರಾಗಿದ್ದಾರೆ.

ಆಸಕ್ತಿಯ ಸಂಗದಿಂದಲೇ ಸಮಸ್ತ ದೋಷಗಳು ಮತ್ತು ವಿಷಮತೆಗಳು ಉತ್ಪತ್ತಿಯಾಗುತ್ತವೆ. ಪ್ರಪಂಚವು ಅಸತ್ತಾಗಿದೆ. ಯಾವುದು ಪ್ರತಿಕ್ಷಣ ಪರಿವರ್ತನಶೀಲವಾಗಿದೆಯೋ ಮತ್ತು ಮೂಲದಲ್ಲಿ ಯಾವುದರ ಸ್ವತಂತ್ರ ಅಸ್ತಿತ್ವವೇ ಇಲ್ಲವೋ ಅದನ್ನು ಅಸತ್ ಎಂದು ಹೇಳುತ್ತಾರೆ. ಅಸತ್ತಿನೊಂದಿಗೆ ಸಂಬಂಧ (ತಾದಾತ್ಮ್ಯ) ಇರುವಾಗ ದೋಷಗಳು ಮತ್ತು ವಿಷಮತೆಗಳಿಂದ ಬದುಕುಳಿಯುವುದು ಅಸಂಭವವಾಗಿದೆ. ಮಹಾಪುರುಷರ ಅಂತಃಕರಣದಲ್ಲಿ ಆಸಕ್ತಿನ ಮಹತ್ತ್ವವಿಲ್ಲದಿರುವುದರಿಂದ ಅವರ ಮೇಲೆ ಅಸತ್ತಿನ ಯಾವುದೇ ಪ್ರಭಾವ ಬೀಳುವುದಿಲ್ಲ. ಆಸಕ್ತಿನ ಯಾವುದೇ ಪ್ರಭಾವ ಬೀಳದೆ ಇರುವುದರಿಂದ ಅವರ ಅಂತಃಕರಣವು ನಿರ್ದೋಷ ಮತ್ತು ಸಮವಾಗಿ ಹೋಗುತ್ತದೆ. ನಿರ್ದೋಷ ಮತ್ತು ಸಮವಾಗುವುದರಿಂದ ಮೊದಲಿನಿಂದಲೇ ಇದ್ದ ಪರಮಾತ್ಮತತ್ತ್ವದಲ್ಲಿ ಅವನಿಗೆ ಸ್ವತಃ- ಸ್ವಾಭಾವಿಕ ಸ್ಥಿತಿಯಂಟಾಗುತ್ತದೆ. ಎಲ್ಲಿ ಹೊಗೆ ಇದೆಯೋ ಅಲ್ಲಿ ಬೆಂಕಿಯು ಅವಶ್ಯವಾಗಿ ಇದೆ; ಏಕೆಂದರೆ ಬೆಂಕಿಯಿಲ್ಲದೆ ಹೊಗೆ ಇರುವುದು ಸಂಭವವೇ ಇಲ್ಲ, ಹಾಗೆಯೇ ಯಾರ ಅಂತಃಕರಣದಲ್ಲಿ ಸಮತೆ ಇದೆಯೋ ಅವರು ಅವಶ್ಯವಾಗಿ ಪರಮಾತ್ಮತತ್ತ್ವದಲ್ಲಿ ಸ್ಥಿತರಾಗಿದ್ದಾರೆ; ಏಕೆಂದರೆ ಪರಮಾತ್ಮತತ್ತ್ವದಲ್ಲಿ ಸ್ಥಿತಿಯಿಂಟಾಗದೆ ಪೂರ್ಣ ಸಮತೆಯು ಬರುವುದು ಸಂಭವವೇ ಇಲ್ಲ.

ಪರಮಾತ್ಮತತ್ತ್ವದಲ್ಲಿ ಅಥವಾ ಸಮತೆಯಲ್ಲಿ ಇರುವ ತನ್ನ (ಸ್ವಯಂ) ಸ್ಥಿತಿಯ ಕಾರಣದಿಂದ ಅಂತಃಕರಣದಲ್ಲಿ ಸಮತೆ ಬರುತ್ತದೆ. ಅದಕ್ಕಾಗಿ ಅಂತಃಕರಣದಲ್ಲಿ ಸಮತೆಯು ಬಂದಾಗಲೇ ಆ ಮಹಾ ಪುರುಷರು ಪರಮಾತ್ಮತತ್ತ್ವದಲ್ಲಿ ಅಥವಾ ಸಮತೆಯಲ್ಲಿ ಸ್ಥಿತರಾಗಿದ್ದಾರೆಂದು ಗುರುತಿಸ ಬಹುದು. ಇದೇ ಸಮತೆಯನ್ನು ಗೀತೆಯು 'ಯೋಗ'ವೆಂದು ಹೇಳಿದೆ – **'ಸಮತ್ವಂ ಯೋಗ ಉಚ್ಯತೆ'** (೨/೪೮) ಮತ್ತು ಇದರ ಪ್ರಾಪ್ತಿಯನ್ನೇ ಗೀತೆಯು ಮನುಷ್ಯ-ಜನ್ಮದ ಪೂರ್ಣತೆ ಎಂದು ತಿಳಿಯುತ್ತದೆ.

ಜ್ಞಾನಯೋಗದ ಈ ಪ್ರಕರಣವು ೧೩ನೇ ಶ್ಲೋಕದಿಂದ ನಡೆಯುತ್ತಿದೆ. ೧೩ನೇ ಶ್ಲೋಕದ ಕೊನೆಯಲ್ಲಿ ಬಂದಿರುವ **'ಜಂತವಃ'** ಪದದಿಂದ ಬಹುವಚನದ ಪ್ರಯೋಗ ಪ್ರಾರಂಭವಾಗಿದೆ. ಅದು ಈ ೧೯ನೇ ಶ್ಲೋಕದವರೆಗೆ ನಡೆದಿದೆ. ಎಲ್ಲದರಲ್ಲಿ ಬಹುವಚನ ಬಂದಿರುವ ತಾತ್ಪರ್ಯ – ಯಾವ ಮನುಷ್ಯರು ಮೋಹಿತರಾಗಿದ್ದಾರೋ ಅವರೆಲ್ಲರು ಪರಮಾತ್ಮತತ್ತ್ವವನ್ನು ಪಡೆದುಕೊಳ್ಳಬಲ್ಲರು. ಆದರೆ ಪ್ರಸ್ತುತ ಶ್ಲೋಕದಲ್ಲಿ **'ಬ್ರಹ್ಮಣಿ'** ಪದದಲ್ಲಿ ಏಕವಚನ ಬಂದಿದೆ, ಅದರ ತಾತ್ಪರ್ಯ – ಎಲ್ಲ ಮನುಷ್ಯರಿಗೆ ಒಂದೇ ಪರಮಾತ್ಮತತ್ತ್ವದ ಪ್ರಾಪ್ತಿಯಾಗುತ್ತದೆ. ಮುಕ್ತಿಯು ಬೇಕಾದರೆ ಬ್ರಾಹ್ಮಣನದ್ದಾಗಲೀ, ಅಥವಾ ಚಾಂಡಲನದ್ದಾಗಲೀ ಇಬ್ಬರಿಗೂ ಒಂದೇ ತತ್ತ್ವದ ಪ್ರಾಪ್ತಿಯಾಗುತ್ತದೆ. ಭೇದವು ಕೇವಲ ಶರೀರಗಳಿಂದ

ಇರುತ್ತದೆ, ಅದು ಇರುವುದು ಸರಿಯೆ. ತತ್ತ್ವದಿಂದಾಗಿ ಯಾವ ಭೇದವೂ ಇಲ್ಲ. ಮೊದಲು ಎಷ್ಟು ಜನ ಸನಕಾದಿಕ ಮಹಾತ್ಮರಾಗಿದ್ದಾರೋ, ಅವರಿಗೆ ಯಾವ ತತ್ತ್ವವು ಪ್ರಾಪ್ತವಾಗಿತ್ತೋ, ಆ ತತ್ತ್ವವೇ ಇಂದೂ ಕೂಡ ಪ್ರಾಪ್ತವಾಗಬಲ್ಲದು.

ಪರಿಶಿಷ್ಟ ಭಾವ – ಇಲ್ಲಿ ಬಂದಿರುವ '**ಮನ**' ಶಬ್ದವನ್ನು ಬುದ್ಧಿಯ ವಾಚಕವೆಂದು ತಿಳಿಯಬೇಕು; ಏಕೆಂದರೆ ಸಮತೆಯಲ್ಲಿ ಮನಸ್ಸುಸ್ಥಿತವಾಗದೆ ಬುದ್ಧಿಯೇ ಸ್ಥಿತವಾಗುತ್ತದೆ. ಮನಸ್ಸು ಧ್ಯಾನದಲ್ಲಿ ಸ್ಥಿತವಾಗುತ್ತದೆ. ಈ ಪ್ರಕರಣವು ಸ್ಥಿರಬುದ್ಧಿಯದಾಗಿದೆ. ಮನದ ಸ್ಥಿರತೆ ಕೇವಲ ಧ್ಯಾನಾವಸ್ಥೆಯಲ್ಲಿರುತ್ತದೆ, ವ್ಯವಹಾರದಲ್ಲಿಲ್ಲ; ಆದರೆ ಬುದ್ಧಿಯ ಸ್ಥಿರತೆ ನಿರಂತರವಾಗಿರುತ್ತದೆ. ಶ್ರೇಯಸ್ಸು ಮನದ ಸ್ಥಿರತೆಯಲ್ಲಿ ಆಗದೆ ಬುದ್ಧಿಯ ಸ್ಥಿರತೆಯಲ್ಲಾಗುತ್ತದೆ. ಮನಸ್ಸಿನ ಸ್ಥಿರತೆ ಯಿಂದ ಸಿದ್ಧಿಗಳು ಉಂಟಾಗುತ್ತವೆ. ಆದ್ದರಿಂದ ಬುದ್ಧಿಯ ಸ್ಥಿರತೆ ಇರುವಷ್ಟು ಮನದ ಸ್ಥಿರತೆ ಶ್ರೇಷ್ಠವಲ್ಲ. ಭಗವಂತನೂ ಕೂಡ ೨ನೇ ಅಧ್ಯಾಯದಲ್ಲಿ ಸ್ಥಿತಪ್ರಜ್ಞ (ಸ್ಥಿರಬುದ್ಧಿ)ನಾಗುವ ಮಹಿಮೆಯನ್ನು ಹೇಳಿರುವನು. ಮುಂದಿನ ಶ್ಲೋಕದಲ್ಲಿಯೂ ಭಗವಂತನು – '**ಸ್ಥಿರಬುದ್ಧಿರಸಮ್ಮೂಢೋ ಬ್ರಹ್ಮವಿದ್ ಬ್ರಹ್ಮಣಿ ಸ್ಥಿತಃ**' ಎಂದು ಹೇಳಿರುವನು.

ಸಾಧಕನು ತಪ್ಪಿಯೂ ತನ್ನನ್ನು ತತ್ತ್ವಜ್ಞನೆಂದು ತಿಳಿಯಬಾರದು, ಅದಕ್ಕಾಗಿ ಒಂದುವೇಳೆ ಬುದ್ಧಿಯಲ್ಲಿ ಸಮತೆಬಾರದಿದ್ದರೆ ಈಗ ತತ್ತ್ವಜ್ಞಾನವಾಗಲಿಲ್ಲ, ಕೇವಲ ಭಾಸವಾಗಿದೆ ಎಂದು ತಿಳಿದುಕೊಳ್ಳಬೇಕು, ಅದಕ್ಕಾಗಿ ಈ ಪರಿಚಯ ಹೇಳಲಾಗಿದೆ. ರಾಗ-ದ್ವೇಷ, ಹರ್ಷ-ಶೋಕ ಇತ್ಯಾದಿಗಳು ಆಗದಿರುವುದೇ ಬುದ್ಧಿಯ ಸಮತೆಯ ಸ್ವರೂಪವಾಗಿದೆ. ತತ್ತ್ವಪ್ರಾಪ್ತಿಯಾದಾಗ ಬುದ್ಧಿಯಲ್ಲಿ ನಿರಂತರ ಸಮತೆ ಇರುತ್ತದೆ. ಈ ಸಮತೆಯಿಂದ ಬುದ್ಧಿಯು ಎಂದೂ ವ್ಯುತ್ಥಾನ ಅಥವಾ ವಿಯೋಗ ವಾಗುವುದಿಲ್ಲ.

ಬುದ್ಧಿಯು ಸಮತೆಯಲ್ಲಿ ಸ್ಥಿತವಾದವನಲ್ಲಿ ರಾಗ-ದ್ವೇಷಗಳು ಇರುವುದಿಲ್ಲ. ಅವನ ಈ ಸಮಬುದ್ಧಿಯು 'ಎಲ್ಲವೂ ಓರ್ವ ಪರಮಾತ್ಮನೇ ಆಗಿದ್ದಾನೆ' ಎಂಬ ಸ್ವತಃ ಅಚಲವಾಗಿರುತ್ತದೆ. ಒಂದು ಪರಮಾತ್ಮತತ್ತ್ವವಲ್ಲದೆ ಬೇರೆ ಏನೂ ಇಲ್ಲವೆಂದಾಗ ಮತ್ತೆ ಯಾರು ದ್ವೇಷಮಾಡುವುದು ಮತ್ತು ಯಾರೊಂದಿಗೆ ಮಾಡುವುದು? ಒಂದೇ ಸತ್ತೆಯು ಅಚಲವಾಗಿ ಅನುಭವದಲ್ಲಿ ಬಂದಾಗ ಯಾವುದೇ ಕಾಮನೆ ಇರುವುದಿಲ್ಲ ಮತ್ತು ಅಶಾಂತಿಯು ಇರುವುದಿಲ್ಲ.

ಸಂಬಂಧ - ಹಿಂದಿನ ಶ್ಲೋಕದಲ್ಲಿ ವರ್ಣಿಸಿದ ಸ್ಥಿತಿಯ ಪ್ರಾಪ್ತಿಯ ಸಾಧನೆ ಹಾಗೂ ಸಿದ್ಧನ ಲಕ್ಷಣಗಳ ವರ್ಣನೆಯನ್ನು ಮುಂದಿನ ಶ್ಲೋಕದಲ್ಲಿ ಮಾಡುತ್ತಾನೆ —

ನ ಪ್ರಹೃಷ್ಯೇತ್ಪ್ರಿಯಂ ಪ್ರಾಪ್ಯ ನೋದ್ವಿಜೇತ್ಪ್ರಾಪ್ಯ ಚಾಪ್ರಿಯಮ್ ।
ಸ್ಥಿರಬುದ್ಧಿರಸಂಮೂಢೋ ಬ್ರಹ್ಮವಿದ್ ಬ್ರಹ್ಮಣಿ ಸ್ಥಿತಃ ॥ ೨೦॥

ಪ್ರಿಯಮ್ - (ಯಾರು) ಪ್ರಿಯವನ್ನು, **ಪ್ರಾಪ್ಯ** - ಪಡೆದುಕೊಂಡು, **ನ, ಪ್ರಹೃಷ್ಯೇತ್** - ಹರ್ಷಿತನಾಗುವುದಿಲ್ಲವೋ, **ಚ** - ಮತ್ತು **ಅಪ್ರಿಯಮ್** - ಅಪ್ರಿಯವನ್ನು, **ಪ್ರಾಪ್ಯ** - ಪಡೆದುಕೊಂಡು, **ನ, ಉದ್ವಿಜೇತ್** - ಉದ್ವಿಗ್ನನಾಗುವುದಿಲ್ಲವೋ, **ಸ್ಥಿರಬುದ್ಧಿಃ** - (ಆ) ಸ್ಥಿರಬುದ್ಧಿಯುಳ್ಳ, **ಅಸಮ್ಮೂಢಃ** - ಮೂಢತಾರಹಿತ (ಜ್ಞಾನೀ), **ಬ್ರಹ್ಮವಿತ್** - (ಹಾಗೂ) ಬ್ರಹ್ಮವನ್ನು ತಿಳಿದ ಮನುಷ್ಯನು, **ಬ್ರಹ್ಮಣಿ** - ಬ್ರಹ್ಮನಲ್ಲಿ, **ಸ್ಥಿತಃ** - ಸ್ಥಿತನಾಗಿದ್ದಾನೆ. ॥ ೨೦॥

ಯಾರು ಪ್ರಿಯವನ್ನು ಪಡೆದುಕೊಂಡು ಹರ್ಷಿತನಾಗುವುದಿಲ್ಲವೋ ಮತ್ತು ಅಪ್ರಿಯವನ್ನು ಪಡೆದುಕೊಂಡು ಉದ್ವಿಗ್ನನಾಗುವುದಿಲ್ಲವೋ, ಆ ಸ್ಥಿರ ಬುದ್ಧಿಯುಳ್ಳ ಮೂಢನಲ್ಲದ ಜ್ಞಾನೀ ಹಾಗೂ ಬ್ರಹ್ಮವನ್ನು ತಿಳಿದ ಮನುಷ್ಯನು ಬ್ರಹ್ಮನಲ್ಲಿ ಸ್ಥಿತನಾಗಿದ್ದಾನೆ. ॥ ೨೦॥

ವ್ಯಾ.ಪ್ರಾ - '**ನ ಪ್ರಹೃಷ್ಯೇತ್ಪ್ರಿಯಂ ಪ್ರಾಪ್ಯ ನೋದ್ವಿಜೇತ್ಪ್ರಾಪ್ಯ ಚಾಪ್ರಿಯಮ್**' – ಶರೀರ, ಇಂದ್ರಿಯಗಳು, ಮನ, ಬುದ್ಧಿ, ಸಿದ್ಧಾಂತ, ಸಂಪ್ರದಾಯ, ಶಾಸ್ತ್ರ ಇತ್ಯಾದಿಗಳ ಅನುಕೂಲ ಪ್ರಾಣಿ, ಪದಾರ್ಥ, ಘಟನೆ, ಪರಿಸ್ಥಿತಿ ಮುಂತಾದವು ಪ್ರಾಪ್ತಿಯಾಗುವುದೇ 'ಪ್ರಿಯ'ವು ಪ್ರಾಪ್ತವಾಗುವುದಾಗಿದೆ.

ಶರೀರ, ಇಂದ್ರಿಯಗಳು, ಮನ, ಬುದ್ಧಿ, ಸಿದ್ಧಾಂತ, ಸಂಪ್ರದಾಯ ಶಾಸ್ತ್ರ ಇತ್ಯಾದಿಗಳ ಪ್ರತಿಕೂಲ ಪ್ರಾಣಿ, ಪದಾರ್ಥ, ಘಟನೆ, ಪರಿಸ್ಥಿತಿ ಮುಂತಾದವು ಪ್ರಾಪ್ತಿಯಾಗುವುದೇ 'ಅಪ್ರಿಯ'ವು ಪ್ರಾಪ್ತವಾಗುವುದಾಗಿದೆ.

ಪ್ರಿಯ ಮತ್ತು ಅಪ್ರಿಯವು ಪ್ರಾಪ್ತವಾದಾಗಲೂ ಸಾಧಕನ ಅಂತಃಕರಣದಲ್ಲಿ ಹರ್ಷ ಮತ್ತು ಶೋಕ ಆಗಬಾರದು. ಇಲ್ಲಿ ಪ್ರಿಯ ಹಾಗೂ ಅಪ್ರಿಯಗಳ ಪ್ರಾಪ್ತಿಯ ಅರ್ಥ-ಸಾಧಕನ ಹೃದಯದಲ್ಲಿ ಅನುಕೂಲ ಅಥವಾ ಪ್ರತಿಕೂಲ, ಪ್ರಾಣಿ-ಪದಾರ್ಥಗಳ ಕುರಿತು ರಾಗ ಅಥವಾ ದ್ವೇಷವಿದೆ ಎಂಬುದಲ್ಲ, ಬದಲಿಗೆ ಇಲ್ಲಿ ಆ ಪ್ರಾಣಿ, ಪದಾರ್ಥಗಳ ಪ್ರಾಪ್ತಿಯ ಜ್ಞಾನವನ್ನೇ ಪ್ರಿಯ ಮತ್ತು ಅಪ್ರಿಯದ ಪ್ರಾಪ್ತಿ ಎಂದು ಹೇಳಲಾಗಿದೆ. ಪ್ರಿಯ ಅಥವಾ ಅಪ್ರಿಯದ ಪ್ರಾಪ್ತಿ ಅಥವಾ ಅಪ್ರಾಪ್ತಿಯ ಜ್ಞಾನವಾಗುವುದರಲ್ಲಿ ಯಾವುದೇ

ದೋಷವಿಲ್ಲ. ಅಂತಃಕರಣದಲ್ಲಿ ಅವುಗಳ ಪ್ರಾಪ್ತಿ ಅಥವಾ ಅಪ್ರಾಪ್ತಿಯ ಪ್ರಭಾವ ಬೀರುವುದು ಅರ್ಥಾತ್ ಹರ್ಷ-ಶೋಕಾದಿವಿಕಾರವಾಗುವುದು ದೋಷವಾಗಿದೆ.

ಪ್ರಿಯತೆ ಹಾಗೂ ಅಪ್ರಿಯತೆಯ ಜ್ಞಾನವಾದರೋ ಅಂತಃಕರಣದಲ್ಲಿ ಆಗುತ್ತದೆ. ಆದರೆ ಹರ್ಷಿತ ಮತ್ತು ಉದ್ವಿಗ್ನ ಕರ್ತಾ ಆಗುತ್ತಾನೆ. ಅಹಂಕಾರದಿಂದ ಮೋಹಿತ ಅಂತಃಕರಣವುಳ್ಳ ಪುರುಷನು ಪ್ರಕೃತಿಯ ಕರಣಗಳಿಂದ ಆಗುವ ಕ್ರಿಯೆಗಳಿಂದಾಗಿ 'ನಾನು ಕರ್ತಾ ಆಗಿದ್ದೇನೆ' ಹೀಗೆ ತಿಳಿದುಕೊಂಡು ಹರ್ಷಿತ ಹಾಗೂ ಉದ್ವಿಗ್ನನಾಗುತ್ತಾ ಇರುತ್ತಾನೆ. ಆದರೆ ಯಾರ ಮೋಹದೂರವಾಗಿದೆಯೋ, ಯಾರು ತತ್ತ್ವವೇ ತ್ತನೋ, ಅವನು 'ಗುಣಗಳೇ ಗುಣಗಳಲ್ಲಿ ವರ್ತಿಸುತ್ತಿವೆ' ಹೀಗೆ ತಿಳಿದುಕೊಂಡು ತನ್ನಲ್ಲಿ (ಸ್ವರೂಪದಲ್ಲಿ) ವಾಸ್ತವವಾಗಿ ಅಕರ್ತೃತ್ವದ ಅನುಭವ ಪಡೆಯುತ್ತಾನೆ (೩/೨೮). ಸ್ವರೂಪವು ಹರ್ಷಿತ ಮತ್ತು ಉದ್ವಿಗ್ನವಾಗುವ ಸಂಭವವೇ ಇಲ್ಲ.

'ಸ್ಥಿರಬುದ್ಧಿಃ' – ಸ್ವರೂಪದ ಜ್ಞಾನ ಸ್ವಯಂನಿಂದಲೇ ಸ್ವಯಂಗೆ ಆಗುತ್ತದೆ. ಇದರಲ್ಲಿ ಜ್ಞಾತಾ ಮತ್ತು ಜ್ಞೇಯದ ಭಾವವಿರುವುದಿಲ್ಲ. ಈ ಜ್ಞಾನವು ಕರಣನಿರಪೇಕ್ಷವಾಗಿದೆ ಅರ್ಥಾತ್ – ಇದರಲ್ಲಿ ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿ ಯಾವ ಕರಣದ ಅಪೇಕ್ಷೆ ಇರುವುದಿಲ್ಲ. ಕರಣಗಳಿಂದಾಗುವ ಜ್ಞಾನ ಸ್ಥಿರ ಹಾಗೂ ಸಂದೇಹ ರಹಿತ ಆಗಿರುವುದಿಲ್ಲ, ಅದಕ್ಕಾಗಿ ಅದು ಅಲ್ಪಜ್ಞಾನ ವಾಗಿದೆ. ಆದರೆ ಸ್ವಯಂ (ತಾನು ಇರುವ) ಇದರ ಜ್ಞಾನ ಸ್ವಯಂ ಆಗಿರುವುದರಿಂದ ಅದರಲ್ಲಿ ಎಂದೂ ಪರಿವರ್ತನೆ ಅಥವಾ ಸಂದೇಹ ಇರುವುದಿಲ್ಲ. ಯಾವ ಮಹಾಪುರುಷನಿಗೆ ಇಂತಹ ಕರಣ-ನಿರಪೇಕ್ಷ ಜ್ಞಾನದ ಅನುಭವವಾಗಿದೆಯೋ, ಅವನದೆಂದು ಹೇಳಿಕೊಳ್ಳುವ ಬುದ್ಧಿಯಲ್ಲಿ ಎಂದೂ ವಿಕಲ್ಪ, ಸಂದೇಹ, ವಿಪರೀತ ಭಾವನೆ, ಅಸಂಭಾವನೆ ಇತ್ಯಾದಿಗಳು ಇರದಷ್ಟು ಈ ಜ್ಞಾನವು ದೃಢವಾಗಿ ಇಳಿದಿರುತ್ತದೆ. ಅದಕ್ಕಾಗಿ ಅವನಿಗೆ **'ಸ್ಥಿರಬುದ್ಧಿಃ'** ಎಂದು ಹೇಳಲಾಗಿದೆ.

'ಅಸಮ್ಮೂಢಃ' – ಯಾವ ಪರಮಾತ್ಮ ತತ್ತ್ವವು ಸದಾ-ಸರ್ವತ್ರ ಇದ್ದುಕೊಂಡಿದೆಯೋ ಅದರ ಅನುಭವ ಆಗದಿರುವುದು, ಯಾವುದರ ಅಸ್ತಿತ್ವವಿಲ್ಲವೋ ಆ ಉತ್ಪತ್ತಿ ವಿನಾಶಶೀಲ ಪ್ರಪಂಚವನ್ನು ಸತ್ಯವೆಂದು ತಿಳಿಯುವುದು – ಇಂತಹ ಮೂಢತೆಯು ಸಾಧಾರಣ ಮನುಷ್ಯರಲ್ಲಿ ಇರುತ್ತದೆ. ಈ ಮೂಢತೆಯು ಯಾರಲ್ಲಿ ಸರ್ವಥಾ ಅಭಾವವಾಗಿದೆಯೋ ಅವನನ್ನೇ ಇಲ್ಲಿ **'ಅಸಮ್ಮೂಢಃ'** ಎಂದು ಹೇಳಲಾಗಿದೆ.

'ಬ್ರಹ್ಮವಿತ್' – ಪರಮಾತ್ಮನಿಂದ ಬೇರೆಯಾಗಿ ಪರಮಾತ್ಮನ ಅನುಭವವಾಗುವುದಿಲ್ಲ. ಪರಮಾತ್ಮನ ಅನುಭವವಾಗವುದರಲ್ಲಿ ಅನುಭವಿತಾ, ಅನುಭವ ಮತ್ತು ಅನುಭಾವ್ಯ – ಈ ತ್ರಿಪುಟಿ ಇರದೆ ತ್ರಿಪುಟಿ ರಹಿತ ಅನುಭವ ಮಾತ್ರ (ಜ್ಞಾನಮಾತ್ರ) ಇರುತ್ತದೆ. ನಿಜವಾಗಿ ಬ್ರಹ್ಮವನ್ನು ಯಾರು ತಿಳಿದವನು – ಇದನ್ನು ಹೇಳಲಾಗುವುದಿಲ್ಲ, ಕಾರಣ ಬ್ರಹ್ಮವನ್ನು ತಿಳಿಯುವವನು ಬ್ರಹ್ಮನಲ್ಲಿ ಅಭಿನ್ನನಾಗುತ್ತಾನೆ.* ಅದಕ್ಕಾಗಿ ಅವನು ತನ್ನನ್ನು ಬ್ರಹ್ಮವಿತ್ ಎಂದು ತಿಳಿಯುವುದೇ ಇಲ್ಲ, ಅರ್ಥಾತ್ – ಅವನಲ್ಲಿ 'ನಾನು ಬ್ರಹ್ಮವನ್ನು ತಿಳಿದಿದ್ದೇನೆ' ಇಂತಹ ಅಭಿಮಾನವಿರುವುದಿಲ್ಲ.

'ಬ್ರಹ್ಮಣಿ ಸ್ಥಿತಃ' – ನಿಜವಾಗಿ ಸಮಸ್ತ ಪ್ರಾಣಿಗಳು ತತ್ತ್ವದಿಂದ ನಿತ್ಯ-ನಿರಂತರ ಬ್ರಹ್ಮನಲ್ಲೇ ಸ್ಥಿತವಾಗಿದ್ದಾರೆ; ಆದರೆ ಮರವೆಯಿಂದ ತನ್ನ ಸ್ಥಿತಿಯು ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿಗಳಲ್ಲೇ ತಿಳಿಯುತ್ತಿರುವ ಕಾರಣ ಮನುಷ್ಯನಿಗೆ ಬ್ರಹ್ಮನಲ್ಲಿ ತನ್ನ ಸ್ವಾಭಾವಿಕ ಸ್ಥಿತಿಯ ಅನುಭವವಾಗುವುದಿಲ್ಲ. ಬ್ರಹ್ಮನಲ್ಲೇ ತನ್ನ ಸ್ಥಿತಿಯ ಅನುಭವವಾದಂತಹ ಮಹಾಪುರುಷನಿಗಾಗಿ ಇಲ್ಲಿ **'ಬ್ರಹ್ಮಣಿ ಸ್ಥಿತಃ'** ಪದಗಳ ಪ್ರಯೋಗವಾಗಿದೆ. ಇಂತಹ ಮಹಾಪುರುಷನಿಗೆ ಪ್ರತಿಯೊಂದು ಪರಿಸ್ಥಿತಿಯಲ್ಲಿ ನಿತ್ಯ - ನಿರಂತರ ಬ್ರಹ್ಮನಲ್ಲಿ ತನ್ನ ಸ್ವಾಭಾವಿಕ ಸ್ಥಿತಿಯ ಅನುಭವವಾಗುತ್ತಾ ಇರುತ್ತದೆ.

ಒಂದು ವಸ್ತುವು ಇನ್ನೊಂದು ವಸ್ತುವಿನಲ್ಲಿ ಇರುವ ಸ್ಥಿತಿಯಂತೆ ಬ್ರಹ್ಮನಲ್ಲಿರುವ ಸ್ಥಿತಿಯು ಅಲ್ಲ, ಕಾರಣ – ಬ್ರಹ್ಮನ ಅನುಭವವಾದಾಗ ಸರ್ವತ್ರ ಒಂದೇ ಬ್ರಹ್ಮವೇ ಬ್ರಹ್ಮ ಉಳಿದು ಹೋಗುತ್ತದೆ. ಅದರಲ್ಲಿ ಸ್ಥಿತಿಯನ್ನು ತಿಳಿಯುವವನು ಇನ್ನೊಬ್ಬನು ಇರುವುದೇ ಇಲ್ಲ, ಯಾರಾದರು ಬ್ರಹ್ಮನಲ್ಲಿ ತನ್ನ ಸ್ಥಿತಿಯನ್ನು ತಿಳಿಯುವವರೆಗೆ ಬ್ರಹ್ಮನ ಅನುಭೂತಿಯಲ್ಲಿ ಕೊರತೆ ಇದೆ, ಪರಿಚ್ಛಿನ್ನತೆ ಇದೆ.

ಪರಿತಿಪ್ಪ ಭಾವ – ಸುಷುಪ್ತಿ ಮತ್ತು ಮೂರ್ಛೆಯಲ್ಲಿ ಮನುಷ್ಯನಿಗೆ ಅಜ್ಞಾನದಿಂದ ಶರೀರದೊಂದಿಗೆ ಸಂಬಂಧ ವಿಚ್ಛೇದವಾಗುತ್ತದೆ, ಅರ್ಥಾತ್ ಮನಸ್ಸು ಅವಿದ್ಯೆಯಲ್ಲಿ ಲೀನವಾಗುತ್ತದೆ; ಆದ್ದರಿಂದ ಈ ಅವಸ್ಥೆಗಳಲ್ಲಿ ಮನುಷ್ಯನಿಗೆ ಪ್ರಿಯ-ಅಪ್ರಿಯದ, ಶಾರೀರಿಕ ನೋವು ಇತ್ಯಾದಿಗಳ ಜ್ಞಾನವಾಗುವುದಿಲ್ಲ. ಆದರೆ ಜೀವನ್ಮುಕ್ತ ಮಹಾಪುರುಷರಿಗೆ ಶರೀರದಿಂದ ಜ್ಞಾನಪೂರ್ವಕ ಸಂಬಂಧ ವಿಚ್ಛೇದವಾಗುತ್ತದೆ. ಅದಕ್ಕಾಗಿ ಅವನಿಗೆ ಪ್ರಿಯ-ಅಪ್ರಿಯ, ಶಾರೀರಿಕ ನೋವಿನ ಜ್ಞಾನವಾದರೋ ಆಗುತ್ತದೆ; ಆದರೆ ಅವುಗಳಿಂದ ಅವರು ಹರ್ಷಿತ, ಉದ್ವಿಗ್ನ ಸುಖೀ-ದುಃಖಿಯಾಗುವುದಿಲ್ಲ. ಅವರಿಗೆ ಶರೀರ, ಇಂದ್ರಿಯಗಳು, ಮನ, ಬುದ್ಧಿಗಳ ಪರವಶತೆ ಅಳಿದು ಹೋಗುತ್ತದೆ. ಬ್ರಹ್ಮವನ್ನು ತಿಳಿಯುವುದು ಮತ್ತು ಅದರಲ್ಲಿ ಸ್ಥಿತನಾಗುವುದು ಎರಡೂ ಒಂದೇ ಆಗಿದೆ.

—●—

* **'ಬ್ರಹ್ಮವೇದ ಬ್ರಹ್ಮೈವ ಭವತಿ** (ಮುಂಡಕ ೩/೨/೯); **ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ'** (ಬೃಹದಾರಣ್ಯಕ ೪/೪/೬)

ಸಂಬಂಧ - ಬ್ರಹ್ಮನಲ್ಲಿ ತನ್ನ ಸ್ವಾಭಾವಿಕ ಸ್ಥಿತಿಯ ಅನುಭವ ಹೇಗಿಯತ್ತದೆ, ಇದನ್ನು ಮುಂದಿನ ಶ್ಲೋಕದಲ್ಲಿ ವಿವೇಚನೆ ಮಾಡುತ್ತಾನೆ —

ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ ವಿಂದತ್ಯಾತ್ಮನಿ ಯತ್ಸುಖಮ್ ।
ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯಮಶ್ನುತೇ ॥ ೨೧॥

ಬಾಹ್ಯಸ್ಪರ್ಶೇಷು - ಬಾಹ್ಯಸ್ಪರ್ಶ (ಪ್ರಾಕೃತ ಎಲ್ಲ ವಸ್ತುಗಳ ಸಂಬಂಧ)ದಲ್ಲಿ, **ಅಸಕ್ತಾತ್ಮಾ** - ಆಸಕ್ತಿರಹಿತ ಅಂತಃಕರಣವುಳ್ಳ ಸಾಧಕನ, **ಆತ್ಮನಿ** - ಅಂತಃಕರಣದಲ್ಲಿ, **ಯತ್** - ಯಾವ, **ಸುಖಮ್** - (ಸಾತ್ತ್ವಿಕ ಸುಖವಿದೆಯೋ ಅದನ್ನು), **ವಿಂದತಿ** - ಪಡೆಯುತ್ತಾನೆ (ಮತ್ತೆ), **ಸಃ** - ಅವನು, **ಬ್ರಹ್ಮಯೋಗಯುಕ್ತಾತ್ಮಾ** - ಬ್ರಹ್ಮನಲ್ಲಿ ಅಭಿನ್ನಭಾವದಿಂದ ಸ್ಥಿತನಾದ ಮನುಷ್ಯನು, **ಅಕ್ಷಯಮ್**- ಅಕ್ಷಯವಾದ, **ಸುಖಮ್** - ಸುಖವನ್ನು, **ಅಶ್ನುತೇ** - ಅನುಭವಿಸುತ್ತಾನೆ. ॥ ೨೧॥

ಬಾಹ್ಯಸ್ಪರ್ಶ (ಪ್ರಾಕೃತ ಎಲ್ಲ ವಸ್ತುಗಳ ಸಂಬಂಧ)ದಲ್ಲಿ ಆಸಕ್ತಿರಹಿತ ಅಂತಃಕರಣವುಳ್ಳ ಸಾಧಕನು, ಅಂತಃಕರಣದಲ್ಲಿ ಯಾವ ಸಾತ್ತ್ವಿಕಸುಖವಿದೆಯೋ ಅದನ್ನು ಪಡೆಯುತ್ತಾನೆ; ಮತ್ತೆ ಬ್ರಹ್ಮನಲ್ಲಿ ಅಭಿನ್ನಭಾವದಿಂದ ಸ್ಥಿತನಾದ ಆ ಮನುಷ್ಯನು ಅಕ್ಷಯವಾದ ಸುಖವನ್ನು ಅನುಭವಿಸುತ್ತಾನೆ. ॥ ೨೧॥

ವ್ಯಾಖ್ಯಾ - '**ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ**' – ಪರಮಾತ್ಮನಲ್ಲದೆ ಶರೀರ, ಇಂದ್ರಿಯಗಳು, ಮನ, ಬುದ್ಧಿ ಪ್ರಾಣ ಇತ್ಯಾದಿಗಳಲ್ಲಿ ಹಾಗೂ ಶಬ್ದ ಸ್ಪರ್ಶ ಮುಂತಾದ ವಿಷಯಗಳ ಸಂಯೋಗಜನ್ಯ ಸುಖದಲ್ಲಿ ಯಾರ ಆಸಕ್ತಿ ಅಳಿದು ಹೋಗಿದೆಯೋ ಅಂತಹ ಸಾಧಕನಿಗಾಗಿ ಈ ಪದ ಪ್ರಯೋಗವಾಗಿದೆ. ಯಾವ ಸಾಧಕರ ಆಸಕ್ತಿ ಇನ್ನು ಅಳಿದು ಹೋಗಿಲ್ಲವೋ, ಆದರೆ ಯಾರಿಗೆ ಆಸಕ್ತಿಯನ್ನು ಇಲ್ಲವಾಗಿಸುವ ಉದ್ದೇಶವಿದೆಯೋ, ಆ ಸಾಧಕರಿಗೂ ಆಸಕ್ತಿರಹಿತನೆಂದು ತಿಳಿದು ಕೊಳ್ಳಬೇಕು. ಕಾರಣ – ಉದ್ದೇಶದ ದೃಢತೆಯಿಂದ ಅವರೂ ಕೂಡ ಬೇಗನೇ ಆಸಕ್ತಿಯಿಂದ ಬಿಡುಗಡೆ ಹೊಂದುತ್ತಾರೆ.

ಹಿಂದಿನ ಶ್ಲೋಕದಲ್ಲಿ 'ಪ್ರಿಯವಸ್ತು ಪಡೆದರೂ ಹರ್ಷಿತ ಮತ್ತು ಅಪ್ರಿಯ ವಸ್ತುವನ್ನು ಪಡೆದರೂ ಉದ್ವಿಗ್ನನಾಗ ಬಾರದು' ಎಂದು ವರ್ಣಿಸಿರುವ ಸ್ಥಿತಿಯನ್ನು ಪಡೆದುಕೊಳ್ಳಲು ಬಾಹ್ಯಸ್ಪರ್ಶದಲ್ಲಿ ಆಸಕ್ತಿ ರಹಿತನಾಗುವುದು ಆವಶ್ಯಕವಾಗಿದೆ.

ಉತ್ಪತ್ತಿ– ವಿನಾಶಶೀಲ ಎಲ್ಲ ವಸ್ತುಗಳ ಹೆಸರು 'ಬಾಹ್ಯಸ್ಪರ್ಶ' ವಾಗಿದೆ, ಬೇಕಾದರೆ ಅದರ ಸಂಬಂಧ ಹೊರಗಿನಿಂದಿರಲಿ, ಅಂತಃ ಕರಣದಲ್ಲಿರಲೀ. ಬಾಹ್ಯಸ್ಪರ್ಶದಲ್ಲಿ ಆಸಕ್ತಿ ಇರುವತನಕ ತನ್ನ ಸ್ವರೂಪದ ಬೋಧವಾಗುವುದಿಲ್ಲ. ಬಾಹ್ಯಸ್ಪರ್ಶವು ನಿರಂತರ ಬದಲಾಗುತ್ತಿರುತ್ತದೆ, ಆದರೆ ಆಸಕ್ತಿಯ ಕಾರಣ ಅದು ಬದಲಾಗುವ ಕಡೆಗೆ ದೃಷ್ಟಿಯೇ ಹರಿಯುವುದಿಲ್ಲ ಹಾಗೂ ಬಾಹ್ಯಸ್ಪರ್ಶದಲ್ಲಿ ಸುಖದ ಅನುಭವವಾಗುತ್ತದೆ. ಪದಾರ್ಥಗಳನ್ನು ಅಪರಿವರ್ತನಶೀಲ, ಸ್ಥಿರವೆಂದು ತಿಳಿಯುವುದರಿಂದಲೇ ಮನುಷ್ಯನು ಅವುಗಳಿಂದ ಸುಖವನ್ನು ಪಡೆಯುತ್ತಾನೆ. ಆದರೆ ನಿಜವಾಗಿ ಆ ಪದಾರ್ಥಗಳಲ್ಲಿ ಸುಖವಿಲ್ಲ, ಪದಾರ್ಥಗಳ ಸಂಬಂಧ ವಿಚ್ಛೇದವಾದಾಗಲೇ ಸುಖವಾಗುತ್ತದೆ. ಅದಕ್ಕಾಗಿ ಸುಷುಪ್ತಿಯಲ್ಲಿ ಪದಾರ್ಥಗಳ ಸಂಬಂಧ ವಿಸ್ಮೃತಿ ಯಾದಾಗಲೇ ಸುಖದ ಅನುಭವವಾಗುತ್ತದೆ.

ಪದಾರ್ಥಗಳಿಲ್ಲದೆ ಮನುಷ್ಯನು ಜೀವಿಸಲಾರನು ಎಂಬುದು ಭ್ರಮೆಯಾಗಿದೆ. ಆದರೆ ನಿಜವಾಗಿ ನೋಡಿದರೆ ಬಾಹ್ಯ ಪದಾರ್ಥಗಳ ವಿಯೋಗವಿಲ್ಲದೆ ಮನುಷ್ಯನು ಜೀವಿಸಿಯೇ ಇರಲಾರನು. ಅದಕ್ಕಾಗಿ ಅವನು ನಿದ್ದೆಮಾಡುತ್ತಾನೆ; ಏಕೆಂದರೆ, ನಿದ್ದೆಯಲ್ಲಿ ಪದಾರ್ಥಗಳನ್ನು ಮರೆಯುತ್ತಾನೆ. ಪದಾರ್ಥಗಳು ಮರೆತಾಗಲೇ ನಿದ್ದೆಯಿಂದ ಸಿಗುವ ಸುಖ, ಹೊಸತನ, ಬಲ, ನಿರೋಗತೆ, ನಿಶ್ಚಿಂತತೆ ಇತ್ಯಾದಿಗಳು, ಜಾಗ್ರತವಿದ್ದಾಗ ಪದಾರ್ಥಗಳ ಸಂಯೋಗ ದಿಂದ ಸಿಗಲಾರದು. ಅದಕ್ಕಾಗಿ ಮನುಷ್ಯನು ಜಾಗ್ರತದಲ್ಲಿ ವಿಶ್ರಾಂತಿಪಡೆಯಲು, ಪ್ರಾಣ ಪದಾರ್ಥಗಳಿಂದ ಬೇರೆ ಯಾಗಲು ಇಚ್ಛಿಸುತ್ತಾನೆ. ಅವನು ನಿದ್ದೆಯನ್ನು ತುಂಬಾ ಆವಶ್ಯಕವೆಂದು ತಿಳಿಯುತ್ತಾನೆ; ಏಕೆಂದರೆ, ನಿಜವಾಗಿ ಪದಾರ್ಥಗಳ ವಿಯೋಗದಿಂದಲೇ ಮನುಷ್ಯನಿಗೆ ಜೀವನ ಸಿಗುತ್ತದೆ.

ನಿದ್ದೆ ಮಾಡುವಾಗ ಒಂದು-ಮನುಷ್ಯನು ಹೊರಗಿನ ಪದಾರ್ಥಗಳಿಂದ ಸಂಬಂಧವನ್ನು ಕಡಿದುಕೊಳ್ಳಲು ಬಯಸುತ್ತಾನೆ. ಇನ್ನೊಂದು – ನಿದ್ದೆ ಮಾಡಿದ ಬಳಿಕ ಇಂತಹ ಕೆಲಸಮಾಡುವುದಿದೆ ಎಂಬ ಭಾವವಿರುತ್ತದೆ – ಎಂಬ ಎರಡು ಮಾತುಗಳಿರುತ್ತವೆ. ಇವೆರಡೂ ಮಾತುಗಳಲ್ಲಿ ಪದಾರ್ಥ ಗಳಿಂದ ಸಂಬಂಧ ವಿಚ್ಛೇದವನ್ನು ಬಯಸುವುದು 'ಸ್ವಯಂ' ಇದರ ಇಚ್ಛೆಯಾಗಿದೆ, ಅದು ಸದಾಕಾಲ ಒಂದೇ ಆಗಿರುತ್ತದೆ; ಆದರೆ ಕೆಲಸ ಮಾಡುವ ಭಾವಬದಲಾಗುತ್ತಿರುತ್ತದೆ. ಕಾರ್ಯಮಾಡುವ ಭಾವ ಪ್ರಬಲವಾಗಿರುವುದರಿಂದ ಮನುಷ್ಯನ ದೃಷ್ಟಿಯು ಪದಾರ್ಥಗಳ ಸಂಬಂಧ ವಿಚ್ಛೇದದ ಕಡೆಗೆ ಹೋಗುವುದೇ ಇಲ್ಲ, ಅವನು ಪದಾರ್ಥಗಳ ಸಂಬಂಧ ವಿರಿಸಿಕೊಂಡೇ ನಿದ್ದೆಮಾಡುತ್ತಾನೆ ಹಾಗೂ ಏಳುತ್ತಾನೆ.

ಸಂಬಂಧಿಗಳಾದರೋ ಇರುವುದಿಲ್ಲ, ಆದರೆ ಸಂಬಂಧ ಇರುತ್ತದೆ ಇದು ಆಶ್ಚರ್ಯದ ಮಾತಾಗಿದೆ! ಇದರ ಕಾರಣ –

ಸ್ವಯಂ (ಅವಿನಾಶೀ ಚೇತನ) ತಾನು ಒಪ್ಪಿಕೊಂಡಿರುವ ಸಂಬಂಧವು ಅಳಿದು ಹೋಗುವುದಿಲ್ಲ. ಈ ಒಪ್ಪಿಕೊಂಡಿರುವ ಸಂಬಂಧವನ್ನು ಅಳಿಸಿ ಹಾಕುವ ಉಪಾಯವು ತನ್ನಲ್ಲಿ ಸಂಬಂಧವನ್ನು ಒಪ್ಪದಿರುವುದೇ ಆಗಿದೆ. ಕಾರಣ – ಪ್ರಾಣಿ-ಪದಾರ್ಥಗಳೊಂದಿಗೆ ಸಂಬಂಧವು ನಿಜವಾಗಿ ಇಲ್ಲವೇ ಇಲ್ಲ ಕೇವಲ ಒಪ್ಪಿಕೊಂಡದ್ದಾಗಿದೆ. ಒಪ್ಪಿಕೊಂಡಿರುವ ಮಾತು ಒಪ್ಪದಿದ್ದಾಗ ಉಳಿಯಲಾರದು ಮತ್ತು ಮಾನ್ಯತೆಯನ್ನು ಹಿಡಿದಿಡುವುದರಿಂದ ಬೇರೆ ಯಾವುದೇ ಸಾಧನೆಗಳಿಂದ ಇಲ್ಲವಾಗಲಾರದು. ಆದಕ್ಕಾಗಿ ಒಪ್ಪಿಕೊಂಡಿರುವ ಸಂಬಂಧದ ಮಾನ್ಯತೆಯನ್ನು ವರ್ತಮಾನದಲ್ಲೇ ಅಳಿಸಿಬಿಡಬೇಕು. ಮತ್ತೆ ಮುಕ್ತಿಯು ಸ್ವತಃಸಿದ್ಧ ವಾಗಿದೆ.

ಬಾಹ್ಯ ಪದಾರ್ಥಗಳ ಸಂಬಂಧ ಅವಾಸ್ತವಿಕವಾಗಿದೆ, ಆದರೆ ಪರಮಾತ್ಮನೊಂದಿಗೆ ನಮ್ಮ ಸಂಬಂಧ ವಾಸ್ತವಿಕ ವಾಗಿದೆ. ಮನುಷ್ಯನು ಸುಖದ ಇಚ್ಛೆಯಿಂದ ಬಾಹ್ಯ ಪದಾರ್ಥಗಳೊಂದಿಗೆ ತನ್ನ ಸಂಬಂಧ ವನ್ನು ಒಪ್ಪಿಕೊಳ್ಳುತ್ತಾನೆ; ಆದರೆ ಪರಿಣಾಮದಲ್ಲಿ ಅವನಿಗೆ ದುಃಖವೇ ದೊರೆಯುತ್ತದೆ (೫/೨೨). ಈ ಪ್ರಕಾರ ಅನುಭವ ಪಡೆದಾಗ ಬಾಹ್ಯ ಪದಾರ್ಥಗಳ ಆಸಕ್ತಿಯು ಇಲ್ಲವಾಗುತ್ತದೆ.

'ವಿಂದತ್ಯಾತ್ಮನಿ ಯತ್ಸುಖಮ್' - ಬಾಹ್ಯ ಪದಾರ್ಥಗಳ ಆಸಕ್ತಿಯು ಇಲ್ಲವಾದಾಗ ಅಂತಃಕರಣದಲ್ಲಿ ಸಾತ್ವಿಕ ಸುಖದ ಅನುಭವ ಉಂಟಾಗುತ್ತದೆ. ಹೊರಗಿನ ಪದಾರ್ಥಗಳ ಸಂಬಂಧದಿಂದ ಆಗುವ ಸುಖವು ರಾಜಸವಾಗಿರುತ್ತದೆ. ಮನುಷ್ಯನು ರಾಜಸ ಸುಖವನ್ನು ಅನುಭವಿಸುತ್ತಿರುವವರೆಗೆ ಸಾತ್ತ್ವಿಕ ಸುಖದ ಅನುಭವ ವಾಗುವುದಿಲ್ಲ. ರಾಜಸ ಸುಖದಲ್ಲಿ ಆಸಕ್ತಿರಹಿತನಾದಾಗಲೇ ಸಾತ್ತ್ವಿಕ ಸುಖದ ಅನುಭವ ವಾಗುತ್ತದೆ.

'ಸ ಬ್ರಹ್ಮಯೋಗಯುಕ್ತಾತ್ಮಾ' – ಪ್ರಪಂಚದಲ್ಲಿರುವ ರಾಗವು ಅಳಿಯುತ್ತಲೇ ಬ್ರಹ್ಮನಲ್ಲಿ ಅಭಿನ್ನ ಭಾವದಿಂದ ಸತ್ತಃ ಸ್ಥಿತಿಯು ಉಂಟಾಗುತ್ತದೆ. ಕತ್ತಲೆ ಇಲ್ಲವಾಗುವುದು, ಬೆಳಕಾಗುವುದು ಎರಡೂ ಒಟ್ಟಿಗೆ ಆಗುವುದಿದ್ದರೂ ಮೊದಲು ಕತ್ತಲೆಯ ನಾಶವಾಗುವುದು ಬಳಿಕ ಬೆಳಕಾಗುವುದೆಂದು ತಿಳಿಯಲಾಗುತ್ತದೆ, ಹಾಗೆಯೇ ರಾಗವು ಇಲ್ಲವಾಗುವುದು, ಬ್ರಹ್ಮನಲ್ಲಿ ಸ್ಥಿತಿ ಉಂಟಾಗುವುದು ಒಟ್ಟಿಗೆ ಆಗುವುದಿದ್ದರೂ ಮೊದಲು ರಾಗದ ನಾಶ **'ಬಾಹ್ಯ ಸ್ಪರ್ಶೇಷ್ವಸಕ್ತಾತ್ಮಾ'** ಮತ್ತು ಬಳಿಕ ಬ್ರಹ್ಮನಲ್ಲಿ ಸ್ಥಿತಿ **'ಬ್ರಹ್ಮಯೋಗಯುಕ್ತಾತ್ಮಾ'** ಎಂದು ತಿಳಿಯಲಾಗುತ್ತದೆ. ೧೩ನೇ ಅಧ್ಯಾಯದ ಮೊದಲನೇ ಶ್ಲೋಕದಲ್ಲಿ ಕ್ಷೇತ್ರಜ್ಞ (ಜೀವಾತ್ಮಾ)ನ ಮೂಲಕ ತನ್ನ ಕ್ಷೇತ್ರ (ಶರೀರ)ದಿಂದ ಸರ್ವಥಾ ಭಿನ್ನವಾದ ಅನುಭವದ ಮಾತುಬಂದಿದೆ ಮತ್ತು ೨೨ನೇ ಶ್ಲೋಕದಲ್ಲಿ ಕ್ಷೇತ್ರಜ್ಞನ ಮೂಲಕ ತನ್ನನ್ನು ಪರಮಾತ್ಮನೊಂದಿಗೆ ಸರ್ವಥಾ ಅಭಿನ್ನವಾಗಿ ಅನುಭವಿಸುವ ಮಾತು ಬಂದಿದೆ. ಹೀಗೆಯೇ ಇಲ್ಲಿ ಮೊದಲಿಗೆ **'ಬಾಹ್ಯ ಸ್ಪರ್ಶೇಷ್ವಸಕ್ತಾತ್ಮಾ'** ಪದದಿಂದ ಶರೀರ- ಪ್ರಪಂಚ ದಿಂದ ತನ್ನನ್ನು ಸರ್ವಥಾ ಭಿನ್ನವಾಗಿ ಅನುಭವಿಸುವ ಮಾತನ್ನು ಹೇಳಿ ಮತ್ತೆ **'ಬ್ರಹ್ಮಯೋಗಯುಕ್ತಾತ್ಮಾ'** ಪದದಿಂದ ತನ್ನನ್ನು ಪರಮಾತ್ಮನೊಂದಿಗೆ ಸರ್ವಥಾ ಅಭಿನ್ನವಾಗಿ ಅನುಭವಿಸುವ ಮಾತು ಹೇಳಲಾಗಿದೆ.

ಭೋಗಗಳಿಂದ ವಿರಕ್ತನಾಗಿ ಸಾತ್ತ್ವಿಕ ಸುಖ ದೊರಕಿದಾಗ 'ನಾನು ಸುಖಿಯಾಗಿದ್ದೇನೆ' 'ನಾನು ಜ್ಞಾನಿಯಾಗಿದ್ದೇನೆ' 'ನಾನು ನಿರ್ವಿಕಾರನಾಗಿದ್ದೇನೆ' 'ನನಗಾಗಿ ಯಾವುದೇ ಕರ್ತವ್ಯ ಇರುವುದಿಲ್ಲ' ಈ ಪ್ರಕಾರದ **'ಅಹಮ್'** ಇದರ ಸೂಕ್ಷ್ಮ ಅಂಶ ಶೇಷವಾಗಿರುತ್ತದೆ. ಅದರ ನಿವೃತ್ತಿಗೆ ಏಕಮಾತ್ರ ಪರಮಾತ್ಮ ತತ್ತ್ವದೊಂದಿಗೆ ಅಭಿನ್ನತೆಯನ್ನು ಅನುಭವಿಸುವುದು ಆವಶ್ಯಕ ವಾಗಿದೆ. ಕಾರಣ-ಪರಮಾತ್ಮತತ್ತ್ವದೊಂದಿಗೆ ಪೂರ್ಣವಾಗಿ ಒಂದಾಗದೆ ತನ್ನ ಸತ್ತೆ ತನ್ನ ವ್ಯಕ್ತಿತ್ವ (ಪರಿಚ್ಛಿನ್ನತೆ ಅಥವಾ ಏಕದೇಶಿಯತೆ)ವು ಸರ್ವಥಾ ಅಭಾವವಾಗುವುದಿಲ್ಲ.

'ಸುಖಮಕ್ಷಯಮಶ್ನುತೇ' – ಸಾಧಕನು ಸಾತ್ವಿಕ ಸುಖವನ್ನು ಭೋಗಿಸುತ್ತಿರುವವರೆಗೆ ಅವನಲ್ಲಿ ಸೂಕ್ಷ್ಮ 'ಅಹಂಕಾರ', ಸೂಕ್ಷ್ಮ ಪರಿಚ್ಛಿನ್ನತೆ ಇರುತ್ತದೆ. ಸಾತ್ತ್ವಿಕ ಸುಖವನ್ನೂ ಕೂಡ ಭೋಗಿಸದೆ ಇರುವುದರಿಂದ 'ಅಹಂಕಾರ'ವು ಪೂರ್ಣವಾಗಿ ಅಭಾವವಾಗುತ್ತದೆ. ಮತ್ತು ಸಾಧಕನಿಗೆ ಪರಮಾತ್ಮಸ್ವರೂಪೀ, ಚಿನ್ಮಯ ಮತ್ತು ನಿತ್ಯ ಏಕರಸವಾಗಿರುವ ಅವಿನಾಶೀ ಸುಖದ ಅನುಭವವಾಗುತ್ತದೆ. ಇದೇ ಅಕ್ಷಯ ಸುಖವನ್ನು **'ಆತ್ಯಂತಿಕ ಸುಖ'** (೬/೨೧) **'ಅತ್ಯಂತ ಸುಖ'** (೬/೨೮) **'ಏಕಾಂತಿಕ ಸುಖ'** (೧೪/೨೭) ಇತ್ಯಾದಿ ಹೆಸರುಗಳಿಂದ ಹೇಳಲಾಗಿದೆ. ಇದರ ಅನುಭವವಾದಾಗ ಆ ಪರಮಾತ್ಮತತ್ತ್ವದಲ್ಲಿ ಸ್ವಾಭಾವಿಕವಾಗಿಯೇ ಒಂದು ಆಕರ್ಷಣೆ ಉಂಟಾಗುತ್ತದೆ, ಅದನ್ನು ಪ್ರೇಮವೆಂದೂ ಹೇಳುತ್ತಾರೆ (೧೮/೫೪). ಈ ಪ್ರೇಮದಲ್ಲಿ ಎಂದೂ ಕೊರತೆಯಾಗದೆ ಉತ್ತರೋತ್ತರ ಹೆಚ್ಚುತ್ತಾ ಇರುತ್ತದೆ. ಆ ತತ್ತ್ವದ ಪ್ರಸಂಗ ನಡೆಯುವಾಗ, ಅದರ ಕುರಿತು ವಿಚಾರಮಾಡಿದಾಗ ಮೊದಲಿಗಿಂತ ಕೆಲವು ಹೊಸತನ ಕಂಡುಬರುತ್ತದೆ – ಇದೇ ಪ್ರೇಮವು ಪ್ರತಿಕ್ಷಣ ಹೆಚ್ಚುವುದಾಗಿದೆ. ಇದರಲ್ಲಿ – ಪ್ರೇಮವು ಪ್ರತಿಕ್ಷಣ ಹೆಚ್ಚಾದಾಗಲೂ 'ಮೊದಲು ಕೊರತೆ ಇತ್ತು ಈಗ ಪೂರ್ಣ ವಾಯಿತು' ಹೀಗೆ ಕಂಡುಬಂದರೆ ಇದು ಸಾಧನಾ ವಸ್ಥೆಯಾಗಿದೆ. ಒಂದು ವೇಳೆ ಹೊಸತನ ಕಂಡುಬಂದರೂ 'ಮೊದಲು ಕೊರತೆ ಇತ್ತು, ಈಗ ಪೂರ್ಣವಾಯಿತು' ಎಂದು ಕಂಡುಬರದಿದ್ದರೆ ಇದು ಸಿದ್ಧಾವಸ್ಥೆಯಾಗಿದೆ.

–●–

ಸಂಬಂಧ - ಹಿಂದಿನ ಶ್ಲೋಕದಲ್ಲಿ ಭಗವಂತನು – ವಿಷಯಗಳಿಂದ ವಿರಕ್ತನಾದ ಪುರುಷನಿಗೆ ಅಕ್ಷಯ ಸುಖದ ಪ್ರಾಪ್ತಿಯನ್ನೂ

ಹೇಳಿದನು. ಈಗ ವಿಷಯಗಳಿಂದ ವಿರಕ್ತಿ ಹೇಗಾದೀತು – ಇದನ್ನು ಮುಂದಿನ ಶ್ಲೋಕದಲ್ಲಿ ವಿವೇಚಿಸುತ್ತಾನೆ —

ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ ।
ಆದ್ಯಂತವಂತಃ ಕೌಂತೇಯ ನ ತೇಷು ರಮತೇ ಬುಧಃ ॥ ೨೨॥

ಹಿ - ಏಕೆಂದರೆ, **ಕೌಂತೇಯ** - ಹೇ ಕುಂತೀನಂದನಾ!, **ಯೇ** - ಯಾವ, **ಸಂಸ್ಪರ್ಶಜಾಃ** - ಇಂದ್ರಿಯಗಳ ಮತ್ತು ವಿಷಯಗಳ ಸಂಯೋಗದಿಂದ ಉಂಟಾಗುವ, **ಭೋಗಾಃ** - ಭೋಗ (ಸುಖ)ಗಳಿವೆಯೋ, **ತೇ** - ಅವು, **ಆದ್ಯಂತವಂತಃ** - ಆದಿ-ಅಂತ್ಯವುಳ್ಳವುಗಳು (ಮತ್ತು), **ದುಃಖಯೋನಯಃ, ಏವ** - ದುಃಖದ್ದೇ ಕಾರಣವಾಗಿವೆ (ಆದ್ದರಿಂದ), **ಬುಧಃ** - ವಿವೇಕಶೀಲ ಮನುಷ್ಯನು, **ತೇಷು** - ಅವುಗಳಲ್ಲಿ, **ನ, ರಮತೇ** - ರಮಿಸುವುದಿಲ್ಲ. ॥ ೨೨॥

ಏಕೆಂದರೆ ಹೇ ಕುಂತೀನಂದನಾ! ಯಾವ ಇಂದ್ರಿಯಗಳ ಮತ್ತು ವಿಷಯಗಳ ಸಂಯೋಗದಿಂದ ಉಂಟಾಗುವ ಭೋಗ (ಸುಖ)ಗಳಿವೆಯೋ ಅವು ಆದಿ-ಅಂತ್ಯವುಳ್ಳವುಗಳು ಮತ್ತು ದುಃಖದ್ದೇ ಕಾರಣವಾಗಿವೆ. ಆದ್ದರಿಂದ ವಿವೇಕಶೀಲ ಮನುಷ್ಯನು ಅವುಗಳಲ್ಲಿ ರಮಿಸುವುದಿಲ್ಲ. ॥ ೨೨॥

ವ್ಯಾಖ್ಯಾ - **'ಯೇ ಹಿ ಸಂಸ್ಪರ್ಶಜಾ ಭೋಗಾಃ'** – ಶಬ್ದ, ಸ್ಪರ್ಶ, ರೂಪ, ರಸ, ಗಂಧ ಈ ವಿಷಯಗಳೊಂದಿಗೆ ಇಂದ್ರಿಯಗಳ ರಾಗ ಪೂರ್ವಕ ಸಂಬಂಧ ಉಂಟಾದಾಗ ಕಂಡುಬರುವ ಸುಖಕ್ಕೆ 'ಭೋಗ' ವೆಂದು ಹೇಳುತ್ತಾರೆ. ಸಂಬಂಧ ಜನ್ಯ ಅರ್ಥಾತ್ ಇಂದ್ರಿಯ ಜನ್ಯ ಭೋಗಗಳಲ್ಲಿ ಮನುಷ್ಯನು ಎಂದೂ ಸ್ವತಂತ್ರನಲ್ಲ. ಸುಖ-ಅನುಕೂಲತೆಗಳು, ಮಾನ, ದೊಡ್ಡಸ್ತಿಕೆ ಸಿಕ್ಕಿದಾಗ ಸಂತೋಷವಾಗುವುದು ಭೋಗವಾಗಿದೆ. ತನ್ನ ಬುದ್ಧಿಯಲ್ಲಿ ಆದರವಿರುವ ಸಿದ್ಧಾಂತದ ಪ್ರಶಂಸೆಯನ್ನು ಬೇರೆಯವರಿಂದ ಕೇಳಿದಾಗ ಉಂಟಾಗುವ ಸಂತೋಷವೂ, ಸುಖವೂ ಒಂದು ಪ್ರಕಾರದ ಭೋಗವೇ ಆಗಿದೆ. ತಾತ್ಪರ್ಯ – ಪರಮಾತ್ಮನಲ್ಲದೆ ಇರುವ ಪ್ರಕೃತಿಜನ್ಯ ಪ್ರಾಣಿ, ಪದಾರ್ಥ, ಪರಿಸ್ಥಿತಿ ಅವಸ್ಥೆ ಇತ್ಯಾದಿಗಳಿಂದ ಯಾವುದೇ ಪ್ರಕೃತಿಜನ್ಯ ಕರಣದಿಂದ ಸುಖದ ಅನುಭೂತಿಪಡೆಯುವುದು ಭೋಗವೇ ಆಗಿದೆ.

ಶಾಸ್ತ್ರನಿಷಿದ್ಧ ಭೋಗವಾದರೋ ಪೂರ್ಣವಾಗಿ ತ್ಯಾಜ್ಯವೇ ಆಗಿದೆ, ಶಾಸ್ತ್ರ-ವಿಹಿತ ಭೋಗವೂ ಕೂಡ ಪರಮಾತ್ಮನ ಪ್ರಾಪ್ತಿಯಲ್ಲಿ ಬಾಧಕವಾದ್ದರಿಂದ ತ್ಯಾಜ್ಯವೇ ಆಗಿದೆ. ಕಾರಣ-ಜಡತೆಯ ಸಂಬಂಧವಿಲ್ಲದೆ ಭೋಗವೇ ಆಗುವುದಿಲ್ಲ, ಆದ್ದರಿಂದ ಪರಮಾತ್ಮ ಪ್ರಾಪ್ತಿಗಾಗಿ ಜಡತೆಯಿಂದ ಸಂಬಂಧ ಕಡಿದುಕೊಳ್ಳುವುದು ಆವಶ್ಯಕವಾಗಿದೆ.

'ಆದ್ಯಂತವಂತಃ' – ಎಲ್ಲ ಭೋಗಗಳು ಬಂದು-ಹೋಗುವವು, ಅನಿತ್ಯವಾಗಿವೆ, ಪರಿವರ್ತನಶೀಲವಾಗಿವೆ (೨/೧೪). ಇವು ಎಂದೂ ಒಂದೇ ರೀತಿ ಇರಲಾರವು. ತಾತ್ಪರ್ಯ – ಈ ಭೋಗಗಳ ಏಕತೆ ಸ್ವಯಂ ದೊಂದಿಗೆ ಯಾವುದೇ ಅಂಶದಲ್ಲಿ ಇಲ್ಲ, ಭೋಗಗಳು ಬಂದು-ಹೋಗುವವು ಮತ್ತು ಸ್ವಯಂ ಸದಾಕಾಲ ಇರುವಂತಹುದು. ಭೋಗಗಳು ಜಡವಾಗಿವೆ, ಸ್ವಯಂ ಚೈತನ್ಯವಾಗಿದೆ. ಭೋಗಗಳು ವಿಕಾರಿಗಳಾಗಿವೆ, ಸ್ವಯಂ ನಿರ್ವಿಕಾರವಾಗಿದೆ. ಭೋಗಗಳು ಆದಿ-ಅಂತ್ಯವುಳ್ಳವುಗಳು, ಸ್ವಯಂ ಆದಿ-ಅಂತ್ಯಗಳಿಂದ ರಹಿತವಾಗಿದೆ. ಅದಕ್ಕಾಗಿ ಸ್ವಯಂಗೆ ಭೋಗಗಳಿಂದ ಎಂದೂ ಸುಖವಿಗಲಾರದು. ಜೀವನು ಪರಮಾತ್ಮನ ಅಂಶವಾಗಿದ್ದಾನೆ – **'ಮಮೈವಾಂಶೋ ಜೀವಲೋಕೇ'** (೧೫/೭), ಅದಕ್ಕಾಗಿ ಅವನಿಗೆ ಪರಮಾತ್ಮನಿಂದಲೇ ಅಕ್ಷಯ ಸುಖ ವಿಗಬಲ್ಲದು – **'ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯಮಶ್ನುತೇ'** (೫/೨೧).

ಭೋಗಗಳು ಬಂದುಹೋಗುವವು – ಈ ಕಡೆಗೆ ಲಕ್ಷ್ಯ ಹೋಗುತ್ತಲೇ ಸುಖ-ದುಃಖಗಳ ಪ್ರಭಾವ ಕಡಿಮೆಯಾಗುತ್ತದೆ. ಅದಕ್ಕಾಗಿ **'ಆದ್ಯಂತವಂತಃ'** ಪದವು ಭೋಗಗಳ ಪ್ರಭಾವವನ್ನು ಇಲ್ಲವಾಗಿಸಲು ವಿಷಧರೂಪಿಯಾಗಿದೆ.

'ದುಃಖಯೋನಯ ಏವ ತೇ' – ಸಂಬಂಧಜನ್ಯ ಸುಖಗಳೆಲ್ಲವು ದುಃಖದ ಉತ್ಪತ್ತಿಸ್ಥಾನವಾಗಿವೆ. ಸಂಬಂಧಜನ್ಯ ಸುಖವೂ ದುಃಖದಿಂದಲೇ ಉಂಟಾಗುತ್ತದೆ ಮತ್ತು ದುಃಖದಲ್ಲೇ ಪರಿವರ್ತಿತವಾಗುತ್ತದೆ. ಮೊದಲಿಗೆ ವಸ್ತುವಿನ ಅಭಾವದ ದುಃಖವಾಗುತ್ತದೆ, ಆಗಲೇ ಆ ವಸ್ತುವು ಸಿಕ್ಕಿದಾಗ ಸುಖವಾಗುತ್ತದೆ. ವಸ್ತುವಿನ ಅಭಾವದ ದುಃಖ ಎಷ್ಟು ಆಗುತ್ತದೋ, ವಸ್ತುವು ದೊರೆತಾಗ ಸುಖವೂ ಅಷ್ಟೇ ಆಗುತ್ತದೆ.

ಭೋಗಿವ್ಯಕ್ತಿಯು ದುಃಖದಿಂದ ಬದುಕುಳಿಯಲಾರನು. ಕಾರಣ-ಭೋಗಗಳು ಜಡತೆಯ ಸಂಬಂಧದಿಂದಾಗುತ್ತವೆ ಮತ್ತು ಜಡತೆಯ ಸಂಬಂಧವೇ ಜನ್ಮ-ಮರಣರೂಪೀ ದುಃಖದ ಕಾರಣವಾಗಿದೆ.

ಪಾತಂಜಲಯೋಗದರ್ಶನದಲ್ಲಿ ಹೇಳಿದೆ – **'ಪರಿಣಾಮತಾಪಸಂಸ್ಕಾರದುಃಖೈರ್ಗುಣವೃತ್ತಿವಿರೋಧಾಚ್ಚ-ದುಃಖಮೇವ ಸರ್ವಂ ವಿವೇಕಿನಃ'** (೨/೧೫).

ಪರಿಣಾಮ ದುಃಖ, ತಾಪದುಃಖ ಮತ್ತು ಸಂಸ್ಕಾರದುಃಖ ಈ ಮೂರು ಪ್ರಕಾರದ ದುಃಖಗಳು ಎಲ್ಲರಲ್ಲಿಯೂ ಇರುವ ಕಾರಣ ಹಾಗೂ ಮೂರು ಗುಣಗಳ ವೃತ್ತಿಗಳಲ್ಲಿ ಪರಸ್ಪರ ವಿರೋಧವಿದ್ದ ಕಾರಣ ವಿವೇಕೀ ಪುರುಷನಿಗೆ ಎಲ್ಲಾ ಭೋಗಗಳು ದುಃಖರೂಪವೇ ಆಗಿವೆ.

ಎಲ್ಲಾ ವಿಷಯ ಭೋಗಗಳು ಪ್ರಾರಂಭದಲ್ಲಿ ಸುಖರೂಪಿ

ಯಾಗಿ ಕಂಡುಬಂದರೂ ಪರಿಣಾಮದಲ್ಲಿ ದುಃಖವೇ ಕೊಡುವಂತಹವುಗಳು (೧೮/೩೮); ಏಕೆಂದರೆ, ಭೋಗಗಳ ಪರಿಣಾಮದಲ್ಲಿ ತನ್ನ ಶಕ್ತಿಯ ಹ್ರಾಸ ಮತ್ತು ಭೋಗ್ಯ ಪದಾರ್ಥದ ನಾಶವಾಗುತ್ತದೆ ಇದೇ 'ಪರಿಣಾಮ ದುಃಖ'ವಾಗಿದೆ.

ಬೇರೆ ವ್ಯಕ್ತಿಗಳ ಬಳಿ ತನಗಿಂತ ಹೆಚ್ಚು ಭೋಗಗಳು ಕಂಡು ಬರುವುದರಿಂದ, ತನ್ನ ಇಚ್ಛೆಗಳನುಸಾರ ಪೂರ್ಣ ಭೋಗ ಗಳು ದೊರೆಯದಿರುವುದರಿಂದ, ಒಳಗೆ ಭೋಗಗಳ ಆಸಕ್ತಿ ಇದ್ದರೂ ಕೂಡ ಭೋಗ ಭೋಗಿಸುವ ಶಕ್ತಿ ಇಲ್ಲದಿರುವು ದರಿಂದ ಹಾಗೂ ದೊರಕಿದ ಭೋಗಗಳು ಅಗಲಿ ಹೋಗುವ ಆಶಂಕೆಯಿಂದ ಭೋಗಗಳ ಬಳಿ ಇದ್ದರೂ ಹೃದಯದಲ್ಲಿ ಇರುವ ಸಂತಾಪವೇ 'ತಾಪ ದುಃಖ'ವಾಗಿದೆ.

ಯಾವುದೋ ಕಾರಣದಿಂದ ಭೋಗಗಳ ವಿಯೋಗ ವಾಗುವುದರಿಂದ ಮನುಷ್ಯನು ಆ ಭೋಗಗಳನ್ನು ನೆನೆ ನೆನೆದು ದುಃಖಿಯಾಗುವುದೇ 'ಸಂಸ್ಕಾರದುಃಖ'ವಾಗಿದೆ.

ಭೋಗಗಳಲ್ಲಿ ರುಚಿ ಇರುವ ಕಾರಣ ಮನಸ್ಸು ಆ ಭೋಗ ಗಳನ್ನು ಭೋಗಿಸಲು ಬಯಸುತ್ತದೆ; ಆದರೆ ವಿವೇಕದ ಕಾರಣ ಬುದ್ಧಿಯು ಅದನ್ನು ಭೋಗಗಳಿಂದ ತಡೆಯುತ್ತದೆ. ಹೀಗೆಯೇ ಸತ್ತ್ವಗುಣದಲ್ಲಿ ತಾಮಸೀ ವೃತ್ತಿಯಕಾರಣ ನಿದ್ದೆ ಬರುತ್ತದೆ ಹಾಗೂ ನಿದ್ದೆಯ ಸುಖವು ಮನುಷ್ಯನನ್ನು ತನ್ನತ್ತ ಸೆಳೆಯುತ್ತದೆ; ಆದರೆ ಸಾತ್ತ್ವಿಕ ವೃತ್ತಿಯ ಕಾರಣ ಈಗ ಸತ್ಸಂಗ ಮಾಡೋಣ, ಏಕೆಂದರೆ, ಈ ಅವಕಾಶ ಆಗಾಗ ದೊರೆಯಲಾರದು ಎಂಬ ವಿಚಾರಬರುತ್ತದೆ; ಇದೇ 'ಗುಣವೃತ್ತಿ ನಿರೋಧ'ವಾಗಿದೆ, ಆದರಿಂದ ಸಾಧಕರಿಗೆ ತುಂಬಾ ದುಃಖವಾಗುತ್ತದೆ.

ಭೋಗಗಳನ್ನು ಪಡೆಯುವುದು ನಮ್ಮ ವಶದಲ್ಲಿಲ್ಲ; ಏಕೆಂದರೆ, ಇದರಲ್ಲಿ ಪ್ರಾರಬ್ಧದ ಪ್ರಧಾನತೆ ಮತ್ತು ನಮ್ಮ ಪರತಂತ್ರತೆ ಇರುತ್ತದೆ. ಆದರೆ ಭಗವಂತನ ಪ್ರಾಪ್ತಿಯನ್ನು ಪ್ರತಿಯೊಬ್ಬನೂ ಮಾಡಿಕೊಳ್ಳಬಲ್ಲನು; ಏಕೆಂದರೆ ಅವನ ಪ್ರಾಪ್ತಿಗಾಗಿಯೇ ಮನುಷ್ಯ ಶರೀರ ದೊರಕಿದೆ. ಭೋಗಗಳು ಇಬ್ಬರಿಗೆ ಒಂದೇ ರೀತಿಯಿಂದ ದೊರೆಯಲಾರವು, ಆದರೆ ಭಗವಂತನು ಎಲ್ಲ ಮನುಷ್ಯರಿಗೆ ಸಮಾನರೂಪದಿಂದ ದೊರೆಯಬಲ್ಲನು. ಕೃತಯುಗದಲ್ಲಿ ದೊಡ್ಡ-ದೊಡ್ಡ ಋಷಿ ಗಳಿಗೆ ದೊರಕಿದ ಭಗವಂತನೇ ಇಂದು ಕಲಿಯುಗದಲ್ಲಿಯೂ ಎಲ್ಲರಿಗೆ ದೊರೆಯಬಲ್ಲನು. ಭೋಗಗಳ ಪ್ರಾಪ್ತಿ ಸದಾಕಾಲ ಆಗುವುದಿಲ್ಲ ಮತ್ತು ಎಲ್ಲರಿಗಾಗಿಯೂ ಆಗುವುದಿಲ್ಲ, ಆದರೆ ಭಗವಂತನ ಪ್ರಾಪ್ತಿಯು ಸದಾಕಾಲ ಆಗುತ್ತದೆ ಹಾಗೂ ಎಲ್ಲರಿಗೂ ಆಗುತ್ತದೆ. ತಾತ್ಪರ್ಯ – ಭೋಗ (ಜಡತೆ)ಗಳ ಪ್ರಾಪ್ತಿಯಲ್ಲಿ ವಿಭಿನ್ನತೆ ಇರುತ್ತದೆ, ಆದರೆ ಅವುಗಳ ತ್ಯಾಗದಲ್ಲಿ ಎಲ್ಲವೂ ಒಂದೇ ಆಗುತ್ತದೆ.

'ಏವ' ಪದದ ತಾತ್ಪರ್ಯ – ಭೋಗಗಳು ನಿಃಸಂದೇಹ ವಾಗಿ, ನಿಶ್ಚಿತರೂಪದಿಂದ ದುಃಖಗಳ ಕಾರಣವಾಗಿವೆ. ಅವುಗಳಲ್ಲಿ ಸುಖ ಕಂಡುಬಂದರೂ ನಿಜವಾಗಿ ಸುಖದ ಲೇಶವೂ ಇರುವುದಿಲ್ಲ.

'ನ ತೇಷು ರಮತೇ ಬುಧಃ' – ಸಾಧಾರಣ ಮನುಷ್ಯರಿಗೆ ಭೋಗಗಳಲ್ಲಿ ಸುಖವು ಕಂಡುಬರುತ್ತದೆ, ಆದರೆ ವಿವೇಕಶೀಲ ಮನುಷ್ಯನು ದುಃಖರೂಪಿಗಳೆಂದೇ ತಿಳಿಯು ತ್ತಾನೆ. ಅದಕ್ಕಾಗಿ ಅವನು ಆ ಭೋಗಗಳಲ್ಲಿ ರಮಿಸುವುದಿಲ್ಲ, ಅವುಗಳ ಅಧೀನನಾಗುವುದಿಲ್ಲ.

ವಿವೇಕಿ ಮನುಷ್ಯನಿಗೆ ಪ್ರಪಂಚದ ಎಲ್ಲ ದುಃಖ, ಸಂತಾಪ, ಪಾಪ, ನರಕ ಇತ್ಯಾದಿಗಳು ಸಂಯೋಗ ಜನ್ಯ ಸುಖದ ಇಚ್ಛೆಯ ಮೇಲೆ ಅವಲಂಬಿಸುತ್ತವೆ ಎಂಬ ಮಾತಿನ ಜ್ಞಾನವಿರುತ್ತದೆ. ತನ್ನ ಈ ಜ್ಞಾನಕ್ಕೆ ಮಹತ್ವಕೊಡುವುದರಿಂದಲೇ ಅವನು ಬುದ್ಧಿವಂತನಾಗಿದ್ದಾನೆ. ಆದರೆ ಯಾರು ಭೋಗಗಳು ದುಃಖಪ್ರದವಾಗಿವೆ ಎಂದು ತಿಳಿದು ಕೊಂಡರೂ ಕೂಡ ಭೋಗಗಳ ಕಾಮನೆ ಇರಿಸುತ್ತಾನೋ ಹಾಗೂ ಅವುಗಳಲ್ಲೇ ರಮಿಸುತ್ತಾನೋ, ಅವನು ನಿಜವಾಗಿ ತನ್ನ ಜ್ಞಾನಕ್ಕೆ ಪೂರ್ಣರೂಪದಿಂದ ಮಹತ್ವ ಕೊಡದ ಕಾರಣ ಬುದ್ಧಿವಂತನೆಂದು ಕರೆಸಿಕೊಳ್ಳಲು ಯೋಗ್ಯನಲ್ಲ, ತನ್ನ ಜ್ಞಾನಕ್ಕೆ ಮಹತ್ವಕೊಡುವ ಬುದ್ಧಿವಂತ ಮನುಷ್ಯನು ಭೋಗಗಳ ಕಾಮನೆ ಮಾಡಲಾರನು ಹಾಗೂ ಅವುಗಳಲ್ಲಿ ರಮಿಸಲಾರನು.

ಪರಿಶಿಷ್ಟ ಭಾವ – *ವಸ್ತು, ವ್ಯಕ್ತಿ, ಕ್ರಿಯೆಗಳ ಸಂಬಂಧದಿಂದ ಉಂಟಾಗುವ ಸುಖವು ದುಃಖಗಳ ಕಾರಣವಾಗಿದೆ. ಸುಖದ ಭೋಗಿಗೆ ನಿಯಮವಾಗಿ ದುಃಖ ಭೋಗಿಸಲೇಬೇಕಾಗುತ್ತದೆ. ಸುಖದ ಆಸೆ, ಕಾಮನೆ, ಭೋಗಗಳಿಂದ ನಿಜವಾಗಿ ಸುಖ ಸಿಗದೆ ದುಃಖವೇ ಸಿಗುತ್ತದೆ. ಭೋಗಗಳ ಸಂಯೋಗ ಅನಿತ್ಯವಾಗಿದೆ ಹಾಗೂ ವಿಯೋಗ ನಿತ್ಯವಾಗಿದೆ. ಮನುಷ್ಯನು ಅನಿತ್ಯಕ್ಕೆ ಮಹತ್ವ ನೀಡಿಯೇ ದುಃಖವನ್ನು ಪಡೆಯುತ್ತಾನೆ. ಸುಖವನ್ನು ಬಯಸುವುದರಿಂದ ಸುಖ ಸಿಗಬಹದೆ? ಮತ್ತು ದುಃಖಗಳ ನಾಶವಾದೀತೇ? ಎಂಬ ವಿಚಾರ ಮಾಡಬೇಕು. ಸುಖವನ್ನು ಇಚ್ಛಿಸುವುದರಿಂದ ಸುಖ ಸಿಗುವುದಿಲ್ಲ, ದುಃಖ ಅಳಿಯುವುದಿಲ್ಲ. ದುಃಖವನ್ನು ಅಳಿಸಿಹಾಕಲು ಸುಖವನ್ನು ಬಯಸುವುದೇ ದುಃಖದ ಬೇರು ಆಗಿದೆ.*

ಒಂದು ದುಃಖದ ಭೋಗವಾಗುತ್ತದೆ, ಇನ್ನೊಂದು ದುಃಖದ ಪ್ರಭಾವ ಉಂಟಾಗುತ್ತದೆ. ಮನುಷ್ಯನು ದುಃಖವನ್ನು ಭೋಗಿಸುವಾಗ ಸುಖದ ಇಚ್ಛೆ ಉಂಟಾಗುತ್ತದೆ ಮತ್ತು ಅವನ ಮೇಲೆ ದುಃಖದ ಪ್ರಭಾವವಿದ್ದಾಗ ಸುಖದ ಇಚ್ಛೆ ಇಲ್ಲವಾಗುತ್ತದೆ, ಅವನಿಗೆ ಅರುಚಿ ಉಂಟಾಗುತ್ತದೆ. ದುಃಖಗಳ ಭೋಗದಿಂದ ಮನುಷ್ಯನು ದುಃಖಿಯಾಗುತ್ತಾನೆ, ದುಃಖಗಳ ಪ್ರಭಾವದಿಂದ ಅವನು ದುಃಖದಿಂದ ಮೇಲೇಳುತ್ತಾನೆ. ದುಃಖದ ಪ್ರಭಾವದಿಂದ ಅವನು ದುಃಖದಲ್ಲಿ ತಲ್ಲೀನನಾಗದೆ

ಅದರ ಕಾರಣವನ್ನು ವಿಚಾರಮಾಡುತ್ತಾನೆ – ನನಗೆ ದುಃಖ ಏಕೆ ಉಂಟಾಯಿತು? ಎಂಬ ವಿಚಾರ ಮಾಡಿದಾಗ ಸುಖಾಸಕ್ತಿಯಲ್ಲದೆ ದುಃಖಕ್ಕೆ ಬೇರೆಯಾವುದೇ ಕಾರಣವಿಲ್ಲ, ಇರಲಿಲ್ಲ, ಇರಲಾರದು, ಇರಲು ಸಾಧ್ಯವೂ ಇಲ್ಲ ಎಂದು ಅವನಿಗೆ ತಿಳಿದುಬರುತ್ತದೆ. ಪರಿಸ್ಥಿತಿಯು ದುಃಖದ ಕಾರಣವಲ್ಲ; ಏಕೆಂದರೆ ಒಡಪಾಯಿ ಅದು ಒಂದು ಕ್ಷಣವೂ ಉಳಿಯದು. ಯಾವುದೇ ಪ್ರಾಣಿಯೂ ದುಃಖದ ಕಾರಣವಲ್ಲ; ಏಕೆಂದರೆ ಅದು ನಮ್ಮ ಹಳೆಯ ಪಾಪಗಳನ್ನು ನಾಶ ಮಾಡುತ್ತದೆ ಮತ್ತು ಮುಂದೆ ವಿಕಾಸಮಾಡುತ್ತದೆ. ಪ್ರಪಂಚವೂ ದುಃಖದ ಕಾರಣವಲ್ಲ; ಏಕೆಂದರೆ ಅದೂ ಪರಿವರ್ತನೆಯಾಗುತ್ತದೆ, ಅದು ನಮಗೆ ದುಃಖಕೊಡಲು ಇರದೆ ನಮ್ಮ ವಿಕಾಸಕ್ಕಾಗಿ ಇರುತ್ತದೆ. ಪರಿವರ್ತನೆ ಆಗದಿದ್ದರೆ ವಿಕಾಸ ಹೇಗಾದೀತು? ಪರಿವರ್ತನೆ ಇಲ್ಲದೆ ಬೀಜದ ವೃಕ್ಷ ಹೇಗಾದೀತು? ರಜ-ವೀರ್ಯಗಳ ಶರೀರ ಹೇಗಾದೀತು? ಬಾಲಕನು ತರುಣ ಹೇಗಾದಾನು? ಮೂರ್ಖನು ವಿದ್ವಾಂಸ ಹೇಗಾದಾನು? ರೋಗಿಯು ನಿರೋಗಿ ಹೇಗಾದಾನು? ತಾತ್ಪರ್ಯ – ಸ್ವಾಭಾವಿಕ ಪರಿವರ್ತನೆ ವಿಕಾಸ ಮಾಡು ವಂತಹುದು. ಪ್ರಪಂಚದಲ್ಲಿ ಪರಿವರ್ತನೆಯೇ ಸಾರವಾಗಿದೆ. ಪರಿವರ್ತನೆ ಇಲ್ಲದಿದ್ದರೆ ಪ್ರಪಂಚವು ಒಂದು ಅಚಲ, ಸ್ಥಿರ ಚಿತ್ರದಂತೆ ಆದೀತು. ಆದ್ದರಿಂದ ಪರಿವರ್ತನೆ ದೋಷಿಯಾಗಿರದೆ ಅದರಲ್ಲಿ ಸುಖ ಬುದ್ಧಿ ಇರಿಸುವುದು ದೋಷವಾಗಿದೆ. ಭಗವಂತನೂ ದುಃಖಿಗಳ ಕಾರಣನಲ್ಲ, ಏಕೆಂದರೆ, ಅವನು ಆನಂದಘನನಾಗಿದ್ದಾನೆ, ಅವನಲ್ಲಿ ದುಃಖವು ಇಲ್ಲವೇ ಇಲ್ಲ.

'ನ ತೇಷು ರಮತೇ ಬುಧಃ' – ವಿವೇಕಿ ಮನುಷ್ಯನು ಭೋಗಗಳಲ್ಲಿ ರಮಿಸುವುದಿಲ್ಲ; ಏಕೆಂದರೆ, ಭೋಗಗಳ ಕಾಮನೆ ವಿವೇಕಿಗಳ ನಿತ್ಯವೈರಿಯಾಗಿದೆ – **'ಜ್ಞಾನಿನೋ ನಿತ್ಯವೈರಿಣಾ'** (೩/೩೯). ಅವಿವೇಕಿಗಳಿಗೆ ಭೋಗಗಳು ಒಳ್ಳೆಯದೆನಿಸುತ್ತವೆ; ಏಕೆಂದರೆ, ದೋಷಗಳಲ್ಲಿ ಗುಣ ಬುದ್ಧಿಯು ಅವಿವೇಕದಿಂದ ಆಗತ್ತದೆ. ಎಲ್ಲ ಭೋಗಗಳು ದೋಷಜನಿತವೇ ಆಗಿದೆ. ಅಂತಃಕರಣದಲ್ಲಿ ಯಾವುದೇ ದೋಷ ಇಲ್ಲದಿದ್ದರೆ ಯಾವುದೇ ಭೋಗವಾಗಲಾರದು. ದೋಷಗಳು ವಿವೇಕಿಗೆ ಕಂಡುಬರುತ್ತವೆ. ಅದಕ್ಕಾಗಿ ಅವನು ಭೋಗಗಳಲ್ಲಿ ರಮಿಸುವುದಿಲ್ಲ, ಅರ್ಥಾತ್ ಅವನು ಅವುಗಳಿಂದ ಸುಖಪಡೆಯುವುದಿಲ್ಲ.

ವಿವೇಕೀ ಮನುಷ್ಯನು – ಸದಾಕಾಲ ತನ್ನ ಜೊತೆಗೆ ಇರದಿರುವ ವಸ್ತುವನ್ನು ಬಯಸುವುದಿಲ್ಲ. ಅವನು ವಿವೇಕದಿಂದ – ತನಗೆ ದೊರಕಿದ ವಸ್ತು, ವ್ಯಕ್ತಿ, ಯೋಗ್ಯತೆ, ಸಾಮರ್ಥ್ಯ ಇತ್ಯಾದಿಗಳು ನನ್ನವಲ್ಲ ಹಾಗೂ ನನಗಾಗಿ ಅಲ್ಲ ಎಂಬ ಈ ಸತ್ಯವನ್ನು ಸ್ವೀಕರಿಸಿಕೊಳ್ಳುವನು. ಇಷ್ಟೇ ಅಲ್ಲ, ಅನಂತ ಸೃಷ್ಟಿಯಲ್ಲಿ ನನ್ನದು ನನಗಾಗಿ ಇಂತಹ ಯಾವ ವಸ್ತುವೂ ಇಲ್ಲ, ಅತಿ ಪ್ರಿಯವಾದ ವಸ್ತುವೂ ಕೂಡ ಎಂದೆಂದಿಗೆ ನನ್ನದಲ್ಲ, ಅದು ಸದಾಕಾಲ ನನ್ನೊಂದಿಗೆ ಇರುವುದಿಲ್ಲ. ಅದಕ್ಕಾಗಿ ವಿವೇಕೀ ಮನುಷ್ಯನು – ಯಾವುದೇ ವಸ್ತು ಮತ್ತು ವ್ಯಕ್ತಿ ಸದಾಕಾಲ ನನ್ನೊಂದಿಗೆ ಇರುವುದಿಲ್ಲವೋ ಅವುಗಳಿಲ್ಲದೆ ನಾನು ಸದಾಕಾಲ ಸಂತೋಷವಾಗಿ ಇರಬಲ್ಲೆನು ಎಂದು ನಿಶ್ಚಯಿಸಿ ಕೊಳ್ಳುತ್ತಾನೆ.

—❁—

ಸಂಬಂಧ - ಹಿಂದಿನ ಶ್ಲೋಕದಲ್ಲಿ – ಸಂಯೋಗ ಜನ್ಯ ಸುಖವನ್ನು ಭೋಗಿಸುವವನು ದುಃಖಗಳಿಂದ ಬದುಕುಳಿಯಲಾರನು ಎಂದು ಭಗವಂತನು ಹೇಳಿದನು. ಹಾಗಾದರೆ ಸುಖೀ ಯಾರು ಆಗುತ್ತಾನೆ – ಇದರ ಉತ್ತರ ಮುಂದಿನ ಶ್ಲೋಕದಲ್ಲಿ ಕೊಡುತ್ತಾನೆ —

ಶಕ್ನೋತೀಹೈವ ಯಃ ಸೋಢುಂ ಪ್ರಾಕ್ಶರೀರವಿಮೋಕ್ಷಣಾತ್ ।
ಕಾಮಕ್ರೋಧೋದ್ಭವಂ ವೇಗಂ ಸ ಯುಕ್ತಃ ಸ ಸುಖೀ ನರಃ ॥ ೨೩॥

ಇಹ - ಈ ಮನುಷ್ಯ ಶರೀರದಲ್ಲಿ, **ಯಃ** - ಯಾರಾದರು, **ಶರೀರ ವಿಮೋಕ್ಷಣಾತ್** - ಶರೀರಬಿಡುವ, **ಪ್ರಾಕ್**, ಮೊದಲೇ, **ಕಾಮಕ್ರೋಧೋದ್ಭವಮ್** - ಕಾಮಕ್ರೋಧದಿಂದ ಉತ್ಪನ್ನವಾಗುವ, **ವೇಗಮ್** - ವೇಗವನ್ನು, **ಸೋಢುಮ್** - ಸಹಿಸಲು, **ಶಕ್ನೋತಿ** - ಸಮರ್ಥನಾಗುತ್ತಾನೋ, **ಸಃ, ನರಃ** - ಆ ನರನು, **ಯುಕ್ತಃ** - ಯೋಗಿಯಾಗಿದ್ದಾನೆ (ಮತ್ತು), **ಸಃ, ಸುಖೀ**- ಅವನೇ ಸುಖಿಯಾಗಿದ್ದಾನೆ. ॥ ೨೩॥

ಈ ಮನುಷ್ಯ ಶರೀರದಲ್ಲಿ ಯಾರಾದರು ಶರೀರ ಬಿಡುವ ಮೊದಲೇ ಕಾಮಕ್ರೋಧದಿಂದ ಉತ್ಪನ್ನವಾಗುವ ವೇಗವನ್ನು ಸಹಿಸಲು ಸಮರ್ಥನಾಗುತ್ತಾನೋ, ಆ ನರನು ಯೋಗಿಯಾಗಿದ್ದಾನೆ ಮತ್ತು ಅವನೇ ಸುಖಿಯಾಗಿದ್ದಾನೆ.

ವ್ಯಾಖ್ಯಾ - **'ಶಕ್ನೋತೀಹೈವ ಯಃ ..... ಕಾಮ ಕ್ರೋಧೋದ್ಭವಂ ವೇಗಮ್'** -ಎಲ್ಲ ಪ್ರಾಣಿಗಳಿಗೆ ಒಂದು ಅಲೌಕಿಕ ವಿವೇಕ ಪ್ರಾಪ್ತವಿದೆ. ಈ ವಿವೇಕವು ಪಶು-ಪಕ್ಷಿ ಇತ್ಯಾದಿ ಯೋನಿಗಳಲ್ಲಿ ಮಲಗಿರುತ್ತದೆ. ಅವುಗಳಲ್ಲಿ ಕೇವಲ ತಮ್ಮ-ತಮ್ಮ ಯೋನಿಗಳನುಸಾರ ಶರೀರ ನಿರ್ವಾಹಮಾತ್ರದ ವಿವೇಕವಿರುತ್ತದೆ. ದೇವ ಇತ್ಯಾದಿ ಯೋನಿಗಳಲ್ಲಿ ಈ ವಿವೇಕವು ಮುಚ್ಚಿರುತ್ತದೆ; ಏಕೆಂದರೆ, ಆ ಯೋನಿಗಳು ಭೋಗಕ್ಕಾಗಿ ದೊರೆತವು; ಆದ್ದರಿಂದ ಅವುಗಳಲ್ಲಿ ಭೋಗಗಳ ಬಾಹುಳ್ಯ

ಹಾಗೂ ಭೋಗಗಳ ಉದ್ದೇಶವಿರುತ್ತದೆ. ಮನುಷ್ಯ ಯೋನಿಯಲ್ಲಿಯೂ ಭೋಗಿ ಮತ್ತು ಸಂಗ್ರಹೀ ಮನುಷ್ಯನ ವಿವೇಕವು ಮುಚ್ಚಿರುತ್ತದೆ. ಮುಚ್ಚಿದ್ದರೂ ಕೂಡ ಈ ವಿವೇಕವು ಮನುಷ್ಯನಿಗೆ ಆಗಾಗ ಭೋಗ ಹಾಗೂ ಸಂಗ್ರಹದಲ್ಲಿ ದುಃಖ ಮತ್ತು ದೋಷದ ದರ್ಶನ ಮಾಡಿಸುತ್ತಾ ಇರುತ್ತದೆ. ಆದರೆ ಇದಕ್ಕೆ ಮಹತ್ವ ಕೊಡದಿರುವುದರಿಂದ ಮನುಷ್ಯನು ಭೋಗ ಹಾಗೂ ಸಂಗ್ರಹದಲ್ಲಿ ಸಿಲುಕಿರುತ್ತಾನೆ. ಆದ್ದರಿಂದ ಮನುಷ್ಯನು ಈ ವಿವೇಕಕ್ಕೆ ಮಹತ್ವವನ್ನಿತ್ತು ಇದನ್ನು ಸ್ಥಾಯಿಯಾಗಿಸಬೇಕು. ಇದರಲ್ಲಿ ಅವನಿಗೆ ಪೂರ್ಣ ಸ್ವಾತಂತ್ರ್ಯವಿದೆ. ವಿವೇಕವನ್ನು ಸ್ಥಾಯಿಯಾಗಿಸಿ ಅವನು ರಾಗ-ದ್ವೇಷ, ಕಾಮ-ಕ್ರೋಧ ಇತ್ಯಾದಿ ವಿಕಾರಗಳನ್ನು ಪೂರ್ಣವಾಗಿ ಮುಗಿಸಬಲ್ಲನು. ಅದಕ್ಕಾಗಿ ಭಗವಂತನು **'ಇಹ'** ಪದದಿಂದ 'ಈಗ ನಿನಗೆ ಇಂತಹ ದುರ್ಲಭ ಅವಕಾಶ ಪ್ರಾಪ್ತವಾಗಿದೆ. ಅದರಿಂದ ನೀನು ಕಾಮ-ಕ್ರೋಧಗಳನ್ನು ಜಯಿಸಿ ಎಂದೆಂದಿಗೂ ಸುಖಿಯಾಗಿರಬಲ್ಲೆ' ಎಂದು ಮನುಷ್ಯನನ್ನು ಎಚ್ಚರಿಸುತ್ತಿದ್ದಾನೆ.

ಮನುಷ್ಯ ಶರೀರವು ಮುಕ್ತನಾಗಲೆಂದೇ ದೊರಕಿದೆ. ಅದಕ್ಕಾಗಿ ಮನುಷ್ಯಮಾತ್ರನು ಕಾಮ-ಕ್ರೋಧಗಳ ವೇಗವನ್ನು ಸಹಿಸಲು ಯೋಗ್ಯ ಅಧಿಕಾರಿ ಮತ್ತು ಸಮರ್ಥನಾಗಿದ್ದಾನೆ. ಇದರಲ್ಲಿ ಯಾವುದೇ ವರ್ಣ, ಆಶ್ರಮ ಇತ್ಯಾದಿಗಳ ಅಪೇಕ್ಷೆಯೂ ಇಲ್ಲ.

ಸಾವು ಯಾವಾಗ ಬಂದೀತು ಎಂಬ ಭರಸೆ ಇಲ್ಲ. ಆದ್ದರಿಂದ ಮೊಟ್ಟಮೊದಲು ಕಾಮ-ಕ್ರೋಧಗಳ ವೇಗವನ್ನು ಸಹಿಸಬೇಕು. ಕಾಮ-ಕ್ರೋಧಗಳಿಗೆ ವಶನಾಗಬಾರದೆಂಬ ಎಚ್ಚರ ಜೀವನವಿಡೀ ಇರಿಸಬೇಕು. ಈ ಕೆಲಸವನ್ನು ಮನುಷ್ಯನು ಸ್ವತಃ ಮಾಡಬಲ್ಲನು, ಬೇರೆ ಯಾರೂ ಅಲ್ಲ. ಈ ಕಾರ್ಯವನ್ನು ಮಾಡುವ ಅವಕಾಶ ಮನುಷ್ಯ ಶರೀರದಲ್ಲಿಯೇ ಇದೆ, ಬೇರೆ ಶರೀರಗಳಲ್ಲಿ ಇಲ್ಲ. ಅದಕ್ಕಾಗಿ ಶರೀರವು ಬಿಟ್ಟುಹೋಗುವ ಮೊದಲೇ ಈ ಕಾರ್ಯವನ್ನು ಅವಶ್ಯವಾಗಿ ಮಾಡಿಕೊಳ್ಳಬೇಕು – ಇದೇ ಭಾವವು ಈ ಪದಗಳಲ್ಲಿ ಇದೆ.

ಮೇಲೆ ಹೇಳಿದ ಪದಗಳಿಂದ ಇನ್ನೊಂದು ಭಾವವನ್ನು ಪರಿಗಣಿಸಬಹುದು- ಕಾಮ-ಕ್ರೋಧಗಳಿಗೆ ವಶೀಭೂತನಾಗಿ ಶರೀರವು ಕ್ರಿಯೆ ಮಾಡಲು ತೊಡಗುವ ಸ್ಥಿತಿಗಿಂತ ಮೊದಲೇ ಅವುಗಳ ವೇಗವನ್ನು ಸಹಿಸಿಕೊಳ್ಳಬೇಕು. ಕಾರಣ-ಕಾಮ-ಕ್ರೋಧಕ್ಕನುಸಾರ ಕ್ರಿಯೆ ಪ್ರಾರಂಭವಾದ ಮೇಲೆ ಶರೀರ ಮತ್ತು ವೃತ್ತಿಗಳು ನಮ್ಮ ವಶದಲ್ಲಿರುವುದಿಲ್ಲ.

ಭೋಗಗಳನ್ನು ಪಡೆಯುವ ಇಚ್ಛೆಗಿಂತ ಮೊದಲೇ ಅವುಗಳ ಸಂಕಲ್ಪವಾಗುತ್ತದೆ. ಆ ಸಂಕಲ್ಪ ಉಂಟಾಗುತ್ತಲೇ – 'ನಾನು ಸಾಧಕನಾಗಿದ್ದೇನೆ, ನಾನು ಭೋಗಗಳಲ್ಲಿ ಸಿಲುಕಬಾರದು; ಏಕೆಂದರೆ, ಇದು ಸಾಧಕರ ಕೆಲಸವಲ್ಲ' ಎಂದು ಜಾಗರೂಕನಾಗಬೇಕು. ಈ ರೀತಿ ಸಂಕಲ್ಪಗಳು ಉಂಟಾಗುತ್ತಲೇ ಅವುಗಳನ್ನು ತ್ಯಜಿಸಿ ಬಿಡಬೇಕು.

ಪದಾರ್ಥಗಳ ಕುರಿತು ರಾಗ (ಕಾಮ) ಇರುವ ಕಾರಣ ಇಂತಹ ಪದಾರ್ಥವು ಸುಂದರವಾಗಿದೆ ಸುಖಪ್ರದವಾಗಿದೆ ಇತ್ಯಾದಿ ಸಂಕಲ್ಪಗಳು ಉಂಟಾಗುತ್ತವೆ. ಸಂಕಲ್ಪವು ಉಂಟಾಗುತ್ತಲೇ ಆ ಪದಾರ್ಥಗಳನ್ನು ಪಡೆಯುವ ಕಾಮನೆಯು ಉಂಟಾಗುತ್ತದೆ. ಅವುಗಳ ಪ್ರಾಪ್ತಿಯಲ್ಲಿ ಅಡ್ಡಿಪಡಿಸುವವರ ಮೇಲೆ ಸಿಟ್ಟು ಬರುತ್ತದೆ.

ಕಾಮ-ಕ್ರೋಧದ ವೇಗವನ್ನು ಸಹಿಸುವ ತಾತ್ಪರ್ಯ – ಕಾಮ- ಕ್ರೋಧಗಳ ವೇಗವನ್ನು ಉತ್ಪನ್ನವಾಗಗೊಡದಿರುವುದೇ ಆಗಿದೆ. ಕಾಮ-ಕ್ರೋಧಗಳ ಸಂಕಲ್ಪ ಉಂಟಾದ ಮೇಲೆ ವೇಗ ಬರುತ್ತದೆ ಮತ್ತು ವೇಗ ಬಂದ ಮೇಲೆ ಕಾಮ-ಕ್ರೋಧಗಳನ್ನು ತಡೆಯುವುದು ಕಷ್ಟವಾಗುತ್ತದೆ, ಅದಕ್ಕಾಗಿ ಕಾಮ-ಕ್ರೋಧಗಳ ಸಂಕಲ್ಪವನ್ನು ಉಂಟಾಗಗೊಡದಿರುವುದೇ ಮೇಲಿನ ಪದಗಳ ಭಾವ ಕಂಡುಬರುತ್ತದೆ. ಕಾರಣ – ಕಾಮ- ಕ್ರೋಧಗಳ ಸಂಕಲ್ಪ ಉಂಟಾದಾಗ ಅಂತಃಕರಣದಲ್ಲಿ ಅಶಾಂತಿ, ಉತ್ತೇಜನ, ಸಂಘರ್ಷ ಇತ್ಯಾದಿ ಆಗತೊಡಗುತ್ತವೆ; ಅವುಗಳು ಇರುವಾಗ ಮನುಷ್ಯನು ಸುಖಿಯೆಂದು ಹೇಳಲಾಗುವುದಿಲ್ಲ, ಆದರೆ ಇದೇ ಶ್ಲೋಕದಲ್ಲಿ **'ಸ ಸುಖೀ'** ಪದಗಳಿಂದ ಕಾಮ-ಕ್ರೋಧಗಳ ವೇಗವನ್ನು ಸಹಿಸುವ ಮನುಷ್ಯನನ್ನು ಸುಖಿಯೆಂದು ಹೇಳಲಾಗಿದೆ. ಇನ್ನೊಂದು ಮಾತು – ಕಾಮ-ಕ್ರೋಧಗಳ ವೇಗವನ್ನು ಮನುಷ್ಯನು ತನ್ನಿಂದ ಬಲಿಷ್ಠನಾದ ಪುರುಷನ ಇದಿರು ಭಯದಿಂದಲೂ ತಡೆಯ ಬಲ್ಲನು, ಅಥವಾ ವ್ಯಾಪಾರದಲ್ಲಿ ಆಗುವ ಗಳಕೆಯನ್ನು ಕಂಡೂ ಲೋಭದಿಂದಲೂ ತಡೆಯಬಲ್ಲನು. ಆದರೆ ಈ ಪ್ರಕಾರ ಭಯ ಮತ್ತು ಲೋಭದ ಕಾರಣದಿಂದ ಕಾಮ-ಕ್ರೋಧಗಳ ವೇಗವನ್ನು ಸಹಿಸುವವನು ಸುಖಿಯಾಗಲಾರನು; ಏಕೆಂದರೆ, ಅವನು ಹೇಗೆ ಕ್ರೋಧದಲ್ಲಿ ಸಿಲುಕಿದ್ದನೋ ಹಾಗೆಯೇ ಭಯ ಮತ್ತು ಲೋಭದಲ್ಲಿ ಸಿಲುಕಿಕೊಂಡಿರುವನು. ಮೂರನೆಯ ಮಾತು – ಈ ಶ್ಲೋಕದಲ್ಲಿ **'ಯುಕ್ತಃ'** ಪದದಿಂದ ಕಾಮ-ಕ್ರೋಧದ ವೇಗವನ್ನು ಸಹಿಸುವ ವ್ಯಕ್ತಿಗೆ ಯೋಗೀ ಎಂದು ಹೇಳಲಾಗಿದೆ; ಆದರೆ ಸಂಕಲ್ಪಗಳ ತ್ಯಾಗ ಮಾಡದೆ ಯಾವ ಮನುಷ್ಯನು ಯೋಗಿ ಆಗುವುದಿಲ್ಲ (೬/೨). ಅದಕ್ಕಾಗಿ ಕಾಮ-ಕ್ರೋಧದ ವೇಗವನ್ನು ತಡೆಯುವುದು ಒಳ್ಳೆಯದೇ ಆಗಿದ್ದರೂ ಸಾಧಕನಿಗೆ ಇವುಗಳ ಸಂಕಲ್ಪವು ಉಂಟಾಗದಂತೆ ಮಾಡುವುದು ಉಚಿತವಾಗಿದೆ.

ಕಾಮ-ಕ್ರೋಧಗಳ ಸಂಕಲ್ಪವನ್ನು ತಡೆಯುವ ಉಪಾಯ – ನಮ್ಮಲ್ಲಿ ಕಾಮ-ಕ್ರೋಧವನ್ನು ಒಪ್ಪದಿರುವುದು. ಕಾರಣ – ನಾವು (ಸ್ವಯಂ) ಇರುವವರು ಹಾಗೂ ಕಾಮ-ಕ್ರೋಧಗಳು ಬಂದು-ಹೋಗುವವು. ಅದಕ್ಕಾಗಿ ಅವು ನಮ್ಮೊಂದಿಗೆ

ಇರುವವರಲ್ಲ. ಇನ್ನೊಂದು ಮಾತು – ನಾವು ಕಾಮ-ಕ್ರೋಧಗಳನ್ನು ನಮ್ಮಿಂದ ಬೇರೆಯಾಗಿಯೇ ತಿಳಿಯುತ್ತೇವೆ. ಬೇರೆಯಾಗಿ ತಿಳಿಯುವ ವಸ್ತುವು ನಮ್ಮಲ್ಲಿ ಇರುವುದಿಲ್ಲ. ಮೂರನೇಯ ಮಾತು – ಕಾಮ ಕ್ರೋಧ ದಿಂದ ರಹಿತನಾಗಿ ಇರಬಲ್ಲನು – **'ಕಾಮಕ್ರೋಧವಿಯುಕ್ತಾನಾಮ್'** (೫/೨೬), **'ವಿತ್ಕೈರ್ವಿಮುಕ್ತಃ'** (೧೬/೨೨). ರಹಿತನಾಗಿರುವವನೇ ಇದರಿಂದ ರಹಿತನಾಗಬಲ್ಲನು. ನಾಲ್ಕನೇಯ ಮಾತು – ಭಗವಂತನು ಕಾಮ-ಕ್ರೋಧಗಳನ್ನು (ಅದು ರಾಗ-ದ್ವೇಷದ್ದೇ ಸ್ಥೂಲರೂಪವಾಗಿದೆ) ಕ್ಷೇತ್ರ ಅರ್ಥಾತ್- ಪ್ರಕೃತಿಯ ವಿಕಾರವೆಂದು ಹೇಳಿರುವನು (೧೩/೬). ಆದ್ದರಿಂದ ಇವು ಪ್ರಕೃತಿಯಲ್ಲಿಯೇ ಆಗುತ್ತದೆ, ನಮ್ಮಲ್ಲಿ ಅಲ್ಲ; ಏಕೆಂದರೆ, ಸ್ವರೂಪವು ನಿರ್ವಿಕಾರವಾಗಿದೆ. ಇದರಿಂದ ಕಾಮ-ಕ್ರೋಧಗಳು ನಮ್ಮಲ್ಲಿ ಇಲ್ಲವೆಂಬುದು ಸಿದ್ಧವಾಗುತ್ತದೆ. ಇವುಗಳನ್ನು ನಮ್ಮಲ್ಲಿ ಒಪ್ಪಿಕೊಳ್ಳುವುದೆಂದರೆ ಇವುಗಳಿಗೆ ಆಮಂತ್ರಣಕೊಟ್ಟಂತೆ.

'ಸ ಯುಕ್ತಃ ನರಃ' – ಅಜ್ಞಾನದಿಂದ ಜ್ಞಾನವು ಮುಚ್ಚಲ್ಪಟ್ಟಿರುವಂತಹ ಮನುಷ್ಯನನ್ನು ಭಗವಂತನು ಇದೇ ಅಧ್ಯಾಯದ ೧೫ನೇ ಶ್ಲೋಕದಲ್ಲಿ ಜಂತು (**ಜಂತವಃ**) ಎಂದು ಹೇಳಿರುವನು. ಇಲ್ಲಿ ಕಾಮ-ಕ್ರೋಧಗಳನ್ನು ಸಹಿಸುವ ಸಮರ್ಥ ಮನುಷ್ಯನನ್ನು **'ನರಃ'** ಎಂದು ಹೇಳಿದ್ದಾನೆ. ಕಾಮ-ಕ್ರೋಧಗಳ ವಶದಲ್ಲಿರುವವನು ಮನುಷ್ಯನೆಂದು ಹೇಳಲು ಯೋಗ್ಯನಲ್ಲ. ಕಾಮ-ಕ್ರೋಧಗಳ ಮೇಲೆ ವಿಜಯವನ್ನು ಪಡೆದಿರುವವನೇ ನಿಜವಾಗಿ ನರನಾಗಿದ್ದಾನೆ, ಶೂರವೀರನಾಗಿದ್ದಾನೆ.

ಸಮತೆಯಲ್ಲಿ ಸ್ಥಿತನಾದ ಮನುಷ್ಯನನ್ನು ಯೋಗಿ ಎಂದು ಹೇಳುತ್ತಾರೆ. ತನ್ನ ವಿವೇಕಕ್ಕೆ ಮಹತ್ವವನ್ನಿತ್ತು ಕಾಮ-ಕ್ರೋಧಗಳ ವೇಗವನ್ನು ಉತ್ಪನ್ನವಾಗಲು ಬಿಡದಿರುವವನೇ ಸಮತೆಯಲ್ಲಿ ಸ್ಥಿತನಾಗಬಲ್ಲನು.

'ಸ ಸುಖೀ' – ಮನುಷ್ಯನೇ ಅಲ್ಲ, ಪಶು-ಪಕ್ಷಿಗಳೂ ಕೂಡ ಕಾಮ-ಕ್ರೋಧ ಉಂಟಾದಾಗ ಸುಖ-ಶಾಂತಿಯಿಂದ ಇರಲಾರರು. ಅದಕ್ಕಾಗಿ ಕಾಮ-ಕ್ರೋಧಗಳನ್ನೂ ಇಲ್ಲವಾಗಿಸಿದ ಮನುಷ್ಯನೇ ನಿಜವಾಗಿ ಸುಖಿಯಾಗಿದ್ದಾನೆ. ಕಾರಣ – ಕಾಮ-ಕ್ರೋಧಗಳ ಸಂಕಲ್ಪ ಉಂಟಾಗುತ್ತಲೇ ಮನುಷ್ಯನ ಅಂತಃಕರಣದಲ್ಲಿ ಅಶಾಂತಿ, ಚಂಚಲತೆ, ಸಂಘರ್ಷ ಮುಂತಾದ ದೋಷಗಳು ಉಂಟಾಗುತ್ತವೆ. ಈ ದೋಷಗಳು ಇರುತ್ತಿರುವಾಗ ಅವನು ಹೇಗೆ ಸುಖಿಯಾಗಿರಬಲ್ಲನು? ಅವನು ಕಾಮ-ಕ್ರೋಧಕ್ಕೆ ವಶನಾದಾಗ ಅವನು ದುಃಖಿಯೇ ಆಗುತ್ತಾನೆ. ಕಾರಣ - ಉತ್ಪತ್ತಿ-ವಿನಾಶಶೀಲ ವಸ್ತುಗಳನ್ನು ಆಶ್ರಯಿಸಿ, ಅವುಗಳೊಂದಿಗೆ ಸಂಬಂಧ ಬೆಳೆಸಿಕೊಂಡು ಸುಖವನ್ನು ಬಯಸುವ ವ್ಯಕ್ತಿಯು ಎಂದೂ ಸುಖಿಯಾಗಲಾರನು – ಇದು ನಿಯಮವಾಗಿದೆ.

ಪರಿಶಿಷ್ಟ ಭಾವ – *ಮೊದಲಿಗೆ ಸ್ಫುರಣೆ ಉಂಟಾಗುತ್ತದೆ. ಆ ಸ್ಫುರಣೆಯಲ್ಲಿ ಸತ್ತಾ, ಆಸಕ್ತಿ, ಆಗ್ರಹ ಇರುವುದರಿಂದ ಆ ಸ್ಫುರಣೆ ಸ್ಥಿರವಾಗುತ್ತದೆ ಮತ್ತು ಸಂಕಲ್ಪವಾಗುತ್ತದೆ. ಸಂಕಲ್ಪದಿಂದ ಮನೋರಥ (ಮನೋರಾಜ್ಯ) ಉಂಟಾಗ ತೊಡಗುತ್ತದೆ. ಆದರಿಂದ ಕಾಮ-ಕ್ರೋಧಾದಿಗಳ ವೇಗ ಉಂಟಾಗುತ್ತದೆ (೨/೬೨, ೬೩). ಸಾಧಕನಿಗೆ– ವೇಗವೇ ಉಂಟಾಗದಂತೆ ಮಾಡುವುದು ಅರ್ಥಾತ್ – ಸಂಕಲ್ಪ ಮಾಡದಿರುವುದೇ ಮೊದಲನೆ ದರ್ಜೆಯ ಮಾತಾಗಿದೆ. ವೇಗ ಉಂಟಾದರೂ ಹಾಗೆ ಕ್ರಿಯೆ ಮಾಡದಿರುವುದು ಎರಡನೇ ದರ್ಜೆಯ ಮಾತಾಗಿದೆ.*

—●—

ಸಂಬಂಧ - ಬಾಹ್ಯ ಸಂಬಂಧದಿಂದ ಆಗುವ ಸುಖದ ಅನರ್ಥವನ್ನು ವರ್ಣಿಸಿ, ಈಗ ಭಗವಂತನು ಆಭ್ಯಂತರ ತತ್ತ್ವದ ಸಂಬಂಧದಿಂದ ಆಗುವ ಸುಖದ ಮಹಿಮೆಯನ್ನು ವರ್ಣಿಸುತ್ತಾನೆ —

योऽन्तःसुखोऽन्तरारामस्तथान्तर्ज्योतिरेव यः ।
स योगी ब्रह्मनिर्वाणं ब्रह्मभूतोऽधिगच्छति ॥ २४॥

यः - ಯಾವ ಮನುಷ್ಯನು (ಕೇವಲ), **अन्तःसुखः** - ಪರಮಾತ್ಮನಲ್ಲಿ ಸುಖಿಸುವನೋ (ಮತ್ತು), **अन्तरारामः** - (ಕೇವಲ) ಪರಮಾತ್ಮನಲ್ಲೇ ರಮಿಸುವನೋ, **तथा** - ಹಾಗೂ **यः** - ಯಾರು, **अन्तर्ज्योतिः, एव** - ಕೇವಲ ಪರಮಾತ್ಮನಲ್ಲಿಯೇ ಜ್ಞಾನವುಳ್ಳ, **सः** - ಅವನು, **ब्रह्मभूतः** - ಬ್ರಹ್ಮನಲ್ಲಿ ತನ್ನ ಸ್ಥಿತಿಯನ್ನು ಅನುಭವಿಸುವವನು (ಬ್ರಹ್ಮರೂಪನಾದ), **योगीः** - ಸಾಂಖ್ಯಯೋಗಿಯು, **ब्रह्मनिर्वाणम्** - ನಿರ್ವಾಣ ಬ್ರಹ್ಮವನ್ನು, **अधिगच्छति** - ಪಡೆಯುತ್ತಾನೆ. ॥ ೨೪॥

ಯಾವ ಮನುಷ್ಯನು ಕೇವಲ ಪರಮಾತ್ಮನಲ್ಲಿ ಸುಖಿಸುವನೋ, ಮತ್ತು ಕೇವಲ ಪರಮಾತ್ಮನಲ್ಲೇ ರಮಿಸುವನೋ, ಹಾಗೂ ಯಾರು ಕೇವಲ ಪರಮಾತ್ಮನಲ್ಲೇ ಜ್ಞಾನವುಳ್ಳವನೋ, ಬ್ರಹ್ಮನಲ್ಲಿ ತನ್ನ ಸ್ಥಿತಿಯನ್ನು ಅನುಭವಿಸುವಂತಹ ಬ್ರಹ್ಮ ರೂಪನಾದ ಸಾಂಖ್ಯಯೋಗಿಯು ನಿರ್ವಾಣ ಬ್ರಹ್ಮವನ್ನು ಪಡೆಯುತ್ತಾನೆ. ॥ ೨೪॥

ವ್ಯಾಖ್ಯಾ - **'ಯೋಽಂತಃಸುಖೋಽಂತರಾರಾಮಸ್ತಥಾಂತರ್ಜ್ಯೋತಿರೇವ ಯಃ'** – ಪ್ರಕೃತಿಜನ್ಯ ಬಾಹ್ಯ ಪದಾರ್ಥಗಳಲ್ಲಿ ಸುಖವು ಕಂಡುಬರದೆ ಏಕಮಾತ್ರ ಪರಮಾತ್ಮನಲ್ಲಿಯೇ ಸುಖಿಸಿಗುವಂತಹ ಸಾಧಕನನ್ನು ಇಲ್ಲಿ **'ಅಂತಃಸುಖಃ'** ಎಂದು ಹೇಳಲಾಗಿದೆ. ಪರಮಾತ್ಮತತ್ತ್ವವಲ್ಲದೆ ಎಲ್ಲಿಯೂ ಅವನಿಗೆ ಸುಖಬುದ್ಧಿ ಇರುವುದಿಲ್ಲ, ಪರಮಾತ್ಮತತ್ತ್ವದಲ್ಲಿ ಸುಖದ ಅನುಭವ ಅವನಿಗೆ ಎಲ್ಲ ಸಮಯದಲ್ಲಿ ಆಗುತ್ತದೆ; ಏಕೆಂದರೆ, ಅವನಿಗೆ ಸುಖದ ಆಧಾರ ಬಾಹ್ಯ ಪದಾರ್ಥಗಳ ಸಂಯೋಗ ವಿರುವುದಿಲ್ಲ.

ಸ್ವತಃ ತನ್ನ ಸತ್ತೆಯಲ್ಲಿ ನಿರಂತರ ಸ್ಥಿತನಾಗಿರಲು ಹೊರಗಿನ ಆವಶ್ಯಕತೆ ಕಿಂಚಿನ್ಮಾತ್ರವೂ ಇರುವುದಿಲ್ಲ, ಸ್ವಯಂಗೆ ಸ್ವಯಂ ನಿಂದ ದುಃಖಿವಾಗುವುದಿಲ್ಲ, ಸ್ವಯಂಗೆ ಸ್ವಯಂನಿಂದ ಅರುಚಿ ಆಗುವುದಿಲ್ಲ – ಇದು ಅಂತಃಸುಖಿವಾಗಿದೆ.

ಯಾವುದು ಎಂದೆಂದಿಗೂ ಸಿಗುವುದಿಲ್ಲವೋ ಮತ್ತು ಎಲ್ಲರಿಗೆ ಸಿಗುವುದಿಲ್ಲವೋ ಅದು 'ಬಾಹ್ಯ'ವಾಗಿದೆ. ಆದರೆ ಎಂದೆಂದಿಗೂ ಸಿಗುವುದು ಹಾಗೂ ಎಲ್ಲರಿಗೂ ಸಿಗುವುದೇ 'ಆಭ್ಯಂತರ'ವಾಗಿದೆ.

ಭೋಗಗಳಲ್ಲಿ ರಮಿಸದೆ ಕೇವಲ ಪರಮಾತ್ಮತತ್ತ್ವದಲ್ಲಿಯೇ ರಮಿವವನು ಮತ್ತು ವ್ಯವಹಾರ ಕಾಲದಲ್ಲಿಯೂ ಏಕಮಾತ್ರ ಪರಮಾತ್ಮತತ್ತ್ವದಲ್ಲಿಯೇ ವ್ಯವಹರಿಸುವಂತಹ ಸಾಧಕನಿಗೆ ಇಲ್ಲಿ **'ಅಂತರಾರಾಮಃ'** ಎಂದು ಹೇಳಲಾಗಿದೆ.

ಇಂದ್ರಿಯಜನ್ಯ ಜ್ಞಾನ, ಬುದ್ಧಿಜನ್ಯ ಜ್ಞಾನ ಮುಂತಾದ ಎಷ್ಟೇ ಪ್ರಾಪಂಚಿಕ ಜ್ಞಾನ ಹೇಳಲಾಗುತ್ತದೋ, ಅವೆಲ್ಲದರ ಪ್ರಕಾಶಕ ಮತ್ತು ಆಧಾರ ಪರಮಾತ್ಮತತ್ತ್ವದ ಜ್ಞಾನವಾಗಿದೆ. ಯಾವ ಸಾಧಕನಲ್ಲಿ ಈ ಜ್ಞಾನವು ಎಲ್ಲ ಸಮಯದಲ್ಲಿ ಜಾಗ್ರತ ವಾಗಿರುತ್ತದೋ ಅವನನ್ನು ಇಲ್ಲಿ **'ಅಂತರ್ಜ್ಯೋತಿಃ'** ಎಂದು ಹೇಳಲಾಗಿದೆ.

ಪ್ರಾಪಂಚಿಕ ಜ್ಞಾನಕ್ಕೆ ಆರಂಭ ಮತ್ತು ಅಂತ್ಯವಿರುತ್ತದೆ, ಆದರೆ ಆ ಪರಮಾತ್ಮತತ್ತ್ವದ ಜ್ಞಾನಕ್ಕೆ ಪ್ರಾರಂಭ ಹಾಗೂ ಅಂತ್ಯವಿರುವುದಿಲ್ಲ. ಅದು ನಿತ್ಯನಿರಂತರವಾಗಿರುತ್ತದೆ. ಅದಕ್ಕಾಗಿ ಎಲ್ಲದರಲ್ಲಿ ಒಂದೇ ಪರಮಾತ್ಮತತ್ತ್ವವೇ ಪರಿಪೂರ್ಣವಾಗಿದೆ – ಇಂತಹ ಜ್ಞಾನವು ಸಾಂಖ್ಯಯೋಗಿಯಲ್ಲಿ ನಿತ್ಯ-ನಿರಂತರ ಮತ್ತು ಸ್ವಾಭಾವಿಕವಾಗಿ ಇರುತ್ತದೆ.

'ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ' – ಸಾಂಖ್ಯಯೋಗದ ಶ್ರೇಷ್ಠ ಸಾಧಕನು ಬ್ರಹ್ಮನಲ್ಲಿ ತನ್ನ ಸ್ಥಿತಿಯನ್ನು ಅನುಭವಿಸುತ್ತಾನೆ. ಅದು ಪರಿಚ್ಛಿನ್ನತೆಯ ದ್ಯೋತಕವಾಗಿದೆ. ಕಾರಣ – ಸಾಧಕನಲ್ಲಿ 'ನಾನು ಸ್ವಾಧೀನನಾಗಿದ್ದೇನೆ' 'ನಾನು ಮುಕ್ತನಾಗಿದ್ದೇನೆ' 'ನಾನು ಬ್ರಹ್ಮನಲ್ಲಿ ಸ್ಥಿತನಾಗಿದ್ದೇನೆ' ಈ ಪ್ರಕಾರ ಪರಿಚ್ಛಿನ್ನತೆಯ ಸಂಸ್ಕಾರಗಳು ಇರುತ್ತವೆ. ಬ್ರಹ್ಮಭೂತ ಸಾಧಕನಿಗೆ ತನ್ನಲ್ಲಿ ಪರಿಚ್ಛಿನ್ನತೆಯ ಅನುಭವ ಆಗುವುದಿಲ್ಲ, ಕಿಂಚಿನ್ಮಾತ್ರವೂ ಪರಿಚ್ಛಿನ್ನತೆಯ ಅಥವಾ ವ್ಯಕ್ತಿತ್ವದ ಶೇಷವಿರುವತನಕ ಅವನು ತತ್ತ್ವನಿಷ್ಠನಾಗಿರುವುದಿಲ್ಲ, ಅದಕ್ಕಾಗಿ ಈ ಅವಸ್ಥೆಯಲ್ಲಿ ಸಂತೋಷಪಡಬಾರದು.

'ಬ್ರಹ್ಮನಿರ್ವಾಣಮ್' – ಪದದ ಅರ್ಥ – ಯಾವುದರಲ್ಲಿ ಎಂದೂ ಯಾವುದೇ ಗೊಂದಲ ಆಗಲಿಲ್ಲವೋ, ಇರುವುದಿಲ್ಲವೋ, ಆಗಲಾರದೋ, ಆಗಲು ಸಾಧ್ಯವೇ ಇಲ್ಲವೋ ಅದು ನಿರ್ವಾಣ ಅರ್ಥಾತ್ ಶಾಂತಬ್ರಹ್ಮವೆಂದಾಗಿದೆ.

ಬ್ರಹ್ಮಭೂತ ಸಾಂಖ್ಯಯೋಗಿಯ ವ್ಯಕ್ತಿತ್ವವು ನಿರ್ವಾಣ ಬ್ರಹ್ಮನಲ್ಲಿ ಲೀನವಾದಾಗ ಏಕಮಾತ್ರ ನಿರ್ವಾಣ ಬ್ರಹ್ಮವೇ ಶೇಷವಾಗಿರುತ್ತದೆ ಅರ್ಥಾತ್ – ಸಾಧಕನು ಪರಮಾತ್ಮತತ್ತ್ವದೊಂದಿಗೆ ಅಭಿನ್ನನಾಗುತ್ತಾನೆ – ತತ್ತ್ವನಿಷ್ಠನಾಗುತ್ತಾನೆ, ಅದು ಸ್ವತಃಸಿದ್ಧವಾಗಿದೆ. ಬ್ರಹ್ಮಭೂತ ಅವಸ್ಥೆಯಲ್ಲಿ ಸಾಧಕನು ಬ್ರಹ್ಮನಲ್ಲಿ ತನ್ನ ಸ್ಥಿತಿಯನ್ನು ಅನುಭವಿಸುತ್ತಾನೆ, ಆದರೆ ವ್ಯಕ್ತಿತ್ವದ ನಾಶವಾದಾಗ ಅನುಭವಿಸುವವನು ಯಾರೂ ಇರುವುದಿಲ್ಲ, ಸಾಧಕನು ಬ್ರಹ್ಮವೇ ಆಗಿ ಬ್ರಹ್ಮ ವನ್ನು ಪಡೆಯುತ್ತಾನೆ **'ಬ್ರಹ್ಮೈವಸನ್ ಬ್ರಹ್ಮಾಪ್ಯೇತಿ'** (ಬೃಹದಾರಣ್ಯಕ ೪/೪/೬).

ಪರಿಶಿಷ್ಟ ಭಾವ – ಇಲ್ಲಿ 'ಅಂತಃ' ಪದದ ಅರ್ಥ 'ಪರಮಾತ್ಮಾ' ಎಂದು ತಿಳಿಯಬೇಕು, ಅಂತಃಕರಣವೆಂದು ಅಲ್ಲ, ಕಾರಣ ಅಂತಃಕರಣದಲ್ಲಿ ಸುಖಿಸುವವರಿಗೆ, ಅಥವಾ ಅಂತಃಕರಣದಲ್ಲಿ ರಮಿಸುವವರಿಗೆ ಅಥವಾ ಅಂತಃಕರಣದಲ್ಲಿ ಜ್ಞಾನವುಳ್ಳ ಮನುಷ್ಯನಿಗೆ ಬ್ರಹ್ಮನ ಪ್ರಾಪ್ತಿಯು ಆಗಲಾರದು. ಬ್ರಹ್ಮನ ಪ್ರಾಪ್ತಿಯು ಅಂತಃಕರಣದಿಂದ ಸಂಬಂಧ ವಿಚ್ಛೇದವಾದಾಗ ಆಗುತ್ತದೆ.

–●–

ಸಂಬಂಧ – ಹಿಂದಿನ ಶ್ಲೋಕದಲ್ಲಿ ಭಗವಂತನು ನಿವೃತ್ತಿಪೂರ್ವಕ ಸಾಂಖ್ಯಯೋಗದ ಸಾಧನೆಯನ್ನು ಹೇಳಿದನು. ಈಗ ಮುಂದಿನ ಶ್ಲೋಕದಲ್ಲಿ ಪ್ರವೃತ್ತಿಪೂರ್ವಕ ಸಾಂಖ್ಯಯೋಗದ ಸಾಧನೆಯನ್ನು ಹೇಳುತ್ತಾನೆ —

ಲಭಂತೇ ಬ್ರಹ್ಮನಿರ್ವಾಣಮೃಷಯಃ ಕ್ಷೀಣಕಲ್ಮಷಾಃ ।
ಛಿನ್ನದ್ವೈಧಾ ಯತಾತ್ಮಾನಃ ಸರ್ವಭೂತಹಿತೇ ರತಾಃ ॥ ೨೫॥

ಯತಾತ್ಮಾನಃ - ಯಾರ ಶರೀರ ಮನ, ಬುದ್ಧಿ ಇಂದ್ರಿಯಾದಿಗಳು ವಶದಲ್ಲಿವೆಯೋ, **ಸರ್ವಭೂತಹಿತೇ** - ಯಾರು ಸಮಸ್ತ ಪ್ರಾಣಿಗಳ ಹಿತದಲ್ಲಿ **ರತಾಃ** - ರತರಾಗಿದ್ದಾರೋ, **ಛಿನ್ನದ್ವೈಧಾಃ** - ಯಾರ ಸಂಪೂರ್ಣ ಸಂಶಯಗಳು ಇಲ್ಲವಾಗಿವೆಯೋ,

ಕ್ಷೀಣಕಲ್ಮಷಾಃ - ಯಾರ ಸಮಸ್ತ ದೋಷಗಳು ನಾಶವಾಗಿವೆಯೋ, **ಋಷಯಃ** - (ಆ) ವಿವೇಕಿ ಸಾಧಕರು, **ಬ್ರಹ್ಮನಿರ್ವಾಣಮ್**- ನಿರ್ವಾಣ ಬ್ರಹ್ಮವನ್ನು, **ಲಭಂತೇ** - ಪಡೆಯುತ್ತಾರೆ. ॥ ೨೫॥

ಯಾರ ಶರೀರ, ಮನ, ಬುದ್ಧಿ ಇಂದ್ರಿಯಾದಿಗಳು ವಶದಲ್ಲಿವೆಯೋ, ಯಾರು ಸಮಸ್ತ ಪ್ರಾಣಿಗಳ ಹಿತದಲ್ಲಿ ರತರಾಗಿರುವರೋ, ಯಾರ ಸಂಪೂರ್ಣ ಸಂಶಯಗಳು ಇಲ್ಲವಾಗಿವೆಯೋ, ಯಾರ ಸಮಸ್ತ ದೋಷಗಳು ನಾಶವಾಗಿವೆಯೋ, ಆ ವಿವೇಕೀ ಸಾಧಕರು ನಿರ್ವಾಣ ಬ್ರಹ್ಮವನ್ನು ಪಡೆಯುತ್ತಾರೆ. ॥ ೨೫॥

ವ್ಯಾಖ್ಯಾ - '**ಯತಾತ್ಮಾನಃ**' – ನಿತ್ಯ ಸತ್ಯ ತತ್ತ್ವದ ಪ್ರಾಪ್ತಿಯ ಲಕ್ಷ್ಯ ದೃಢವಾದ ಕಾರಣ ಸಾಧಕರಿಗೆ ಶರೀರ, ಇಂದ್ರಿಯಗಳು, ಮನ, ಬುದ್ಧಿ ವಶಮಾಡಿಕೊಳ್ಳಲು ಬೀಳದೆ ಅವು ಸ್ವಾಭಾವಿಕವಾಗಿಯೇ ಸುಲಭವಾಗಿ ಅವನ ವಶವಾಗುತ್ತವೆ. ವಶವಾದ ಕಾರಣ ಇವರಲ್ಲಿ ರಾಗ-ದ್ವೇಷಾದಿ ದೋಷಗಳು ಅಭಾವವಾಗುತ್ತವೆ ಮತ್ತು ಇವರಿಂದ ಆಗುವ ಪ್ರತಿಯೊಂದು ಕ್ರಿಯೆಯು ಬೇರೆಯವರ ಹಿತವನ್ನು ಮಾಡುವುದಾಗುತ್ತದೆ.

ಶರೀರ, ಇಂದ್ರಿಯಗಳು, ಮನ, ಬುದ್ಧಿ ಇವುಗಳನ್ನು ತನಗೆ ಹಾಗೂ ತನಗಾಗಿ ಎಂದು ತಿಳಿಯುತ್ತಿರುವುದರಿಂದಲೇ ಅವು ನಮ್ಮ ವಶವಾಗುವುದಿಲ್ಲ ಮತ್ತು ಇವುಗಳಲ್ಲಿ ರಾಗ-ದ್ವೇಷ, ಕಾಮ-ಕ್ರೋಧ ಇತ್ಯಾದಿ ದೋಷಗಳು ಇದ್ದುಕೊಂಡಿರುತ್ತವೆ. ಈ ದೋಷಗಳು ಇರುವವರೆಗೆ ಸಾಧಕನು ಸ್ವತಃ ಇವುಗಳ ವಶದಲ್ಲಿರುತ್ತಾನೆ. ಅದಕ್ಕಾಗಿ ಸಾಧಕನು ಶರೀರಾದಿಗಳನ್ನು ಎಂದೂ ತನ್ನವು ಹಾಗೂ ತನಗಾಗಿ ಎಂದು ತಿಳಿಯಬಾರದು. ಹೀಗೆ ತಿಳಿಯುವುದರಿಂದ ಇವುಗಳ ಒತ್ತಡ ಮುಗಿದು ಹೋಗುತ್ತದೆ ಮತ್ತು ಇವು ವಶವಾಗುತ್ತವೆ. ಆದ್ದರಿಂದ ಯಾರಿಗೆ ಶರೀರ, ಇಂದ್ರಿಯಗಳು, ಮನ, ಬುದ್ಧಿ ಇವುಗಳಲ್ಲಿ ತನ್ನತನದ ಭಾವ ಇಲ್ಲವೋ ಹಾಗೂ ಯಾರು ಈ ಶರೀರಾದಿಗಳನ್ನು ಎಂದೂ ತನ್ನ ಸ್ವರೂಪವೆಂದು ತಿಳಿಯುವುದಿಲ್ಲವೋ ಅಂತಹ ಜಾಗರೂಕ ಸಾಧಕನಿಗೆ '**ಯತಾತ್ಮಾನಃ**' ಪದ ಬಂದಿದೆ.

'**ಸರ್ವಭೂತಹಿತೇರತಾಃ**'–ಸಾಂಖ್ಯಯೋಗದ ಸಿದ್ಧಿಯಲ್ಲಿ ವ್ಯಕ್ತಿತ್ವದ ಅಭಿಮಾನವು ಮುಖ್ಯ ಬಾಧಕವಾಗಿದೆ. ಈ ವ್ಯಕ್ತಿತ್ವದ ಅಭಿಮಾನವನ್ನು ಅಳಿಸಿಹಾಕಿ ತತ್ತ್ವದಲ್ಲಿ ತನ್ನ ಸ್ವಾಭಾವಿಕ ಸ್ಥಿತಿಯ ಅನುಭವ ಪಡೆಯಲು ಸಮಸ್ತ ಪ್ರಾಣಿಗಳ ಹಿತದ ಭಾವನೆ ಇರುವುದು ಆವಶ್ಯಕವಾಗಿದೆ. ಎಲ್ಲ ಪ್ರಾಣಿಗಳ ಹಿತದಲ್ಲಿ ಪ್ರೀತಿಯೇ ಅವನ ವ್ಯಕ್ತಿತ್ವವನ್ನು ಅಳಿಸುವ ಸುಲಭ ಸಾಧನೆಯಾಗಿದೆ.

ಸರ್ವತ್ರ ಪರಿಪೂರ್ಣ ಪರಮಾತ್ಮತತ್ತ್ವದೊಂದಿಗೆ ಅಭಿನ್ನತೆಯನ್ನು ಅನುಭವಿಸಲು ಬಯಸುವ ಸಾಧಕನಿಗೆ ಪ್ರಾಣಿಮಾತ್ರರ ಹಿತದಲ್ಲಿ ಪ್ರೀತಿ ಇರುವುದು ಆವಶ್ಯಕವಾಗಿದೆ. ತನ್ನದೆಂದು ಹೇಳಿ ಕೊಳ್ಳುವ ಶರೀರದಲ್ಲಿ, ಆಕೃತಿ, ಅವಯವ, ಕಾರ್ಯ, ಹೆಸರು ಇತ್ಯಾದಿ ಬೇರೆ-ಬೇರೆಯಾಗಿದ್ದರೂ, ಎಲ್ಲ ಅಂಗಗಳಿಗೆ ಸುಖಿಸಿಗಲಿ, ಯಾವುದೇ ಅವಯವಕ್ಕೆ, ಕಷ್ಟವಾಗದಿರಲಿ ಎಂಬ ಭಾವವಿರುತ್ತದೆ, ಹಾಗೆಯೇ ವರ್ಣ, ಆಶ್ರಮ, ಸಂಪ್ರದಾಯ, ಸಾಧನಾಪದ್ಧತಿ ಇತ್ಯಾದಿಗಳು ಬೇರೆ-ಬೇರೆಯಾಗಿದ್ದರೂ ಸಮಸ್ತ ಪ್ರಾಣಿಗಳ ಹಿತದಲ್ಲಿ ಎಲ್ಲರಿಗೆ ಸುಖಿಸಿಗಲಿ, ಎಲ್ಲರ ಹಿತವಾಗಲೀ, ಎಂದಿಗೂ ಯಾರಿಗೂ ಕಿಂಚಿನ್ಮಾತ್ರವೂ ಕಷ್ಟವಾಗದಿರಲಿ ಎಂಬ ಸ್ವಾಭಾವಿಕರತಿ ಇರಬೇಕು. ಕಾರಣ ಹೊರಗಿನಿಂದ ಭಿನ್ನತೆ ಇದ್ದರೂ ಕೂಡ ಆಂತರಿಕವಾಗಿ ಒಂದೇ ಪರಮಾತ್ಮತತ್ತ್ವವು ಸಮಾನವಾಗಿ ಎಲ್ಲದರಲ್ಲಿ ಪರಿಪೂರ್ಣವಾಗಿದೆ. ಆದ್ದರಿಂದ ಪ್ರಾಣಿಮಾತ್ರರ ಹಿತದಲ್ಲಿ ಪ್ರೀತಿ ಉಂಟಾಗುವುದರಿಂದ ವ್ಯಕ್ತಿಗತ ಸ್ವಾರ್ಥಭಾವ ಸುಲಭವಾಗಿ ನಾಶವಾಗುತ್ತದೆ ಮತ್ತು ಪರಮಾತ್ಮತತ್ತ್ವದೊಂದಿಗೆ ತನ್ನ ಅಭಿನ್ನತೆಯ ಅನುಭವ ವಾಗುತ್ತದೆ.

'**ಛಿನ್ನದ್ವೈಧಾಃ**' – ತತ್ತ್ವಪ್ರಾಪ್ತಿಯ ಒಂದು ನಿಶ್ಚಯವು ದೃಢವಾಗುವವರೆಗೆ ಒಳ್ಳೊಳ್ಳೆ ಸಾಧಕರ ಅಂತಃಕರಣದಲ್ಲಿಯೂ ಯಾವುದಾದರೂ ಇಬ್ಬಂದಿತನ ಇರುತ್ತದೆ. ದೃಢ ನಿಶ್ಚಯವಾದಾಗ ಸಾಧಕರಿಗೆ ತಮ್ಮ ಸಾಧನೆಯಲ್ಲಿ ಯಾವುದೇ ಸಂಶಯ, ವಿಕಲ್ಪ, ಭ್ರಮೆ ಇತ್ಯಾದಿಗಳು ಇರುವುದಿಲ್ಲ ಮತ್ತು ಅವರು ಅಸಂದಿಗ್ಧರೂಪದಿಂದ ತತ್ಪರೆಯಿಂದ ತಮ್ಮ ಸಾಧನೆಯಲ್ಲಿ ತೊಡಗುತ್ತಾರೆ.

'**ಕ್ಷೀಣಕಲ್ಮಷಾಃ**' – ಪ್ರಕೃತಿಯೊಂದಿಗೆ ಒಪ್ಪಿಕೊಂಡಿರುವ ಸಂಬಂಧವೆಲ್ಲವೂ ಕಲ್ಮಷವೇ ಆಗಿದೆ; ಏಕೆಂದರೆ ಪ್ರಕೃತಿಯೊಂದಿಗೆ ಒಪ್ಪಿಕೊಂಡಿರುವ ಸಂಬಂಧವೇ ಎಲ್ಲ ಕಲ್ಮಷಗಳು ಅರ್ಥಾತ್ – ಪಾಪಗಳ, ದೋಷಗಳ, ವಿಕಾರಗಳ ಕಾರಣವಾಗಿದೆ. ಪ್ರಕೃತಿ ಮತ್ತು ಅದರ ಕಾರ್ಯ ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿಗಳೊಂದಿಗೆ ಸ್ಪಷ್ಟವಾಗಿ ತಾನು ಬೇರೆಯೆಂದು ಅನುಭವಿಸುವುದರಿಂದ ಸಾಧಕನಲ್ಲಿ ನಿರ್ವಿಕಾರತೆ ತನ್ನಿಂದ-ತಾನೇ ಬರುತ್ತದೆ.

'**ಋಷಯಃ**' – '**ಋಷ್**' ಧಾತುವಿನ ಅರ್ಥ – ಜ್ಞಾನವೆಂದು. ಆ ಜ್ಞಾನ (ವಿವೇಕ)ಕ್ಕೆ ಮಹತ್ವಕೊಡುವವರನ್ನು ಋಷಿ ಎಂದು ಹೇಳುತ್ತಾರೆ. ಹಿಂದಿನಕಾಲದಲ್ಲಿ ಋಷಿಗಳು ಗೃಹಸ್ಥಾಶ್ರಮದಲ್ಲಿ ಇದ್ದುಕೊಂಡೇ ಪರಮಾತ್ಮತತ್ತ್ವವನ್ನು ಪಡೆದುಕೊಂಡಿದ್ದರು. ಈ ಶ್ಲೋಕದಲ್ಲಿಯೂ ಪ್ರಾಪಂಚಿಕ ವ್ಯವಹಾರಗಳನ್ನು ಮಾಡುತ್ತಾ ವಿವೇಕ ಪೂರ್ವಕ ಪರಮಾತ್ಮತತ್ತ್ವದ ಪ್ರಾಪ್ತಿಗಾಗಿ ಸಾಧನೆ ಮಾಡುವಂತಹ

ಸಾಧಕರ ವರ್ಣನೆ ಇದೆ. ಆದ್ದರಿಂದ ತನ್ನ ವಿವೇಕಕ್ಕೆ ಮಹತ್ವಕೊಡುವ ಈ ಸಾಧಕರೂ ಕೂಡ ಋಷಿಗಳೇ ಆಗಿದ್ದಾರೆ.

'ಲಭಂತೇ ಬ್ರಹ್ಮನಿರ್ವಾಣಮ್' – ಬ್ರಹ್ಮವಾದರೋ ಎಲ್ಲರಿಗೆ ಎಲ್ಲ ಕಾಲದಲ್ಲಿ ಪ್ರಾಪ್ತವೇ ಇದೆ, ಆದರೆ ಪರಿವರ್ತನಶೀಲ ಶರೀರಾದಿಗಳೊಂದಿಗೆ ತನ್ನ ಏಕತೆಯನ್ನು ಒಪ್ಪಿಕೊಂಡ ಕಾರಣ ಮನುಷ್ಯನು ಬ್ರಹ್ಮನಿಂದ ವಿಮುಖನಾಗಿರುತ್ತಾನೆ. ಶರೀರಾದಿ ಉತ್ಪತ್ತಿ- ವಿನಾಶಶೀಲ ವಸ್ತುಗಳಿಂದ ಸಂಬಂಧ ಕಡಿದುಕೊಂಡಾಗ, ಎಲ್ಲ ವಿಕಾರಗಳ, ಸಂಶಯಗಳ ನಾಶವಾಗಿ ಎಲ್ಲ ಕಡೆಗಳಲ್ಲಿ ಪರಿಪೂರ್ಣ ಬ್ರಹ್ಮನ ಅನುಭವವಾಗಿ ಹೋಗುತ್ತದೆ.

'ಲಭಂತೇ' – ಪದದ ತಾತ್ಪರ್ಯ – ತೆರೆಗಳು ಸಮುದ್ರದಲ್ಲಿ ಲೀನವಾಗುವಂತೆಯೇ ಸಾಂಖ್ಯಯೋಗಿಗಳು ನಿರ್ವಾಣ ಬ್ರಹ್ಮದಲ್ಲಿ ಲೀನವಾಗುತ್ತಾರೆ. ಜಲತತ್ತ್ವದಲ್ಲಿ ಸಮುದ್ರ ಮತ್ತು ತೆರೆಗಳು ಎಂಬ ಎರಡು ಭೇದಗಳಿರುವುದಿಲ್ಲ, ಹಾಗೆಯೇ ನಿರ್ವಾಣ ಬ್ರಹ್ಮದಲ್ಲಿ ಆತ್ಮಾ ಮತ್ತು ಪರಮಾತ್ಮಾ ಎಂಬ ಈ ಎರಡು ಭೇದಗಳಿಲ್ಲ.

ಪರಿಶಿಷ್ಟ ಭಾವ – *ಜನರ ದೃಷ್ಟಿಯಲ್ಲಿ ಜ್ಞಾನಯೋಗಿಯು ಬೇರೆಯವರ ಹಿತವನ್ನು ಮಾಡುವಂತೆ **(ಸರ್ವಭೂತ ಹಿತೇ ರತಾಃ)** ಕಂಡುಬಂದರೂ ನಿಜವಾಗಿ ಅವನು ಬೇರೆಯವರ ಹಿತವನ್ನು ಮಾಡದೆ ಅವನಿಂದ ತನ್ನಿಂದ-ತಾನೇ ಬೇರೆಯವರ ಹಿತವಾಗುತ್ತದೆ.*

—●—

ಸಂಬಂಧ – ಇಪ್ಪತ್ತನಾಲ್ಕನೇ, ಇಪ್ಪತ್ತೈದನೇ ಶ್ಲೋಕಗಳಲ್ಲಿ ಭಗವಂತನು ಸಾಂಖ್ಯಯೋಗದ ಸಾಧಕರು ನಿರ್ವಾಣ ಬ್ರಹ್ಮವನ್ನು ಪಡೆದುಕೊಳ್ಳುವ ಮಾತನ್ನು ಹೇಳಿದನು. ಈಗ ಮುಂದಿನ ಶ್ಲೋಕದಲ್ಲಿ – ನಿರ್ವಾಣ ಬ್ರಹ್ಮನ ಪ್ರಾಪ್ತಿಯಾದ ಮೇಲೆ ಅವರ ಅನುಭವ ಹೇಗಿರುತ್ತದೆ? ಇದನ್ನು ಹೇಳುತ್ತಾನೆ —

कामक्रोधवियुक्तानां यतीनां यतचेतसाम् ।
अभितो ब्रह्मनिर्वाणं वर्तते विदितात्मनाम् ॥ २६॥

ಕಾಮಕ್ರೋಧವಿಯುಕ್ತಾನಾಮ್ - ಕಾಮಕ್ರೋಧದಿಂದ ಸರ್ವಥಾ ರಹಿತರಾದ, **ಯತಚೇತಸಾಮ್** - ಗೆದ್ದಿರುವ ಮನಸ್ಸುಳ್ಳ (ಮತ್ತು), **ವಿದಿತಾತ್ಮನಾಮ್** - ಸ್ವರೂಪದ ಸಾಕ್ಷಾತ್ಕಾರ ಮಾಡಿಕೊಂಡ, **ಯತೀನಾಮ್** - ಸಾಂಖ್ಯಯೋಗಿಗಳಿಗೆ, **ಅಭಿತಃ**- ಎಲ್ಲ ಕಡೆಗಳಿಂದ (ಶರೀರವು ಇರುವಾಗ ಅಥವಾ ಶರೀರ ಬಿಟ್ಟ ಮೇಲೆ), **ಬ್ರಹ್ಮನಿರ್ವಾಣಮ್** - ನಿರ್ವಾಣ ಬ್ರಹ್ಮವು, **ವರ್ತತೇ**-ಪರಿಪೂರ್ಣವಾಗಿ ಇರುತ್ತದೆ. ॥ ೨೬॥

ಕಾಮಕ್ರೋಧದಿಂದ ಸರ್ವಥಾರಹಿತರಾದ, ಗೆದ್ದಿರುವ ಮನಸ್ಸುಳ್ಳ ಮತ್ತು ಸ್ವರೂಪದ ಸಾಕ್ಷಾತ್ಕಾರ ಮಾಡಿಕೊಂಡ ಸಾಂಖ್ಯಯೋಗಿಗಳಿಗೆ ಎಲ್ಲ ಕಡೆಗಳಿಂದ ಶರೀರವು ಇರುವಾಗ ಅಥವಾ ಶರೀರವು ಬಿಟ್ಟಮೇಲೆ ನಿರ್ವಾಣ ಬ್ರಹ್ಮವು ಪರಿಪೂರ್ಣವಾಗಿ ಇರುತ್ತದೆ. ॥ ೨೬॥

ವ್ಯಾಖ್ಯಾ - **'ಕಾಮಕ್ರೋಧವಿಯುಕ್ತಾನಾಂ ಯತೀನಾಮ್'** ಭಗವಂತನು ಮೇಲಿನ ಪದಗಳಿಂದ ಸಿದ್ಧಮಹಾಪುರುಷರಲ್ಲಿ ಕಾಮ-ಕ್ರೋಧಾದಿ ದೋಷಗಳ ಗಂಧವೂ ಇರುವುದಿಲ್ಲ ವೆಂದು ಸ್ಪಷ್ಟ ಪಡಿಸುತ್ತಿದ್ದಾನೆ. ಕಾಮ-ಕ್ರೋಧಾದಿ ದೋಷಗಳು ಉತ್ಪತ್ತಿ-ವಿನಾಶಶೀಲ ಅಸತ್ ಪದಾರ್ಥ (ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿ)ಗಳ ಸಂಬಂಧದಿಂದ ಉಂಟಾಗುತ್ತವೆ. ಸಿದ್ಧ ಮಹಾಪುರುಷರಿಗೆ ಉತ್ಪತ್ತಿ-ವಿನಾಶರಹಿತ ಸತ್-ತತ್ತ್ವದಲ್ಲಿ ತನ್ನ ಸ್ವಾಭಾವಿಕ ಸ್ಥಿತಿಯ ಅನುಭವವಾಗುತ್ತದೆ, ಆದ್ದರಿಂದ ಉತ್ಪತ್ತಿ-ವಿನಾಶಶೀಲ ಅಸತ್ ಪದಾರ್ಥಗಳೊಂದಿಗೆ ಅವರಿಗೆ ಸಂಬಂಧವು ಸರ್ವಥಾ ಇರುವುದಿಲ್ಲ, ಅವರ ಅನುಭವದಲ್ಲಿ ತನ್ನದೆಂದು ಹೇಳಿಕೊಳ್ಳುವ ಶರೀರ, ಅಂತಃಕರಣ ಸಹಿತ ಸಮಸ್ತ ಪ್ರಪಂಚ ದೊಂದಿಗೆ ತನ್ನ ಸಂಬಂಧವು ಸರ್ವಥಾ ಅಭಾವವಾಗುತ್ತದೆ; ಆದ್ದರಿಂದ ಅವರಲ್ಲಿ ಕಾಮ ಕ್ರೋಧಾದಿ ವಿಕಾರಗಳು ಹೇಗೆ ಉಂಟಾಗಬಲ್ಲವು? ಒಂದು ವೇಳೆ ಕಾಮ-ಕ್ರೋಧಾದಿಗಳು ಸೂಕ್ಷ್ಮರೂಪದಿಂದ ಇದ್ದರೆ ತನ್ನನ್ನು ಜೀವನ್ಮುಕ್ತನೆಂದು ತಿಳಿಯುವುದು ಭ್ರಮೆಯಾಗಿದೆ.

ಉತ್ಪತ್ತಿ-ವಿನಾಶಶೀಲ ವಸ್ತುಗಳ ಇಚ್ಛೆಯನ್ನು 'ಕಾಮ' ವೆಂದು ಹೇಳುತ್ತಾರೆ. ಕಾಮ ಅರ್ಥಾತ್ ಕಾಮನೆ ಅಭಾವದಲ್ಲಿ ಹುಟ್ಟುತ್ತದೆ. ಅಭಾವವು ಯಾವಾಗಲು ಅಸತ್‌ನಲ್ಲಿ ಇರುತ್ತದೆ. ಸತ್-ಸ್ವರೂಪದಲ್ಲಿ ಅಭಾವವು ಇಲ್ಲವೇ ಇಲ್ಲ, ಆದರೆ ಸ್ವರೂಪವು ಅಸಕ್ತಿನ ತಾದಾತ್ಮ್ಯವಾದಾಗ ಅಸತ್-ಅಂಶದ ಅಭಾವವನ್ನು ಅವನು ತನ್ನಲ್ಲಿ ಒಪ್ಪಿಕೊಳ್ಳುತ್ತಾನೆ. ತನ್ನಲ್ಲಿ ಅಭಾವವನ್ನು ಒಪ್ಪಿಕೊಂಡಿರುವುದರಿಂದಲೇ ಕಾಮನೆ ಹುಟ್ಟುತ್ತದೆ ಮತ್ತು ಕಾಮನೆಯ ಪೂರ್ಣತೆಯಲ್ಲಿ ತಡೆಯುಂಟಾದಾಗ ಕ್ರೋಧ ಬರುತ್ತದೆ. ಈ ಪ್ರಕಾರ ಸ್ವರೂಪದಲ್ಲಿ ಕಾಮನೆ ಇಲ್ಲದಿದ್ದರೂ ತಾದಾತ್ಮ್ಯದ ಕಾರಣ ತನ್ನಲ್ಲಿ ಕಾಮನೆಯು ಕಂಡುಬರುತ್ತದೆ. ಆದರೆ ತಾದಾತ್ಮ್ಯ

ನಾಶವಾಗಿರುವವರಿಗೆ ಹಾಗೂ ಸ್ವರೂಪದಲ್ಲಿ ಸ್ವಾಭಾವಿಕ ಸ್ಥಿತಿಯ ಅನುಭವ ಉಂಟಾಗಿರುವವರಿಗೆ ಸ್ವಯಂನಲ್ಲಿ ಅಸತ್ತಿನ ಅಭಾವದ ಅನುಭವ ಹೇಗಾಗಬಲ್ಲದು?

ಸಾಧನೆ ಮಾಡುವುದರಿಂದ ಕಾಮ-ಕ್ರೋಧಗಳು ಕಡಿಮೆ ಯಾಗುತ್ತವೆ – ಇದು ಸಾಧಕರ ಅನುಭವವಾಗಿದೆ. ಕಡಿಮೆ ಯಾಗುವ ವಸ್ತುವು ಇಲ್ಲವಾಗುವಂತಹುದು. ಆದ್ದರಿಂದ ಯಾವ ಸಾಧನೆಯಿಂದ ಈ ಕಾಮ-ಕ್ರೋಧಗಳು ಕಡಿಮೆ ಯಾಗುತ್ತವೋ ಅದೇ ಸಾಧನೆಯಿಂದ ಇಲ್ಲವಾಗುತ್ತವೆ.

ಸಾಧನೆ ಮಾಡುವವರಿಗೆ (೧) ಕಾಮ-ಕ್ರೋಧಾದಿ ದೋಷಗಳು ಮೊದಲು ಎಷ್ಟು ಬೇಗ ಬರುತ್ತಿದ್ದುವೋ ಈಗ ಅಷ್ಟು ಬೇಗ ಬರುವುದಿಲ್ಲ. (೨) ಮೊದಲು ಎಷ್ಟು ವೇಗದಿಂದ ಬರುತ್ತಿದ್ದುವೋ ಈಗ ಅಷ್ಟು ವೇಗದಿಂದ ಬರುವುದಿಲ್ಲ. (೩) ಮೊದಲು ಎಷ್ಟು ಹೊತ್ತು ಇರುತ್ತಿದ್ದುವೋ ಈಗ ಅಷ್ಟು ಹೊತ್ತು ನಿಲ್ಲುವುದಿಲ್ಲ ಎಂಬ ಅನುಭವವಾಗುತ್ತದೆ. ಒಮ್ಮೊಮ್ಮೆ ಸಾಧಕರಿಗೆ ಕಾಮ-ಕ್ರೋಧಗಳ ವೇಗ ಮೊದಲಿಗಿಂತಲೂ ಹೆಚ್ಚು ಬಂದಿರುವಂತೆ ಕಾಣುತ್ತದೆ. ಇದರ ಕಾರಣ – (೧) ಸಾಧನೆ ಮಾಡುವುದರಿಂದ ಭೋಗಾಸಕ್ತಿ ಯಾದರೋ ಇಲ್ಲವಾಗುತ್ತಾ ಹೋಯಿತು ಆದರೆ ಪೂರ್ಣಾವಸ್ಥೆ ಪ್ರಾಪ್ತವಾಗಲಿಲ್ಲ. (೨) ಅಂತಃಕರಣ ಶುದ್ಧವಾದ್ದರಿಂದ ಸ್ವಲ್ಪ ಕಾಮ- ಕ್ರೋಧಗಳೂ ಸಾಧಕನಿಗೆ ಹೆಚ್ಚಾಗಿ ಕಾಣುತ್ತವೆ. (೩) ಯಾರಾದರು ಮನಸ್ಸಿಗೆ ವಿರುದ್ಧ ಕಾರ್ಯಮಾಡಿದರೆ ಅದು ಸಾಧಕನಿಗೆ ಕೆಟ್ಟದೆನಿಸುತ್ತದೆ, ಆದರೆ ಸಾಧಕನು ಅದರ ಪರಿವೆಮಾಡುವುದಿಲ್ಲ, ಕೆಟ್ಟದೆನಿಸುವ ಭಾವವು ಒಳಗೆ ಸಂಗ್ರಹವಾಗುತ್ತಿರುತ್ತದೆ. ಮತ್ತೆ ಕೊನೆಗೆ ಸಣ್ಣ ಮಾತಿಗಾಗಿ ದೊಡ್ಡ ಸಿಟ್ಟುಬರುತ್ತದೆ; ಏಕೆಂದರೆ, ಒಳಗೆ ಸಂಗ್ರಹ ವಾದುದು ಒಂದೇ ಬಾರಿಗೆ ಹೊರಗೆ ಹೊಮ್ಮುತ್ತದೆ. ಬೇರೆ ವ್ಯಕ್ತಿಗೂ ಇಷ್ಟು ಸಣ್ಣಮಾತಿಗೆ ಇಷ್ಟು ದೊಡ್ಡ ಕ್ರೋಧ ಏಕೆ ಬಂತು? ಎಂದು ಆಶ್ಚರ್ಯವಾಗುತ್ತದೆ.

ಕೆಲವು ಸಲ ವ್ಯಕ್ತಿಗಳು ಸರಿಯಾದುದರಿಂದ ಸಾಧಕನಿಗೆ – 'ನನಗೆ **ಪೂರ್ಣಾವಸ್ಥೆ** ಉಂಟಾಯಿತು' ಎಂದು ಕಂಡು ಬರುತ್ತದೆ. ಆದರೆ ನಿಜವಾಗಿ ಪೂರ್ಣಾವಸ್ಥೆ ಅನುಭವಿಸು ವವನು ಇರುವವರೆಗೆ (ವ್ಯಕ್ತಿತ್ವ ಇರುವುದರಿಂದ) ಪೂರ್ಣಾವಸ್ಥೆ ಉಂಟಾಗಲಿಲ್ಲ.

'ಯತಚೇತಸಾಮ್' – ಅಸತ್ತಿನ ಸಂಬಂಧವಿರುವವರೆಗೆ ಮನಸ್ಸು ವಶವಾಗುವುದಿಲ್ಲ. ಅಸತ್ತಿನ ಸಂಬಂಧವು ಸರ್ವಥಾ ಇಲ್ಲದಿರುವುದರಿಂದ ಮಹಾಪುರುಷರ ಹೇಳಿಕೊಳ್ಳುವ ಮನಸ್ಸು ತನ್ನಿಂದ-ತಾನೇ ವಶವಾಗುತ್ತದೆ.

'ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಾಮ್' ತನ್ನ ಸ್ವರೂಪದ ವಾಸ್ತವಿಕ ಬೋಧ ಆಗುವುದರಿಂದ ಆ ಮಹಾ ಪುರುಷರನ್ನು **'ವಿದಿತಾತ್ಮನಾಮ್'** ಎಂದು ಹೇಳಲಾಗಿದೆ. ತಾತ್ಪರ್ಯ – ಯಾವ ಉದ್ದೇಶಕ್ಕಾಗಿ ಮನುಷ್ಯ ಜನ್ಮ ವಾಗಿದೆಯೋ ಮತ್ತು ಮನುಷ್ಯ ಜನ್ಮದ ಎಷ್ಟು ಮಹಿಮೆ ಕೊಂಡಾಡಲಾಗಿದೆಯೋ ಅದನ್ನು ಅವರು ಪಡೆದು ಕೊಂಡಿದ್ದಾರೆ.

ಶರೀರವು ಇರುವಾಗ ಅಥವಾ ಶರೀರವು ಬಿಟ್ಟುಹೋದ ಬಳಿಕವೂ ನಿತ್ಯ-ನಿರಂತರ ಆ ಮಹಾಪುರುಷರು ಶಾಂತಬ್ರಹ್ಮ ನಲ್ಲಿಯೇ ಸ್ಥಿತರಾಗಿರುತ್ತಾರೆ. ಬೇರೆ-ಬೇರೆ ಕ್ರಿಯೆಗಳನ್ನು ಮಾಡುವಾಗ ಸಾಧಾರಣ ಮನುಷ್ಯರಿಗೆ ಶರೀರದಲ್ಲಿ ಸ್ಥಿತಿಯ ಮಾನ್ಯತೆ ನಿರಂತರ ವಿರುವವರಂತೆ, ಭಿನ್ನ-ಭಿನ್ನ ಕ್ರಿಯೆಗಳನ್ನು ಮಾಡುವಾಗ ಆ ಮಹಾಪುರುಷರ ಸ್ಥಿತಿಯು ನಿರಂತರ ಓರ್ವಬ್ರಹ್ಮನಲ್ಲಿಯೇ ಇರುತ್ತದೆ. ಇವರ ಈ ಸ್ವಾಭಾವಿಕ ಸ್ಥಿತಿಯಲ್ಲಿ ಎಂದೂ ಸ್ವಲ್ಪವೂ ಅಂತರ ಬರುವುದಿಲ್ಲ; ಏಕೆಂದರೆ ಯಾವ ವಿಭಾಗದಲ್ಲಿ ಕ್ರಿಯೆಗಳು ಆಗುತ್ತವೋ ಆ ವಿಭಾಗ (ಅಸತ್)ದೊಂದಿಗೆ ಅವರಿಗೆ ಯಾವ ಸಂಬಂಧವೂ ಇರುವುದಿಲ್ಲ.

—●—

ಸಂಬಂಧ – ಈಗ ಮುಂದಿನ ಎರಡು ಶ್ಲೋಕಗಳಲ್ಲಿ ಭಗವಂತನು ಯಾವ ತತ್ತ್ವವನ್ನು ಜ್ಞಾನಯೋಗೀ ಮತ್ತು ಕರ್ಮಯೋಗೀ ಪಡೆದುಕೊಳ್ಳುತ್ತಾರೋ ಅದೇ ತತ್ತ್ವವನ್ನು ಧ್ಯಾನಯೋಗಿಯು ಪಡೆದುಕೊಳ್ಳಬಲ್ಲನು ಎಂದು ಹೇಳುತ್ತಾನೆ —

ಸ್ಪರ್ಶಾನ್ಕೃತ್ವಾ ಬಹಿರ್ಬಾಹ್ಯಾಂಶ್ಚಕ್ಷುಶ್ಚೈವಾಂತರೇ ಭ್ರುವೋಃ ।
ಪ್ರಾಣಾಪಾನೌ ಸಮೌ ಕೃತ್ವಾ ನಾಸಾಭ್ಯಂತರಚಾರಿಣೌ ॥ ೨೭॥
ಯತೇಂದ್ರಿಯಮನೋಬುದ್ಧಿರ್ಮುನಿರ್ಮೋಕ್ಷಪರಾಯಣಃ ।
ವಿಗತೇಚ್ಛಾಭಯಕ್ರೋಧೋ ಯಃ ಸದಾ ಮುಕ್ತ ಏವ ಸಃ ॥ ೨೮॥

---

* ಧ್ಯಾನಯೋಗವು ಸಾಧಕನಿಗೆ ಸ್ವತಂತ್ರವಾಗಿ ಪರಮಾತ್ಮನ ಪ್ರಾಪ್ತಿಯನ್ನು ಮಾಡಿಸುತ್ತದೆ ಹಾಗೆಯೇ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗಗಳ ಸಾಧಕರಿಂದಲೂ ಇದರ ಉಪಯೋಗ ಮಾಡಲಾಗುತ್ತದೆ. ಜಪ, ಧ್ಯಾನ, ಸತ್ಸಂಗ, ಸ್ವಾಧ್ಯಾಯ ಇವು ಪ್ರತಿಯೋರ್ವ ಸಾಧಕರಿಗೆ ಉಪಯೋಗಿಯಾಗಿವೆ ಮತ್ತು ಅವಶ್ಯಕವೂ ಆಗಿವೆ.

ಬಾಹ್ಯಾನ್ - ಹೊರಗಿನ, **ಸ್ಪರ್ಶಾನ್** - ಪದಾರ್ಥಗಳನ್ನು, **ಬಹಿಃ, ಏವ** - ಹೊರಗೆಯೇ, **ಕೃತ್ವಾ** - ಬಿಟ್ಟು, **ಚ** - ಮತ್ತು **ಚಕ್ಷುಃ** - ಕಣ್ಣುಗಳ ದೃಷ್ಟಿಯನ್ನು, **ಭ್ರುವೋಃ** - ಹುಬ್ಬುಗಳ, **ಅಂತರೇ** - ನಡುವಿನಲ್ಲಿ (ಸ್ಥಿರಗೊಳಿಸಿ), **ನಾಸಾಭ್ಯಂತರ ಚಾರಿಣೌ** - (ಹಾಗೂ) ಮೂಗಿನಲ್ಲಿ ಸಂಚರಿಸುವ, **ಪ್ರಾಣಾಪಾನೌ** - ಪ್ರಾಣ ಮತ್ತು ಅಪಾನ ವಾಯುವನ್ನು, **ಸಮೌ** - ಸಮವಾಗಿ, **ಕೃತ್ವಾ** - ಮಾಡಿ, **ಯತೇಂದ್ರಿಯ ಮನೋಬುದ್ಧಿಃ** - ಯಾರ ಇಂದ್ರಿಯಗಳು, ಮನ, ಬುದ್ಧಿಗಳು ತನ್ನ ವಶದಲ್ಲಿವೆಯೋ, **ಯಃ** - ಯಾರು, **ಮೋಕ್ಷಪರಾಯಣಃ** - (ಕೇವಲ) ಮೋಕ್ಷಪರಾಯಣನಾಗಿದ್ದಾನೋ (ಹಾಗೂ), **ವಿಗತೇಚ್ಛಾಭಯಕ್ರೋಧಃ** - (ಯಾರು) ಇಚ್ಛೆ, ಭಯ, ಕ್ರೋಧಗಳಿಂದ ಸರ್ವಥಾರಹಿತನಾಗಿದ್ದಾನೋ, **ಸಃ** -ಆ, **ಮುನಿಃ** - ಮುನಿಯು, **ಸದಾ** - ಸದಾಕಾಲ, **ಮುಕ್ತಃ ಏವ**-ಮುಕ್ತನೇ ಆಗಿದ್ದಾನೆ. ॥ ೨೭, ೨೮॥

ಹೊರಗಿನ ಪದಾರ್ಥಗಳನ್ನು ಹೊರಗೆಯೇ ಬಿಟ್ಟು ಮತ್ತು ಕಣ್ಣುಗಳ ದೃಷ್ಟಿಯನ್ನು ಹುಬ್ಬುಗಳ ನಡುವೆ ಸ್ಥಿರಗೊಳಿಸಿ, ಮೂಗಿನಲ್ಲಿ ಸಂಚರಿಸುವ ಪ್ರಾಣ ಮತ್ತು ಅಪಾನ ವಾಯುವನ್ನು ಸಮವಾಗಿ ಮಾಡಿಕೊಂಡು ಯಾರ ಇಂದ್ರಿಯಗಳು, ಮನ, ಬುದ್ಧಿಗಳು ತನ್ನ ವಶದಲ್ಲಿವೆಯೋ, ಯಾರು ಕೇವಲ ಮೋಕ್ಷಪರಾಯಣನಾಗಿದ್ದಾನೋ ಹಾಗೂ ಯಾರು ಇಚ್ಛೆ, ಭಯ, ಕ್ರೋಧಗಳಿಂದ ಸರ್ವಥಾ ರಹಿತನಾಗಿದ್ದಾನೋ ಆ ಮುನಿಯು ಸದಾಕಾಲ ಮುಕ್ತನೇ ಆಗಿದ್ದಾನೆ. ॥ ೨೭, ೨೮॥

ವ್ಯಾಖ್ಯಾ - '**ಸ್ಪರ್ಶಾಂಸ್ಕೃತ್ವಾ ಬಹಿರ್ಬಾಹ್ಯಾನ್**' – ಪರಮಾತ್ಮನಲ್ಲದೆ ಎಲ್ಲ ಪದಾರ್ಥಗಳು ಬಾಹ್ಯವಾಗಿವೆ. ಬಾಹ್ಯ ಪದಾರ್ಥಗಳನ್ನು ಹೊರಗೆಯೇ ಬಿಟ್ಟುಬಿಡುವ ತಾತ್ಪರ್ಯ – ಮನಸ್ಸಿನಲ್ಲಿ ಬಾಹ್ಯ ವಿಷಯಗಳ ಚಿಂತನೆ ಮಾಡದಿರುವುದು.

ಬಾಹ್ಯ ಪದಾರ್ಥಗಳ ಸಂಬಂಧದ ತ್ಯಾಗವು ಕರ್ಮಯೋಗದಲ್ಲಿ ಸೇವೆಯಿಂದ ಮತ್ತು ಜ್ಞಾನಯೋಗದಲ್ಲಿ ವಿವೇಕದಿಂದ ಮಾಡಲಾಗುತ್ತದೆ. ಇಲ್ಲಿ ಭಗವಂತನು ಧ್ಯಾನಯೋಗದ ಮೂಲಕ ಬಾಹ್ಯ ಪದಾರ್ಥಗಳಿಂದ ಸಂಬಂಧ ವಿಚ್ಛೇದನದ ಮಾತನ್ನು ಹೇಳುತ್ತಿದ್ದಾನೆ. ಧ್ಯಾನಯೋಗದಲ್ಲಿ ಏಕಮಾತ್ರ ಪರಮಾತ್ಮನದ್ದೇ ಚಿಂತನೆ ಇರುವುದರಿಂದ ಬಾಹ್ಯ ಪದಾರ್ಥಗಳಿಂದ ವಿಮುಖತೆ ಉಂಟಾಗುತ್ತದೆ.

ನಿಜವಾಗಿ ಬಾಹ್ಯಪದಾರ್ಥಗಳು ಬಾಧಕವಲ್ಲ. ಬಾಧಕವು ಅವುಗಳೊಂದಿಗೆ ರಾಗಪೂರ್ವಕ ಒಪ್ಪಿಕೊಂಡಿರುವ ತನ್ನ ಸಂಬಂಧವೇ ಆಗಿದೆ. ಈ ಒಪ್ಪಿಕೊಂಡಿರುವ ಸಂಬಂಧದ ತ್ಯಾಗ ಮಾಡುವುದರಲ್ಲಿಯೇ ಮೇಲಿನ ಪದಗಳ ತಾತ್ಪರ್ಯವಿದೆ.

'**ಚಕ್ಷುಶ್ಚೈವಾಂತರೇ ಭ್ರುವೋಃ**' – ಇಲ್ಲಿ '**ಭ್ರುವೋಃ ಅಂತರೇ**' ಪದಗಳಿಂದ ದೃಷ್ಟಿಯನ್ನು ಎರಡೂ ಹುಬ್ಬುಗಳ ನಡುವೆ ಇರಿಸುವುದು, ಅಥವಾ ದೃಷ್ಟಿಯನ್ನು ಮೂಗಿನ ತುದಿಯಲ್ಲಿ ಇರಿಸುವುದು (೬/೧೩). ಈ ಎರಡೂ ಅರ್ಥಗಳನ್ನು ತೆಗೆದುಕೊಳ್ಳಬಹುದು.

ಧ್ಯಾನಕಾಲದಲ್ಲಿ ಕಣ್ಣುಗಳನ್ನು ಪೂರ್ಣವಾಗಿ ಮುಚ್ಚುವುದರಿಂದ ಲಯದೋಷ ಅರ್ಥಾತ್ – ನಿದ್ದೆ ಬರುವ ಸಂಭವ ಇರುತ್ತದೆ ಮತ್ತು ಕಣ್ಣುಗಳನ್ನು ಪೂರ್ಣವಾಗಿ ತೆರೆದಿಟ್ಟರೆ (ಇದಿರು ದೃಶ್ಯವಿರುವುದರಿಂದ) ವಿಕ್ಷೇಪದೋಷ ಬರುವ ಸಂಭವವಿರುತ್ತದೆ. ಇವೆರಡೂ ದೋಷಗಳನ್ನು ದೂರಮಾಡಲು ಅರೆಮುಚ್ಚಿದ ಕಣ್ಣುಗಳ ದೃಷ್ಟಿಯನ್ನು ಎರಡೂ ಹುಬ್ಬುಗಳ ನಡುವೆ ಇರಿಸಲು ಹೇಳಲಾಗಿದೆ.

'**ಪ್ರಾಣಾಪಾನೌ ಸಮೌ ಕೃತ್ವಾ ನಾಸಾಭ್ಯಂತರಚಾರಿಣೌ**' – ಮೂಗಿನಿಂದ ಹೊರಗೆ ಹೋಗುವ ವಾಯವನ್ನು 'ಪ್ರಾಣ' ಮತ್ತು ಒಳಗೆ ಹೋಗುವ ವಾಯುವನ್ನು 'ಅಪಾನ'ವೆಂದು ಹೇಳುತ್ತಾರೆ.

ಪ್ರಾಣವಾಯುವಿನ ಗತಿಯು ದೀರ್ಘ ಹಾಗೂ ಅಪಾನ ವಾಯುವಿನ ಗತಿಯು ಹ್ರಸ್ವವಾಗಿರುತ್ತದೆ. ಇವೆರಡರನ್ನು ಸಮವಾಗಿಸಲು ಮೊದಲು ಎಡ ಮೂಗಿನಿಂದ ಅಪಾನವಾಯುವನ್ನು ಒಳಗೆ ಸೆಳೆದುಕೊಂಡು ಬಲಮೂಗಿನಿಂದ ಪ್ರಾಣವಾಯುವನ್ನು ಹೊರಗೆ ಹಾಕಬೇಕು. ಪುನಃ ಬಲಮೂಗಿನಿಂದ ಅಪಾನವಾಯುವನ್ನು ಒಳಗೆ ಸೆಳೆದುಕೊಂಡು ಎಡಮೂಗಿನಿಂದ ಪ್ರಾಣವಾಯುವನ್ನು ಹೊರಗೆ ಹಾಕಬೇಕು. ಇವೆಲ್ಲ ಕ್ರಿಯೆಗಳಲ್ಲಿ ಸರಿಯಾದ ಸಮಯವಿರಬೇಕು. ಈ ಪ್ರಕಾರ ಒಂದೇಸವನೆ ಅಭ್ಯಾಸ ಮಾಡುತ್ತಿರುವುದರಿಂದ ಪ್ರಾಣ ಮತ್ತು ಅಪಾನವಾಯುವಿನ ಗತಿಯು ಸಮ, ಶಾಂತ ಹಾಗೂ ಸೂಕ್ಷ್ಮವಾಗುತ್ತದೆ. ಮೂಗಿನಿಂದ ಹೊರಗೆ – ಒಳಗೆ ಹಾಗೂ ಕಂಠಾದಿ ದೇಶದಲ್ಲಿ ವಾಯುವಿನ ಸ್ಪರ್ಶದ ಜ್ಞಾನ ಆಗದಿದ್ದಾಗ ಪ್ರಾಣ – ಅಪಾನದ ಗತಿಯು ಸಮವಾಗಿದೆ ಎಂದು ತಿಳಿಯಬೇಕು. ಇವೆರಡರ ಗತಿಯು ಸಮವಾದಾಗ (ಪರಮಾತ್ಮನೇ ಲಕ್ಷ್ಯವಾಗಿರುವುದರಿಂದ) ಮನಸ್ಸಿನಿಂದ ಸ್ವಾಭಾವಿಕವಾಗಿಯೇ ಪರಮಾತ್ಮನ ಚಿಂತನೆ ಆಗ ತೊಡಗುತ್ತದೆ. ಧ್ಯಾನಯೋಗದಲ್ಲಿ ಈ ಪ್ರಾಣಾಯಾಮದ ಆವಶ್ಯಕತೆ ಇರುವುದರಿಂದಲೇ ಮೇಲಿನ ಪದಗಳಿಂದ ಇದರ ಉಲ್ಲೇಖ ಮಾಡಲಾಗಿದೆ.

'**ಯತೇಂದ್ರಿಯಮನೋಬುದ್ಧಿಃ**' – ಪ್ರತಿಯೋರ್ವ ಮನುಷ್ಯನಲ್ಲಿ ಒಂದು ಇಂದ್ರಿಯಗಳ ಜ್ಞಾನವಿರುತ್ತದೆ, ಮತ್ತೊಂದು ಬುದ್ಧಿಯ ಜ್ಞಾನವಿರುತ್ತದೆ. ಇಂದ್ರಿಯಗಳು ಮತ್ತು ಬುದ್ಧಿ ಎರಡರ ನಡುವೆ ಮನಸ್ಸಿನ ವಾಸವಾಗಿದೆ. ಮನುಷ್ಯನು ಅವನ ಮನಸ್ಸಿನ ಮೇಲೆ ಇಂದ್ರಿಯಗಳ ಜ್ಞಾನದ ಪ್ರಭಾವವಿದೆಯೋ ಅಥವಾ ಬುದ್ಧಿಯ ಜ್ಞಾನದ

ಪ್ರಭಾವವಿದೆಯೋ ಅಥವಾ ಆಂಶಿಕವಾಗಿ ಎರಡರ ಜ್ಞಾನದ ಪ್ರಭಾವವಿದೆಯೋ ಎಂದು ನೋಡಬೇಕು. ಇಂದ್ರಿಯಗಳ ಜ್ಞಾನದಲ್ಲಿ 'ಸಂಯೋಗ'ದ ಪ್ರಭಾವ ಬೀಳುತ್ತದೆ, ಬುದ್ಧಿಯ ಜ್ಞಾನದಲ್ಲಿ 'ಪರಿಣಾಮ'ದ ಪ್ರಭಾವ ಬೀಳುತ್ತದೆ. ಮನಸ್ಸಿನ ಮೇಲೆ ಕೇವಲ ಇಂದ್ರಿಯಗಳ ಜ್ಞಾನದ ಪ್ರಭಾವವಿರುವ ಮನುಷ್ಯರು ಸಂಯೋಗ ಜನ್ಯ ಸುಖಭೋಗದಲ್ಲಿಯೇ ತೊಡಗಿರುತ್ತಾರೆ. ಮನಸ್ಸಿನ ಮೇಲೆ ಬುದ್ಧಿಯ ಜ್ಞಾನದ ಪ್ರಭಾವವಿರುವವರು (ಪರಿಣಾಮದತ್ತ ದೃಷ್ಟಿ ಇರುವುದರಿಂದ) ಸುಖಭೋಗದ ತ್ಯಾಗ ಮಾಡುವುದರಲ್ಲಿ ಸಮರ್ಥರಾಗುತ್ತಾರೆ – **'ನ ತೇಷು ರಮತೇ ಬುಧಃ'** (೫/೨೨).

ಪ್ರಾಯಶಃ ಸಾಧಕರ ಮನಸ್ಸಿನ ಮೇಲೆ ಆಂಶಿಕರೂಪದಿಂದ ಇಂದ್ರಿಯಗಳು ಮತ್ತು ಬುದ್ಧಿ ಇವೆರಡೂ ಜ್ಞಾನದ ಪ್ರಭಾವವಿರುತ್ತದೆ. ಅವರ ಮನಸ್ಸಿನಲ್ಲಿ ಇಂದ್ರಿಯಗಳ ಹಾಗೂ ಬುದ್ಧಿಯ ಜ್ಞಾನದ ದ್ವಂದ್ವ ನಡೆಯುತ್ತಿರುತ್ತದೆ. ಅದಕ್ಕಾಗಿ ಅವರು ತಮ್ಮ ವಿವೇಕಕ್ಕೆ ಮಹತ್ವ ಕೊಡಲಾರದೆ, ಏನು ಮಾಡಬೇಕೋ ಅದನ್ನು ಮಾಡಲಾಗುವುದಿಲ್ಲ. ಈ ದ್ವಂದ್ವವೇ ಧ್ಯಾನದಲ್ಲಿ ಬಾಧಕವಾಗಿದೆ. ಆದ್ದರಿಂದ ಇಲ್ಲಿ ಮನ, ಬುದ್ಧಿ ಹಾಗೂ ಇಂದ್ರಿಯಗಳನ್ನು ವಶ ಮಾಡುವುದರ ತಾತ್ಪರ್ಯ – ಮನಸ್ಸಿನ ಮೇಲೆ ಕೇವಲ ಬುದ್ಧಿಯ ಜ್ಞಾನದ ಪ್ರಭಾವ ಉಳಿದು, ಇಂದ್ರಿಯಗಳ ಜ್ಞಾನದ ಪ್ರಭಾವ ಪೂರ್ಣವಾಗಿ ಇಲ್ಲವಾಗಬೇಕು.

'ಮುನಿರ್ಮೋಕ್ಷಪರಾಯಣಃ' – ಪರಮಾತ್ಮನ ಪ್ರಾಪ್ತಿಯೇ ಲಕ್ಷವಿರುವ, ಪರಮಾತ್ಮ ಸ್ವರೂಪವನ್ನು ಮನನ ಮಾಡುವ ಸಾಧಕರನ್ನು ಇಲ್ಲಿ **'ಮೋಕ್ಷಪರಾಯಣಃ'** ಎಂದು ಹೇಳಲಾಗಿದೆ. ಪರಮಾತ್ಮ ತತ್ತ್ವವು ಎಲ್ಲ ದೇಶ, ಕಾಲ ಇತ್ಯಾದಿಗಳಲ್ಲಿ ಪರಿಪೂರ್ಣವಿರುವ ಕಾರಣ ಸದಾ-ಸರ್ವದಾ ಎಲ್ಲರಿಗೂ ಪ್ರಾಪ್ತವೇ ಇದೆ. ಆದರೆ ದೃಢ ಉದ್ದೇಶ ವಿಲ್ಲದಿರುವುದರಿಂದ ಇಂತಹ ನಿತ್ಯಪ್ರಾಪ್ತ ತತ್ತ್ವದ ಅನುಭೂತಿಯಲ್ಲಿ ತಡವಾಗುತ್ತಿದೆ. ಒಂದು ವೇಳೆ ಒಂದೇ ದೃಢ ಉದ್ದೇಶ ಉಂಟಾದರೆ ತತ್ತ್ವದ ಅನುಭೂತಿಯಲ್ಲಿ ತಡವಾಗುವುದೇ ಇಲ್ಲ. ನಿಜವಾಗಿ ಉದ್ದೇಶವು ಮೊದಲಿನಿಂದಲೇ ಮಾಡಿಯಾಗಿದೆ; ಏಕೆಂದರೆ ಪರಮಾತ್ಮ ಪ್ರಾಪ್ತಿಗಾಗಿಯೇ ಈ ಮನುಷ್ಯ ಶರೀರ ದೊರಕಿದೆ. ಕೇವಲ ಈ ಉದ್ದೇಶವನ್ನು ಗುರುತಿಸುವುದಾಗಿದೆ. ಸಾಧಕನು ಈ ಉದ್ದೇಶವನ್ನು ಗುರುತಿಸಿಕೊಂಡಾಗ ಅವನಲ್ಲಿ ಪರಮಾತ್ಮ ಪ್ರಾಪ್ತಿಯ ಲಾಲಸೆ ಉಂಟಾಗುತ್ತದೆ. ಈ ಲಾಲಸೆಯು ಪ್ರಪಂಚದ ಎಲ್ಲ ಕಾಮನೆಗಳನ್ನು ಇಲ್ಲವಾಗಿಸಿ ಸಾಧಕನಿಗೆ ಪರಮಾತ್ಮತತ್ತ್ವದ ಅನುಭವ ಮಾಡಿಸುತ್ತದೆ. ಆದ್ದರಿಂದ ಪರಮಾತ್ಮತತ್ತ್ವದ ಉದ್ದೇಶನ್ನು ಗುರುತಿಸಿಕೊಳ್ಳುವುದಕ್ಕೇ ಇಲ್ಲಿ **'ಮೋಕ್ಷಪರಾಯಣಃ'** ಪದದ ಪ್ರಯೋಗವಾಗಿದೆ.

ಕರ್ಮಯೋಗ, ಸಾಂಖ್ಯಯೋಗ, ಧ್ಯಾನಯೋಗ, ಭಕ್ತಿಯೋಗ ಇತ್ಯಾದಿ ಎಲ್ಲ ಸಾಧನೆಗಳಲ್ಲಿ ಒಂದು ದೃಢ ನಿಶ್ಚಯ ಅಥವಾ ಉದ್ದೇಶದ ತುಂಬಾ ಆವಶ್ಯಕತೆ ಇದೆ. ತನ್ನ ಶ್ರೇಯಸ್ಸಿನ ಉದ್ದೇಶವೇ ದೃಢವಿಲ್ಲದಿದ್ದರೆ ಸಾಧನೆಯಿಂದ ಸಿದ್ಧಿ ಹೇಗೆ ಸಿಗಬಹುದು? ಅದಕ್ಕಾಗಿ ಇಲ್ಲಿ **'ಮೋಕ್ಷಪರಾಯಣಃ'** ಪದದಿಂದ ಧ್ಯಾನಯೋಗದಲ್ಲಿ ದೃಢ ನಿಶ್ಚಯದ ಆವಶ್ಯಕತೆಯನ್ನು ಹೇಳಲಾಗಿದೆ.

'ವಿಗತೇಚ್ಛಾಭಯಕ್ರೋಧೋ ಯಃ' – ತನ್ನ ಇಚ್ಛೆಯ ಪೂರ್ತಿಯಲ್ಲಿ ಬಾಧೆಕೊಡುವ ಪ್ರಾಣಿಯು ಬಲಿಷ್ಠನೆಂದು ತಿಳಿದರೆ ಅದರಿಂದ ಭಯವಾಗುತ್ತದೆ ಮತ್ತು ನಿರ್ಬಲವಾಗಿದ್ದರೆ ಅದರ ಮೇಲೆ ಸಿಟ್ಟುಬರುತ್ತದೆ. ಹಾಗೆಯೇ ಬದುಕುವ ಇಚ್ಛೆ ಇದ್ದಾಗ ಮೃತ್ಯುವಿನಿಂದ ಭಯವಾಗುತ್ತದೆ ಹಾಗೂ ಬೇರೆಯವರಿಂದ ತನ್ನ ಇಚ್ಛೆಯನ್ನು ಈಡೇರಿಸಿಕೊಳ್ಳುವ ಮತ್ತು ಬೇರೆಯವರ ಮೇಲೆ ತನ್ನ ಅಧಿಕಾರ ನಡೆಸುವ ಇಚ್ಛೆಯಿಂದ ಕ್ರೋಧಬರುತ್ತದೆ. ಆದ್ದರಿಂದ ಭಯ ಮತ್ತು ಕ್ರೋಧ ಉಂಟಾಗುವುದರಲ್ಲಿ ಇಚ್ಛೆಯೇ ಮುಖ್ಯವಾಗಿದೆ. ಮನುಷ್ಯನಲ್ಲಿ ಇಚ್ಛಾಪೂರ್ತಿಯ ಉದ್ದೇಶವಿರದೆ ಏಕಮಾತ್ರ ಪರಮಾತ್ಮ ಪ್ರಾಪ್ತಿಯ ಉದ್ದೇಶವಿದ್ದರೆ ಭಯ-ಕ್ರೋಧ ಸಹಿತ ಇಚ್ಛೆಯು ಸರ್ವಥಾ ಅಭಾವವಾಗುತ್ತದೆ. ಇಚ್ಛೆಯು ಸರ್ವಥಾ ಅಭಾವವಾದಾಗ ಮನುಷ್ಯನು ಮುಕ್ತನಾಗುತ್ತಾನೆ. ಕಾರಣ – ವಸ್ತುಗಳ ಮತ್ತು ಬದುಕುವ ಇಚ್ಛೆಯಿಂದಲೇ ಮನುಷ್ಯನು ಜನ್ಮ-ಮರಣರೂಪೀ ಬಂಧನದಲ್ಲಿ ಬೀಳುತ್ತಾನೆ. ವಸ್ತುಗಳ ಇಚ್ಛೆಯಿಂದ ಅವು ದೊರೆಯುತ್ತವೆಯೇ? ಮತ್ತು ಬದುಕುವ ಇಚ್ಛೆಯಿಂದ ಮೃತ್ಯುವಿನಿಂದ ತಪ್ಪಿಸಕೊಳ್ಳಬಹುದೇ? ಎಂದು ಸಾಧಕನು ಗಂಭೀರವಾಗಿ ವಿಚಾರ ಮಾಡಬೇಕು. ವಸ್ತುಗಳ ಇಚ್ಛೆಯು ಪೂರ್ಣವಾಗದು, ಮತ್ತು ಮೃತ್ಯುವಿನಿಂದ ಬದುಕುಳಿಯಲಾರನು ಎಂಬುದೇ ವಾಸ್ತವಿಕತೆಯಾಗಿದೆ. ಅದಕ್ಕಾಗಿ ಸಾಧಕನಿಗೆ – 'ನನಗೆ ಓರ್ವ ಪರಮಾತ್ಮ ಪ್ರಾಪ್ತಿಯಲ್ಲದೆ ಬೇರೆ ಏನೂ ಬೇಡ' ಎಂಬ ದೃಢನಿಶ್ಚಯ ಉಂಟಾದರೆ ಅವನು ವರ್ತಮಾನದಲ್ಲಿಯೇ ಮುಕ್ತನಾಗಬಲ್ಲನು. ಆದರೆ ವಸ್ತುಗಳ ಮತ್ತು ಬದುಕುವ ಇಚ್ಛೆ ಉಳಿದರೆ ಇಚ್ಛೆಯು ಎಂದೂ ಪೂರ್ಣವಾಗದು, ಮೃತ್ಯುವಿನ ಭಯದಿಂದಲೂ ಬದುಕುಳಿಯಲಾರನು ಹಾಗೆಯೇ ಕ್ರೋಧದಿಂದಲೂ ಬಿಡುಗಡೆ ಹೊಂದಲಾರನು. ಅದಕ್ಕಾಗಿ ಮುಕ್ತನಾಗಲು ಇಚ್ಛಾರಹಿತನಾಗುವುದು ಆವಶ್ಯಕವಾಗಿದೆ.

ಒಂದು ವೇಳೆ ವಸ್ತುವು ಸಿಗುವುದಿದ್ದರೆ ಇಚ್ಛಿಸದೆಯೂ ಸಿಗಬಹುದು ಮತ್ತು ವಸ್ತುವು ಸಿಗದಿರುವುದಿದ್ದರೆ ಇಚ್ಛಿಸಿದರೂ ಸಿಗಲಾರದು. ಆದ್ದರಿಂದ ವಸ್ತುವು ಸಿಗುವುದು, ಸಿಗದಿರುವುದು ಇಚ್ಛೆಯ ಆಧೀನವಾಗಿರದೆ ಯಾವುದೋ ವಿಧಾನದ

ಅಧೀನವಾಗಿದೆ. ಅಧೀನವಿಲ್ಲದಿರುವ ವಸ್ತುವಿನ ಇಚ್ಛೆಯನ್ನು ಬಿಡುವುದರಲ್ಲಿ ಕಷ್ಟವೇನಿದೆ? ಒಂದು ವೇಳೆ ವಸ್ತುವಿನ ಇಚ್ಛೆಯು ಪೂರ್ಣವಾಗುತ್ತಿದ್ದರೆ ಅದನ್ನು ಪೂರ್ಣಗೊಳಿಸುವ ಪ್ರಯತ್ನ ಮಾಡುತ್ತಿದ್ದರು. ಬದುಕುವ ಇಚ್ಛೆಯು ಪೂರ್ಣವಾಗುತ್ತಿದ್ದರೆ ಮೃತ್ಯುವಿನಿಂದ ಬದುಕುಳಿಯುವ ಪ್ರಯತ್ನ ಮಾಡುತ್ತಿದ್ದರು. ಆದರೆ ಇಚ್ಛೆಗನುಸಾರ ಎಲ್ಲ ವಸ್ತುಗಳು ಸಿಗುವುದಿಲ್ಲ, ಮೃತ್ಯುವಿನಿಂದ ಬದುಕುಳಿಯಲಾಗುವುದಿಲ್ಲ, ವಸ್ತುಗಳ ಇಚ್ಛೆಯು ಇಲ್ಲದಿದ್ದರೆ ಜೀವನವು ಆನಂದಮಯವಾಗುತ್ತದೆ, ಬದುಕುವ ಇಚ್ಛೆ ಇಲ್ಲದಿದ್ದರೆ ಮೃತ್ಯುವೂ ಆನಂದಮಯವಾಗುತ್ತದೆ. ವಸ್ತುಗಳ ಇಚ್ಛೆ ಮಾಡಿದಾಗ ಜೀವನವು ಕಷ್ಟವಾಗುತ್ತದೆ. ಬದುಕುವ ಇಚ್ಛೆಮಾಡಿದಾಗ ಮೃತ್ಯುವು ಕಷ್ಟವಾಗುತ್ತದೆ. ಅದಕ್ಕಾಗಿ ವಸ್ತುಗಳ ಮತ್ತು ಬದುಕುವ ಇಚ್ಛೆಯನ್ನು ಪೂರ್ಣವಾಗಿ ತ್ಯಾಗಮಾಡುವವನು ಬದುಕಿರುವಾಗಲೇ ಮುಕ್ತನಾಗುತ್ತಾನೆ, ಅಮರನಾಗುತ್ತಾನೆ.

'ಸದಾ ಮುಕ್ತ ಏವ ಸಃ' – ಉತ್ಪತ್ತಿ ವಿನಾಶಶೀಲ ಪದಾರ್ಥಗಳೊಂದಿಗೆ ತನ್ನ ಸಂಬಂಧ ಒಪ್ಪಿಕೊಳ್ಳುವುದೇ ಬಂಧನವಾಗಿದೆ. ಈ ಒಪ್ಪಿಕೊಂಡಿರುವ ಸಂಬಂಧವನ್ನು ಸರ್ವಥಾ ತ್ಯಾಗಮಾಡುವುದೇ ಮುಕ್ತಿಯಾಗಿದೆ. ಯಾರು ಮುಕ್ತನಾಗಿರುವನೋ ಅವನ ಮೇಲೆ ಯಾವುದೇ ಘಟನೆ, ಪರಿಸ್ಥಿತಿ, ನಿಂದಾ-ಸ್ತುತಿ, ಅನುಕೂಲತೆ-ಪ್ರತಿಕೂಲತೆ, ಜೀವನ-ಮರಣ ಇತ್ಯಾದಿಗಳ ಪ್ರಭಾವ ಕಿಂಚಿತ್ತೂ ಬೀಳುವುದಿಲ್ಲ.

'ಸದಾ ಮುಕ್ತ ಏವ' – ಪದಗಳ ತಾತ್ಪರ್ಯ – ನಿಜವಾಗಿ ಸಾಧಕನು ಸ್ವರೂಪದಿಂದ ಸದಾ ಮುಕ್ತನೇ ಆಗಿದ್ದಾನೆ. ಕೇವಲ ಉತ್ಪನ್ನ ಮತ್ತು ನಾಶವಾಗುವಂತಹ ವಸ್ತುಗಳೊಂದಿಗೆ ತನ್ನ ಸಂಬಂಧವನ್ನು ಒಪ್ಪಿಕೊಂಡ ಕಾರಣವೇ ಅವನಿಗೆ ತನ್ನ ಮುಕ್ತ ಸ್ವರೂಪದ ಅನುಭವವಾಗುವುದಿಲ್ಲ, ಪ್ರಪಂಚದೊಂದಿಗೆ ಒಪ್ಪಿಕೊಂಡ ಸಂಬಂಧವು ಅಳಿಯುತ್ತಲೇ ಸ್ವತಃ ಸಿದ್ಧ ಮುಕ್ತಿಯ ಅನುಭವವಾಗುತ್ತದೆ.

ಪರಿಶಿಷ್ಟ ಭಾವ – ಬಾಹ್ಯ ಪದಾರ್ಥಗಳನ್ನು ಹೊರಗೆಯೇ ಬಿಡುವ ತಾತ್ಪರ್ಯ – *ಶರೀರ ನಾನಲ್ಲ, ಶರೀರ ನನ್ನದಲ್ಲ ಅದು ನನಗಾಗಿ ಅಲ್ಲ* ಈ ಮೂರು ಮಾತನ್ನು ಪ್ರತಿಯೋರ್ವ ಸಾಧಕನು ಒಪ್ಪಿಕೊಳ್ಳುವುದೇ ಶರೀರದಿಂದ ಸ್ವಯಂವನ್ನು ಬೇರೆಯಾಗಿಸಿ ಕೊಳ್ಳುವುದೇ ಆಗಿದೆ. ಬೇಕಾದರೆ ಯಾವುದೇ ಯೋಗ ಮಾರ್ಗದಿಂದ ನಡೆಯುವವನಾಗಿರಲೀ ಶರೀರದೊಂದಿಗೆ ತನ್ನ ಯಾವುದೇ ಸಂಬಂಧವನ್ನು ಒಪ್ಪಿಕೊಳ್ಳದಿದ್ದರೆ ಮುಕ್ತಿಯು ಸ್ವತಃ ಸಿದ್ಧವಾಗಿದೆ.

ಮೊದಲು ೨೪ನೇ ಶ್ಲೋಕದಲ್ಲಿ **'ಅಂತಃ'** ಎಂಬ ಶಬ್ದ ಬಂದಿತ್ತು, ಅದಕ್ಕಾಗಿ ಇಲ್ಲಿ **'ಬಾಹ್ಯ'** ಶಬ್ದ ಕೊಡಲಾಗಿದೆ. ನಿಜವಾಗಿ ಬಾಹ್ಯ ಎಂಬುದು ಯಾವುದೇ ವಸ್ತು ಇರದೆ ಕೇವಲ ವೃತ್ತಿಯಾಗಿದೆ. 'ಬಾಹ್ಯ' ಶಬ್ದದ ಪ್ರಯೋಗವು ಬೇರೆ-ಅಸ್ತಿತ್ವವನ್ನು ಒಪ್ಪಿಯೇ ಆಗುತ್ತದೆ, ಆದರೆ ವಾಸ್ತವವಾಗಿ ಸತ್ತೆ ಒಂದೇ ಆಗಿದೆ. ಆದ್ದರಿಂದ **'ಸ್ಪರ್ಶಾನ್ಕೃತ್ವಾ ಬಹಿರ್ಬಾಹ್ಯಾನ್'** ಪದಗಳ ತಾತ್ಪರ್ಯ – ಒಂದೇ ತತ್ತ್ವವಲ್ಲದೆ ಬೇರೆ ಯಾವುದೇ ಸತ್ತೆಯ ಮಾನ್ಯತೆ ಇಲ್ಲದಿರಲಿ.

-●-

ಸಂಬಂಧ – ಭಗವಂತನು ಯೋಗನಿಷ್ಠೆ ಮತ್ತು ಸಾಂಖ್ಯನಿಷ್ಠೆಯನ್ನು ವರ್ಣಿಸಿ ಎರಡಕ್ಕೂ ಉಪಯೋಗೀಧ್ಯಾನ ಯೋಗವನ್ನು ವರ್ಣಿಸಿದನು. ಈಗ ಸುಲಭವಾಗಿ ಶ್ರೇಯಸ್ಸನ್ನು ಮಾಡುವಂತಹ ಭಗವನ್ನಿಷ್ಠೆಯನ್ನು ವರ್ಣಿಸುತ್ತಾನೆ —

ಭೋಕ್ತಾರಂ ಯಜ್ಞತಪಸಾಂ ಸರ್ವಲೋಕಮಹೇಶ್ವರಮ್ ।
ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾಂತಿಮೃಚ್ಛತಿ ॥ ೨೯॥

ಮಾಮ್ - ನನ್ನನ್ನು, **ಯಜ್ಞತಪಸಾಮ್** - ಎಲ್ಲ ಯಜ್ಞಗಳ ಮತ್ತು ತಪಸ್ಸುಗಳ, **ಭೋಕ್ತಾರಮ್** - ಭೋಕ್ತಾ, **ಸರ್ವಲೋಕ ಮಹೇಶ್ವರಮ್** - ಸಮಸ್ತ ಲೋಕಗಳ ಮಹಾನ್ ಈಶ್ವರ (ಹಾಗೂ), **ಸರ್ವಭೂತಾನಾಮ್** - ಸಮಸ್ತ ಪ್ರಾಣಿಗಳ, **ಸುಹೃದಮ್** - ಸುಹೃದ್ (ಸ್ವಾರ್ಥರಹಿತ ದಯಾಳು ಮತ್ತು ಪ್ರೇಮಿ), **ಜ್ಞಾತ್ವಾ** - ತಿಳಿದುಕೊಂಡು (ಭಕ್ತನು), **ಶಾಂತಿಮ್** - ಶಾಂತಿಯನ್ನು, **ಋಚ್ಛತಿ**- ಪಡೆದುಕೊಳ್ಳುತ್ತಾನೆ. ॥ ೨೯॥

ನನ್ನನ್ನು ಎಲ್ಲ ಯಜ್ಞಗಳ ಮತ್ತು ತಪಸ್ಸುಗಳ ಭೋಕ್ತಾರನೂ, ಸಮಸ್ತ ಲೋಕಗಳ ಮಹಾನ್ ಈಶ್ವರನೂ ಹಾಗೂ ಸಮಸ್ತ ಪ್ರಾಣಿಗಳ ಸುಹೃದ್ (ಸ್ವಾರ್ಥರಹಿತ ದಯಾಳು ಮತ್ತು ಪ್ರೇಮಿ) ಎಂದು ತಿಳಿದುಕೊಂಡು ಭಕ್ತನು ಶಾಂತಿಯನ್ನು ಪಡೆದುಕೊಳ್ಳುತ್ತಾನೆ. ॥ ೨೯॥

ವ್ಯಾಖ್ಯಾ - **'ಭೋಕ್ತಾರಂ ಯಜ್ಞತಪಸಾಮ್'** – ಮನುಷ್ಯನು ಯಾವುದಾದರೂ ಶುಭ ಕರ್ಮಮಾಡುವಾಗ ಅವನು ಯಾವುದರಿಂದ ಶುಭಕರ್ಮಮಾಡುತ್ತಾನೋ, ಆ ಶರೀರ, ಇಂದ್ರಿಯಗಳು ಮನ, ಬುದ್ಧಿ, ಪದಾರ್ಥ ಇತ್ಯಾದಿಗಳನ್ನು ತನ್ನದೆಂದು ತಿಳಿಯುತ್ತಾನೆ ಮತ್ತು ಯಾರಿಗಾಗಿ ಶುಭ ಕರ್ಮಮಾಡುತ್ತಾನೋ ಅವನನ್ನು ಕರ್ಮಗಳ ಭೋಕ್ತಾ

ಎಂದು ತಿಳಿಯುತ್ತಾನೆ; ಯಾವುದಾದರು ದೇವತೆಯ ಪೂಜೆ ಮಾಡಿದರೆ ಆ ದೇವತೆಯನ್ನು ಪೂಜಾರೂಪೀ ಕರ್ಮದ ಭೋಕ್ತಾ ಎಂದು ತಿಳಿಯುತ್ತಾನೆ; ಯಾರದಾದರು ಸೇವೆ ಮಾಡಿದರೆ ಅವನನ್ನು ಸೇವಾರೂಪೀ ಕರ್ಮದ ಭೋಕ್ತಾ ಎಂದು ತಿಳಿಯುತ್ತಾನೆ; ಯಾವುದಾದರು ಹಸಿದ ವ್ಯಕ್ತಿಗೆ ಅನ್ನ ಕೊಟ್ಟರೆ ಅವನನ್ನು ಅನ್ನದ ಭೋಕ್ತಾ ಎಂದು ತಿಳಿಯುತ್ತಾನೆ ಇತ್ಯಾದಿ. ಈ ಮಾನ್ಯತೆಯನ್ನು ದೂರಮಾಡಲಿಕ್ಕಾಗಿ ಭಗವಂತನು ಮೇಲೆ ಹೇಳಿದ ಪದಗಳಿಂದ – 'ನಿಜವಾಗಿ ಸಂಪೂರ್ಣ ಶುಭ ಕರ್ಮಗಳ ಭೋಕ್ತಾ ನಾನೇ ಆಗಿದ್ದೇನೆ' ಎಂದು ಹೇಳುತ್ತಾನೆ. ಕಾರಣ – ಪ್ರಾಣಿ ಮಾತ್ರರ ಹೃದಯದಲ್ಲಿ ಭಗವಂತನೆ ಉಪಸ್ಥಿತನಾಗಿದ್ದಾನೆ.* ಅದಕ್ಕಾಗಿ ಯಾರದಾದರು ಪೂಜೆಮಾಡುವುದು, ಯಾರಿಗಾದರು ಅನ್ನ-ಜಲ ಕೊಡುವುದು, ಯಾರಿಗಾದರೂ ದಾರಿತೋರಿಸುವುದು ಇತ್ಯಾದಿ ಎಷ್ಟು ಶುಭಕರ್ಮ ಗಳಿವೆಯೋ, ಅವೆಲ್ಲದರ ಭೋಕ್ತಾ ಭಗವಂತನನ್ನೇ ತಿಳಿಯಬೇಕು. ಲಕ್ಷ್ಯವು ಭಗವಂತನ ಮೇಲೆ ಇರಬೇಕು, ಪ್ರಾಣಿಗಳ ಮೇಲಲ್ಲ.

ಒಂಭತ್ತನೇ ಅಧ್ಯಾಯದ ೨೪ನೇ ಶ್ಲೋಕದಲ್ಲಿಯೂ ಭಗವಂತನು ತನ್ನನ್ನು ಸಮಸ್ತ ಯಜ್ಞಗಳ ಭೋಕ್ತಾ ಎಂದು ಹೇಳಿಕೊಂಡಿರುವನು – **'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ'**.

ಇನ್ನೊಂದು ಮಾತು – ಯಾವುದರಿಂದ ಶುಭಕರ್ಮ ಮಾಡಲಾಗುತ್ತದೋ ಆ ಶರೀರ, ಇಂದ್ರಿಯಗಳು, ಮನ, ಬುದ್ಧಿ, ಪದಾರ್ಥ ಇತ್ಯಾದಿಗಳು ತನ್ನದಾಗಿರದೆ ಭಗವಂತನದ್ದೇ ಆಗಿವೆ. ಅವನ್ನು ತನ್ನದೆಂದು ತಿಳಿಯುವುದು ತಪ್ಪಾಗಿದೆ. ಅವನ್ನು ತನ್ನದೆಂದು ತಿಳಿದು ತನಗಾಗಿ ಶುಭಕರ್ಮಮಾಡುವುದರಿಂದ ಮನುಷ್ಯನು ಸ್ವತಃ ಆ ಕರ್ಮಗಳ ಭೋಕ್ತಾ ಆಗುತ್ತಾನೆ. ಅದಕ್ಕಾಗಿ ಭಗವಂತನು – 'ನೀನು ಸಮಸ್ತ ಶುಭ ಕರ್ಮ ಗಳನ್ನು ತನಗಾಗಿ ಎಂದೂ ಮಾಡಬೇಡ, ಕೇವಲ ನನಗಾಗಿ ಮಾಡು. ಹೀಗೆ ಮಾಡುವುದರಿಂದ ನೀನು ಆ ಕರ್ಮಗಳ ಫಲಭಾಗಿಯಾಗಲಾರೆ ಮತ್ತು ನಿನ್ನ ಕರ್ಮಗಳಿಂದ ಸಂಬಂಧ ವಿಚ್ಛೇದ ವಾಗಿ ಹೋದೀತು ' ಎಂದು ಹೇಳುತ್ತಾನೆ.

ಕಾಮನೆಯಿಂದಲೇ ಎಲ್ಲ ಅಶುಭ ಕರ್ಮಗಳಾಗುತ್ತವೆ. ಕಾಮನೆಯ ತ್ಯಾಗಮಾಡಿ ಕೇವಲ ಭಗವಂತನಿಗಾಗಿಯೇ ಎಲ್ಲ ಕರ್ಮಮಾಡುವುದರಿಂದ ಅಶುಭಕರ್ಮಗಳಾದರೋ ಸ್ವರೂಪ ದಿಂದಲೇ ಆಗುವುದಿಲ್ಲ ಹಾಗೂ ಶುಭ ಕರ್ಮಗಳಿಂದ ತನ್ನ ಸಂಬಂಧವೂ ಇರುವುದಿಲ್ಲ, ಈ ಪ್ರಕಾರ ಎಲ್ಲ ಕರ್ಮಗಳಿಂದ ಸರ್ವಥಾ ಸಂಬಂಧ ಕಡಿದು ಹೋದಾಗ ಪರಮಶಾಂತಿಯ ಪ್ರಾಪ್ತಿಯಾಗುತ್ತದೆ.

'ಸರ್ವಲೋಕ ಮಹೇಶ್ವರಮ್' – ಬೇರೆ-ಬೇರೆ ಲೋಕಗಳಲ್ಲಿ ಬೇರೆ-ಬೇರೆ ಈಶ್ವರ (ಒಡೆಯ)ರು ಇರಬಲ್ಲರು, ಆದರೆ ಅವರೂ ಕೂಡ ಭಗವಂತನಿಗೇ ಅಧೀನರಾಗಿರುತ್ತಾರೆ. ಭಗವಂತನು ಎಲ್ಲ ಲೋಕಗಳ ಈಶ್ವರನಾಗಿದ್ದಾನೆ. ಅದಕ್ಕಾಗಿ ಇಲ್ಲಿ **'ಸರ್ವಲೋಕಮ-ಹೇಶ್ವರಮ್'** ಪದ ಬಂದಿದೆ. ತಾತ್ಪರ್ಯ – ಸಮಸ್ತ ಸೃಷ್ಟಿಯ ಏಕಮಾತ್ರ ಸ್ವಾಮೀ ಭಗವಂತನೇ ಆಗಿದ್ದಾನೆ. ಮತ್ತೆ ಯಾರಾದರು ಪ್ರಾಮಾಣಿಕ ವ್ಯಕ್ತಿಯು ಸೃಷ್ಟಿಯ ಯಾವುದೇ ವಸ್ತುವನ್ನು ತನ್ನದೆಂದು ಹೇಗೆ ತಿಳಿಯಬಲ್ಲನು?

ಶರೀರ, ಇಂದ್ರಿಯಗಳು, ಮನ, ಬುದ್ಧಿ, ಪ್ರಾಣ, ಪತ್ನೀ, ಪುತ್ರ, ಧನ, ಜಮೀನು, ಮನೆ ಇತ್ಯಾದಿಗಳನ್ನು ತನ್ನದೆಂದು ತಿಳಿಯುತ್ತಾ ಪ್ರಾಯಶಃ ಜನರು ಭಗವಂತನೇ ಇಡೀ ಜಗತ್ತಿಗೆ ಒಡೆಯನಾಗಿದ್ದಾನೆ ಎಂದು ಹೇಳುತ್ತಿರುತ್ತಾರೆ. ಆದರೆ ಹೀಗೆ ಹೇಳುವುದು ಬುದ್ಧಿವಂತಿಕೆಯಲ್ಲ; ಏಕೆಂದರೆ, ಮನುಷ್ಯನು ಶರೀರ, ಇಂದ್ರಿಯಗಳು, ಮನ ಇತ್ಯಾದಿಗಳನ್ನು ತನ್ನದೆಂದು ತಿಳಿಯುವವರೆಗೆ ಭಗವಂತನನ್ನು ಇಡೀ ಜಗತ್ತಿಗೆ ಒಡೆಯನೆಂದು ಹೇಳುವುದು ತನಗೆ-ತಾನೇ ಮೋಸಮಾಡಿದಂತೆ ಇದೆ. ಕಾರಣ – ಎಲ್ಲ ಜನರು ಶರೀರಾದಿ ಪದಾರ್ಥಗಳನ್ನು ತಮ್ಮ-ತಮ್ಮದೆಂದು ತಿಳಿದುಕೊಂಡರೆ ಇದರಲ್ಲಿ ಬಾಕಿ ಏನು ಉಳಿಯಿತು, ಭಗವಂತನದೆಂದು ಹೇಗೆ ಹೇಳುವುದು? ಅರ್ಥಾತ್ – ಭಗವಂತನ ಪಾಲಿಗೆ ಏನೂ ಉಳಿಯಲಿಲ್ಲ, ಅದಕ್ಕಾಗಿ ಶರೀರಾದಿ ಯಾವುದೇ ಪದಾರ್ಥವನ್ನು ತನ್ನದೆಂದು ತಿಳಿಯದವನೇ 'ಎಲ್ಲವೂ ಭಗವಂತನದ್ದೇ ಆಗಿದೆ' ಎಂದು ಹೇಳಬಲ್ಲನು. ಯಾವುದೇ ವಸ್ತುವನ್ನು ತನ್ನದೆಂದು ತಿಳಿಯು ವವನು ನಿಜವಾಗಿ ಭಗವಂತನನ್ನು ಯಥಾರ್ಥರೂಪದಿಂದ ಸರ್ವಲೋಕ ಮಹೇಶ್ವರನೆಂದು ತಿಳಿಯುವುದೇ ಇಲ್ಲ. ಅವನು ಎಷ್ಟು ವಸ್ತುಗಳನ್ನು ತನ್ನದೆಂದು ತಿಳಿಯುತ್ತಾನೋ ಅಷ್ಟು ಅಂಶದಲ್ಲಿ ಭಗವಂತನನ್ನು ಸರ್ವಲೋಕ ಮಹೇಶ್ವರನೆಂದು ತಿಳಿಯುವುದರಲ್ಲಿ ಕೊರತೆ ಇರುತ್ತದೆ.

ಮನುಷ್ಯನಿಗೆ ಶರೀರಾದಿ ಪದಾರ್ಥಗಳನ್ನು ಸದುಪ ಯೋಗ ಪಡಿಸಿಕೊಳ್ಳುವುದಕ್ಕೆ ಅಧಿಕಾರವಿದೆ; ತನ್ನದೆಂದು ತಿಳಿಯುವ ಅಧಿಕಾರ ಖಂಡಿತವಾಗಿ ಇಲ್ಲ. ಈ ಪದಾರ್ಥಗಳನ್ನು ತನ್ನದೆಂದು ತಿಳಿಯದೆ ಕೇವಲ ಭಗವಂತನದ್ದೇ ಎಂದು ತಿಳಿಯುತ್ತಾ ಅವನ ಸೇವೆಯಲ್ಲೇ ತೊಡಗಿಸುವುದರಿಂದ ಪರಮಶಾಂತಿಯ ಪ್ರಾಪ್ತಿಯಾಗುತ್ತದೆ.

'ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾಂತಿಮೃಚ್ಛತಿ' – ಸಮಸ್ತ ಲೋಕಗಳ ಒಡೆಯರಿಗೆ ಒಡೆಯ ನಾಗಿರುವವನು ಕಾರಣವಿಲ್ಲದೆ ಸ್ವಾಭಾವಿಕ ವಾಗಿಯೇ ಪ್ರಾಣಿ

* **'ಹೃದಿ ಸರ್ವಸ್ಯ ವಿಷ್ಠಿತಮ್'** (೧೩/೧೭) **'ಸರ್ವಸ್ಯ ಚಾಹಂ ಹೃದಿಸನ್ನಿವಿಷ್ಟ'** (೧೫/೧೫) **'ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ'** (೧೮/೬೧).

ಮಾತ್ರರ ಹಿತವನ್ನು ಮಾಡುವವನು, ಪ್ರಾಣಿಮಾತ್ರರ ರಕ್ಷಣೆ ಮಾಡುವವನು ಹಾಗೂ ಪ್ರಾಣಿಮಾತ್ರರಲ್ಲಿ ಪ್ರೇಮಮಾಡವವನಾಗಿದ್ದಾನೆ, ಇಂತಹ ಹಿತೈಷಿ, ರಕ್ಷಕ ಹಾಗೂ ಪ್ರೇಮಿ ಬೇರೆ ಯಾರೂ ಇಲ್ಲ – ಈ ಪ್ರಕಾರ ತಿಳಿಯುವುದರಿಂದ * ಪರಮಶಾಂತಿ ಪ್ರಾಪ್ತವಾಗುತ್ತದೆ; ಏಕೆಂದರೆ, ಅವನು ನಿಜವಾಗಿ ಹಾಗೆಯೇ ಇದ್ದಾನೆ. ಮಹಾನ್ ಶಕ್ತಿಶಾಲಿ ಭಗವಂತನು ಯಾವುದೇ ಪ್ರಯೋಜನವಿಲ್ಲದೆ ನಮ್ಮ ಸುಹೃದ್ ಆಗಿದ್ದಾನೆ, ಮತ್ತೆ ಭಯ, ಚಿಂತೆ, ಉದ್ವೇಗ, ಅಶಾಂತಿ ಇತ್ಯಾದಿಗಳು ಹೇಗಾಗಬಲ್ಲವು?

ಜೀವಮಾತ್ರರ ಕಾರಣವಿಲ್ಲದೆ ಹಿತವನ್ನು ಮಾಡುವವರು ಭಗವಂತ ಮತ್ತು ಅವನ ಭಕ್ತರಾಗಿದ್ದಾರೆ.** ಭಗವಂತನಿಗೆ ಯಾರಿಂದಲೂ ಏನನ್ನೂ ಪಡೆಯುವುದು ಇಲ್ಲವೇ ಇಲ್ಲ – **'ನಾನವಾಪ್ತಮವಾಪ್ತವ್ಯಮ್'** (೩/೨೨), ಅದಕ್ಕಾಗಿ ಅವನು ಸ್ವಾಭಾವಿಕ ವಾಗಿಯೇ ಸುಹೃದ್ ಆಗಿದ್ದಾನೆ. ಭಕ್ತರೂ ಕೂಡ ತಮಗಾಗಿ ಯಾರಿಂದಲೂ ಏನನ್ನೂ ಬಯಸುವುದಿಲ್ಲ ಮತ್ತು ಎಲ್ಲರ ಹಿತವನ್ನು ಬಯಸುತ್ತಾ ಹಿತವನ್ನು ಮಾಡುತ್ತಿರುತ್ತಾರೆ. ಅದಕ್ಕಾಗಿ ಅವರೂ ಎಲ್ಲರ ಸಹೃದ್ ಆಗಿದ್ದಾರೆ – **'ಸುಹೃದಃ ಸರ್ವದೇಹಿನಾಮ್'** (ಶ್ರೀಮದ್ಭಾಗವತ ೩/೨೫/೨೧). ಭಕ್ತರಲ್ಲಿ ಬರುವ ಸಹೃದಯತೆಯು ಮೂಲತಃ ಭಗವಂತನಿಂದಲೇ ಬರುತ್ತದೆ.

ಭಗವಂತನು ಸಮಸ್ತ ಯಜ್ಞಗಳ ಮತ್ತು ತಪಸ್ಸಿನ ಭೋಕ್ತಾ ಆಗಿದ್ದಾನೆ, ಸಂಪೂರ್ಣ ಲೋಕಗಳ ಮಹಾನ್ ಈಶ್ವರ ಹಾಗೂ ನಮ್ಮ ಪರಮ ಸುಹೃದ್ ಆಗಿದ್ದಾನೆ – ಈ ಮೂರು ಮಾತುಗಳಲ್ಲಿ ಒಂದನ್ನಾದರೂ ದೃಢವಾಗಿ ಒಪ್ಪಿಕೊಂಡರೆ ಭಗವತ್ ಪ್ರಾಪ್ತಿರೂಪೀ ಪರಮಶಾಂತಿಯ ಪ್ರಾಪ್ತಿಯಾಗುತ್ತದೆ, ಮತ್ತೆ ಮೂರನ್ನೂ ಒಪ್ಪಿಕೊಂಡರೆ ಹೇಳುವುದೇನಿದೆ?

ತನಗಾಗಿ ಏನನ್ನಾದರೂ ಬಯಸುವುದು, ಯಾವುದೇ ವಸ್ತುವನ್ನು ತನ್ನದೆಂದು ತಿಳಿಯುವುದು ಮತ್ತು ಭಗವಂತನನ್ನು ತನ್ನವನೆಂದು ತಿಳಿಯದಿರುವುದು ಈ ಮೂರು ಮಾತು ಭಗವತ್ ಪ್ರಾಪ್ತಿಯಲ್ಲಿ ಬಾಧಕವಾಗಿವೆ. ಭಗವಂತನು **'ಭೋಕ್ತಾರಂ ಯಜ್ಞತಪಸಾಮ್'** ಪದಗಳಿಂದ ತನಗಾಗಿ ಏನನ್ನೂ ಬಯಸಬೇಡಿ ಮತ್ತು ಏನನ್ನೂ ಮಾಡಬೇಡಿ ಎಂದು ಹೇಳುತ್ತಾನೆ. **'ಸರ್ವಲೋಕ ಮಹೇಶ್ವರಮ್'** ಎಂಬ ಪದದಿಂದ – ತನ್ನದೆಂದು ಏನನ್ನೂ ತಿಳಿಯಬೇಡಿ, ಅರ್ಥಾತ್ ಸುಖದ ಇಚ್ಛೆಯನ್ನು ಮತ್ತು ವಸ್ತು-ವ್ಯಕ್ತಿಗಳ ಅಧಿಪತ್ಯವನ್ನು ತ್ಯಾಗಮಾಡಿರಿ ಎಂದು ಹೇಳುವನು. **'ಸುಹೃದಂ ಸರ್ವಭೂತಾನಾಮ್'** ಎಂಬ ಪದಗಳಿಂದ ಕೇವಲ ನನ್ನನ್ನೆ ತನ್ನವನೆಂದು ತಿಳಿ, ಬೇರೆ ಯಾವುದೇ ವಸ್ತು-ವ್ಯಕ್ತಿಗಳನ್ನು ತನ್ನದೆಂದು ತಿಳಿಯಬೇಡಿ ಎಂದು ಹೇಳುತ್ತಿರುವನು. ಈ ಮೂರು ಮಾತುಗಳಲ್ಲಿನ ಒಂದನ್ನಾದರೂ ಒಪ್ಪಿಕೊಳ್ಳುವುದರಿಂದ ಉಳಿದ ಮಾತುಗಳು ತನ್ನಿಂದ-ತಾನೇ ಬರುತ್ತವೆ ಮತ್ತು ಭಗವತ್ ಪ್ರಾಪ್ತಿಯಾಗುತ್ತದೆ.

ಮನುಷ್ಯನು ಯಾವುದೇ ಪ್ರಾಣಿ ಪದಾರ್ಥವನ್ನು ತನ್ನದೆಂದು ತಿಳಿಯದಿದ್ದಾಗಲೇ ತನ್ನ ಸುಖದ ಇಚ್ಛೆಯ ತ್ಯಾಗವಾಗುತ್ತದೆ, ಯಾವುದೇ ಪದಾರ್ಥವನ್ನು ತನ್ನದೆಂದು ತಿಳಿಯುವವರಿಗೆ ಅವನು ಬದಲಿಗೆ ಸುಖವನ್ನು ಬಯಸುವನು. ಸುಖದ ಇಚ್ಛೆಯ ತ್ಯಾಗದಿಂದ ಮಮತೆಯ ತ್ಯಾಗ ಮತ್ತು ಮಮತೆಯ ತ್ಯಾಗದಿಂದ ಸುಖದ ಇಚ್ಛೆಯ ತ್ಯಾಗವಾಗುತ್ತದೆ. ಎಲ್ಲ ವಸ್ತು-ವ್ಯಕ್ತಿಗಳಲ್ಲಿ ಮಮತೆಯ ತ್ಯಾಗವಾದಾಗ ಏಕಮಾತ್ರ ಭಗವಂತನೇ ತನ್ನವನಾಗಿ ಉಳಿಯುತ್ತಾನೆ. ಯಾರನ್ನಾದರು ತನ್ನವನೆಂದು ತಿಳಿಯುವವನು ನಿಜವಾಗಿ ಭಗವಂತನನ್ನು ಸರ್ವಥಾ ತನ್ನವನೆಂದು ತಿಳಿಯುವುದಿಲ್ಲ, ಬೇಕಾದರೆ ಮಾತಿಗಾಗಿ ಭಗವಂತನು ನನ್ನವನಾಗಿದ್ದಾನೆ ಎಂದು ಹೇಳುತ್ತಿರಲಿ. ಒಪ್ಪಿಕೊಂಡಿರುವ ಸಂಬಂಧವು ಅಭಾವವಾದಾಗ ಭಗವಂತನೊಂದಿಗೆ ನಿಜವಾದ ತನ್ನ ಆತ್ಮೀಯತೆ ಜಾಗೃತವಾಗುತ್ತದೆ. ತಾತ್ಪರ್ಯ – ಬೇಕಾದರೆ ಸುಖದ ಇಚ್ಛೆಯ ತ್ಯಾಗವಾಗಲೀ, ಬೇಕಾದರೆ ಮಮತೆಯ ಅಭಾವವಾಗಲಿ, ಬೇಕಾದರೆ ಭಗವಂತನಲ್ಲಿ ನಿಜವಾದ ಆತ್ಮೀಯತೆ ಉಂಟಾಗಲಿ; ಇವುಗಳಾಗುತ್ತಲೇ ಪರಮ ಶಾಂತಿಯ ಅನುಭವವಾದೀತು. ಕಾರಣ – ಒಂದು ಭಾವವು ದೃಢವಾದಾಗ ಬೇರೆ ಭಾವಗಳೂ ಕೂಡ ಜೊತೆಗೆ ಬಂದೇಬರುತ್ತವೆ.

ಒಂದು ಕರ್ಮಮಾಡಬೇಕು ಮತ್ತು ಇನ್ನೊಂದು ಕರ್ಮ ಮಾಡುವ ವಿದ್ಯೆ ಬರಬೇಕು. ಮನುಷ್ಯನು ಕರ್ಮವಾದರೋ ಮಾಡುತ್ತಾನೆ ಆದರೆ ಕರ್ಮಮಾಡುವ ವಿದ್ಯೆಯನ್ನು ತಿಳಿಯುವುದಿಲ್ಲ ಅಥವಾ ಕರ್ಮಮಾಡುವ ವಿದ್ಯೆಯೇನೋ ತಿಳಿಯುತ್ತಾನೆ ಆದರೆ ಕರ್ಮಮಾಡದಿರುವಾಗ ಅವನಿಂದ ವ್ಯವಸ್ಥಿತವಾಗಿ ಕರ್ಮಗಳು ಆಗುವುದಿಲ್ಲ, ಅದಕ್ಕಾಗಿ ಭಗವಂತನು ಏನೇ ಅಧ್ಯಾಯದಲ್ಲಿ ಕರ್ಮ ಮಾಡುವುದರ ಬಗ್ಗೆ ವಿಶೇಷ ಒತ್ತುಕೊಟ್ಟಿರುವನು ಆದರೆ ಜೊತೆಗೆ ಕರ್ಮಗಳನ್ನು ತಿಳಿಯುವ ಮಾತನ್ನೂ ಹೇಳಿರುವನು, ೪ನೇ ಅಧ್ಯಾಯದಲ್ಲಿ ಕರ್ಮಗಳ ತತ್ತ್ವವನ್ನು ತಿಳಿಯುವುದರ ಬಗ್ಗೆ

---

* ಇಲ್ಲಿ ತಿಳಿಯುವ ಅರ್ಥ – ದೃಢತೆಯಿಂದ ಒಪ್ಪುವುದು. ಒಪ್ಪುವುದು ತಿಳಿಯುವುದರಿಂದ ನಿರ್ಬಲವಾಗುವುದಿಲ್ಲ, ಅದಕ್ಕಾಗಿ ದೃಢತೆಯಿಂದ ಒಪ್ಪಿಕೊಳ್ಳುವುದು ತಿಳಿಯುವುದೇ ಆಗಿದೆ.

** **ಹೇತು ರಹಿತ ಜಗ ಜುಗ ಉಪಕಾರೀ। ತುಮ್ಹ ತುಮ್ಹಾರ ಸೇವಕ ಅಸುರಾರೀ॥** (ಮಾನಸ ೭/೪೭/೩)

ವಿಶೇಷ ಒತ್ತು ಕೊಟ್ಟಿರುವನು, ಜೊತೆಗೆ ಕರ್ಮಮಾಡುವ ಮಾತನ್ನೂ ಹೇಳಿರುವನು. ೫ನೇ ಅಧ್ಯಾಯದಲ್ಲಿ ಕರ್ಮಯೋಗ ಮತ್ತು ಸಾಂಖ್ಯಯೋಗ ಎರಡರಿಂದಲೂ ಶ್ರೇಯಸ್ಸಾಗುವ ಮಾತು ಬಂದಿದ್ದರೂ ಭಗವಂತನು ಸಾಂಖ್ಯಯೋಗಕ್ಕಿಂತ ಕರ್ಮಯೋಗವನ್ನು ಶ್ರೇಷ್ಠವೆಂದು ಹೇಳಿರುವನು. ಈ ಅಧ್ಯಾಯದಲ್ಲಿ ಕ್ರಮವಾಗಿ ಕರ್ಮಯೋಗ ಮತ್ತು ಸಾಂಖ್ಯಯೋಗವನ್ನು ವರ್ಣಿಸಿ ಮತ್ತೆ ಸಂಕ್ಷೇಪವಾಗಿ ಧ್ಯಾನಯೋಗವನ್ನು ವರ್ಣಿಸಿದನು ಮತ್ತು ಕೊನೆಯಲ್ಲಿ ಸಂಕ್ಷೇಪವಾಗಿ ಭಕ್ತಿಯೋಗದ ವರ್ಣನೆ ಮಾಡಿದನು, ಅದು ಭಗವಂತನ ಮುಖ್ಯ ಧ್ಯೇಯವಾಗಿದೆ.

-●- ● -●-

ಓಂ ತತ್ಸದಿತಿ ಶ್ರೀಮದ್ಭವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನ ಸಂವಾದೇ
ಕರ್ಮಸಂನ್ಯಾಸಯೋಗೋ ನಾಮ ಪಂಚಮೋऽಧ್ಯಾಯಃ॥ ೫॥

ಈ ಪ್ರಕಾರ ಓಂ, ತತ್, ಸತ್ ಈ ಭಗವನ್ನಾಮಗಳ ಉಚ್ಚಾರಣಪೂರ್ವಕ ಬ್ರಹ್ಮವಿದ್ಯಾ ಮತ್ತು
ಯೋಗಶಾಸ್ತ್ರಮಯ ಶ್ರೀಮದ್ಭಗವದ್ಗೀತೋಪನಿಷದ್‌ರೂಪೀ ಶ್ರೀ ಕೃಷ್ಣಾರ್ಜುನ ಸಂವಾದದಲ್ಲಿ 'ಕರ್ಮಸಂನ್ಯಾಸಯೋಗವೆಂಬ'
ಐದನೇ ಅಧ್ಯಾಯವು ಪೂರ್ಣವಾಯಿತು ॥ ೫॥

ಕರ್ಮಯೋಗ ಮತ್ತು ಸಾಂಖ್ಯಯೋಗ – ಎರಡರ ವರ್ಣನೆಯಾದ್ದರಿಂದ ಈ ಐದನೇ ಅಧ್ಯಾಯದ ಹೆಸರು 'ಕರ್ಮಸಂನ್ಯಾಸಯೋಗ' ಎಂದಿದೆ.

ಐದನೇ ಅಧ್ಯಾಯದ ಪದ, ಅಕ್ಷರ ಮತ್ತು ಉವಾಚ

(೧) ಈ ಅಧ್ಯಾಯದಲ್ಲಿ **'ಅಥ ಪಂಚಮೋऽಧ್ಯಾಯಃ'** ಇದರ ೩, **ಅರ್ಜುನ ಉವಾಚ** ಇತ್ಯಾದಿಗಳ ೪, ಶ್ಲೋಕಗಳ ೩೫೮ ಮತ್ತು ಪುಷ್ಪಿಕೆಯ ೧೩ ಪದಗಳಿವೆ. ಈ ಪ್ರಕಾರ ಒಟ್ಟು ಪದಗಳು ೩೭೨ ಇವೆ.

(೨) ಈ ಅಧ್ಯಾಯದಲ್ಲಿ **'ಅಥ ಪಂಚಮೋऽಧ್ಯಾಯಃ'** ಇದರ ೭, **ಅರ್ಜುನ ಉವಾಚ** ಇತ್ಯಾದಿ ಪದಗಳ ೧೩, ಶ್ಲೋಕಗಳ ೯೨೮ ಮತ್ತು ಪುಷ್ಪಿಕೆಯ ೪೮ ಅಕ್ಷರಗಳಿವೆ. ಈ ಪ್ರಕಾರ ಒಟ್ಟು ಅಕ್ಷರಗಳು ೯೯೬ ಇವೆ. ಈ ಅಧ್ಯಾಯದ ಎಲ್ಲ ಶ್ಲೋಕಗಳು ೩೭ ಅಕ್ಷರಗಳಾದ್ದಾಗಿವೆ.

(೩) ಈ ಅಧ್ಯಾಯದಲ್ಲಿ ಎರಡು **'ಉವಾಚ'**ಗಳಿವೆ – ಒಂದು **'ಅರ್ಜುನ ಉವಾಚ'** ಮತ್ತೊಂದು **'ಶ್ರೀಭಗವಾನುವಾಚ'**.

ಐದನೇ ಅಧ್ಯಾಯದಲ್ಲಿ ಬಳಸಿದ ಛಂದಗಳು

ಈ ಅಧ್ಯಾಯದ ೨೯ ಶ್ಲೋಕಗಳಲ್ಲಿನ ೧೩ನೇ ಮತ್ತು ೨೯ನೇ ಶ್ಲೋಕದ ಪ್ರಥಮ ಚರಣದಲ್ಲಿ 'ನಗಣ' ಬಳಸಿದ್ದರಿಂದ **'ನ-ವಿಪುಲಾ'** ಮತ್ತು ೨೨ನೇ ಶ್ಲೋಕದ ೩ನೇ ಚರಣದಲ್ಲಿ 'ಮಗಣ' ಬಳಸಿದ್ದರಿಂದ **'ಮ-ವಿಪುಲಾ'** ಸಂಜ್ಞೆಯ ಛಂದಗಳಿವೆ. ಉಳಿದ ೨೬ ಶ್ಲೋಕಗಳು ಸರಿಯಾಗಿ **'ಪಥ್ಯಾವಕ್ತ್ರ'** ಅನುಷ್ಟುಪ್ ಛಂದದ ಲಕ್ಷಣಗಳಿಂದ ಕೂಡಿವೆ.

-●- ● -●-

॥ ಓಂ ಶ್ರೀಪರಮಾತ್ಮನೇ ನಮಃ ॥

॥ ಅಥ ಷಷ್ಠೋಽಧ್ಯಾಯಃ - ಆತ್ಮಸಂಯಮಯೋಗವು ॥

ಅವತರಣಿಕೆ –

ಐದನೇ ಅಧ್ಯಾಯದ ಪ್ರಾರಂಭದಲ್ಲಿ ಅರ್ಜುನನು 'ಸಾಂಖ್ಯಯೋಗ ಹಾಗೂ ಕರ್ಮಯೋಗ ಇವೆರಡರಲ್ಲಿ ಶ್ರೇಷ್ಠಯಾವುದು?' ಎಂದು ಕೇಳಿದ್ದನು. ಇದರ ಉತ್ತರವಾಗಿ ಭಗವಂತನು 'ಇವೆರಡೂ ಶ್ರೇಯಸ್ಕರವಾಗಿವೆ; ಆದರೂ ಕರ್ಮಸಂನ್ಯಾಸ ಮತ್ತು ಕರ್ಮಯೋಗ ಇವೆರಡರಲ್ಲಿ ಕರ್ಮಯೋಗವು ಶ್ರೇಷ್ಠವಾಗಿದೆ – **'ತಯೋಸ್ತು ಕರ್ಮಸಂನ್ಯಾತ್ಕರ್ಮಯೋಗೋ ವಿಶಿಷ್ಯತೆ'** *(೫/೨)* ಎಂದು ಹೇಳಿರುವನು.

ಎರಡೂ ಶ್ರೇಯಸ್ಕರ ಹೇಗೆ? ಎಂಬುದನ್ನು ಭಗವಂತನು ೫ನೇ ಅಧ್ಯಾಯದ ೨೬ನೇ ಶ್ಲೋಕದವರೆಗೆ ವರ್ಣಿಸಿದನು. ಮತ್ತೆ ಸಾಂಖ್ಯಯೋಗ ಹಾಗೂ ಕರ್ಮಯೋಗಕ್ಕಾಗಿ ಉಪಯೋಗಿ ಮತ್ತು ಸ್ವತಂತ್ರವಾಗಿ ಶ್ರೇಯಸ್ಸನ್ನು ಮಾಡುವಂತಹ ಧ್ಯಾನಯೋಗವನ್ನು ಸಂಕ್ಷೇಪವಾಗಿ ಎರಡು ಶ್ಲೋಕಗಳಲ್ಲಿ ವರ್ಣಿಸಿ, ಕೊನೆಗೆ ತಾನಾಗಿಯೇ ಭಕ್ತಿಯ ನಿಷ್ಠೆಯನ್ನೂ ಹೇಳಿ ೫ನೇ ಅಧ್ಯಾಯದ ವಿಷಯವನ್ನು ಉಪಸಂಹಾರ ಮಾಡಿದನು.

ಈಗ ಪುನಃ ಕರ್ಮಯೋಗದ ಶ್ರೇಷ್ಠತೆಯನ್ನು ಹೇಳಲಿಕ್ಕಾಗಿ ಭಗವಂತನು ೬ನೇ ಅಧ್ಯಾಯದ ವಿಷಯವನ್ನು ಪ್ರಾರಂಭಿಸುತ್ತಾನೆ–

ಶ್ರೀಭಗವಾನುವಾಚ

ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ ।
ಸ ಸಂನ್ಯಾಸಿ ಚ ಯೋಗೀ ಚ ನ ನಿರಗ್ನಿರ್ ಚಾಕ್ರಿಯಃ ॥ ೧॥

ಕರ್ಮಫಲಮ್ - ಕರ್ಮಫಲವನ್ನು, **ಅನಾಶ್ರಿತಃ** - ಆಶ್ರಯಿಸದೆ, **ಯಃ** - ಯಾರು, **ಕಾರ್ಯಮ್** - ಕರ್ತವ್ಯ, **ಕರ್ಮ**-ಕರ್ಮವನ್ನು, **ಕರೋತಿ**, **ಸಃ** - ಮಾಡುವವನೇ, **ಸಂನ್ಯಾಸೀ** - ಸಂನ್ಯಾಸೀ, **ಚ** - ಹಾಗೂ, **ಯೋಗೀ** - ಯೋಗಿಯಾಗಿದ್ದಾನೆ, **ಚ**-ಮತ್ತು **ನಿರಗ್ನಿಃ** - (ಕೇವಲ) ಅಗ್ನಿಯನ್ನು ತ್ಯಜಿಸುವವನು, **ನ** - (ಸಂನ್ಯಾಸಿ) ಆಗುವುದಿಲ್ಲ, **ಚ** - ಹಾಗೂ, **ಅಕ್ರಿಯಃ** - (ಕೇವಲ) ಕ್ರಿಯೆಗಳನ್ನು ತ್ಯಾಗಮಾಡುವವನು, **ನ**, - (ಯೋಗೀ) ಆಗುವುದಿಲ್ಲ ॥ ೧॥

ಶ್ರೀಭಗವಂತನು ಹೇಳಿದನು – ಕರ್ಮಫಲವನ್ನು ಆಶ್ರಯಿಸದೆ ಯಾರು ಕರ್ತವ್ಯ-ಕರ್ಮವನ್ನು ಮಾಡುವವನೋ ಅವನೇ ಸಂನ್ಯಾಸೀ ಹಾಗೂ ಯೋಗಿಯಾಗಿದ್ದಾನೆ ಮತ್ತು ಕೇವಲ ಅಗ್ನಿಯನ್ನು ತ್ಯಜಿಸುವವನು ಸಂನ್ಯಾಸಿ ಆಗಲಾರನು ಹಾಗೂ ಕೇವಲ ಕ್ರಿಯೆಗಳನ್ನು ತ್ಯಾಗಮಾಡುವವನು ಯೋಗಿಯೂ ಆಗಲಾರನು. ॥ ೧॥

ವ್ಯಾಖ್ಯಾ - **'ಅನಾಶ್ರಿತಃ ಕರ್ಮಫಲಮ್'** – ಈ ಪದಗಳ ಅಭಿಪ್ರಾಯ – ಮನುಷ್ಯನು ಯಾವುದೇ ಉತ್ಪತ್ತಿ-ವಿನಾಶಶೀಲ ವಸ್ತು, ವ್ಯಕ್ತಿ, ಘಟನೆ, ಪರಿಸ್ಥಿತಿ, ಕ್ರಿಯೆ ಇತ್ಯಾದಿಗಳ ಆಶ್ರಯಪಡೆಯ ಬಾರದು ಎಂದು ಕಂಡುಬರುತ್ತದೆ. ಕಾರಣ ಈ ಜೀವನು ಸ್ವತಃ ಪರಮಾತ್ಮನ ಅಂಶನಾದ್ದರಿಂದ ನಿತ್ಯ-ನಿರಂತರ ಇರುವವನು ಮತ್ತು ಯಾವ ಈ ವಸ್ತು, ವ್ಯಕ್ತಿ ಇತ್ಯಾದಿಗಳನ್ನು ಆಶ್ರಯಿಸುತ್ತಾನೋ ಅವು ಉತ್ಪತ್ತಿವಿನಾಶಶೀಲ ಹಾಗೂ ಪ್ರತಿಕ್ಷಣ ಪರಿವರ್ತನವಾಗುವಂತಹುಗಳು. ಅವುಗಳಾದರೋ ಪರಿವರ್ತನಶೀಲವಾದ ಕಾರಣ ನಷ್ಟ ವಾಗುತ್ತವೆ ಮತ್ತು ಈ (ಜೀವನು) ಬರಿದಾಗಿರುತ್ತಾನೆ. ಕೇವಲ ಬರಿದಾಗಿರದೆ ಅವುಗಳ ರಾಗವನ್ನು ಹಿಡಿದಿರುತ್ತಾನೆ. ಅವುಗಳ ರಾಗವನ್ನು ಹಿಡಿದಿಡುವವರೆಗೆ ಅವನ ಶ್ರೇಯಸ್ಸು ಆಗುವುದಿಲ್ಲ, ಅರ್ಥಾತ್ – ಆ ರಾಗವು ಅವನಿಗೆ ಶ್ರೇಷ್ಠ-ಕನಿಷ್ಠ ಯೋನಿಗಳಲ್ಲಿ ಹುಟ್ಟಲು ಕಾರಣವಾಗುತ್ತದೆ (೧೩/೨೧). ಒಂದು ವೇಳೆ ಅವನು ಈ ರಾಗವನ್ನು ತ್ಯಜಿಸಿದರೆ ಸ್ವತಃಮುಕ್ತನಾಗಿ ಹೋದಾನು. ನಿಜವಾಗಿ ಇವನು ಮುಕ್ತನೇ ಆಗಿದ್ದಾನೆ. ಕೇವಲ ರಾಗದ ಕಾರಣದಿಂದ ಆ ಮುಕ್ತಿಯ ಅನುಭವ ಆಗುವುದಿಲ್ಲ. ಆದ್ದರಿಂದ ಭಗವಂತನು 'ಮನುಷ್ಯರು ಕರ್ಮಫಲವನ್ನು ಆಶ್ರಯಿಸದೆ ಕರ್ತವ್ಯ-ಕರ್ಮಮಾಡಬೇಕು' ಎಂದು ಹೇಳುತ್ತಾನೆ. ಕರ್ಮಫಲದ ಆಶ್ರಯ ಪಡೆಯದವನು ನೈಷ್ಠಿಕೀ ಶಾಂತಿಯನ್ನು ಪಡೆಯುತ್ತಾನೆ ಆದರೆ ಕರ್ಮಫಲವನ್ನು ಆಶ್ರಯಿಸುವವನು ಬಂಧಿತ ನಾಗುತ್ತಾನೆ (೫/೧೨).

ಸ್ಥೂಲ, ಸೂಕ್ಷ್ಮ, ಕಾರಣ ಈ ಮೂರೂ ಶರೀರಗಳು ಕರ್ಮ ಫಲವಾಗಿವೆ. ಈ ಮೂರರಲ್ಲಿ ಯಾವುದನ್ನೂ ಆಶ್ರಯಿಸದೇ ಇವನ್ನು ಎಲ್ಲರ ಹಿತದಲ್ಲಿ ತೊಡಗಿಸಬೇಕು.

ಸ್ಥೂಲಶರೀರದಿಂದ ಕ್ರಿಯೆಗಳನ್ನು, ಪದಾರ್ಥಗಳನ್ನು ಪ್ರಪಂಚದ್ದೆಂದು ತಿಳಿದು ಅವುಗಳನ್ನು ಪ್ರಪಂಚದ ಸೇವೆ (ಹಿತ)ಯಲ್ಲಿ ಉಪಯೋಗಿಸಬೇಕು. ಸೂಕ್ಷ್ಮ ಶರೀರದಿಂದ – ಬೇರೆಯವರ ಹಿತವು ಹೇಗಾದೀತು, ಎಲ್ಲರು ಹೇಗೆ ಸುಖಿಗಳಾದಾರು, ಎಲ್ಲರ ಉದ್ಧಾರ ಹೇಗಾದೀತು? ಹೀಗೆ ಚಿಂತಿಸಬೇಕು. ಕಾರಣಶರೀರದಿಂದ ಆಗುವ ಸ್ಥಿರತೆ (ಸಮಾಧಿ)ಯ ಫಲವನ್ನು ಪ್ರಪಂಚದ ಹಿತಕ್ಕಾಗಿ ಅರ್ಪಿಸಬೇಕು. ಕಾರಣ – ಈ ಮೂರೂ ಶರೀರಗಳು ತನ್ನ (ವ್ಯಕ್ತಿಗತ)ವಲ್ಲ ಮತ್ತು ತನಗಾಗಿಯೂ ಇರದೆ ಪ್ರಪಂಚದ್ದು ಹಾಗೂ ಪ್ರಪಂಚದ ಸೇವೆಗಾಗಿಯೇ ಇವೆ. ಈ ಮೂರೂ ಪ್ರಪಂಚದೊಂದಿಗೆ ಅಭಿನ್ನತೆ ಮತ್ತು ತನ್ನ ಸ್ವರೂಪ ದೊಂದಿಗೆ ಭಿನ್ನತೆ ಇದೆ. ಈ ರೀತಿ ಈ ಮೂರರ ಆಶ್ರಯ ಪಡೆಯದಿರುವುದೇ ಕರ್ಮಫಲವನ್ನು ಆಶ್ರಯಿಸದಿರುವುದಾಗಿದೆ. ಈ ಮೂರರಿಂದಲೂ ಪ್ರಪಂಚದ ಹಿತಕ್ಕಾಗಿ ಕರ್ಮಮಾಡುವುದೇ ಕರ್ತವ್ಯ-ಕರ್ಮಮಾಡುವುದಾಗಿದೆ.

ಆಶ್ರಯ ಪಡೆಯದಿರುವ ತಾತ್ಪರ್ಯ – ಸಾಧನರೂಪದಿಂದ ಶರೀರಾದಿಗಳನ್ನು ಬೇರೆಯವರ ಹಿತಕ್ಕಾಗಿ, ಉಪಯೋಗಿಸುವುದು, ಆದರೆ ಸ್ವತಃ ಅವುಗಳನ್ನು ಆಶ್ರಯಿಸದಿರುವುದು, ಅರ್ಥಾತ್ – ಅವುಗಳನ್ನು ತನ್ನವು ಮತ್ತು ತನಗಾಗಿ ಎಂದು ತಿಳಿಯದಿರುವುದಾಗಿದೆ. ಕಾರಣ – ಮನುಷ್ಯ ಜನ್ಮದಲ್ಲಿ ಶರೀರಾದಿಗಳ ಮಹತ್ತ್ವವಿರದೆ, ಶರೀರಾದಿಗಳ ಮೂಲಕ ಮಾಡಲಾಗುವ ಸಾಧನೆಯ ಮಹತ್ತ್ವವಾಗಿದೆ. ಆದ್ದರಿಂದ ಪ್ರಪಂಚದಿಂದ ದೊರಕಿದ ವಸ್ತುವನ್ನು ಪ್ರಪಂಚಕ್ಕಾಗಿ ಕೊಟ್ಟುಬಿಟ್ಟರೆ, ಪ್ರಪಂಚದ ಸೇವೆಯಲ್ಲಿ ತೊಡಗಿಸಿದರೆ ನಾವು ಸಂನ್ಯಾಸಿಗಳಾಗುತ್ತೇವೆ. ದೊರಕಿದ ವಸ್ತುವಿನಲ್ಲಿ ತನ್ನತನವನ್ನು ಬಿಟ್ಟುಬಿಟ್ಟರೆ ನಾವು ತ್ಯಾಗಿಗಳಾಗುತ್ತೇವೆ.

ಕರ್ಮಫಲವನ್ನು ಆಶ್ರಯಿಸದೆ ಕರ್ತವ್ಯಕರ್ಮವನ್ನು ಮಾಡುವುದರಿಂದ ಏನಾದೀತು? ತನಗಾಗಿ ಕರ್ಮಮಾಡದೆ ಇರುವುದರಿಂದ ಹೊಸ ಆಸಕ್ತಿ ಹುಟ್ಟಲಾರದು ಹಾಗೂ ಕೇವಲ ಬೇರೆಯವರ ಹಿತಕ್ಕಾಗಿ ಕರ್ಮಮಾಡುವುದರಿಂದ ಹಳೆಯ ಆಸಕ್ತಿಯು ಇಲ್ಲವಾದೀತು ಮತ್ತು ಕರ್ಮಮಾಡುವ ವೇಗವೂ ಇಲ್ಲವಾದೀತು. ಈ ಪ್ರಕಾರ ಆಸಕ್ತಿಯು ಸರ್ವಥಾ ಇಲ್ಲವಾದಾಗ ಮುಕ್ತಿಯು ಸ್ವತಃಸಿದ್ಧವಾಗಿದೆ. ಉತ್ಪತ್ತಿ ವಿನಾಶಶೀಲ ವಸ್ತುಗಳನ್ನು ಹಿಡಿದಿಡುವುದರ ಹೆಸರು ಬಂಧನ ಮತ್ತು ಅವುಗಳಿಂದ ಬಿಡುಗಡೆ ಹೊಂದುವುದೇ ಮುಕ್ತಿಯಾಗಿದೆ. ಆ ಉತ್ಪತ್ತಿ ವಿನಾಶಶೀಲ ವಸ್ತುಗಳಿಂದ ಬಿಡುಗಡೆ ಹೊಂದುವ ಉಪಾಯ – ಅವುಗಳ ಆಶ್ರಯ ಪಡೆಯದಿರುವುದು, ಅರ್ಥಾತ್ – ಅವುಗಳೊಂದಿಗೆ ಮಮತೆ ಇಡದಿರುವುದು ಮತ್ತು ತನ್ನ ಜೀವನವನ್ನು ಅವುಗಳ ಆಶ್ರಿತವೆಂದು ತಿಳಿಯದಿರುವುದೇ ಆಗಿದೆ.

'कार्यं कर्म करोति यः' – ಸಮಸ್ತ ಕರ್ತವ್ಯಗಳ ಹೆಸರು ಕಾರ್ಯವಾಗಿದೆ. ಕಾರ್ಯ ಮತ್ತು ಕರ್ತವ್ಯ ಇವೆರಡೂ ಶಬ್ದಗಳು ಪರ್ಯಾಯವಾಚಿಕಗಳಾಗಿವೆ. ಯಾವುದನ್ನು ನಾವು ಸುಖವಾಗಿ ಮಾಡಬಲ್ಲೆವೋ, ಯಾವುದನ್ನು ಅಗತ್ಯವಾಗಿ ಮಾಡಬೇಕೋ, ಯಾವುದರ ತ್ಯಾಗವು ಎಂದೂ ಮಾಡ ಬಾರದೋ ಅದನ್ನು ಕರ್ತವ್ಯ-ಕರ್ಮವೆಂದು ಹೇಳುತ್ತಾರೆ.

'कार्यं कर्म' – ಅರ್ಥಾತ್-ಕರ್ತವ್ಯ ಕರ್ಮವು ಅಸಂಭವವಾಗುವುದಿಲ್ಲ, ಕಷ್ಟವೂ ಆಗುವುದಿಲ್ಲ, ಯಾವುದನ್ನು ಮಾಡಬಾರದೋ ಅದು ಕರ್ತವ್ಯ-ಕರ್ಮವಲ್ಲ, ಅದಾದರೋ ಅಕರ್ತವ್ಯ (ಅಕಾರ್ಯ)ವಾಗಿದೆ. ಆ ಅಕರ್ತವ್ಯವು ಎರಡು ವಿಧವಾಗಿರುತ್ತದೆ. (೧) ಯಾವುದನ್ನು ನಾವು ಮಾಡಲಾರೆವೋ ಅರ್ಥಾತ್ – ಯಾವುದು ನಮ್ಮ ಶಕ್ತಿಗಿಂತ ಮೀರಿ ಇದೆಯೋ, (೨) ಯಾವುದನ್ನು ಮಾಡಬಾರದೋ ಅರ್ಥಾತ್ – ಯಾವುದು ಶಾಸ್ತ್ರ ಮತ್ತು ಲೋಕ ಮರ್ಯಾದೆಯ ವಿರುದ್ಧವಾಗಿದೆಯೋ ಅದು. ಇಂತಹ ಅಕರ್ತವ್ಯವನ್ನು ಎಂದೂ ಮಾಡಬಾರದು. ತಾತ್ಪರ್ಯ – ಕರ್ಮಫಲವನ್ನು ಆಶ್ರಯಿಸದೆ ಶಾಸ್ತ್ರವಿಹಿತ ಹಾಗೂ ಲೋಕಮರ್ಯಾದೆಗನುಸಾರ ಪ್ರಾಪ್ತ ಕರ್ತವ್ಯ-ಕರ್ಮಗಳನ್ನು ನಿಷ್ಕಾಮಭಾವದಿಂದ ಬೇರೆಯವರ ಹಿತಕ್ಕಾಗಿಯೇ ಮಾಡಬೇಕು.

ಕರ್ಮಫಲದ ಪ್ರಾಪ್ತಿಗಾಗಿ ಮತ್ತು ಕರ್ಮ ಹಾಗೂ ಅದರ ಫಲದ ಆಸಕ್ತಿಯನ್ನು ಇಲ್ಲವಾಗಿಸಲು ಕರ್ಮಗಳು ಎರಡು ವಿಧದಿಂದ ಮಾಡಲಾಗುತ್ತವೆ. ಇಲ್ಲಿ ಕರ್ಮ ಹಾಗೂ ಅದರ ಫಲದ ಆಸಕ್ತಿಯನ್ನು ಇಲ್ಲವಾಗಿಸಲಿಕ್ಕಾಗಿಯೇ ಪ್ರೇರಿಸಲಾಗಿದೆ.

'स संन्यासी च योगी च' – ಈ ಪ್ರಕಾರ ಕರ್ಮ ಮಾಡುವವನೇ ಸಂನ್ಯಾಸೀ ಮತ್ತು ಯೋಗಿಯಾಗಿದ್ದಾನೆ. ಅವನು ಕರ್ತವ್ಯ-ಕರ್ಮಗಳನ್ನು ಮಾಡುತ್ತಿರುವಾಗ ನಿರ್ಲಿಪ್ತನಾಗಿರುತ್ತಾನೆ; ಆದ್ದರಿಂದ ಅವನು ಸಂನ್ಯಾಸಿಯಾಗಿದ್ದಾನೆ. ಆ ಕರ್ತವ್ಯ ಕರ್ಮಗಳನ್ನು ಮಾಡುತ್ತಿರುವಾಗ ಅವನು ಸುಖೀ-ದುಃಖಿಯಾಗುವುದಿಲ್ಲ, ಅರ್ಥಾತ್ – ಕರ್ಮಗಳ ಸಿದ್ಧಿ-ಅಸಿದ್ಧಿಯಲ್ಲಿ ಸಮನಾಗಿರುತ್ತಾನೆ, ಅದಕ್ಕಾಗಿ ಅವನು ಯೋಗಿಯಾಗಿದ್ದಾನೆ.

ತಾತ್ಪರ್ಯ – ಕರ್ಮಫಲವನ್ನು ಆಶ್ರಯಿಸದೆ ಕರ್ಮ ಮಾಡುವುದರಿಂದ ಅವನ ಕರ್ತೃತ್ವ ಮತ್ತು ಭೋಕ್ತೃತ್ವಗಳು ನಾಶವಾಗುತ್ತವೆ, ಅರ್ಥಾತ್ – ಅವನಿಗೆ ಕರ್ಮಗಳೊಂದಿಗೆ ಸಂಬಂಧವಿರುವುದಿಲ್ಲ ಮತ್ತು ಫಲದೊಂದಿಗೂ ಸಂಬಂಧವಿರುವುದಿಲ್ಲ, ಆದರಿಂದ ಅವನು ಸಂನ್ಯಾಸಿಯಾಗಿದ್ದಾನೆ. ಅವನು ಕರ್ಮ ಮಾಡುವುದರಲ್ಲಿ ಮತ್ತು ಕರ್ಮಫಲದ ಪ್ರಾಪ್ತಿ-ಅಪ್ರಾಪ್ತಿಯಲ್ಲಿ ಸಮನಾಗಿರುತ್ತಾನೆ, ಆದರಿಂದ ಅವನು ಯೋಗಿಯಾಗಿದ್ದಾನೆ.

ಇಲ್ಲಿ ಮೊದಲಿಗೆ **'ಸಂನ್ಯಾಸೀ'** ಪದವನ್ನು ಹೇಳುವುದರ ಭಾವ – ಅರ್ಜುನನು ಸ್ವರೂಪದಿಂದ ಕರ್ಮಗಳ ತ್ಯಾಗವನ್ನು ಶ್ರೇಷ್ಠವೆಂದು ತಿಳಿಯುತ್ತಿದ್ದನು. ಅದರಿಂದಲೇ ಅರ್ಜುನನು (೨/೫ ಶ್ಲೋಕದಲ್ಲಿ) ಯುದ್ಧಮಾಡುವುದಕ್ಕಿಂತ ಭಿಕ್ಷೆ ಬೇಡಿ ಜೀವನ ನಿರ್ವಾಹ ಮಾಡುವುದು ಶ್ರೇಷ್ಠವಾಗಿದೆ ಎಂದು ಹೇಳಿದ್ದನು. ಅದಕ್ಕಾಗಿ ಇಲ್ಲಿ ಭಗವಂತನು ಮೊದಲಿಗೆ 'ಸಂನ್ಯಾಸಿ' ಪದವನ್ನು ಹೇಳಿ ಅರ್ಜುನನಲ್ಲಿ ಹೇಳುತ್ತಿದ್ದಾನೆ, ಅರ್ಜುನಾ! ನೀನು ಯಾವುದನ್ನು ಸಂನ್ಯಾಸವೆಂದು ತಿಳಿದಿರುವೆಯೋ ಅದು ನಿಜವಾದ ಸಂನ್ಯಾಸವಾಗಿರದೆ ಕರ್ಮಫಲದ ಆಶ್ರಯವನ್ನು ಬಿಟ್ಟು ತನ್ನ ಕರ್ತವ್ಯರೂಪೀ ಕರ್ಮಗಳನ್ನು ಕೇವಲ ಬೇರೆಯವರ ಹಿತಕ್ಕಾಗಿ ಕರ್ತವ್ಯಬುದ್ಧಿಯಿಂದ ಮಾಡುವವನೇ ನಿಜವಾಗಿ ಸಂನ್ಯಾಸಿಯಾಗಿದ್ದಾನೆ.

' ನ ನಿರಗ್ನಿಃ ' – ಕೇವಲ ಅಗ್ನಿರಹಿತನಾದ್ದರಿಂದಲೇ ಸಂನ್ಯಾಸಿಯಲ್ಲ , ಅರ್ಥಾತ್ – ಮೇಲಿಂದ ಮೇಲೆ ಯಜ್ಞ, ಹವನ ಇತ್ಯಾದಿಗಳ ತ್ಯಾಗಮಾಡಿಬಿಟ್ಟಿರುವವನು, ಪದಾರ್ಥಗಳ ತ್ಯಾಗಮಾಡಿರುವವನು, ಒಳಂಗಿದೊಳಗೆ ಕ್ರಿಯೆಗಳಲ್ಲಿ ಹಾಗೂ ಪದಾರ್ಥಗಳಲ್ಲಿ ರಾಗವಿದ್ದು, ಮಹತ್ವ, ಪ್ರೀತಿ ಇರುವವನು ಎಂದಿಗೂ ನಿಜ ಸಂನ್ಯಾಸಿ ಯಾಗಲಾರದು.

'ನ ಅಕ್ರಿಯಃ' – ಯಾವ ಮನುಷ್ಯನು ಯಾವುದೇ ಕ್ರಿಯೆ ಮಾಡದೆ, ಸ್ವರೂಪದಿಂದ ಕ್ರಿಯೆಗಳನ್ನು, ಪದಾರ್ಥಗಳನ್ನು ತ್ಯಾಗ ಮಾಡಿ ಕಾಡಿಗೆ ಹೋಗಿ ಅಥವಾ ನಿಷ್ಕ್ರಿಯನಾಗಿ ಸಮಾಧಿಯಲ್ಲೇ ಇರುವವನೇ ಯೋಗಿಯಾಗಿದ್ದಾನೆ ಎಂದು ಪ್ರಾಯಶಃ ಎಲ್ಲ ಮನುಷ್ಯರ ಧೋರಣೆಯಾಗಿದೆ. ಆದರೆ ಭಗವಂತನು ಹೇಳುತ್ತಾನೆ – 'ಮನುಷ್ಯನು ಉತ್ಪತ್ತಿವಿನಾಶಶೀಲ ವಸ್ತುಗಳ ಆಶ್ರಯವನ್ನು ತ್ಯಾಗ ಮಾಡದೆ, ಮನಸ್ಸಿನಿಂದ ಅವುಗಳೊಂದಿಗೆ ಸಂಬಂಧವಿಟ್ಟುಕೊಳ್ಳುವವರೆಗೆ ಎಷ್ಟೇ ಅಕ್ರಿಯನಾಗಿರಲೀ, ಚಿತ್ತವೃತ್ತಿಗಳನ್ನು ಸರ್ವಥಾ ನಿರೋಧ ಮಾಡಿಕೊಂಡರೂ ಅವನು ಯೋಗಿಯಾಗಲಾರನು.' ಚಿತ್ತದ ವೃತ್ತಿಗಳನ್ನು ಸರ್ವಥಾ ನಿರೋಧವಾದ್ದರಿಂದ ಅವನಿಗೆ ಬಗೆ-ಬಗೆಯ ಸಿದ್ಧಿಗಳು ದೊರೆಯುತ್ತವೆ ಎಂಬುದು ಹೌದು. ಆದರೆ ಶ್ರೇಯಸ್ಸಾಗುವುದಿಲ್ಲ, ತಾತ್ಪರ್ಯ – ಕೇವಲ ಹೊರಗಿನಿಂದ ಅಕ್ರಿಯನಾದ ಮಾತ್ರದಿಂದ ಯಾರೂ ಯೋಗಿಯಾಗುವುದಿಲ್ಲ, ಉತ್ಪತ್ತಿವಿನಾಶಶೀಲ ವಸ್ತುಗಳ (ಕರ್ಮಫಲದ) ಆಶ್ರಯವಿಲ್ಲದೆ ಕರ್ತವ್ಯ-ಕರ್ಮಮಾಡುವವನೇ ಯೋಗಿ ಯಾಗುತ್ತಾನೆ.

ಮನುಷ್ಯರಲ್ಲಿ ಕರ್ಮಮಾಡುವ ಒಂದು ವೇಗವಿರುತ್ತದೆ, ಅದನ್ನು ಕರ್ಮಯೋಗದ ವಿಧಿಯಿಂದ ಕರ್ಮಮಾಡುವುದರಿಂದಲೇ ಇಲ್ಲವಾಗಿಸಬಹುದು; ಅಲ್ಲದೆ ಅದು ಶಾಂತವಾಗುವುದಿಲ್ಲ, ಸಂಪೂರ್ಣ ಕ್ರಿಯೆಗಳಿಂದ ಉಪರತರಾಗಿ ಏಕಾಂತದಲ್ಲಿದ್ದು ಜಪ-ಧ್ಯಾನ ಇತ್ಯಾದಿ ಸಾಧನೆಮಾಡುವಂತಹ ಏಕಾಂತ ಪ್ರಿಯ, ಒಳ್ಳೊಳ್ಳೆ ಸಾಧಕರಲ್ಲಿಯೂ ಜನಗಳ ಉದ್ಧಾರಮಾಡಬೇಕು ಎಂಬ ಪ್ರವೃತ್ತಿಯು ತುಂಬಾ ವೇಗವಾಗಿ ಹುಟ್ಟುತ್ತದೆ ಮತ್ತು ಅವರು ಏಕಾಂತದಲ್ಲಿದ್ದು ಸಾಧನೆ ಮಾಡುವುದನ್ನು ಬಿಟ್ಟು ಜನರ ಉದ್ಧಾರದ ಕಾರ್ಯಗಳಲ್ಲಿ ತೊಡಗುವುದನ್ನು ಪ್ರಾಯಶಃ ಕಂಡುಬರುತ್ತದೆ.

ಸಕಾಮಭಾವದಿಂದ ಅರ್ಥಾತ್ – ತನಗಾಗಿ ಕರ್ಮ ಮಾಡುವುದರಲ್ಲಿ ಕರ್ಮಮಾಡುವ ವೇಗ ಹೆಚ್ಚುತ್ತದೆ. ಸಾಧಕನು ತನಗಾಗಿ ಕಿಂಚಿನ್ಮಾತ್ರವೂ ಯಾವುದೇ ಕರ್ಮಗಳನ್ನು ಮಾಡದೆ ಸಂಪೂರ್ಣ ಕರ್ಮಗಳನ್ನು ಕೇವಲ ಲೋಕ ಹಿತಾರ್ಥವಾಗಿಯೇ ಮಾಡಿದಾಗ ಈ ವೇಗವು ಶಾಂತ ವಾಗುತ್ತದೆ. ಈ ರೀತಿ ಕೇವಲ ನಿಷ್ಕಾಮಭಾವದಿಂದ ಬೇರೆಯವರಿಗಾಗಿ ಕರ್ಮಮಾಡುವುದರಿಂದ ಕರ್ಮ ಮಾಡುವ ವೇಗ ಶಾಂತವಾಗುತ್ತದೆ ಹಾಗೂ ಸಮತೆಯ ಪ್ರಾಪ್ತಿಯಾಗುತ್ತದೆ. ಸಮತೆಯ ಪ್ರಾಪ್ತಿಯಾದಾಗ ಸಮರೂಪೀ ಪರಮಾತ್ಮತತ್ತ್ವದ ಅನುಭವ ಉಂಟಾಗುತ್ತದೆ.

ವಿಶೇಷ ವಿಚಾರ

ಶರೀರ – ಪ್ರಪಂಚದಲ್ಲಿ ಅಹಂತೆ-ಮಮತೆ ಇಡುವುದು ಕರ್ಮದ ಫಲವಲ್ಲ, ಈ ಅಹಂತೆ – ಮಮತೆ ಮನುಷ್ಯನು ಒಪ್ಪಿಕೊಂಡದ್ದಾಗಿದೆ; ಆದ್ದರಿಂದ ಇದು ಬದಲಾಗುತ್ತಿರುತ್ತದೆ. ಮನುಷ್ಯನು ಗೃಹಸ್ಥನಾಗಿದ್ದಾಗ 'ನಾನು ಗೃಹಸ್ಥನಾಗಿದ್ದೇನೆ' ಎಂದು ಒಪ್ಪಿಕೊಳ್ಳುತ್ತಾನೆ. ಅವನೇ ಸಾಧುವಾದಾಗ 'ನಾನು ಸಾಧು ಆಗಿದ್ದೇನೆ' ಎಂದು ಒಪ್ಪಿಕೊಳ್ಳುತ್ತಾನೆ, ಅರ್ಥಾತ್ – ಅವನ 'ನಾನು ಗೃಹಸ್ಥನಾಗಿದ್ದೇನೆ' ಎಂಬ ಅಹಂತೆ ಇಲ್ಲವಾಗುತ್ತದೆ. ಹೀಗೇಯೇ ಈ ವಸ್ತು ನನ್ನದಾಗಿದೆ ಈ ಪ್ರಕಾರ ಮನುಷ್ಯನಿಗೆ ಆ ವಸ್ತುವಿನಲ್ಲಿ ಮಮತೆ ಇರುತ್ತದೆ. ಅದೇ ವಸ್ತುವನ್ನು ಬೇರೆಯವರಿಗೆ ಕೊಟ್ಟಾಗ ಆ ವಸ್ತುವಿನಲ್ಲಿ ಮಮತೆ ಇರುವುದಿಲ್ಲ, ಇದರಿಂದ – ಅಹಂತೆ – ಮಮತೆ ಒಪ್ಪಿಕೊಂಡದ್ದು, ವಾಸ್ತವಿಕವಲ್ಲ ಎಂಬುದು ಸಿದ್ಧವಾಗುತ್ತದೆ. ಒಂದು ವೇಳೆ ಅದು ವಾಸ್ತವಿಕವಾಗಿದ್ದರೆ ಎಂದಿಗೂ ಇಲ್ಲವಾಗುತ್ತಿರಲಿಲ್ಲ – **'ನಾಭಾವೋ ವಿದ್ಯತೇ ಸತಃ'** ಮತ್ತು ಒಂದು ವೇಳೆ ಇಲ್ಲವಾಗುವುದಾದರೆ ಅದು ವಾಸ್ತವಿಕವಲ್ಲ – **'ನಾಸತೋ ವಿದ್ಯತೇಭಾವಃ'** (೨/೧೬).

ಅಹಂತೆ – ಮಮತೆಯ ಆಧಾರ, ಆಶ್ರಯವಾದರೋ ಸಾಕ್ಷಾತ್ ಪರಮಾತ್ಮನ ಅಂಶವಾಗಿದೆ. ಅದರ ಅಭಾವವೆಂದೂ ಆಗುವುದಿಲ್ಲ, ಎಲ್ಲ ಕಡೆಗಳಲ್ಲಿ ವ್ಯಾಪಕವಾದ ಪರಮಾತ್ಮನೊಂದಿಗೆ ಅದರ ಏಕತೆ ಇದೆ. ಅದರಲ್ಲಿ ಅಹಂತೆ-ಮಮತೆಯ ಗಂಧವೂ ಕೂಡ ಇಲ್ಲ, ಅಹಂತೆ-ಮಮತೆಯಾದರೋ ಪ್ರಾಕೃತ ಪದಾರ್ಥಗಳೊಂದಿಗೆ ತಾದಾತ್ಮ್ಯವಾದಾಗ ಕಂಡು

ಬರತ್ತದೆ. 'ನಾನು ಗೃಹಸ್ಥನಾಗಿದ್ದೇನೆ' 'ನಾನು ಸಾಧು ವಾಗಿದ್ದೇನೆ' ಹೀಗೆ ತಿಳಿಯುವುದರಲ್ಲಿ, 'ವಸ್ತು ನನ್ನದಾಗಿದೆ' 'ವಸ್ತುನನ್ನದಲ್ಲ ಹೀಗೆ ತಿಳಿಯುವುದರಲ್ಲಿ ಅರ್ಥಾತ್ – ಅಹಂತೆ-ಮಮತೆಯ ಸಂಬಂಧ ಬೆಳೆಸುವುದರಲ್ಲಿ, ಬಿಡುಸುವುದರಲ್ಲಿ ಈ ಮನುಷ್ಯನು ಸ್ವತಂತ್ರನಾಗಿರು ವಂತೆ; ತಾದಾತ್ಮ್ಯವಾಗುವುದು, ಆಗದಿರುವುದರಲ್ಲಿ ಅವನು ಸ್ವತಂತ್ರ, ಸಮರ್ಥನಾಗಿದ್ದಾನೆ. ಇದರಲ್ಲಿ ಅವನು ಪರಾಧೀನ ಮತ್ತು ಅಸಮರ್ಥನಾಗಿಲ್ಲ; ಏಕೆಂದರೆ ಶರೀರಾದಿಗಳ ಸಂಬಂಧವನ್ನು ಸ್ವತಃ ಚೇತನ (ಜೀವ)ನು ಬೆಳೆಸಿಕೊಂಡಿರುವನು. ಶರೀರ ಹಾಗೂ ಪ್ರಪಂಚವು ಬೆಳೆಸಿಕೊಂಡಿಲ್ಲ, ಆದ್ದರಿಂದ ಯಾರಿಗೆ ಬೆಳೆಸಲು ಬರುತ್ತದೋ ಅವನಿಗೆ ಕಡಿಯಲೂ ಬರುತ್ತದೆ.'

ಮನುಷ್ಯನು ಬಾಲ್ಯಾವಸ್ಥೆಯಲ್ಲಿ 'ನಾನು ಬಾಲಕನಾಗಿದ್ದೇನೆ' ಮತ್ತು ತಾರುಣ್ಯದಲ್ಲಿ 'ನಾನು ತರುಣನಾಗಿದ್ದೇನೆ' ಹೀಗೆ ತಿಳಿಯುವಂತೆ ಸಂಬಂಧ ಬೆಳೆಸುವುದಕ್ಕಿಂತ ಕಡಿದು ಕೊಳ್ಳುವುದು ಸುಲಭವಾಗಿದೆ. ಇದೇ ರೀತಿ ಅವನು ಬಾಲ್ಯದಲ್ಲಿ 'ಆಟಿಕೆಗಳು ನನ್ನವು' ಎಂದು ತಿಳಿಯುವಂತೆ ತಾರುಣ್ಯದಲ್ಲಿ 'ಹಣ-ಕಾಸು ನನ್ನವು' ಎಂದು ತಿಳಿಯುತ್ತಾನೆ. ಈ ಪ್ರಕಾರ ಮನುಷ್ಯನು ಬಾಲ್ಯಾವಸ್ಥೆ ಇತ್ಯಾದಿಗಳೊಂದಿಗೆ ಹಾಗೂ ಆಟಿಕೆ ಮುಂತಾದವುಗಳೊಂದಿಗೆ ಸ್ವತಃ ಸಂಬಂಧ ಬೆಳೆಸಬೇಕಾಗುತ್ತದೆ. ಆದರೆ ಇವುಗಳೊಂದಿಗೆ ಸಂಬಂಧ ಕಡಿದುಕೊಳ್ಳಬೇಕಾಗುವುದಿಲ್ಲ, ಸಂಬಂಧವು ತನ್ನಿಂದ-ತಾನೇ ಬಿಟ್ಟು ಹೋಗುತ್ತಿರುತ್ತದೆ. ತಾತ್ಪರ್ಯ – ಬಾಲ್ಯಾವಸ್ಥೆ ಇತ್ಯಾದಿಗಳ ಅಹಂತೆಯು ಶರೀರವು ಇರುವುದು, ಇಲ್ಲದಿರುವುದರ ಮೇಲೆ ನಿರ್ಭರವಾಗಿರದೆ ಮಾನ್ಯತೆಯ ಮೇಲೆ ನಿರ್ಭರವಾಗಿದೆ. ಅದಕ್ಕಾಗಿ ಕರ್ಮಫಲ (ಶರೀರ, ವಸ್ತು ಇತ್ಯಾದಿ)ವು ಇರುವಾಗಲೂ ಅದರ ಆಶ್ರಯ ಸುಲಭವಾಗಿ ಬಿಟ್ಟುಹೋಗಬಲ್ಲದು.

'ಸ್ವಯಂ' ನಿತ್ಯವಾಗಿದೆ ಮತ್ತು ಶರೀರ-ಪ್ರಪಂಚ ಅನಿತ್ಯ ವಾಗಿದೆ. ನಿತ್ಯದೊಂದಿಗೆ ಅನಿತ್ಯದ ಸಂಬಂಧ ಎಂದೂ ಉಳಿಯಲಾರದು, ಇರಲಾರದು. ಆದರೆ 'ಸ್ವಯಂ' ಅಹಂತೆ ಮಮತೆಯನ್ನು ಹಿಡಿದುಕೊಂಡಾಗ ಅಹಂತೆ-ಮಮತೆಯೂ ನಿತ್ಯದಂತೆ ಕಂಡುಬರುತ್ತದೆ. ಮತ್ತೆ ಅದನ್ನು ಬಿಡಲು ಕಷ್ಟಕರವಾಗಿ ಕಾಣುತ್ತದೆ; ಏಕೆಂದರೆ ಅವನು ನಿತ್ಯ ಸ್ವರೂಪದಲ್ಲಿ ಅನಿತ್ಯವಾದ ಅಹಂತೆ-ಮಮತೆ (ನಾನು ಮತ್ತು ನನ್ನದು)ಯನ್ನು ಆರೋಪಿಸಿಕೊಂಡಿರುವನು. ನಿಜವಾಗಿ ನೋಡಿದರೆ ಶರೀರದೊಂದಿಗಿರುವ ತನ್ನ ಸಂಬಂಧ ಒಪ್ಪಿಕೊಂಡದ್ದಾಗಿದೆ, ಅದು ಇಲ್ಲವೇ ಇಲ್ಲ. ಕಾರಣ – ಶರೀರ ಪ್ರಕಾಶ್ಯವಾಗಿದೆ ಹಾಗೂ ಸ್ವಯಂ (ಸ್ವರೂಪ) ಪ್ರಕಾಶಕವಾಗಿದೆ. ಶರೀರವು ಏಕದೇಶಿಯವಾಗಿದೆ ಮತ್ತು ಸ್ವಯಂ ಸರ್ವದೇಶೀಯ ಅಥವಾ ದೇಶಾತೀತವಾಗಿದೆ, ಶರೀರವು ಜಡವಾಗಿದೆ, ಸ್ವರೂಪವು ಚೇತನವಾಗಿದೆ. ಶರೀರವು ಜ್ಞೇಯವಾಗಿದೆ, ಸ್ವರೂಪವು ಜ್ಞಾತಾ ಆಗಿದೆ. ಸ್ವರೂಪದ ಆ ಜ್ಞಾತೃತನವೂ ಶರೀರದ ದೃಷ್ಟಿಯಿಂದಲೇ ಇದೆ. ಒಂದು ವೇಳೆ ಶರೀರದ ದೃಷ್ಟಿ ದೂರಗೊಳಿಸಿದರೆ ಸ್ವರೂಪವು ಜ್ಞಾತೃತ್ವರಹಿತ ಚಿನ್ಮಾತ್ರವಾಗಿದೆ, ಅರ್ಥಾತ್ – ಕೇವಲ ಚಿತಿರೂಪದಿಂದಲೇ ಇರುತ್ತದೆ. ಆ ಚಿತಿಮಾತ್ರ ಸ್ವರೂಪದಲ್ಲಿ ನಾನು ಮತ್ತು ನನ್ನದು ಇಲ್ಲ, ಅದರಲ್ಲಿ ಅಹಂತೆ-ಮಮತೆಯ ಅತ್ಯಂತ ಅಭಾವವಾಗಿದೆ. ಆ ಚಿತಿಮಾತ್ರವು ಬ್ರಹ್ಮಸ್ವರೂಪ ವಾಗಿದೆ ಮತ್ತು ಬ್ರಹ್ಮನಲ್ಲಿ ನಾನು, ನನ್ನದು ಎಂದೂ ಉಂಟಾಗಲೇ ಇಲ್ಲ, ಎಂದೂ ಉಂಟಾಗಲಾರದು.

ಪರಿಶಿಷ್ಟ ಭಾವ – *ಇಯವೆಯಿಂದ ಹಿಡಿದು ಬ್ರಹ್ಮಲೋಕದ ವರೆಗಿನ ಸಮಸ್ತ ಪ್ರಪಂಚವು ಕರ್ಮಫಲವೇ ಆಗಿದೆ. ವಸ್ತು, ವ್ಯಕ್ತಿ, ಕ್ರಿಯೆ ಪ್ರಪಂಚದ ಸ್ವರೂಪವಾಗಿದೆ. ಎಲ್ಲ ವಸ್ತುಗಳ ಪ್ರಾಪ್ತಿ ಹಾಗೂ ಅಪ್ರಾಪ್ತಿಯಾಗುತ್ತದೆ, ಎಲ್ಲ ವ್ಯಕ್ತಿಗಳ ಸಂಯೋಗ-ವಿಯೋಗವಾಗುತ್ತದೆ, ಸಕಲ ಕ್ರಿಯೆಗಳ ಆರಂಭ ಮತ್ತು ಅಂತ್ಯವಾಗುತ್ತದೆ. ವಸ್ತು, ವ್ಯಕ್ತಿ, ಕ್ರಿಯೆ ಈ ಮೂರರ ಆಶ್ರಯವನ್ನು ತ್ಯಾಗಮಾಡಿ ಪ್ರಾಪ್ತ ಕರ್ತವ್ಯ ವನ್ನು ಪಾಲಿಸುವವನೇ ನಿಜವಾದ ಸಂನ್ಯಾಸೀ ಹಾಗೂ ಯೋಗಿ ಯಾಗಿದ್ದಾನೆ. ಕರ್ಮಫಲವನ್ನು ತ್ಯಜಿಸದೆ ಕೇವಲ ಅಗ್ನಿಯ ತ್ಯಾಗ ಮಾಡುವವನು ನಿಜವಾದ ಸಂನ್ಯಾಸಿಯಲ್ಲ ಮತ್ತು ಕೇವಲ ಕ್ರಿಯೆಗಳ ತ್ಯಾಗಮಾಡುವವನು ನಿಜವಾದ ಯೋಗಿಯೂ ಅಲ್ಲ, ಕಾರಣ–ಮನುಷ್ಯನು ಕರ್ಮಫಲದಿಂದ ಬಂಧಿತ ನಾಗುತ್ತಾನೆ, ಅಗ್ನಿಯಿಂದ ಅಥವಾ ಕ್ರಿಯೆಗಳಿಂದ ಅಲ್ಲ.*

ಮೂರನೇ ಅಧ್ಯಾಯದ ೩ನೇ ಶ್ಲೋಕದಲ್ಲಿ ಭಗವಂತನು ಸಾಂಖ್ಯನಿಷ್ಠೆ (ಸಾಂಖ್ಯಯೋಗ) ಮತ್ತು ಯೋಗನಿಷ್ಠೆ (ಕರ್ಮಯೋಗ) ಈ ಎರಡು ನಿಷ್ಠೆಗಳನ್ನು ಹೇಳಿದ್ದನು. ಮತ್ತೆ ೫ನೇ ಅಧ್ಯಾಯದ ೪-೫ ಶ್ಲೋಕಗಳಲ್ಲಿ ಭಗವಂತನು ಸಾಂಖ್ಯಯೋಗ ಮತ್ತು ಕರ್ಮಯೋಗ ಇವೆರಡೂ ಒಂದೇ ಫಲವುಳ್ಳದೆಂದು ತಿಳಿಸಿದನು. ಈಗ ಇಲ್ಲಿ ಭಗವಂತನು ಅದೇ ಭಾವದಂತೆ – ಯಾರು ಕರ್ಮಫಲದ ತ್ಯಾಗಮಾಡಿರುವನೋ ಅವನೇ ನಿಜವಾದ ಸಾಂಖ್ಯಯೋಗಿ ಮತ್ತು ಕರ್ಮಯೋಗಿ ಯಾಗಿದ್ದಾನೆ ಎಂದು ಹೇಳಿರುವನು. ತಾತ್ಪರ್ಯ – ಚಿತ್ತವೃತ್ತಿಗಳ ನಿರೋಧಮಾಡಿದ ಮಾತ್ರದಿಂದ ಯಾರೂ ಯೋಗಿ ಆಗುವುದಿಲ್ಲ, ಅವನು ಕರ್ಮಫಲದ ತ್ಯಾಗಮಾಡಿದಾಗಲೇ ಯೋಗಿಯಾಗುತ್ತಾನೆ. ಕಾರಣ – ಕರ್ಮಫಲದ ಬಯಕೆ ಇರುವ ವರೆಗೆ ಚಿತ್ತವೃತ್ತಿ ನಿರೋಧ ಮಾಡುವುದರಿಂದ ಸಿದ್ಧಿಗಳ ಪ್ರಾಪ್ತಿ ಯಾದರೋ ಆಗಬಲ್ಲದು, ಆದರೆ ಶ್ರೇಯಸ್ಸು ಆಗಲಾರದು.

–●–

ಸಂಬಂಧ – ಹಿಂದಿನ ಶ್ಲೋಕದಲ್ಲಿ ಯಾರು ಸಂನ್ಯಾಸಿಯೋ ಅವನೇ ಯೋಗಿಯಾಗಿದ್ದಾನೆ ಎಂದು ಹೇಳಲಾಗಿದೆ. ಆದರೆ ಇವುಗಳ ಏಕತ್ವ ಯಾವುದರಲ್ಲಿದೆ – ಇದರ ವರ್ಣನೆ ಮುಂದಿನ ಶ್ಲೋಕದಲ್ಲಿ ಮಾಡುತ್ತಾನೆ —

ಯಂ ಸಂನ್ಯಾಸಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಂಡವ ।
ನ ಹ್ಯಸಂನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ ॥ ೨॥

ಪಾಂಡವ - ಹೇ ಅರ್ಜುನಾ!, **ಯಮ್** - (ಜನರು) ಯಾವುದನ್ನು, **ಸಂನ್ಯಾಸಮ್**, **ಇತಿ** - ಸಂನ್ಯಾಸವೆಂದು, **ಪ್ರಾಹುಃ**- ಹೇಳುತ್ತಾರೋ, **ತಮ್** - ಅದನ್ನೆ (ನೀನು), **ಯೋಗಮ್** - ಯೋಗವೆಂದು, **ವಿದ್ಧಿ** - ತಿಳಿ, **ಹಿ** - ಏಕೆಂದರೆ, **ಅಸಂನ್ಯಸ್ತ ಸಂಕಲ್ಪಃ**- ಸಂಕಲ್ಪಗಳನ್ನು ತ್ಯಾಗಮಾಡದೆ, **ಕಶ್ಚನ** - ಯಾವ (ಮನುಷ್ಯನೂ ಕೂಡ), **ಯೋಗೀ** - ಯೋಗೀ, **ನ**, **ಭವತಿ** - ಆಗಲಾರನು. ॥ ೨॥

ಹೇ ಅರ್ಜುನಾ! ಜನರು ಯಾವುದನ್ನು ಸಂನ್ಯಾಸವೆಂದು ಹೇಳುತ್ತಾರೋ ಅದನ್ನೇ ನೀನು ಯೋಗವೆಂದು ತಿಳಿ; ಏಕೆಂದರೆ ಸಂಕಲ್ಪಗಳನ್ನು ತ್ಯಾಗಮಾಡದೆ ಯಾವ ಮನುಷ್ಯನೂ ಕೂಡ ಯೋಗಿಯಾಗಲಾರನು. ॥ ೨॥

ವ್ಯಾಖ್ಯಾ - '**ಯಂ ಸಂನ್ಯಾಸಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಂಡವ**' – ಐದನೇ ಅಧ್ಯಾಯದ ಪ್ರಾರಂಭದಲ್ಲಿ ಭಗವಂತನು – ಸಂನ್ಯಾಸ (ಸಾಂಖ್ಯಯೋಗ) ಮತ್ತು ಯೋಗ (ಕರ್ಮಯೋಗ) ಇವೆರಡೂ ಸ್ವತಂತ್ರವಾಗಿ ಶ್ರೇಯಸ್ಕರವಾಗಿವೆ ಎಂದು ಹೇಳಿರುವನು (೫/೨) ಹಾಗೂ ಎರಡರ ಫಲವೂ ಒಂದೇ ಆಗಿದೆ (೫/೫) ಅರ್ಥಾತ್ – ಸಂನ್ಯಾಸ ಮತ್ತು ಯೋಗ ಎರಡಿಲ್ಲ ಒಂದೇ ಆಗಿದೆ. ಅದೇ ಮಾತನ್ನು ಇಲ್ಲಿ ಭಗವಂತನು ಸಂನ್ಯಾಸಿಯು ಸರ್ವಥಾ ತ್ಯಾಗಿಯಾಗಿರುವಂತೆಯೇ ಕರ್ಮಯೋಗಿಯೂ ಕೂಡ ಸರ್ವಥಾ ತ್ಯಾಗಿಯಾಗಿದ್ದಾನೆ.

ಹದಿನೆಂಟನೇ ಅಧ್ಯಾಯದ ೯ನೇ ಶ್ಲೋಕದಲ್ಲಿ ಭಗವಂತನು – ಫಲ ಮತ್ತು ಆಸಕ್ತಿಯನ್ನು ಸರ್ವಥಾ ತ್ಯಾಗಗೈದು ಯಾರು ನಿಯತ ಕರ್ತವ್ಯ-ಕರ್ಮಗಳನ್ನು ಕೇವಲ ಕರ್ತವ್ಯಮಾತ್ರವೆಂದು ತಿಳಿದು ಮಾಡುತ್ತಾನೋ ಅದು 'ಸಾತ್ವಿಕ ತ್ಯಾಗ'ವಾಗಿದೆ, ಅದರಿಂದ ಪದಾರ್ಥಗಳ ಮತ್ತು ಕ್ರಿಯೆಗಳ ಸಂಬಂಧ ಸರ್ವಥಾ ವಿಚ್ಛೇದವಾಗುತ್ತದೆ ಹಾಗೂ ಮನುಷ್ಯನು ತ್ಯಾಗಿ ಅರ್ಥಾತ್ – ಯೋಗಿಯಾಗುತ್ತಾನೆ. ಇದೇ ರೀತಿ ಸಂನ್ಯಾಸಿಯೂ ಕೂಡ ಕರ್ತೃತ್ವಾಭಿಮಾನದ ತ್ಯಾಗಿಯಾಗುತ್ತಾನೆ. ಆದ್ದರಿಂದ ಇಬ್ಬರೂ ತ್ಯಾಗಿಗಳಾಗಿದ್ದಾರೆ. ತಾತ್ಪರ್ಯ–ಯೋಗಿ ಮತ್ತು ಸಂನ್ಯಾಸಿಯಲ್ಲಿ ಯಾವ ಭೇದವೂ ಇಲ್ಲ, ಭೇದವು ಇಲ್ಲದಿರುವುದರಿಂದಲೇ ಭಗವಂತನು ೫ನೇ ಅಧ್ಯಾಯದ ೩ನೇ ಶ್ಲೋಕದಲ್ಲಿ ರಾಗ-ದ್ವೇಷಗಳ ತ್ಯಾಗ ಮಾಡುವ ಯೋಗಿಯು ಸಂನ್ಯಾಸಿಯಾಗಿದ್ದಾನೆ ಎಂದು ಹೇಳಿರುವನು.

'**ನ ಹ್ಯಸಂನ್ಯಸ್ತ ಸಂಕಲ್ಪೋ ಯೋಗೀ ಭವತಿ ಕಶ್ಚನ**' – ಮನಸ್ಸಿನಲ್ಲಿ ಉಂಟಾಗುವ ಸ್ಫುರಣೆಗಳು ಅರ್ಥಾತ್ – ಬಗೆ-ಬಗೆಯ ಮಾತುಗಳು ನೆನಪಾಗುತ್ತವೋ ಅವುಗಳಲ್ಲಿನ ಯಾವ ಸ್ಫುರಣೆ (ಮಾತು)ಯೊಂದಿಗೆ ಮನಸ್ಸು ಅಂಟಿಕೊಳ್ಳುತ್ತದೋ ಯಾವ ಸ್ಫುರಣೆಯ ಕುರಿತು ಪ್ರೀತಿ – ಅಪ್ರೀತಿ ಉಂಟಾಗುತ್ತದೋ, ಅದು 'ಸಂಕಲ್ಪ'ವಾಗುತ್ತದೆ. ಆ ಸಂಕಲ್ಪದ ತ್ಯಾಗ ಮಾಡದಿದ್ದರೆ ಯಾವ ಮನುಷ್ಯನು ಯೋಗಿಯಾಗದೆ ಭೋಗಿಯಾಗುತ್ತಾನೆ.ಕಾರಣ-ಪರಮಾತ್ಮನೊಂದಿಗಿರುವ ಸಂಬಂಧದ ಹೆಸರು ಯೋಗವಾಗಿದೆ. ಒಳಗಿಂದೊಳಗೆ ಪದಾರ್ಥಗಳಲ್ಲಿ ಮಹತ್ವ, ಸೌಂದರ್ಯ ಹಾಗೂ ಸುಖಬುದ್ಧಿ ಇರುವವನು (ಒಳಗಿನಿಂದ ಪದಾರ್ಥಗಳೊಂದಿಗೆ ಸಂಬಂಧವನ್ನು ತಿಳಿಯುವುದರಿಂದ) ಭೋಗಿಯೇ ಆಗುವನು, ಯೋಗಿಯು ಖಂಡಿತವಾಗಿ ಆಗಲಾರನು. ಅವನಿಗೆ ಪದಾರ್ಥಗಳಲ್ಲಿ ಮಹತ್ವ, ಸೌಂದರ್ಯ, ಸುಖಬುದ್ಧಿ ಇರುವುದಿಲ್ಲವೋ ಆಗಲೇ ಅವನು ಯೋಗಿಯಾಗುತ್ತಾನೆ ಮತ್ತು ಅವನು ಸಂಪೂರ್ಣ ಸಂಕಲ್ಪಗಳ ತ್ಯಾಗಿಯಾಗುತ್ತಾನೆ ಹಾಗೂ ಅವನಿಗೆ ಭಗವಂತನೊಡನೆ ಇರುವ ತನ್ನ ನಿತ್ಯ ಸಂಬಂಧದ ಅನುಭವವಾಗುತ್ತದೆ.

ಇಲ್ಲಿ '**ಕಶ್ಚನ**' ಪದದಿಂದ ಹೀಗೂ ಅರ್ಥವಿಸಬಹುದು – ಸಂಕಲ್ಪಗಳ ತ್ಯಾಗಮಾಡದ ಯಾರೇ ಮನುಷ್ಯನು ಯೋಗೀ ಅರ್ಥಾತ್– ಕರ್ಮಯೋಗಿ, ಜ್ಞಾನಯೋಗೀ, ಭಕ್ತಿಯೋಗೀ, ಹಠಯೋಗೀ, ಲಯಯೋಗೀ ಇತ್ಯಾದಿ ಆಗಲಾರನು. ಕಾರಣ ಅವನ ಸಂಬಂಧ ಉತ್ಪತ್ತಿ ಮತ್ತು ವಿನಾಶವಾಗುವ ಜಡ ಪದಾರ್ಥಗಳೊಂದಿಗಿದೆ; ಆದ್ದರಿಂದ ಅವನು ಯೋಗೀ ಹೇಗಾಗಬಲ್ಲನು? ಅವನಾದರೋ ಭೋಗಿಯೇ ಆಗುವನು. ಇಂತಹ ಭೋಗಿಗಳು ಕೇವಲ ಮನುಷ್ಯರೇ ಆಗಿರದೆ ಪಶು-ಪಕ್ಷಿ ಮುಂತಾದವುಗಳೂ ಕೂಡ ಭೋಗಿಗಳಾಗಿದ್ದಾರೆ; ಏಕೆಂದರೆ ಅವುಗಳೂ ಕೂಡ ಸಂಕಲ್ಪಗಳ ತ್ಯಾಗ ಮಾಡಲಿಲ್ಲ.

ತಾತ್ಪರ್ಯ – ಅಸತ್ ಪದಾರ್ಥಗಳೊಂದಿಗೆ ಕಿಂಚಿನ್ಮಾತ್ರ ಸಂಬಂಧ ಇರುವವರೆಗೆ ಅರ್ಥಾತ್–ತಾನೇ ತನ್ನನ್ನು ಏನನ್ನಾದರು ತಿಳಿಯುತ್ತಿರುವವರೆಗೆ ಯಾರೇ ಮನುಷ್ಯನು ಯೋಗಿಯಾಗಲಾರನು, ಅರ್ಥಾತ್-ಅಸತ್ ಪದಾರ್ಥಗಳೊಂದಿಗೆ ಸಂಬಂಧವಿರಿಸಿಕೊಳ್ಳುತ್ತಾ ಅವನು ಎಷ್ಟೇ ಅಭ್ಯಾಸಮಾಡಿದರೂ, ಸಮಾಧಿಗಡರಿದರೂ, ಗಿರಿ-

ಕಂದರಗಳಲ್ಲಿ ವಾಸಿಸಿದರೂ ಗೀತೆಯ ಸಿದ್ಧಾಂತಕ್ಕನುಸಾರ ಅವನನ್ನು ಯೋಗಿಯೆಂದು ಹೇಳಲಾಗುವುದಿಲ್ಲ.

ಹಾಗಂತ ಸಂನ್ಯಾಸ ಮತ್ತು ಯೋಗದ ಸಾಧನೆ ಬೇರೆ-ಬೇರೆಯಾಗಿದೆ, ಆದರೆ ಸಂಕಲ್ಪಗಳ ತ್ಯಾಗದಲ್ಲಿ ಎರಡೂ ಸಾಧನೆಗಳು ಒಂದೇ ಆಗಿವೆ.

—●—

ಸಂಬಂಧ – ಹಿಂದಿನ ಶ್ಲೋಕದಲ್ಲಿ ಯಾವ ಯೋಗದ ಪ್ರಶಂಸೆ ಮಾಡಲಾಗಿದೆಯೋ, ಆ ಯೋಗದ ಪ್ರಾಪ್ತಿಯ ಉಪಾಯವನ್ನು ಮುಂದಿನ ಶ್ಲೋಕದಲ್ಲಿ ಹೇಳುತ್ತಾನೆ —

ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥ ೩॥

ಯೋಗಮ್ - ಯಾವ ಯೋಗ (ಸಮತೆ)ದಲ್ಲಿ, **ಆರುರುಕ್ಷೋಃ** - ಆರೂಢನಾಗಲು ಬಯಸುವ, **ಮುನೇಃ** - ಮನನ ಶೀಲಯೋಗಿಗೆ, **ಕರ್ಮ** - ಕರ್ತವ್ಯ-ಕರ್ಮಮಾಡುವುದು, **ಕಾರಣಮ್** - ಕಾರಣವೆಂದು, **ಉಚ್ಯತೇ** - ಹೇಳಲಾಗಿದೆ (ಮತ್ತು), **ತಸ್ಯ, ಏವ** - ಅದೇ, **ಯೋಗಾರೂಢಸ್ಯ** - ಯೋಗಾರೂಢ ಮನುಷ್ಯನಿಗೆ, **ಶಮಃ** - ಶಮ (ಶಾಂತಿ)ವು, **ಕಾರಣಮ್** - (ಪರಮಾತ್ಮ ಪ್ರಾಪ್ತಿಯಲ್ಲಿ) ಕಾರಣವೆಂದು, **ಉಚ್ಯತೇ** - ಹೇಳಲಾಗಿದೆ. ॥ ೩॥

ಯಾವ ಯೋಗ (ಸಮತೆ)ದಲ್ಲಿ ಅಡರಲು ಬಯಸುವ ಮನನಶೀಲ ಯೋಗಿಗೆ ಕರ್ತವ್ಯ-ಕರ್ಮಮಾಡುವುದು ಕಾರಣವೆಂದು ಹೇಳಲಾಗಿದೆ ಮತ್ತು ಅದೇ ಯೋಗಾರೂಢ ಮನುಷ್ಯನಿಗೆ ಶಮ (ಶಾಂತಿ)ವು ಪರಮಾತ್ಮ ಪ್ರಾಪ್ತಿಯಲ್ಲಿ ಕಾರಣವೆಂದು ಹೇಳಲಾಗಿದೆ. ॥ ೩॥

ವ್ಯಾಖ್ಯಾ - **'ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ'** – ಯಾರು ಯೋಗ (ಸಮತೆ)ದಲ್ಲಿ ಅಡರಲು ಬಯಸುತ್ತಾನೋ, ಅಂತಹ ಮನನಶೀಲ ಯೋಗಿಗೆ (ಯೋಗಾ ರೂಢನಾಗಲು) ನಿಷ್ಕಾಮಭಾವದಿಂದ ಕರ್ತವ್ಯ-ಕರ್ಮಮಾಡುವುದು ಕಾರಣವಾಗಿದೆ, ತಾತ್ಪರ್ಯ-ಮಾಡುವುದರ ವೇಗವನ್ನು ಇಲ್ಲವಾಗಿಸಲು ಪ್ರಾಪ್ತ ಕರ್ತವ್ಯ-ಕರ್ಮಮಾಡುವುದು ಕಾರಣವಾಗಿದೆ; ಏಕೆಂದರೆ ಯಾರೇ ವ್ಯಕ್ತಿಯು ಹುಟ್ಟಿದ್ದಾನಾದರೆ, ಬೆಳೆದು ಜೀವಂತನಾಗಿದ್ದರೆ ಅವನ ಜೀವನ ಬೇರೆಯವರ ಸಹಾಯಕತೆಯಿಲ್ಲದೆ ನಡೆಯಲಾರದು. ಪ್ರಕೃತಿ ಇಲ್ಲದಿದ್ದರೆ ಅವನ ಬಳಿ ಶರೀರ, ಇಂದ್ರಿಯಗಳು, ಮನ, ಬುದ್ಧಿ ಮತ್ತು ಅಂತಹವರೆಗಿನ ಯಾವುದೇ ವಸ್ತು ಇಲ್ಲ. ಅದಕ್ಕಾಗಿ ಅವನು ಈ ಪ್ರಾಕೃತ ವಸ್ತುಗಳನ್ನು ಪ್ರಪಂಚದ ಸೇವೆಯಲ್ಲಿ ತೊಡಗಿಸುವವರೆಗೆ ಅವನು ಯೋಗಾರೂಢನಾಗಲಾರನು, ಅರ್ಥಾತ್ ಸಮತೆಯಲ್ಲಿ ಸ್ಥಿತನಾಗಲಾರನು; ಏಕೆಂದರೆ, ಸಕಲ ಪ್ರಾಕೃತ ವಸ್ತುಗಳ ಏಕತೆ ಪ್ರಪಂಚದೊಂದಿಗೆ ಇದೆ, ತನ್ನ ಜೊತೆಗೆ ಏಕತೆ ಇಲ್ಲವೇ ಇಲ್ಲ.

ಪ್ರಾಕೃತ ಪದಾರ್ಥಗಳಲ್ಲಿ ಕಂಡುಬರುವ ತನ್ನತನದ ತಾತ್ಪರ್ಯ – ಅವನ್ನು ಬೇರೆಯವರ ಸೇವೆಯಲ್ಲಿ ತೊಡಗಿಸುವ ಜವಾಬ್ದಾರಿ ನಮ್ಮ ಮೇಲಿದೆ. ಆದ್ದರಿಂದ ಅವೆಲ್ಲವನ್ನು ಬೇರೆಯವರ ಸೇವೆಯಲ್ಲಿ ತೊಡಗಿಸುವ ಭಾವವಿರುವುದರಿಂದ ಸಮಸ್ತ ಕ್ರಿಯೆಗಳ ಪ್ರವಾಹವು ಪ್ರಪಂಚದ ಕಡೆಗೆ ಹೋಗುತ್ತದೆ ಮತ್ತು ಅವನು ಸ್ವತಃ ಯೋಗಾರೂಢನಾದಾನು. ಇದೇ ಮಾತನ್ನು ಭಗವಂತನು ಬೇರೆಡೆಯಲ್ಲಿ ಅನ್ವಯ-ವ್ಯತಿರೇಕ ಪದ್ಧತಿಯಿಂದ – ಯಜ್ಞಕ್ಕಾಗಿ ಅರ್ಥಾತ್ – ಬೇರೆಯವರ ಹಿತಕ್ಕಾಗಿ ಕರ್ಮಮಾಡುವವರ ಕರ್ಮಗಳು ಲೀನವಾಗುತ್ತವೆ ಅರ್ಥಾತ್-ಕಿಂಚಿನ್ಮಾತ್ರವೂ ಬಂಧನಕಾರಕವಾಗುವುದಿಲ್ಲ (೪/೨೩) ಮತ್ತು ಯಜ್ಞದಿಂದಲ್ಲದೆ ಅರ್ಥಾತ್-ತನಗಾಗಿ ಮಾಡಲಾದ ಕರ್ಮಗಳು ಬಂಧನಕಾರವಾಗುತ್ತವೆ (೩/೯) ಎಂದು ಹೇಳಿರುವನು.

ಯೋಗಾರೂಢನಾಗುವುದರಲ್ಲಿ ಕರ್ಮವು ಕಾರಣವೇಕೆ? ಏಕೆಂದರೆ, ಫಲದ ಪ್ರಾಪ್ತಿ-ಅಪ್ರಾಪ್ತಿಯಲ್ಲಿ ನಮಗೆ ಸಮತೆ ಇದೆಯೋ ಇಲ್ಲವೋ, ಅದರ ಪರಿಣಾಮ ನಮ್ಮ ಮೇಲೆ ಹೇಗಾಗುತ್ತದೆ? ಇದರ ಸುಳಿವು ನಾವು ಕರ್ಮಮಾಡಿದಾಗಲೇ ಸಿಕ್ಕೀತು. ಸಮತೆಯ ಪರಿಚಯ ಕರ್ಮಮಾಡುವುದರಿಂದಲೇ ಆದೀತು. ತಾತ್ಪರ್ಯ – ಕರ್ಮಮಾಡುತ್ತಿರುವಾಗ ನಮ್ಮಲ್ಲಿ ಸಮತೆ ಇದ್ದರೆ, ರಾಗ-ದ್ವೇಷಗಳು ಇರದಿದ್ದರೆ ಆಗಲಾರದೋ ಸರಿ; ಏಕೆಂದರೆ ಆ ಕರ್ಮವು 'ಯೋಗ'ಕ್ಕೆ ಕಾರಣವಾಯಿತು. ಆದರೆ ನಮ್ಮಲ್ಲಿ ಸಮತೆ ಇರದಿದ್ದರೆ, ರಾಗ- ದ್ವೇಷಗಳು ಉಂಟಾದರೆ, ನಮಗೆ ಜಡತೆಯ ಜೊತೆಗೆ ಸಂಬಂಧವಿರುವುದರಿಂದ ಆ ಕರ್ಮವು 'ಯೋಗ'ಕ್ಕೆ ಕಾರಣವಾಗಲಿಲ್ಲ.

'ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೆ' – ಅಸತ್ತಿನೊಂದಿಗೆ ಸಂಬಂಧವಿರಿಸುವುದರಿಂದಲೇ ಅಶಾಂತಿ ಉಂಟಾಗುತ್ತದೆ. ಇದರ ಕಾರಣ – ಅಸತ್ ಪದಾರ್ಥ (ಶರೀರಾದಿ) ಗಳೊಂದಿಗೆ ಸ್ವಯಂ ಇದರ ಸಂಬಂಧ ಒಂದು ಕ್ಷಣವೂ ಇರಲಾರದು ಮತ್ತು ಇರುವುದೂ ಇಲ್ಲ; ಏಕೆಂದರೆ ಸ್ವಯಂ ಸದಾ ಇರುವಂತಹುದು ಹಾಗೂ ಶರೀರಾದಿ ಸಮಸ್ತ ಪದಾರ್ಥಗಳು ಪ್ರತಿಕ್ಷಣ ಅಭಾವವಾಗುತ್ತಿವೆ. ಪ್ರತಿಕ್ಷಣ ಅಭಾವವಾಗುವಂತಹುಗಳೊಂದಿಗೆ ಈ ಸ್ವಯಂ ತನ್ನ

ಸಂಬಂಧ ಬೆಳೆಸಿಕೊಳ್ಳುತ್ತಾನೆ ಮತ್ತು ಅವುಗಳೊಂದಿಗೆ ತನ್ನ ಸಂಬಂಧವನ್ನು ಇಟ್ಟುಕೊಳ್ಳಲು ಬಯಸುತ್ತಾನೆ. ಆದರೆ ಅವುಗಳೊಂದಿಗೆ ಸಂಬಂಧ ಉಳಿಯದಿದ್ದರೆ, ಅವುಗಳು ಹೊರಟು ಹೋಗುವ ಭಯದಿಂದ ಮತ್ತು ಅವು ಹೊರಟು ಹೊದ್ದರಿಂದ ಅಶಾಂತಿಯು ಉಂಟಾಗುತ್ತದೆ. ಈ ಶರೀರಾದಿ ಅಸತ್ ಪದಾರ್ಥಗಳನ್ನು ಪ್ರಪಂಚದ ಸೇವೆಯಲ್ಲಿ ತೊಡಗಿಸಿ, ಅವುಗಳೊಂದಿಗೆ ಸಂಬಂಧವನ್ನು ಸರ್ವಥಾ ವಿಚ್ಛೇದಮಾಡಿಕೊಂಡಾಗ ಆಸಕ್ತಿಯ ತ್ಯಾಗದಿಂದ ಅವನಿಗೆ ತನ್ನಿಂದ-ತಾನೇ ಒಂದು ಶಾಂತಿ ದೊರೆಯುತ್ತದೆ. ಒಂದು ವೇಳೆ ಸಾಧಕನು ಆ ಶಾಂತಿಯಲ್ಲಿಯೂ ಸುಖ ಪಡೆಯಲು ತೊಡಗಿದರೆ ಅವನು ಬಂಧಿತನಾದಾನು. ಆ ಶಾಂತಿಯಲ್ಲಿ ರಾಗವಿರಿಸದಿದ್ದರೆ, ಅದರಿಂದ ಸುಖ ಪಡೆಯದಿದ್ದರೆ ಆ ಶಾಂತಿಯು ಪರಮಾತ್ಮ ತತ್ತ್ವದ ಪ್ರಾಪ್ತಿಯಲ್ಲಿ ಕಾರಣವಾಗುತ್ತದೆ.

ಪರಿಶಿಷ್ಟ ಭಾವ – *ಯೋಗಾರೂಢನಾಗುವ ಇಚ್ಛೆಯುಳ್ಳ ಸಾಧಕನಿಗೆ ಯೋಗಾರೂಢನಾಗುವುದರಲ್ಲಿ ನಿಷ್ಕಾಮಭಾವದಿಂದ ಕರ್ಮಮಾಡುವುದು ಕಾರಣವಾಗಿದೆ ಮತ್ತು ಅದರಿಂದ ಪ್ರಾಪ್ತವಾದ ಶಾಂತಿಯು ಪರಮಾತ್ಮ ಪ್ರಾಪ್ತಿಯಲ್ಲಿ ಕಾರಣವಾಗಿದೆ. ತಾತ್ಪರ್ಯ – ಪರಮಾತ್ಮ ಪ್ರಾಪ್ತಿಯಲ್ಲಿ ಕರ್ಮ ಕಾರಣವಿರದೆ ಕರ್ಮಗಳಿಂದ ಸಂಬಂಧ ವಿಚ್ಛೇದದಿಂದ ಉಂಟಾಗುವ ಶಾಂತಿಯೇ ಕಾರಣವಾಗಿದೆ. ಈ ಶಾಂತಿಯು ಸಾಧನೆಯಾಗಿದೆ, ಸಿದ್ಧಿಯಲ್ಲ.*

ವಿವೇಕಪೂರ್ವಕ ಕರ್ಮಮಾಡುವುದರಿಂದಲೇ ಕರ್ಮಗಳ ರಾಗ (ವೇಗ)ವು ಇಲ್ಲವಾಗುತ್ತದೆ; ಏಕೆಂದರೆ, ರಾಗವನ್ನು ಇಲ್ಲವಾಗಿ ಸುವ ಶಕ್ತಿಯು ಕರ್ಮಗಳಲ್ಲಿ ಇರದೆ ವಿವೇಕದಲ್ಲಿದೆ. ಯೋಗಾರೂಢ ನಾಗಲು ಬಯಸುವವನು ಎಲ್ಲ ಕರ್ಮಗಳನ್ನು ವಿವೇಕಪೂರ್ವಕವೇ ಮಾಡುತ್ತಾನೆ. ಸಾಧಕನು ಕಾಮನೆಯ ಪೂರ್ತಿಯಲ್ಲಿ ಪರತಂತ್ರತೆಯ ಮತ್ತು ಅಪೂರ್ತಿಯಲ್ಲಿ ಅಭಾವವನ್ನು ಅನುಭವಿಸಿದಾಗಲೇ ವಿವೇಕವು ವಿಕಸಿತವಾಗುತ್ತದೆ. ಪರತಂತ್ರತೆ ಮತ್ತು ಅಭಾವವನ್ನು ಯಾರೂ ಬಯಸುವುದಿಲ್ಲ, ಏಕೆಂದರೆ, ಕಾಮನೆ ಇರುವುದರಿಂದ ಇವೆರಡೂ ಬಿಟ್ಟುಹೋಗುವುದಿಲ್ಲ.

ಯೋಗಾರೂಢ ಸ್ಥಿತಿಯಲ್ಲಿಯೂ ರಾಜಿಯಾಗಬಾರದು, ಏಕೆಂದರೆ ರಾಜಿಯಾಗುವುದರಿಂದ ಸಾಧಕನು ಅಲ್ಲೇ ಸಿಲುಕಿಬಿಡುತ್ತಾನೆ, ಅದರಿಂದ ಪರಮಾತ್ಮನ ಪ್ರಾಪ್ತಿಯಾಗುವುದರಲ್ಲಿ ತುಂಬಾ ಸಮಯ ಬೇಕಾದೀತು (೧೪/೬) ಮೊದಲು ಬಾಲಕನಿಗೆ ಆಟದಲ್ಲಿ ರುಚಿ ಇರುತ್ತದೆ, ಆದರೆ ದೊಡ್ಡವನಾಗಿ ಆವನ ರುಚಿಯು ಹಣದಲ್ಲಿ ಉಂಟಾದಾಗ ಆಟದ ರುಚಿಯು ತನ್ನಿಂದ-ತಾನೇ ಇಲ್ಲವಾಗುತ್ತದೆ. ಹೀಗೆಯೇ ಪರಮಾತ್ಮ ಪ್ರಾಪ್ತಿಯ ಅನುಭವವಾಗುವವರೆಗೆ ಆ ಶಾಂತಿಯಲ್ಲಿ ರುಚಿ ಇರುತ್ತದೆ, ಅರ್ಥಾತ್-ಶಾಂತಿಯು ತುಂಬಾ ಒಳ್ಳೆಯದೆಂದು ತಿಳಿಯುತ್ತದೆ. ಆದರೆ ಆ ಶಾಂತಿಯನ್ನು ಉಪಭೋಗಿಸದೆ, ಅದರಿಂದ ನಿವೃತ್ತನಾದರೆ ಅದರ ರುಚಿಯು ತನ್ನಿಂದ- ತಾನೇ ಇಲ್ಲವಾಗುತ್ತದೆ ಮತ್ತು ತುಂಬಾ ಬೇಗನೇ ಪರಮಾತ್ಮನ ಪ್ರಾಪ್ತಿಯ ಅನುಭವವಾಗುತ್ತದೆ.

ಯೋಗಾರೂಢನಾಗುವುದರಲ್ಲಿ ಕರ್ಮಮಾಡುವುದು ಕಾರಣವಾಗಿದೆ ಅರ್ಥಾತ್ – ನಿಸ್ವಾರ್ಥಭಾವದಿಂದ ಬೇರೆಯವರ ಹಿತಕ್ಕಾಗಿ ಕರ್ಮಮಾಡುತ್ತಾ-ಮಾಡುತ್ತಾ ಎಲ್ಲದರ ವಿಯೋಗವಾದಾಗ ಸಾಧಕನು ಯೋಗಾರೂಢನಾಗುತ್ತಾನೆ. ಕರ್ಮಗಳ ಸಮಾಪ್ತಿಯಾಗುತ್ತದೆ ಮತ್ತು ಯೋಗನಿತ್ಯವಾಗಿ ಇರುತ್ತದೆ.

*ಕರ್ಮಿ (ಭೋಗಿ)ಯೂ ಕರ್ಮಮಾಡುತ್ತಾನೆ, ಕರ್ಮಯೋಗಿಯೂ ಕರ್ಮಮಾಡುತ್ತಾನೆ, ಆದರೆ ಅವರಿಬ್ಬರ ಉದ್ದೇಶದಲ್ಲಿ ಭಾರೀ ಅಂತರವಿರುತ್ತದೆ. ಒಬ್ಬನು ಆಸಕ್ತಿಯನ್ನು ಉಳಿಸಲಿಕ್ಕಾಗಿ ಅಥವಾ ಕಾಮನಾಪೂರ್ತಿಗಾಗಿ ಕರ್ಮಮಾಡುತ್ತಾನೆ ಮತ್ತೊಬ್ಬನು ಆಸಕ್ತಿಯನ್ನು ತ್ಯಾಗಮಾಡಲಿಕ್ಕಾಗಿ ಕರ್ಮಮಾಡುತ್ತಾನೆ. ಭೋಗಿಯು ತನಗಾಗಿ ಕರ್ಮಮಾಡುತ್ತಾನೆ, ಕರ್ಮಯೋಗಿಯು ಬೇರೆಯವರಿಗಾಗಿ ಕರ್ಮಮಾಡುತ್ತಾನೆ. ಆದ್ದರಿಂದ ಆಸಕ್ತಿಪೂರ್ವಕ ಕರ್ಮಮಾಡುವುದರಲ್ಲಿ ಸಮಾನವಾಗಿದ್ದರೂ ಕೂಡ ಆಸಕ್ತಿಯ ತ್ಯಾಗದ ಉದ್ದೇಶದಿಂದ ಬೇರೆಯವರಿಗಾಗಿ ಕರ್ಮಮಾಡುವವನೇ ಯೋಗೀ (ಯೋಗಾರೂಢ)ಯಾಗುತ್ತಾನೆ. ಕರ್ಮಮಾಡುವುದರಿಂದಲೇ ಯೋಗಿಯ ಪರಿಚಯವಾಗುತ್ತದೆ, ಇಲ್ಲದಿದ್ದರೆ **'ವೃದ್ಧಾ ನಾರೀ ಪರಿವ್ರತಾ'**.*

ಇಲ್ಲಿ ಹೇಳಲಾದ 'ಶಮ' (ಶಾಂತಿ)ವನ್ನೇ ನೀನೇ ಅಧ್ಯಾಯದ ೬ನೇ ಶ್ಲೋಕದಲ್ಲಿ ಪ್ರಸಾದ (ಅಂತಃಕರಣದ ಪ್ರಸನ್ನತೆ)ವೆಂದು ಹೇಳಲಾಗಿದೆ. ಈ ಶಾಂತಿಯಲ್ಲಿ ರಮಮಾಣನಾಗದಿದ್ದರೆ 'ನಿರ್ವಾಣ ಪರಮಾ ಶಾಂತಿ'ಯ ಪ್ರಾಪ್ತಿಯಾಗುತ್ತದೆ (೬/೧೫). ತ್ಯಾಗದಿಂದ ಶಾಂತಿ ಸಿಗುತ್ತದೆ (೧೨/೧೨). ಶಾಂತಿಯಲ್ಲಿ ರಮಮಾಣನಾಗದಿದ್ದರೆ ಅಖಂಡರಸ (ತತ್ತ್ವಜ್ಞಾನ) ದೊರೆಯುತ್ತದೆ ಮತ್ತು ಅಖಂಡರಸದಲ್ಲಿಯೂ ಸಂತೋಷಪಡದಿದ್ದರೆ ಅನಂತರಸ (ಪರಮಪ್ರೇಮ) ದೊರೆಯುತ್ತದೆ.

—●—

ಸಂಬಂಧ – ಯೋಗಾರೂಢನು ಯಾರಾಗುತ್ತಾನೆ? ಇದರ ಉತ್ತರ ಮುಂದಿನ ಶ್ಲೋಕದಲ್ಲಿ ಕೊಡುತ್ತಾನೆ —

ಯದಾ ಹಿ ನೇಂದ್ರಿಯಾರ್ಥೇಷು ನ ಕರ್ಮಸ್ವನುಷಜ್ಜತೇ ।
ಸರ್ವಸಂಕಲ್ಪಸಂನ್ಯಾಸೀ ಯೋಗಾರೂಢಸ್ತದೋಚ್ಯತೇ ॥ ೪॥

ಹಿ - ಕಾರಣ, **ಯದಾ** - ಯಾವ ಸಮಯ, **ಇಂದ್ರಿಯಾರ್ಥೇಷು, ನ, (ಅನುಷಜ್ಜತೆ)** - ಇಂದ್ರಿಯಗಳ ಭೋಗದಲ್ಲಿ (ಆಸಕ್ತನಾಗುವುದಿಲ್ಲವೋ) (ಹಾಗೂ), **ಕರ್ಮಸು, ನ, ಅನುಷಜ್ಜತೇ** - ಕರ್ಮಗಳಲ್ಲಿಯೂ ಆಸಕ್ತನಾಗುವುದಿಲ್ಲವೋ, **ತದಾ** - ಆ ಸಮಯದಲ್ಲಿ (ಆ), **ಸರ್ವಸಂಕಲ್ಪ ಸಂನ್ಯಾಸೀ** - ಸಂಪೂರ್ಣ ಸಂಕಲ್ಪಗಳ ತ್ಯಾಗೀ ಮನುಷ್ಯನನ್ನು, **ಯೋಗಾರೂಢಃ** - ಯೋಗರೂಢನೆಂದು, **ಉಚ್ಯತೇ** - ಹೇಳುತ್ತಾರೆ. ॥೪॥

ಯಾವ ಸಮಯದಲ್ಲಿ ಇಂದ್ರಿಯಗಳ ಭೋಗದಲ್ಲಿ ಆಸಕ್ತನಾಗುವುದಿಲ್ಲವೋ, ಹಾಗೂ ಕರ್ಮಗಳಲ್ಲಿಯೂ ಆಸಕ್ತನಾಗುವುದಿಲ್ಲವೋ ಆ ಸಮಯದಲ್ಲಿ ಆ ಸಂಪೂರ್ಣ ಸಂಕಲ್ಪಗಳ ತ್ಯಾಗೀ ಮನುಷ್ಯನನ್ನು ಯೋಗಾರೂಢನೆಂದು ಹೇಳುತ್ತಾರೆ. ॥೪॥

ವ್ಯಾಖ್ಯಾ - **'ಯದಾ ಹಿ ನೇಂದ್ರಿಯಾರ್ಥೇಷು (ಅನುಷಜ್ಜತೇ)'** – ಸಾಧಕನು ಇಂದ್ರಿಯಗಳ ಅರ್ಥಗಳಲ್ಲಿ ಅರ್ಥಾತ್ – ಪ್ರಾರಬ್ಧಕ್ಕನುಸಾರ ಪ್ರಾಪ್ತವಾಗುವ ಶಬ್ದ, ಸ್ಪರ್ಶ, ರೂಪ, ರಸ, ಗಂಧ – ಈ ಐದೂ ವಿಷಯಗಳಲ್ಲಿ; ಅನುಕೂಲ ಪದಾರ್ಥ, ಪರಿಸ್ಥಿತಿ, ಘಟನೆ, ವ್ಯಕ್ತಿ ಇತ್ಯಾದಿಗಳಲ್ಲಿ ಮತ್ತು ಶರೀರದ ಸುಖ, ಮಾನ, ದೊಡ್ಡಸ್ತಿಕೆ ಇತ್ಯಾದಿಗಳಲ್ಲಿ ಆಸಕ್ತನಾಗಬಾರದು, ಇವುಗಳನ್ನು ಭೋಗ ಬುದ್ಧಿಯಿಂದ ಭೋಗಿಸಬಾರದು, ಇವುಗಳೊಂದಿಗೆ ರಾಜಿಯಾಗದೆ ಇವೆಲ್ಲ ವಿಷಯ, ಪದಾರ್ಥ ಇತ್ಯಾದಿಗಳು ಬಂದಿವೆ ಮತ್ತು ಪ್ರತಿಕ್ಷಣ ಹೊರಟುಹೋಗುತ್ತಿವೆ ಎಂದು ಅನುಭವಿಸಬೇಕು. ಇವು ಬಂದು ಹೋಗುವವು ಮತು ಅನಿತ್ಯವಾಗಿವೆ, ಹಾಗಿರುವಾಗ ಇವುಗಳೊಂದಿಗೆ ರಾಜಿ ಏಕೆ ಆಗಬೇಕು? – ಹೀಗೆ ಅನುಭವಿಸುತ್ತಾ ಇವುಗಳಿಂದ ನಿರ್ಲಿಪ್ತನಾಗಿರಬೇಕು.

ಇಂದ್ರಿಯಗಳ ಭೋಗಗಳಲ್ಲಿ ಆಸಕ್ತನಾಗದಿರಲು – ಇಚ್ಛಾ ಪೂರ್ತಿಯ ಸುಖವನ್ನು ಪಡೆಯದಿರುವುದೇ ಸಾಧನೆಯಾಗಿದೆ. ಯಾವುದಾದರು ಬಯಸಿದ ಮಾತು ನಡೆದು ಹೋದರೆ, ಬಯಸಿದ ವಸ್ತು, ವ್ಯಕ್ತಿ, ಪರಿಸ್ಥಿತಿ, ಘಟನೆ ಮುಂತಾದವುಗಳು ದೊರಕಿದರೆ ಹಾಗೂ ಬಯಸದೆ ಇರುವುದು ಆಗದೆ ಹೋದರೆ, ಮನುಷ್ಯನು ಅದರಲ್ಲಿ ಸಂತೋಷ ಪಡುತ್ತಾನೆ ಹಾಗೂ ಅದರಿಂದ ಸುಖವನ್ನು ಪಡೆಯುತ್ತಾನೆ. ಸುಖ ಪಡೆಯುವುದರಿಂದ ಇಂದ್ರಿಯಗಳ ಭೋಗಗಳಲ್ಲಿ ಆಸಕ್ತಿ ಹೆಚ್ಚುತ್ತದೆ. ಆದ್ದರಿಂದ ಸಾಧಕನು ಅನುಕೂಲ ವಸ್ತು, ಪದಾರ್ಥ, ವ್ಯಕ್ತಿ ಮುಂತಾದವುಗಳು ಸಿಗಬೇಕೆಂದು ಇಚ್ಛಿಸ ಬಾರದು, ಇಚ್ಛಿಸದೆಯೇ ಅನುಕೂಲವಸ್ತು ಇತ್ಯಾದಿಗಳು ದೊರೆತರೂ ಅದರಲ್ಲಿ ತೃಪ್ತಿಪಡಬಾರದು. ಹೀಗಾಗುವುದ ರಿಂದ ಇಂದ್ರಿಯಗಳ ಭೋಗಗಳಲ್ಲಿ ಆಸಕ್ತಿ ಇರಲಾರದು.

ಇನ್ನೊಂದು ಮಾತು – ಮನುಷ್ಯನ ಬಳಿ ಅನುಕೂಲ ವಸ್ತುಗಳು ಇಲ್ಲದಿರುವಾಗ ಆ ವಸ್ತುಗಳ ಅಭಾವವನ್ನು ಅನುಭವಿಸುತ್ತಾನೆ ಹಾಗೂ ಅವುಗಳು ದೊರಕಿದಾಗ ಇವನು ಅವುಗಳ ಅಧೀನನಾಗುತ್ತಾನೆ. ಅಭಾವದ ಅನುಭವವಾ ದಾಗಲೂ ಪರತಂತ್ರತೆ ಇತ್ತು ಈಗ ಆ ವಸ್ತುಗಳು ಸಿಕ್ಕಿದರೂ ಕೂಡ 'ಎಲ್ಲಾದರು ಇವುಗಳ ವಿಯೋಗ ವಾದೀತೆ! ಈ ರೀತಿಯ ಪರತಂತ್ರತೆ ಉಂಟಾಗುತ್ತದೆ. ಆದ್ದರಿಂದ ವಸ್ತುಗಳು ದೊರಕುವುದು, ದೊರಕದೇ ಇರುವುದರಲ್ಲಿ ವ್ಯತ್ಯಾಸವಿಷ್ಟೇ – ವಸ್ತುವು ಸಿಗದಿರುವಾಗ ಅದರ ಪರತಂತ್ರತೆಯ ಅನುಭವ ವಾಗುತ್ತಿತ್ತು, ಆದರೆ ವಸ್ತುವು ಸಿಕ್ಕಿದಾಗ ಪರತಂತ್ರತೆಯ ಅನುಭವವಾಗದೆ ಅದರಲ್ಲಿ ಮನುಷ್ಯನಿಗೆ ಸ್ವತಂತ್ರತೆ ಕಂಡುಬರುತ್ತದೆ – ಇದರಿಂದ ಅವನು ಮೋಸಹೋಗುತ್ತಾನೆ. ಯಾರೋ ಯಾರೊಡನೆಯೋ ವಿಶ್ವಾಸ ಘಾತಮಾಡುವಂತೆ ಅನುಕೂಲ ಪರಿಸ್ಥಿತಿಯಲ್ಲಿ ರಾಜಿಯಾಗುವುದರಿಂದ ಮನುಷ್ಯನು ತನ್ನೊಂದಿಗೆ ವಿಶ್ವಾಸಘಾತ ಮಾಡಿಕೊಳ್ಳುತ್ತಾನೆ. ಕಾರಣ – ಮನುಷ್ಯನು ಅನುಕೂಲ ಪರಿಸ್ಥಿತಿಯ ಅಧೀನನಾಗಿ, ಅದನ್ನು ಭೋಗಿಸುತ್ತಾ-ಭೋಗಿಸುತ್ತಾ ಅವನ ಸ್ವಭಾವ ಕೆಟ್ಟುಹೋಗುತ್ತದೆ ಹಾಗೂ ಪದೇ-ಪದೇ ಸುಖ-ಭೋಗಿಸುವ ಕಾಮನೆ ಉಂಟಾಗುತ್ತದೆ. ಈ ಸುಖಭೋಗದ ಕಾಮನೆಯೇ ಇವನ ಜನ್ಮ- ಮರಣಗಳ ಕಾರಣವಾಗುತ್ತದೆ. ತಾತ್ಪರ್ಯ– ಅನುಕೂಲತೆಯನ್ನು ಬಯಸುವುದು, ಆಶಿಸುವುದು ಮತ್ತು ಅನುಕೂಲ ವಿಷಯಗಳಲ್ಲಿ ರಾಜಿಯಾಗುವುದು – ಇವೆಲ್ಲವೂ ಅನರ್ಥಗಳ ಮೂಲವಾಗಿದೆ. ಇದರಿಂದ ಯಾವುದೇ ಅನರ್ಥ, ಪಾಪ ಬಾಕಿ ಉಳಿಯುವುದಿಲ್ಲ, ಒಂದು ವೇಳೆ ಇವುಗಳನ್ನು ತ್ಯಜಿಸಿಬಿಟ್ಟರೆ ಮನುಷ್ಯನು ಯೋಗಾರೂಢ ನಾಗುತ್ತಾನೆ.

ಮೂರನೆಯ ಮಾತು – ನಿರ್ವಾಹಮಾತ್ರವಲ್ಲದೆ ನಮ್ಮ ಬಳಿ ಇರುವ ಅನುಕೂಲ ಭೋಗ್ಯ ವಸ್ತುಗಳು ನಮ್ಮವುಗಳಲ್ಲ, ಅವು ಯಾರದೋ ಆಗಿವೆ, ಇದು ನಮಗೆ ತಿಳಿಯದು; ಆದರೆ ಯಾರಾದರು ಅಭಾವಗ್ರಸ್ತ ಪ್ರಾಣಿ ಸಿಕ್ಕಿದರೆ ಆ ಸಾಮಗ್ರಿಗಳನ್ನು ಅವನದೆಂದೇ ತಿಳಿದು ಅವನಿಗೆ ಅರ್ಪಿಸಿಬಿಡ ಬೇಕು [ಇದು ನಿಮ್ಮದಾಗಿದೆ ಎಂದು ಅವನಿಗೆ ಹೇಳಬಾರದು] ಮತ್ತು ಅವನನ್ನು ನೋಡಿ ನಿರ್ವಾಹಕ್ಕಿಂತ ಹೆಚ್ಚಿನ ವಸ್ತುಗಳು ನನ್ನಲ್ಲಿದ್ದುವು, ಆ ಋಣದಿಂದ ನಾನು ಮುಕ್ತನಾದೆನು ಎಂದು ತಿಳಿಯಬೇಕು. ತಾತ್ಪರ್ಯ – ನಿರ್ವಾಹಕ್ಕಿಂತ ಹೆಚ್ಚಿನ ವಸ್ತುಗಳನ್ನು ತನ್ನವು ಮತ್ತು ತನಗಾಗಿ ಎಂದು ತಿಳಿಯದೆ ಇರುವುದರಿಂದ ಮನುಷ್ಯನಿಗೆ ಭೋಗಗಳಲ್ಲಿ ಆಸಕ್ತಿ ಉಂಟಾಗುವುದಿಲ್ಲ.

'ನ ಕರ್ಮಸ್ವನುಷಜ್ಜತೇ'* – ಇಂದ್ರಿಯಗಳ ಅರ್ಥದಲ್ಲಿ ಆಸಕ್ತಿಯು ಇರಬಾರದೋ ಹಾಗೆಯೇ ಕರ್ಮಗಳಲ್ಲಿಯೂ ಆಸಕ್ತಿ ಇರಬಾರದು ಅರ್ಥಾತ್ – ಕ್ರಿಯಮಾಣ ಕರ್ಮಗಳ ಪೂರ್ಣತೆ – ಅಪೂರ್ಣತೆಯಲ್ಲಿ ಮತ್ತು ಕರ್ಮಗಳ ಶಾಶ್ವಾಲಿಕ ಫಲದ ಪ್ರಾಪ್ತಿ- ಅಪ್ರಾಪ್ತಿಯಲ್ಲಿಯೂ ಆಸಕ್ತಿ ಇರಬಾರದು. ಕಾರಣ-ಕರ್ಮ ಮಾಡುವುದರಲ್ಲಿಯೂ ಒಂದು ರಾಗವಿರುತ್ತದೆ. ಕರ್ಮವು ಸರಿಯಾಗಿ ಆದರೆ ಅದರಿಂದ ಒಂದು ಸುಖವಿಗುತ್ತದೆ ಮತ್ತು ಕರ್ಮವು ಸರಿಯಾಗಿ ಆಗದಿದ್ದರೆ ಮನಸ್ಸಿನಲ್ಲಿ ಒಂದು ರೀತಿಯ ದುಃಖವಾಗುತ್ತದೆ. ಈ ಸುಖ-ದುಃಖಗಳಾಗುವುದು ಕರ್ಮದ ಆಸಕ್ತಿಯಾಗಿದೆ. ಆದ್ದರಿಂದ ಸಾಧಕನು ಕರ್ಮವಾದರೋ ವಿಧಿಪೂರ್ವಕ, ತತ್ಪರತೆಯಿಂದ ಮಾಡಬೇಕು ಆದರೆ ಅದರಲ್ಲಿ ಆಸಕ್ತನಾಗದೆ ಎಚ್ಚರಿಕೆಯಿಂದ ಇವುಗಳಾದರೋ ಬಂದು ಹೋಗುವವು ಹಾಗೂ ನಾನು ನಿತ್ಯ- ನಿರಂತರವಾಗಿರುವವನು ಆದ್ದರಿಂದ ಇವುಗಳು ಆಗುವುದು – ಆಗದಿರುವುದು, ಬಂದು-ಹೋಗುವುದರಲ್ಲಿ ಏನು ವ್ಯತ್ಯಾಸವಾಗುತ್ತದೆ? ಎಂದು ನಿರ್ಲಿಪ್ತನಾಗಿರಬೇಕು.

ಕರ್ಮಗಳಲ್ಲಿ ಆಸಕ್ತಿ ಇರುವ ಗುರುತು ಏನು? ಕ್ರಿಯಮಾಣ (ವರ್ತಮಾನದಲ್ಲಿ ಮಾಡಲಾದ) ಕರ್ಮಗಳು ಪೂರ್ತಿ–ಅಪೂರ್ತಿಯಲ್ಲಿ ಮತ್ತು ಅದರಿಂದ ದೊರೆಯುವ ಶಾಶ್ವಾಲಿಕ ಫಲದ ಪ್ರಾಪ್ತಿ- ಅಪ್ರಾಪ್ತಿಯಲ್ಲಿ ಅರ್ಥಾತ್ – ಸಿದ್ಧಿ-ಅಸಿದ್ಧಿಯಲ್ಲಿ ಮನುಷ್ಯನು ನಿರ್ವಿಕಾರನಾಗಿರದೆ ಅವನ ಅಂತಃಕರಣದಲ್ಲಿ ಹರ್ಷ-ಶೋಕಾದಿ ವಿಕಾರಗಳು ಆಗುತ್ತಿದ್ದರೆ, ಅವನಿಗೆ ಕರ್ಮಗಳಲ್ಲಿ ಮತ್ತು ಅವುಗಳ ಶಾಶ್ವಾಲಿಕ ಫಲದಲ್ಲಿ ಆಸಕ್ತಿ ಉಳಿದಿದೆ ಎಂದು ತಿಳಿಯಬೇಕು.

ಇಂದ್ರಿಯಗಳ ಅರ್ಥದಲ್ಲಿ ಮತ್ತು ಕರ್ಮಗಳಲ್ಲಿ ಆಸಕ್ತನಾಗದಿರುವ ತಾತ್ಪರ್ಯ – ಸ್ವಯಂ (ಸ್ವರೂಪ)ವು ಚಿನ್ಮಯ ಪರಮಾತ್ಮನ ಅಂಶವಾದ್ದರಿಂದ ನಿತ್ಯ ಅಪರಿವರ್ತನ ಶೀಲವಾಗಿದೆ ಹಾಗೂ ಪದಾರ್ಥ, ಕ್ರಿಯೆಗಳು ಪ್ರಕೃತಿಯ ಕಾರ್ಯವಾದ್ದರಿಂದ ನಿತ್ಯ- ನಿರಂತರ ಬದಲಾಗುತ್ತಾ ಇರುತ್ತವೆ. ಆದರೆ ಸ್ವಯಂ ಆ ಪರಿವರ್ತನ ಶೀಲ ಪದಾರ್ಥಗಳಲ್ಲಿ , ಕ್ರಿಯೆಗಳಲ್ಲಿ ಆಸಕ್ತನಾದಾಗ ಅವನು ಅವುಗಳ ಅಧೀನವಾಗುತ್ತಾನೆ ಹಾಗೂ ಪುನಃ ಪುನಃ ಜನ್ಮ-ಮರಣರೂಪೀ ಮಹಾನ್ ದುಃಖಗಳನ್ನು ಅನುಭವಿಸುತ್ತಾ ಇರುತ್ತಾನೆ. ಆ ಪದಾರ್ಥಗಳಿಂದ, ಕ್ರಿಯೆಗಳಿಂದ ಅರ್ಥಾತ್ – ಪ್ರಕೃತಿಯಿಂದ ಸರ್ವಥಾ ಮುಕ್ತನಾಗಲಿಕ್ಕಾಗಿ ಭಗವಂತನು ಎರಡು ವಿಭಾಗಗಳನ್ನು ಹೇಳಿರುವನು – ಒಂದು ಇಂದ್ರಿಯಗಳ ಅರ್ಥಗಳಲ್ಲಿ ಆಸಕ್ತನಾಗಬಾರದು ಅರ್ಥಾತ್ – ಪದಾರ್ಥಗಳಲ್ಲಿ ಆಸಕ್ತಿ ಇಡಬಾರದು, ಮತ್ತೊಂದು ಕರ್ಮಗಳಲ್ಲಿ (ಕ್ರಿಯೆಗಳಲ್ಲಿ) ಆಸಕ್ತಿ ಇಡಬಾರದು. ಹೀಗೆ ಮಾಡುವುದರಿಂದ ಮನುಷ್ಯನು ಯೋಗಾರೂಢನಾಗುತ್ತಾನೆ.

ಕ್ರಿಯೆಗಳಲ್ಲಿ ಪ್ರೀತಿಯು ಪ್ರಾಯಶಃ ಫಲದಿಂದ ಉಂಟಾಗುತ್ತದೆ ಮತ್ತು ಫಲವು ಇಂದ್ರಿಯಗಳ ಭೋಗವಾಗಿದೆ ಈ ಮಾತನ್ನು ತಿಳಿದುಕೊಳ್ಳ ಬೇಕು. ಆದ್ದರಿಂದ ಇಂದ್ರಿಯಗಳ ಭೋಗಗಳ ಆಸಕ್ತಿಯು ಸರ್ವಥಾ ಇಲ್ಲವಾದಾಗ ಕ್ರಿಯೆಗಳ ಆಸಕ್ತಿಯೂ ಇಲ್ಲವಾಗುತ್ತದೆ. ಆದರೂ ಕೂಡ ಭಗವಂತನು – ಕ್ರಿಯೆಗಳ ಆಸಕ್ತಿಯನ್ನು ಇಲ್ಲವಾಗಿಸುವ ಮಾತನ್ನು ಬೇರೆಯಾಗಿ ಏಕೆ ಹೇಳಿದನು? ಇದರ ಕಾರಣ – ಕ್ರಿಯೆಗಳಲ್ಲಿಯೂ ಒಂದು ಸ್ವತಂತ್ರ ಆಸಕ್ತಿ ಇರುತ್ತದೆ. ಫಲೇಚ್ಛೆಯು ಇಲ್ಲದಿರುವಾಗಲೂ ಮನುಷ್ಯನಲ್ಲಿ ಮಾಡುವುದರ ವೇಗ ಇರುತ್ತದೆ. ಈ ವೇಗವೇ ಕ್ರಿಯೆಗಳ ಆಸಕ್ತಿಯಾಗಿದೆ, ಅದರ ಕಾರಣ ಮನುಷ್ಯನಿಂದ ಏನೂ ಮಾಡದೆ ಇರಲಾಗುವುದಿಲ್ಲ, ಏನನ್ನಾದರೂ ಮಾಡುತ್ತಲೇ ಇರುತ್ತಾನೆ. ಈ ಆಸಕ್ತಿಯು – ಕೇವಲ ಬೇರೆಯವರಿಗಾಗಿ ಕರ್ಮ ಮಾಡುವುದರಿಂದ ಅಥವಾ ಭಗವಂತನಿಗಾಗಿ ಕರ್ಮ ಮಾಡುವುದರಿಂದ ಇಲ್ಲವಾಗುತ್ತದೆ. ಅದಕ್ಕಾಗಿ ಭಗವಂತನು ೧೨ನೇ ಅಧ್ಯಾಯದಲ್ಲಿ ಮೊದಲಿಗೆ ಅಭ್ಯಾಸಯೋಗ ಹೇಳಿದನು. ಆದರೆ ಒಳಗೆ ಮಾಡುವುದರ ವೇಗ ಇರುವುದರಿಂದ ಅಭ್ಯಾಸದಲ್ಲಿ ಮನಸ್ಸು ತೊಡಗುವುದಿಲ್ಲ, ಆದ್ದರಿಂದ ಮಾಡುವುದರ ವೇಗವನ್ನು ಇಲ್ಲವಾಗಿಸಲು ೧೦ನೇ ಶ್ಲೋಕದಲ್ಲಿ 'ಸಾಧಕನು ನನಗಾಗಿಯೇ ಕರ್ಮ ಮಾಡಲಿ' ಎಂದು ಹೇಳಿದನು (೧೨/೧೦) ತಾತ್ಪರ್ಯ – ಪಾರಮಾರ್ಥಿಕ ಅಭ್ಯಾಸಾದಿಗಳು ಮಾಡುವುದರಲ್ಲಿ ಯಾರ ಮನಸ್ಸು ತೊಡಗದಿದ್ದರೆ ಒಳಗೆ ಕರ್ಮಮಾಡುವ ವೇಗ (ಆಸಕ್ತಿ) ನೆಲೆಸಿದ್ದರೆ ಆ ಭಕ್ತಿಯೋಗದ ಸಾಧಕನು ಕೇವಲ ಭಗವಂತನಿಗಾಗಿಯೇ ಕರ್ಮಮಾಡಿದರೆ ಅವನ ಮಾಡುವುದರ ವೇಗ (ಆಸಕ್ತಿ) ಅಳಿದು ಹೋದೀತು.

ಕರ್ಮಮಾಡುವ ಆಸಕ್ತಿ ಇರುವಂತೆ ಕರ್ಮಮಾಡದೇ ಇರುವ ಆಸಕ್ತಿಯು ಇರುತ್ತದೆ. ಕರ್ಮಮಾಡದೆ ಇರುವ ಆಸಕ್ತಿಯೂ ಇರಬಾರದು; ಏಕೆಂದರೆ, ಕರ್ಮಮಾಡದೆ ಇರುವ ಆಸಕ್ತಿಯು ಆಲಸ್ಯ, ಪ್ರಮಾದಗಳನ್ನು ಉಂಟುಮಾಡುತ್ತದೆ, ಅದು ತಾಮಸೀ ವೃತ್ತಿಯಾಗಿದೆ ಮತ್ತು ಕರ್ಮಮಾಡುವುದರ ಆಸಕ್ತಿಯು ವ್ಯರ್ಥ ಚೇಷ್ಟೆಗಳಲ್ಲಿ ತೊಡಗಿಸುತ್ತದೆ, ಅದು ರಾಜಸೀ ವೃತ್ತಿಯಾಗಿದೆ.

ಅವನು ಎಷ್ಟು ದಿನಗಳಲ್ಲಿ, ಎಷ್ಟು ತಿಂಗಳಲ್ಲಿ ಅಥವಾ ಎಷ್ಟು

* ಇಲ್ಲಿ 'ಕರ್ಮಸು' ಪದವು ಬಹುವಚನವಿದೆ, ಅದರ ತಾತ್ಪರ್ಯ – ಆಸಕ್ತ ಪುರುಷನಲ್ಲಿ ಅನೇಕ ಕರ್ಮಗಳ ಮತ್ತು ಅವುಗಳ ಫಲಗಳ ಇಚ್ಛೆ ಇರುತ್ತದೆ. ಆದರೆ ೧೮ನೇ ಅಧ್ಯಾಯದಲ್ಲಿನೇ ಶ್ಲೋಕದಲ್ಲಿ 'ಕರ್ಮಣಿ' ಪದವು ಏಕವಚನದಲ್ಲಿದೆ, ಅದರ ತಾತ್ಪರ್ಯ – ಆಸಕ್ತಿರಹಿತ ಪುರುಷನಿಂದ ಕರ್ಮಗಳಾದರೋ ಅನೇಕವಾಗುತ್ತವೆ, ಆದರೆ ಅವುಗಳಲ್ಲಿ ಕರ್ತವ್ಯ-ಬುದ್ಧಿ ಒಂದೇ ಇರುತ್ತದೆ.

ವರ್ಷಗಳಲ್ಲಿ ಯೋಗಾರೂಢನಾದಾನು? ಇದರ ಕುರಿತು ಭಗವಂತನು **'ಯದಾ'** ಮತ್ತು **'ತದಾ'** ಪದವನ್ನು ಕೊಟ್ಟು – ಯಾವಾಗ ಮನುಷ್ಯನು ಇಂದ್ರಿಯಗಳ ಅರ್ಥಗಳಲ್ಲಿ ಮತ್ತು ಕ್ರಿಯೆಗಳಲ್ಲಿ ಸರ್ವಥಾ ಅಸಕ್ತಿ ರಹಿತನಾಗುತ್ತಾನೋ ಆಗಲೇ ಅವನು ಯೋಗಾರೂಢನಾಗುತ್ತಾನೆ. ಯಾರಾದರು 'ನಾನು ಇಂದಿನಿಂದ ಎಂದೂ ಇಚ್ಛಾಪೂರ್ತಿಯ ಸುಖವನ್ನು ಪಡೆಯುವುದಿಲ್ಲ' ಎಂದು ನಿಶ್ಚಯಿಸಿಕೊಂಡು, ತನ್ನ ನಿಶ್ಚಯದ (ಪ್ರತಿಜ್ಞಾ) ಕುರಿತು ದೃಢನಾಗಿದ್ದರೆ ಇಂದೇ ಯೋಗಾರೂಢನಾಗಬಲ್ಲನು. ಈ ಮಾತನ್ನು ಹೇಳಲಿಕ್ಕಾಗಿಯೇ **'ಯದಾ'** ಮತ್ತು **'ತದಾ'** ಪದಗಳೊಂದಿಗೆ **'ಹಿ'** ಪದವನ್ನು ಕೊಟ್ಟಿದೆ.

ಪದಾರ್ಥಗಳಲ್ಲಿ ಮತ್ತು ಕ್ರಿಯೆಗಳಲ್ಲಿ ಆಸಕ್ತಿಯನ್ನಿಡುವುದರಲ್ಲಿ, ಇಡದಿರುವುದರಲ್ಲಿ ಸಕಲ ಮನುಷ್ಯರಿಗೆ ಭಗವಂತನು ಸ್ವಾತಂತ್ರ್ಯವನ್ನು ಕೊಟ್ಟ, ನೀನು ಸಾಕ್ಷಾತ್ ನನ್ನ ಅಂಶನಾಗಿರುವೆ ಮತ್ತು ಈ ಪದಾರ್ಥ, ಕ್ರಿಯೆಗಳು ಪ್ರಕೃತಿಜನ್ಯವಾಗಿವೆ. ಇವುಗಳಲ್ಲಿ ಪದಾರ್ಥಗಳೂ ಉತ್ಪನ್ನ ಮತ್ತು ನಷ್ಟವಾಗುವಂತಹುಗಳು ಹಾಗೂ ಕ್ರಿಯೆಗಳಿಗೂ ಪ್ರಾರಂಭ – ಅಂತ್ಯವಿರುತ್ತದೆ. ಆದ್ದರಿಂದ ಇವುಗಳು ನಿತ್ಯವಾಗಿ ಇರುವಂತಹುಗಳಲ್ಲ ನೀನು ನಿತ್ಯ ಇರುವವನಾಗಿರುವೆ. ನೀನು ನಿತ್ಯನಾಗಿದ್ದರೂ ಅನಿತ್ಯದಲ್ಲಿ ಸಿಕ್ಕಿಕೊಳ್ಳುವೆ, ಅನಿತ್ಯದಲ್ಲಿ ಆಸಕ್ತಿ, ಪ್ರೀತಿ ಯನ್ನಿಡುವೆ. ಇದರಿಂದ ನಿನ್ನ ಕೈಗೆ ಏನೂ ಹತ್ತುವುದಿಲ್ಲ, ಕೇವಲ ದುಃಖವೇ ದುಃಖ ಪಡೆಯುತ್ತಾ ಇರುವೆ ಆದ್ದರಿಂದ ನೀನು ಇಂದಿನಿಂದಲೇ – 'ನಾನು ಪದಾರ್ಥ ಮತ್ತು ಕ್ರಿಯೆಗಳಲ್ಲಿ ಸುಖ ಪಡೆಯುವುದಿಲ್ಲ' ಈ ವಿಚಾರ ಮಾಡಿದರೆ ನೀನು ಇಂದೇ ಯೋಗಾರೂಢ ಆಗುವಿ; ಏಕೆಂದರೆ, ಯೋಗ ಅರ್ಥಾತ್ ಸಮತೆ ನಿನ್ನ ಸ್ವಂತದ್ದಾಗಿದೆ. ಸಮತೆಯು ನಿನ್ನ ಸ್ವರೂಪವಾಗಿದೆ ಹಾಗೂ ಸ್ವರೂಪ ಸತ್ ಆಗಿದೆ. ಸತ್ತಿನ ಅಭಾವ ಎಂದೂ ಆಗುವುದಿಲ್ಲ, ಅಸತ್ತಿನ ಭಾವ ಎಂದೂ ಇರುವುದಿಲ್ಲ. ಇಂತಹ ಸತ್-ಸ್ವರೂಪನಾದ ನೀನು ಅಸತ್ ಪದಾರ್ಥಗಳಲ್ಲಿ ಮತ್ತು ಕ್ರಿಯೆಗಳಲ್ಲಿ ಆಸಕ್ತನಾಗದಿದ್ದರೆ ನಿನಗೆ ಸ್ವತಃ ಸಿದ್ಧ ಯೋಗಾರೂಢ ಅವಸ್ಥೆಯ ಅನುಭವ ಉಂಟಾದೀತು ಎಂದು ಹೇಳಿರುವನು.

'ಸರ್ವಸಂಕಲ್ಪ ಸಂನ್ಯಾಸೀ' – ನಮ್ಮ ಮನಸ್ಸಿನಲ್ಲಿ ಎಷ್ಟು ಸ್ಫುರಣೆಗಳು ಆಗುತ್ತವೋ, ಆ ಸ್ಫುರಣೆಗಳಲ್ಲಿನ ಯಾವ ಸ್ಫುರಣೆಯಲ್ಲಿ ಸುಖ ವಾಗುತ್ತದೋ ಮತ್ತು ಅದರಿಂದ 'ನಮಗೆ ಇಂತಹುದು ಸಿಗಲೀ, ನಾವು ಇಷ್ಟು ಸುಖಿಗಳಾಗಬಹುದು' ಈ ರೀತಿಯ ಸ್ಫುರಣೆಗಳಲ್ಲಿ ಲಿಪ್ತತೆ ಉಂಟಾದ್ದರಿಂದ ಆ ಸ್ಫುರಣೆಯ ಹೆಸರು 'ಸಂಕಲ್ಪ' ವೆಂದಾಗುತ್ತದೆ. ಆ ಸಂಕಲ್ಪವೂ ಕೂಡ ಅನುಕೂಲತೆ – ಪ್ರತಿಕೂಲತೆಯ ಕಾರಣ ಸುಖದಾಯಕ, ದುಃಖದಾಯಕವಾಗುತ್ತದೆ. ಸುಖದಾಯಕ ಸಂಕಲ್ಪವು ಲಿಪ್ತತೆ (ರಾಗ-ದ್ವೇಷ)ಯನ್ನುಂಟುಮಾಡುತ್ತದೋ, ಹಾಗೆಯೇ ದುಃಖದಾಯಕ ಸಂಕಲ್ಪವೂ ಲಿಪ್ತತೆಯನ್ನುಂಟುಮಾಡುತ್ತದೆ. ಆದ್ದರಿಂದ ಎರಡೂ ಸಂಕಲ್ಪಗಳು ಬಂಧನಲ್ಲಿ ಕೆಡಹುವಂತಹುದು. ಅವುಗಳಿಂದ ಹಾನಿಯಲ್ಲದೆ ಯಾವುದೇ ಲಾಭವಿಲ್ಲ; ಏಕೆಂದರೆ, ಸಂಕಲ್ಪವು ನಮ್ಮ ಸ್ವರೂಪದ ಬೋಧವಾಗಿ ಸುವುದಿಲ್ಲ, ಬೇರೆಯವರ ಸೇವೆಮಾಡಲು ಬಿಡುವುದಿಲ್ಲ, ಭಗವಂತನದಲ್ಲಿ ಪ್ರೇಮ ಉಂಟಾಗಲು ಬಿಡುವುದಿಲ್ಲ, ಭಗವಂತನಲ್ಲಿ ಮನಸ್ಸನ್ನು ತೊಡಗಿಸಲು ಬಿಡುವುದಿಲ್ಲ, ತಮ್ಮ ಹತ್ತಿರದ ಕುಟುಂಬದವರ ಅನುಕೂಲವಾಗಲು ಬಿಡುವುದಿಲ್ಲ. ತಾತ್ಪರ್ಯ – ನಾವು ಸಂಕಲ್ಪವಿಟ್ಟುಕೊಳ್ಳುವುದರಿಂದ ನಮ್ಮ ಹಿತವಾಗುವುದಿಲ್ಲ, ಪ್ರಪಂಚದ ಹಿತವಾಗುವುದಿಲ್ಲ, ಕುಟುಂಬದವರ ಸೇವೆ ಯಾಗುವುದಿಲ್ಲ, ಭಗವಂತನ ಪ್ರಾಪ್ತಿಯಾಗುವುದಿಲ್ಲ ಮತ್ತು ನಮ್ಮ ಸ್ವರೂಪದ ಬೋಧವೂ ಆಗುವುದಿಲ್ಲ, ಇದರಿಂದ ಕೇವಲ ಹಾನಿಯೇ ಆಗುತ್ತದೆ. ಹೀಗೆ ತಿಳಿದುಕೊಂಡು ಸಾಧಕನು ನಿಜವಾಗಿ ಇರುವಂತಹ ಸಮಸ್ತ ಸಂಕಲ್ಪಗಳಿಂದ ರಹಿತನಾಗಬೇಕು.

ಮನಸ್ಸಿನಲ್ಲಿ ಉಂಟಾಗುವ ಸ್ಫುರಣೆಯು ಸಂಕಲ್ಪವಾಗಿ ಮಾರ್ಪಡದಿದ್ದರೆ ಅದು ತನ್ನಿಂದ-ತಾನೇ ನಾಶವಾಗುತ್ತದೆ. ಕೇವಲ ಸ್ಫುರಣೆ ಆಗುವುದರಿಂದ ಮನುಷ್ಯನಿಗೆ ಅಪ್ಪು ಹಾನಿಯಾಗುವುದಿಲ್ಲ ಹಾಗೂ ಪತನವೂ ಆಗುವುದಿಲ್ಲ; ಆದರೆ ಸಮಯವಂತೂ ನಷ್ಟವಾಗುತ್ತದೆ. ಆದ್ದರಿಂದ ಆ ಸ್ಫುರಣೆಯು ತ್ಯಾಜ್ಯವಾಗಿದೆ. ಆದರೆ ಸಂಕಲ್ಪಗಳ ತ್ಯಾಗವಾದರೋ ಸಾಧಕನು ಅವಶ್ಯವಾಗಿ ಮಾಡಬೇಕು. ಕಾರಣ-ಸಂಕಲ್ಪಗಳ ತ್ಯಾಗ ಮಾಡದೆ ಅರ್ಥಾತ್ – ತನ್ನ ಮನಸ್ಸಿನಲ್ಲಿರುವುದನ್ನು ಬಿಡದೆ ಸಾಧಕನು ಯೋಗಾರೂಢನಾಗುವುದಿಲ್ಲ ಮತ್ತು ಯೋಗಾರೂಢನಾಗದೆ ಪರಮಾತ್ಮನ ಪ್ರಾಪ್ತಿಯಾಗುವುದಿಲ್ಲ, ಕೃತ್ಯಕೃತ್ಯನಾಗುವುದಿಲ್ಲ, ಮನುಷ್ಯ ಜನ್ಮ ಸಾರ್ಥಕವಾಗುವುದಿಲ್ಲ, ಭಗವಂತನಲ್ಲಿ ಪ್ರೇಮ ಉಂಟಾಗುವುದಿಲ್ಲ, ದುಃಖಗಳು ಸರ್ವಥಾ ಅಂತ್ಯವಾಗುವುದಿಲ್ಲ.

ಎರಡನೇ ಶ್ಲೋಕದಲ್ಲಿ ಭಗವಂತನು ವ್ಯತಿರೇಕ ರೀತಿಯಿಂದ-ಸಂಕಲ್ಪಗಳ ತ್ಯಾಗಮಾಡದೆ ಯಾರೇ ಮನುಷ್ಯನೂ ಕೂಡ ಯೋಗಿ ಯಾಗುವುದಿಲ್ಲವೆಂದು ಹೇಳಿರುವನು ಮತ್ತು ಇಲ್ಲಿ ಅನ್ವಯ ರೀತಿಯಿಂದ ಸಂಕಲ್ಪಗಳ ತ್ಯಾಗಮಾಡುವುದರಿಂದ ಮನುಷ್ಯನು ಯೋಗಾರೂಢ ನಾಗುತ್ತಾನೆ ಎಂದು ಹೇಳಿರುವನು. ಇದರ ತಾತ್ಪರ್ಯ – ಸಾಧಕನು ಯಾವುದೇ ಪ್ರಕಾರದ ಸಂಕಲ್ಪವನ್ನು ಇಟ್ಟುಕೊಳ್ಳಬಾರದು.

ಸಂಕಲ್ಪಗಳ ತ್ಯಾಗದ ಉಪಾಯ – (೧) ಭಗವಂತನು ನಮಗಾಗಿ ತಾನಾಗಿಯೇ ಮನುಷ್ಯ ಜನ್ಮವನ್ನು ಕೊಟ್ಟಿರುವನು; ನೀನು ಇದರಿಂದ ತನ್ನ ಉದ್ಧಾರಮಾಡಿಕೋ ಎಂದು.

ಅದ್ದರಿಂದ ನಾವು ಮನುಷ್ಯಜನ್ಮದ ಅಮೂಲ್ಯ, ಮುಕ್ತಿದಾಯಕ ಸಮಯವನ್ನು ನಿರರ್ಥಕ ಸಂಕಲ್ಪಗಳಲ್ಲಿ ಹಾಳುಮಾಡಬಾರದು ಹೀಗೆ ವಿಚಾರಮಾಡಿ ಸಂಕಲ್ಪಗಳನ್ನು ದೂರವಾಗಿಸಬೇಕು.

(೨) ಕರ್ಮಯೋಗದ ಸಾಧಕನಿಗೆ ತನ್ನ ಕರ್ತವ್ಯವನ್ನು ಪಾಲಿಸಬೇಕಾಗಿದೆ. ಕರ್ತವ್ಯದ ಸಂಬಂಧ ವರ್ತಮಾನದೊಂದಿಗಿದೆ, ಭೂತ-ಭವಿಷ್ಯತ್ ಕಾಲದೊಂದಿಗಿಲ್ಲ. ಆದರೆ ಸಂಕಲ್ಪ-ವಿಕಲ್ಪಗಳು ಭೂತ ಮತ್ತು ಭವಿಷ್ಯತ್ ಕಾಲದ್ದಾಗಿವೆ; ವರ್ತಮಾನದ್ದಲ್ಲ. ಆದ್ದರಿಂದ ಸಾಧಕನು ತನ್ನ ಕರ್ತವ್ಯದ ತ್ಯಾಗಗೈದು, ಭೂತ-ಭವಿಷ್ಯತ್ ಕಾಲದ ಸಂಕಲ್ಪ-ವಿಕಲ್ಪಗಳಲ್ಲಿ ಸಿಲುಕದೆ ಆಸಕ್ತಿರಹಿತನಾಗಿ ಕರ್ತವ್ಯ- ಕರ್ಮಗಳನ್ನು ಮಾಡಲು ತೊಡಗಬೇಕು (೩/೧೯).

(೩) ಜ್ಞಾನಯೋಗದ ಸಾಧಕನು ನಿಜವಾಗಿ ಸತ್ತೆಯು ಒಂದೇ ಪರಮಾತ್ಮತತ್ತ್ವದ್ದಾಗಿದೆ ಈ ಮಾತಿನಲ್ಲಿ ದೃಢವಾಗಿರ ಬೇಕು. ಸಂಕಲ್ಪಗಳ, ಪ್ರಪಂಚದ ಸತ್ತೆಯು ಇಲ್ಲವೇ ಇಲ್ಲ, ಅದಕ್ಕಾಗಿ ಯಾವುದಾದರು ಸಂಕಲ್ಪ ಬಂದರೆ ಅವನು ಅದರಿಂದ ಉದಾಸೀನನಾಗಿರಬೇಕು; ಅದನ್ನು ಪ್ರೀತಿಸ ಬಾರದು, ದ್ವೇಷಿಸಲೂಬಾರದು.

(೪) ಭಕ್ತಿಯೋಗದ ಸಾಧಕನು – 'ಮನಸ್ಸಿನಲ್ಲಿ ಬರುವ ಸಂಕಲ್ಪಗಳು ಪ್ರಾಯಶಃ ಭೂತಕಾಲದ್ದು ಬರುತ್ತವೆ, ಅವು ಈಗ ಇಲ್ಲ ಅಥವಾ ಭವಿಷ್ಯತ್ ಕಾಲದ್ದು ಬರುತ್ತವೆ, ಅವುಗಳು ಮುಂದೆ ಆಗುವವು, ಅರ್ಥಾತ್ ಅವೂ ಈಗ ಇಲ್ಲ ಎಂಬ ವಿಚಾರಮಾಡ ಬೇಕು. ಆದ್ದರಿಂದ ಈಗ ಇಲ್ಲದಿರುವುದರ ಚಿಂತನೆಯಲ್ಲಿ ಸಮಯವನ್ನು ಹಾಳುಮಾಡುವುದು, ಮತ್ತು ಈಗ ಇರುವ, ತನ್ನಲ್ಲೇ ಇರುವ ತನ್ನವನೇ ಆಗಿರುವ ಭಗವಂತನ ಚಿಂತನೆ ಮಾಡದಿರುವುದು ಎಷ್ಟು ದೊಡ್ಡ ತಪ್ಪು.' ಹೀಗೆ ವಿಚಾರ ಮಾಡಿ ಸಂಕಲ್ಪಗಳನ್ನು ದೂರವಾಗಿಸಬೇಕು.

'ಯೋಗಾರೂಢಸ್ತದೋಚ್ಯತೇ' – ಸಿದ್ಧಿ-ಅಸಿದ್ಧಿಯಲ್ಲಿ ಸಮನಾಗಿರುವುದೇ 'ಯೋಗ'ವಾಗಿದೆ (೨/೪೮). ಈ ಯೋಗ ಅರ್ಥಾತ್ – ಸಮತೆಯಲ್ಲಿ ಆರೂಢನಾಗುವುದು, ಸ್ಥಿತನಾಗುವುದೇ ಯೋಗಾರೂಢನಾಗುವುದಾಗಿದೆ. ಯೋಗಾ ರೂಢನಿಗೇ ಪರಮಾತ್ಮನ ಪ್ರಾಪ್ತಿಯಾಗುತ್ತದೆ.

ಎರಡನೇ ಶ್ಲೋಕದಲ್ಲಿ ಭಗವಂತನು – 'ಸಂಕಲ್ಪಗಳ ತ್ಯಾಗಮಾಡದೆ ಯಾವುದೇ ಯೋಗವು ಸಿದ್ಧವಾಗುವುದಿಲ್ಲ' ಎಂದು ಹೇಳಿದನು ಮತ್ತು ಇಲ್ಲಿ 'ಸಂಕಲ್ಪಗಳನ್ನು ಸರ್ವಥಾ ತ್ಯಾಗಮಾಡಿ ಬಿಡುವುದರಿಂದ ಅವನು ಯೋಗಾರೂಢ ನಾಗುತ್ತಾನೆ' ಎಂದು ಹೇಳಿರುವನು. ಇದರಿಂದ – ಎಲ್ಲ ರೀತಿಯ ಯೋಗಗಳಿಂದ ಯೋಗಾರೂಢ ಅವ್ಯೆ ಪ್ರಾಪ್ತವಾಗುತ್ತದೆ ಎಂಬುದು ಸಿದ್ಧವಾಗುತ್ತದೆ. ಇಲ್ಲಿ ಕರ್ಮ ಯೋಗದ ಪ್ರಕರಣವಿದ್ದರೂ ಸಂಕಲ್ಪಗಳನ್ನು ಸರ್ವಥಾ ತ್ಯಾಗಮಾಡುವುದರಿಂದ ಯೋಗಾರೂಢ ಅವಸ್ಥೆಯಲ್ಲಿ ಎಲ್ಲವೂ ಒಂದಾಗುತ್ತವೆ (೫/೫).

ಪರಿಶಿಷ್ಟ ಭಾವ – *ಯೋಗಾರೂಢನ ಪರಿಚಯಕ್ಕಾಗಿ ಇಲ್ಲಿ ಮೂರು ಮಾತುಗಳನ್ನು ಹೇಳಲಾಗಿವೆ – ಪದಾರ್ಥಗಳಲ್ಲಿ (ವಸ್ತು ಮತ್ತು ವ್ಯಕ್ತಿಗಳಲ್ಲಿ) ಆಸಕ್ತಿ ಇಲ್ಲದಿರುವುದು, ಕ್ರಿಯೆಗಳಲ್ಲಿ ಆಸಕ್ತಿ ಇಲ್ಲದಿರುವುದು, ಸಮಸ್ತ ಸಂಕಲ್ಪಗಳ ಅರ್ಥಾತ್–ಮನಸ್ಸು ಬಯಸಿದ್ದನ್ನು ತ್ಯಾಗಮಾಡುವುದು. ತಾತ್ಪರ್ಯ– ಇಂದ್ರಿಯಗಳ ಭೋಗಗಳಲ್ಲಿ ಮತ್ತು ಕ್ರಿಯೆಗಳಲ್ಲಿ ಆಸಕ್ತಿ ಇಲ್ಲದಿರಲಿ ಹಾಗೂ ಅಂತರಂಗದಲ್ಲಿ– ಹೀಗಾಗಬೇಕು, ಹೀಗಾಗಬಾರದು ಎಂಬ ಆಗ್ರಹವೂ ಇರಬಾರದು. ಯಾರಿಗೆ ಪದಾರ್ಥಗಳಲ್ಲಿ ಆಸಕ್ತಿಯಿಲ್ಲವೋ, ಪದಾರ್ಥಗಳ ಅಭಾವದಲ್ಲಿ ಆಸಕ್ತಿಯಿಲ್ಲವೋ, ಕ್ರಿಯೆ ಗಳಲ್ಲಿ ಆಸಕ್ತಿಯಿಲ್ಲವೋ ಹಾಗೂ ಕ್ರಿಯೆಗಳ ಅಭಾವದಲ್ಲಿ ಆಸಕ್ತಿ ಇಲ್ಲವೋ ಮತ್ತು ಯಾವುದೇ ಸಂಕಲ್ಪವಿಲ್ಲವೋ ಅವನು 'ಯೋಗಾ ರೂಢ'ನಾಗಿದ್ದಾನೆ. ತಾತ್ಪರ್ಯ – ಪದಾರ್ಥಗಳು ಸಿಗಲೀ, ಸಿಗದಿರಲೀ, ವ್ಯಕ್ತಿಗಳು ಸಿಗಲೀ, ಸಿಗದಿರಲೀ, ಕ್ರಿಯೆಗಳು ಆಗಲೀ ಆಗದಿರಲೀ ಇವುಗಳ ಯಾವುದೇ ಆಗ್ರಹವಿರಬಾರದು (೩/೧೪).*

'ಸದಾಕಾಲ ನಮ್ಮ ಬಳಿ ಇರುವುದು ಮತ್ತು ನಾವು ಸದಾಕಾಲ ಅದರ ಬಳಿಗೆ ಇರುವಂತಹ ವಸ್ತು ಯಾವುದು? ಸದಾ ನಮ್ಮೊಂದಿಗೆ ಇರುವವ ನಾವು ಅವನೊಂದಿಗೆ ಇರುವಂತಹ ವ್ಯಕ್ತಿಯಾರಾಗಿದ್ದಾರೆ? ನಾವು ಸದಾಕಾಲ ಮಾಡುತ್ತಾ ಇರಬಹುದು ಹಾಗೂ ನಮ್ಮಿಂದ ಸದಾಕಾಲ ಆಗುತ್ತಾ ಇರುವಂತಹ ಕ್ರಿಯೆ ಯಾವುದಿದೆ?' ಎಂದು ಸಾಧಕನು ವಿಚಾರಮಾಡಬೇಕು. ಸದಾಕಾಲವೂ ನಮ್ಮ ಜೊತೆ ಯಾವುದೇ ವಸ್ತು ಇರಲಾರದು, ವ್ಯಕ್ತಿ ಇರಲಾರನು ಮತ್ತು ಕ್ರಿಯೆಯೂ ಆಗಲಾರದು. ಒಂದು ದಿನ ನಾವು ವಸ್ತು ವ್ಯಕ್ತಿ ಕ್ರಿಯೆಗಳಿಂದ ಬೇರೆಯಾಗಬೇಕಾದೀತು. ಒಂದು ವೇಳೆ ನಾವು ವರ್ತಮಾನದಲ್ಲೇ ಅವುಗಳ ವಿಯೋಗವನ್ನು ಸ್ವೀಕರಿಸಿದರೆ, ಅವುಗಳಿಂದ ಅಸಂಗರಾದರೆ ಜೀವನ್ಮುಕ್ತಿಯು ಸ್ವತಃ ಸಿದ್ಧವಾಗಿದೆ. ತಾತ್ಪರ್ಯ – ವಸ್ತು, ವ್ಯಕ್ತಿ, ಕ್ರಿಯೆ ಇವುಗಳ ಸಂಯೋಗವಾದರೋ ಅನಿತ್ಯವಾಗಿದೆ, ಆದರೆ ವಿಯೋಗ ನಿತ್ಯವಾಗಿದೆ. ನಿತ್ಯವನ್ನು ಸ್ವೀಕರಿಸುವುದರಿಂದ ನಿತ್ಯ ತತ್ತ್ವದ ಪ್ರಾಪ್ತಿಯಾಗುತ್ತದೆ, ಮತ್ತೆ ಯಾವುದೇ ಅಭಾವ ಶೇಷ ಉಳಿಯುವುದಿಲ್ಲ.

ಇಂದ್ರಿಯಗಳ ಭೋಗಗಳಲ್ಲಿ ಮತ್ತು ಕರ್ಮಗಳಲ್ಲಿ ಅನಾಸಕ್ತನಾಗುವುದರಿಂದ ಅರ್ಥ-ಕಾಮನಾರಹಿತ ಹಾಗೂ ಕರ್ತೃತ್ವರಹಿತನಾಗುವುದೇ ಆಗಿದೆ. ಇಂದ್ರಿಯಗಳ ಭೋಗ ಗಳಲ್ಲಿ, ಪದಾರ್ಥಗಳಲ್ಲಿ ಅನಾಸಕ್ತನಾದರೆ ಸಾಧಕನು ಕಾಮ ನಾರಹಿತನಾಗುತ್ತಾನೆ ಮತ್ತು ಕ್ರಿಯೆಗಳಲ್ಲಿ ಅನಾಸಕ್ತನಾದರೆ ಕರ್ತೃತ್ವ ರಹಿತನಾಗುತ್ತಾನೆ. ಕಾಮನಾರಹಿತ ಹಾಗೂ

ಕರ್ತೃತ್ವರಹಿತನಾದಾಗ ಸ್ವರೂಪದಲ್ಲಿ ತನ್ನಿಂದ-ತಾನೇ ಸ್ಥಿತಿ ಉಂಟಾಗುತ್ತದೆ. ನಿಜವಾಗಿ ಸ್ಥಿತಿಯು ಆಗದೆ ಸ್ಥಿತಿಯು ಇದ್ದೇ ಇದೆ; ಆದರೆ ಕಾಮನಾರಹಿತ ಮತ್ತು ಕರ್ತೃತ್ವರಹಿತನಾಗದೆ ಇದರ ಅನುಭವವಾಗುವುದಿಲ್ಲ. ಕಾಮನೆ ಮತ್ತು ಕರ್ತೃತ್ವಗಳ ಅಭಾವವಾದಾಗ ಸ್ವರೂಪದಲ್ಲಿರುವ ಸ್ವತಃಸಿದ್ಧ ಸ್ಥಿತಿಯ ಅನುಭವ ಉಂಟಾಗುತ್ತದೆ.

ಬರೆಯವಾಗ ಲೇಖನಿಯನ್ನು ಉಪಯೋಗಿಸಿ, ಬರೆದಾದ ಮೇಲೆ ಲೇಖನಿಯನ್ನು ಎಲ್ಲಿತ್ತೋ ಅಲ್ಲೇ ಇಡುವಂತೆ, ಸಾಧಕನು ಕಾರ್ಯಮಾಡುವಾಗ ಶರೀರವನ್ನು ಉಪಯೋಗಿಸಿ, ಕಾರ್ಯ ಪೂರ್ಣವಾಗುತ್ತಲೇ ಅದನ್ನು ಹೇಗಿದೆಯೋ ಹಾಗೆಯೇ ಇರಿಸುತ್ತಾನೆ, ಅರ್ಥಾತ್ ಅದರಿಂದ ಅಸಂಗನಾದರೆ ಪ್ರತಿಯೊಂದು ಕ್ರಿಯೆಯ ಬಳಿಕ ಅವನಿಗೆ ಯೋಗ (ಸಮತೆ)ದಲ್ಲಿ ಸ್ಥಿತಿ ಉಂಟಾದೀತು. ಒಂದೊಮ್ಮೆ ಕ್ರಿಯೆಗಳಿಂದ ಸರ್ವಥಾ ಸಂಬಂಧ ಕಡಿದುಹೋದರೆ ಅವನು ಯೋಗಾರೂಢನಾದಾನು.

ಕ್ರಿಯೆ (ಭೋಗ) ಮತ್ತು ಪದಾರ್ಥ (ಐಶ್ವರ್ಯ) ಇವುಗಳ ಆಸಕ್ತಿಯಿಂದ ಪತನವಾಗುತ್ತದೆ (೨/೪೪). ಅದಕ್ಕಾಗಿ ಕ್ರಿಯೆಯಲ್ಲಿ ಆಸಕ್ತಿ ಇರಬಾರದು ಮತ್ತು ಫಲದಲ್ಲಿಯೂ ಆಸಕ್ತಿ ಇರಬಾರದು (೨/೪೭ ಮತ್ತು ೫/೧೨). ಸಂಕಲ್ಪಜನ್ಯ ಸುಖದ ಭೋಗವೂ ಆಗದಿರಲಿ ಅರ್ಥಾತ್ – ಸಂಕಲ್ಪ ಪೂರ್ಣತೆಯ ಸುಖವನ್ನೂ ಪಡೆಯ ಬಾರದು. ತನ್ನ ಮುಕ್ತಿಯ ಸಂಕಲ್ಪವೂ ಇರಬಾರದು; ಏಕೆಂದರೆ, ಮುಕ್ತಿಯ ಸಂಕಲ್ಪದಿಂದ ಬಂಧನದ ಸತ್ತೆಯು ದೃಢವಾಗುತ್ತದೆ. ಅದಕ್ಕಾಗಿ ಯಾವುದೇ ಸಂಕಲ್ಪವಿರಿಸದೆ ಉದಾಸೀನನಾಗಿರಬೇಕು.

—✹—

ಸಂಬಂಧ – ಹಿಂದಿನ ಶ್ಲೋಕದಲ್ಲಿ ಭಗವಂತನು ಯೋಗಾರೂಢ ಮನುಷ್ಯನ ಲಕ್ಷಣವನ್ನು ಹೇಳುತ್ತಾ 'ಯದಾ' ಮತ್ತು 'ತದಾ' ಪದಗಳಿಂದ ಯೋಗಾರೂಢನಾಗುವುದರಲ್ಲಿ ಅರ್ಥಾತ್ – ತನ್ನ ಉದ್ಧಾರಮಾಡಿಕೊಳ್ಳುವುದರಲ್ಲಿ ಮನುಷ್ಯನನ್ನು ಸ್ವತಂತ್ರನೆಂದು ಹೇಳಿದನು. ಈಗ ಮುಂದಿನ ಶ್ಲೋಕದಲ್ಲಿ ಭಗವಂತನು ಎಲ್ಲ ಮನುಷ್ಯರಿಗೆ ತಮ್ಮ ಉದ್ಧಾರಮಾಡಿಕೊಳ್ಳಲು ಪ್ರೇರಣೆಯನ್ನು ಕೊಡುತ್ತಾನೆ —

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥ ೫॥

ಆತ್ಮನಾ - ತನ್ನಿಂದ, **ಆತ್ಮಾನಮ್** - ತನ್ನನ್ನು, **ಉದ್ಧರೇತ್** - ಉದ್ಧರಿಸಿಕೊಳ್ಳಲಿ, **ಆತ್ಮಾನಮ್** - ತನ್ನನ್ನು, **ನ**, **ಅವಸಾದಯೇತ್** - ಪತನವಾಗಿಸದಿರಲಿ, **ಹಿ** - ಏಕೆಂದರೆ, **ಆತ್ಮಾ**, **ಏವ**, **ಆತ್ಮನಃ**, **ಬಂಧುಃ** - ತನಗೆ ತಾನೇ ಮಿತ್ರನಾಗಿದ್ದಾನೆ, (ಹಾಗೂ), **ಆತ್ಮಾ**, **ಏವ**, **ಆತ್ಮನಃ**, **ರಿಪುಃ** - ತನಗೆ ತಾನೇ ಶತ್ರುವಾಗಿದ್ದಾನೆ. ॥ ೫॥

ತನ್ನಿಂದ ತನ್ನನ್ನು ಉದ್ಧರಿಸಿಕೊಳ್ಳಲಿ, ತನ್ನನ್ನು ಪತನವಾಗಿಸದಿರಲಿ, ಏಕೆಂದರೆ ತನಗೆ ತಾನೇ ಮಿತ್ರನಾಗಿದ್ದಾನೆ ಹಾಗೂ ತನಗೆ ತಾನೇ ಶತ್ರುವಾಗಿದ್ದಾನೆ. ॥ ೫॥

ವ್ಯಾಖ್ಯಾ - **'ಉದ್ಧರೇದಾತ್ಮನಾತ್ಮಾನಮ್'** – ತನ್ನಿಂದಲೇ ತನ್ನನ್ನು ಉದ್ಧರಿಸಿಕೊಳ್ಳಲಿ ಇದರ ತಾತ್ಪರ್ಯ – ಶರೀರ ಇಂದ್ರಿಯಗಳು, ಮನ, ಬುದ್ಧಿ, ಪ್ರಾಣ ಇತ್ಯಾದಿಗಳಿಂದ ತಾನೇ-ತನ್ನನ್ನು ಎತ್ತರವಾಗಿಸಿ ಕೊಳ್ಳಲಿ. ತನ್ನ ಸ್ವರೂಪದಿಂದ ಏಕದೇಶೀ ಯವಾಗಿ ಕಂಡುಬರುವ ನಾನು ತನದಿಂದಲೂ ಮೇಲಕ್ಕೆ ಏರಲಿ. ಕಾರಣ-ಶರೀರ, ಇಂದ್ರಿಯಗಳು ಇತ್ಯಾದಿ ಮತ್ತು ನಾನುತನ – ಇವೆಲ್ಲ ಪ್ರಕೃತಿಯ ಕಾರ್ಯವಾಗಿದೆ, ತನ್ನ ಸ್ವರೂಪವಲ್ಲ. ತನ್ನದಲ್ಲದ ಸ್ವರೂಪದಿಂದ ತನ್ನನ್ನು ಮೇಲಕೆತ್ತಲಿ.

ನಮ್ಮ ಸ್ವರೂಪವು ಪರಮಾತ್ಮನೊಂದಿಗೆ ಒಂದಾಗಿದೆ ಮತ್ತು ಶರೀರ, ಇಂದ್ರಿಯಗಳು ಇತ್ಯಾದಿ ಹಾಗೂ ನಾನುತನ ಪ್ರಕೃತಿ ಯೊಂದಿಗೆ ಒಂದಾಗಿದೆ. ಒಂದೊಮ್ಮೆ ಇದು ತನ್ನ ಉದ್ಧಾರ ಮಾಡಿ ಕೊಳ್ಳುವುದರಲ್ಲಿ ಎತ್ತರಕ್ಕೇರಲು ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿಗಳ ಸಹಾಯತೆಯನ್ನು ಒಪ್ಪಿಕೊಂಡರೆ, ಇವುಗಳ ಆಸರೆ ಪಡೆದರೆ ಮತ್ತೆ ಜಡತೆಯ ತ್ಯಾಗ ಹೇಗಾದೀತು? ಏಕೆಂದರೆ, ಜಡವಸ್ತುಗಳೊಂದಿಗೆ ಸಂಬಂಧ ತಿಳಿಯುವುದು, ಅದರ ಆವಶ್ಯಕತೆಯನ್ನು ಒಪ್ಪಿಕೊಳ್ಳುವುದು, ಅವುಗಳ ಆಸರೆ ಪಡೆಯುವುದೂ ಮುಖ್ಯ ಬಂಧನವಾಗಿದೆ. ಯಾವುದು ತನ್ನದಾಗಿದೆಯೋ, ತನ್ನಲ್ಲಿ ಇದೆಯೋ, ಈಗಲೂ, ಇಲ್ಲೇ ಇದೆಯೋ ಅಂತಹ ಪರಮಾತ್ಮನ ಪ್ರಾಪ್ತಿಗಾಗಿ ಶರೀರ, ಇಂದ್ರಿಯಗಳು, ಮನ, ಬುದ್ಧಿ ಇವುಗಳ ಆವಶ್ಯಕತೆ ಇಲ್ಲ. ಕಾರಣ – ಅಸತ್ತಿನ ಮೂಲಕ ಸತ್‌ವಸ್ತುವಿನ ಪ್ರಾಪ್ತಿಯಾಗದೆ ಅಸತ್ತಿನ ತ್ಯಾಗದಿಂದ ಸದ್ವಸ್ತುವಿನ ಪ್ರಾಪ್ತಿಯಾಗುತ್ತದೆ.

ಇನ್ನೊಂದು ಭಾವ – ಈಗ ಹಿಂದಿನ ಶ್ಲೋಕದಲ್ಲಿ – ಪ್ರಾಕೃತ ಪದಾರ್ಥ, ಕ್ರಿಯೆ, ಸಂಕಲ್ಪಗಳಲ್ಲಿ ಆಸಕ್ತನಾಗದೆ, ಅದರಲ್ಲಿ ಸಿಲುಕಿಕೊಳ್ಳದೆ ಅವುಗಳಿಂದ ತನ್ನನ್ನು ಮೇಲಕೆತ್ತಿಕೊಳ್ಳಬೇಕು ಎಂದು ಹೇಳಿದೆ. ಪದಾರ್ಥ, ಕ್ರಿಯೆ, ಸಂಕಲ್ಪ ಇವುಗಳ ಪ್ರಾರಂಭ ಮತ್ತು ಅಂತ್ಯವಿರುತ್ತದೆ, ಅವುಗಳ ಸಂಯೋಗ-ವಿಯೋಗವಾಗುತ್ತದೆ ಇದು ಎಲ್ಲರ ಅನುಭವವಾಗಿದೆ, ಆದರೆ

ತನ್ನ (ಸ್ವಯಂ ಇದರ) ಅಭಾವದ, ಪರಿವರ್ತನೆಯ ಅನುಭವ ಯಾರಿಗೂ ಆಗುವುದಿಲ್ಲ. ಸ್ವಯಂ ಸದಾಕಾಲ ಏಕರಸವಾಗಿರುತ್ತದೆ. ಆದ್ದರಿಂದ ಉತ್ಪನ್ನ ಮತ್ತು ನಷ್ಟವಾಗುವಂತಹ ಪದಾರ್ಥ ಇತ್ಯಾದಿಗಳಲ್ಲಿ ಸಿಲುಕಿಕೊಳ್ಳದೆ, ಅದಕ್ಕೆ ಅಧೀನನಾಗದೆ, ಅದರಿಂದ ನಿರ್ಲಿಪ್ತನಾಗಿರುವುದೇ ತನ್ನ ಉದ್ಧಾರ ಮಾಡಿಕೊಳ್ಳುವುದಾಗಿದೆ.

ಮನುಷ್ಯಮಾತ್ರರಲ್ಲಿ ಒಂದು ಇಂತಹ ವಿಚಾರಶಕ್ತಿ ಇದೆ, ಅದನ್ನು ಉಪಯೋಗಿಸುವುದರಿಂದ ಅವನು ತನ್ನ ಉದ್ಧಾರ ಮಾಡಿಕೊಳ್ಳಬಲ್ಲನು. 'ಜ್ಞಾನಯೋಗ'ದ ಸಾಧಕನು ಆ ವಿಚಾರಶಕ್ತಿಯಿಂದ ಜಡ-ಚೇತನವನ್ನು ಬೇರ್ಪಡಿಸಿ ಚೇತನ (ತನ್ನ ಸ್ವರೂಪ) ದಲ್ಲಿ ಸ್ಥಿತನಾಗುತ್ತಾನೆ ಮತ್ತು ಜಡ (ಶರೀರ-ಪ್ರಪಂಚ)ದಿಂದ ಸಂಬಂಧ ವಿಚ್ಛೇದ ಮಾಡಿಕೊಳ್ಳುತ್ತಾನೆ. 'ಭಕ್ತಿಯೋಗ'ದ ಸಾಧಕನು ಅದೇ ವಿಚಾರಶಕ್ತಿಯಿಂದ 'ನಾನು ಭಗವಂತನವನು, ಭಗವಂತನು ನನ್ನವನು' ಈ ಪ್ರಕಾರ ಭಗವಂತನೊಂದಿಗೆ ಆತ್ಮೀಯತೆ ಗೈದು ತನ್ನ ಉದ್ಧಾರಮಾಡಿಕೊಳ್ಳುತ್ತಾನೆ. 'ಕರ್ಮಯೋಗ'ದ ಸಾಧಕನು ಅದೇ ವಿಚಾರಶಕ್ತಿಯಿಂದ ದೊರಕಿದ ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿ ಪದಾರ್ಥಗಳನ್ನು ಪ್ರಪಂಚದ್ದೆಂದು ತಿಳಿದುಕೊಂಡು ಪ್ರಪಂಚದ ಸೇವೆಯಲ್ಲಿ ತೊಡಗಿಸಿ ಆ ಪದಾರ್ಥಗಳಿಂದ ಸಂಬಂಧ-ವಿಚ್ಛೇದ ಮಾಡಿಕೊಳ್ಳುತ್ತಾನೆ ಮತ್ತು ತನ್ನ ಸ್ವರೂಪದಲ್ಲಿ ಸ್ಥಿತನಾಗುತ್ತಾನೆ. ಈ ದೃಷ್ಟಿಯಿಂದ ಮನುಷ್ಯನು ತನ್ನ ವಿಚಾರಶಕ್ತಿಯನ್ನು ಉಪಯೋಗಿಸಿಕೊಂಡು ಯಾವುದೇ ಯೋಗ-ಮಾರ್ಗದಿಂದ ತನ್ನ ಶ್ರೇಯಸ್ಸನ್ನು ಮಾಡಿಕೊಳ್ಳಬಲ್ಲನು.

ಉದ್ಧಾರ ಸಂಬಂಧೀ ವಿಶೇಷ ವಿಚಾರ

'ನಾನು ಶರೀರವಲ್ಲ' ಎಂಬ ವಿಚಾರಮಾಡಬೇಕು; ಏಕೆಂದರೆ, ಶರೀರ ಬದಲಾಗುತ್ತದೆ, ನಾನು ಹಾಗೆಯೇ ಇರುತ್ತೇನೆ. ಈ ಶರೀರವೂ 'ನನ್ನದಲ್ಲ'; ಏಕೆಂದರೆ, ಶರೀರದ ಮೇಲೆ ನನ್ನ ಅಧಿಕಾರ ನಡೆಯುವುದಿಲ್ಲ, ಅರ್ಥಾತ್ – ಶರೀರವನ್ನು ನಾನು ಹೇಗೆ ಇರಿಸಿಕೊಳ್ಳಲು ಬಯಸುತ್ತೇನೋ ಅದು ಹಾಗೆ ಇರಲಾರದು; ಎಷ್ಟು ದಿನ ಇರಿಸಿಕೊಳ್ಳಲು ಬಯಸುತ್ತೇನೋ ಅಷ್ಟುದಿನ ಇರಲಾರದು; ಹೇಗೆ ಬಲಿಷ್ಠವಾಗಿಸಲು ಬಯಸುತ್ತೇನೋ ಹಾಗೇ ಆಗಲಾರದು. ಈ ಶರೀರವು ನನಗಾಗಿಯೂ ಅಲ್ಲ; ಏಕೆಂದರೆ ಒಂದು ವೇಳೆ ಇದು ನನಗಾಗಿ ಇದ್ದಿದ್ದರೆ ಇದು ದೊರಕಿದಾಗ ನನ್ನ ಯಾವುದೇ ಇಚ್ಛೆ ಬಾಕಿ ಉಳಿಯುತ್ತಿರಲಿಲ್ಲ. ಇನ್ನೊಂದು ಮಾತು – ಇದು ಪರಿವರ್ತನಶೀಲವಾಗಿದೆ, ನಾನು ಅಪರಿವರ್ತನಶೀಲನಾಗಿದ್ದೇನೆ. ಪರಿವರ್ತನ ಶೀಲವು ಅಪರಿವರ್ತನಶೀಲದ ಉಪಯೋಗಕ್ಕೆ, ಹೇಗೆ ಬರಬಲ್ಲದು? ಬರಲಾರದು. ಮೂರನೆಯ ಮಾತು – ಇದು ನನಗಾಗಿಯೇ ಇರುತ್ತಿದ್ದರೆ ಸದಾಕಾಲ ನನ್ನ ಬಳಿಯೇ ಇರುತ್ತಿತ್ತು, ಆದರೆ ಇದು ನನ್ನ ಬಳಿಯಲ್ಲಿ ಇರುವುದಿಲ್ಲ, ಈ ಪ್ರಕಾರ ಶರೀರನಾನಲ್ಲ, ನನ್ನದಲ್ಲ, ನನಗಾಗಿಯೂ ಅಲ್ಲ – ಈ ವಾಸ್ತವಿಕತೆಯಲ್ಲಿ ಮನುಷ್ಯನು ದೃಢವಾಗಿದ್ದರೆ ತನ್ನಿಂದ-ತಾನೇ ತನ್ನ ಉದ್ಧಾರವಾಗಿ ಹೋದೀತು.

ದೇವರು, ಸಂತರು-ಮಹಾತ್ಮರು, ಗುರು, ಶಾಸ್ತ್ರಗಳು ಇವುಗಳಿಂದಲೂ ಮನುಷ್ಯರ ಉದ್ಧಾರವಾಗುತ್ತದೆ; ಹಾಗಿರುವಾಗ ತನ್ನಿಂದ ತಾನೇ- ತನ್ನ ಉದ್ಧಾರಮಾಡಿಕೊಳ್ಳಬೇಕು ಎಂದು ಏಕೆ ಹೇಳಿದೆ? ಎಂಬ ಪ್ರಶ್ನೆ ಇಲ್ಲಿ ಉಂಟಾಗಬಹುದು. ಇದರ ಉತ್ತರ – ದೇವರು, ಸಂತರು, ಮಹಾತ್ಮರು ಮುಂತಾದವರ ಮೇಲೆ ನಮಗೆ ಶ್ರದ್ಧೆ ಇದ್ದರೆ ಆಗ ನಮ್ಮ ಉದ್ಧಾರ ಮಾಡಿಯಾರು. ಆ ಶ್ರದ್ಧೆ ನಾವು ಸ್ವತಃ ಇಡಬೇಕಾಗುವುದು. ಸ್ವತಃ ಶ್ರದ್ಧೆ ಇಡದೆ ಅವರು ತಮ್ಮಲ್ಲಿ ಶ್ರದ್ಧೆ ಇಡಿಸಿಕೊಳ್ಳುವರೇ? ಇಡಿಸಲಾರರು. ಅಲ್ಲದೆ ದೇವರು, ಸಂತರು, ಮಹಾತ್ಮರು ಮುಂತಾದವರು ನಾವು ಶ್ರದ್ಧೆ ಇಡದೆಯೇ ತಮ್ಮಲ್ಲಿ ನಮ್ಮ ಶ್ರದ್ಧೆಯನ್ನು ಉಂಟುಮಾಡಿ ನಮ್ಮ ಉದ್ಧಾರ ಮಾಡುತ್ತಿದ್ದರೆ ನಮ್ಮ ಉದ್ಧಾರ ಎಂದೋ ಆಗಿಹೋಗುತ್ತಿತ್ತು. ಕಾರಣ – ಇಂದಿನವರೆಗೆ ಭಗವಂತನ ಅನೇಕ ಅವತಾರವಾಗಿ ಹೋಗಿವೆ, ಅನೇಕ ರೀತಿಯ ಸಂತ- ಮಹಾತ್ಮರು, ಜೀವನ್ಮುಕ್ತ ಭಗವತ್ ಪ್ರೇಮಿಗಳು ಆಗಿಹೋಗಿದ್ದಾರೆ; ಆದರೆ ಇಷ್ಟರವರೆಗೆ ನಮ್ಮ ಉದ್ಧಾರವಾಗಲಿಲ್ಲ, ಇದರಿಂದ ನಾವು ಸ್ವತಃ ಅವರಲ್ಲಿ ಶ್ರದ್ಧೆ ಇರಿಸಲಿಲ್ಲ, ನಾವು ಸ್ವತಃ ಅವರ ಅಭಿಮುಖರಾಗಲಿಲ್ಲ, ನಾವು ಸ್ವತಃ ಅವರ ಮಾತಿನಂತೆ ನಡೆಯಲಿಲ್ಲ ಅದಕ್ಕಾಗಿ ನಮ್ಮ ಉದ್ಧಾರವಾಗಲಿಲ್ಲ ಎಂಬುದು ಸಿದ್ಧವಾಗುತ್ತದೆ. ಆದರೆ ಯಾರು ಅವರಲ್ಲಿ ಶ್ರದ್ಧೆಯನ್ನಿಟ್ಟರೋ, ಯಾರು ಅವರ ಸಮ್ಮುಖ ಹೋದರೋ, ಯಾರು ಅವರ ಮಾತಿನಂತೆ ನಡೆದರೋ ಅವರ ಉದ್ಧಾರವಾಗಿ ಹೋಗಿದೆ. ಆದ್ದರಿಂದ ಸಾಧಕನು ಶಾಸ್ತ್ರ, ಭಗವಂತ, ಗುರು ಮುಂತಾದವರಲ್ಲಿ ಶ್ರದ್ಧೆ-ವಿಶ್ವಾಸವಿಟ್ಟು ಹಾಗೂ ಅವರ ಆಜ್ಞಾನುಸಾರ ನಡೆದು ತನ್ನ ಉದ್ಧಾರಮಾಡಿಕೊಳ್ಳಬೇಕು.

ಭಗವಂತನು, ಸಂತ-ಮಹಾತ್ಮರು ಮುಂತಾದವರು ಇರುವಾಗ ನಮ್ಮ ಉದ್ಧಾರವಾಗಲಿಲ್ಲವಾದರೆ ಇದರಲ್ಲಿ ಉದ್ಧಾರದ ಸಾಮಗ್ರಿಯ ಕೊರತೆ ಇಲ್ಲ ಅಥವಾ ನಾವು ನಮ್ಮ ಉದ್ಧಾರಮಾಡಿಕೊಳ್ಳುವುದರಲ್ಲಿ ಅಸಮರ್ಥರೂ ಆಗಲಿಲ್ಲ, ನಾವು ನಮ್ಮ ಉದ್ಧಾರಮಾಡಿಕೊಳ್ಳಲು ಸಿದ್ಧರಾಗಲಿಲ್ಲ; ಇದರಿಂದ ಅವರೆಲ್ಲ ಸೇರಿದರೂ ನಮ್ಮ ಉದ್ಧಾರ ಮಾಡುವುದರಲ್ಲಿ ಸಮರ್ಥರಾಗಲಿಲ್ಲ, ಒಂದೊಮ್ಮೆ ನಾವು ನಮ್ಮ ಉದ್ಧಾರಮಾಡಿಕೊಳ್ಳಲು ಸಿದ್ಧರಾದರೆ, ಸಮ್ಮುಖರಾದರೆ ಮನುಷ್ಯ ಜನ್ಮದಂತಹ ಸಾಮಗ್ರಿ ಮತ್ತು ಕಲಿಯುಗದಂತಹ

ಅವಕಾಶ ಪಡೆದುಕೊಂಡು ನಾವು ಎಷ್ಟೋ ಸಲ ನಮ್ಮ ಉದ್ಧಾರಮಾಡಿಕೊಳ್ಳ ಬಲ್ಲೆವು. ಆದರೆ ನಾವು ಸ್ವತಃ ನಮ್ಮ ಉದ್ಧಾರಮಾಡಿಕೊಳ್ಳಲು ಬಯಸಿದಾಗಲೇ ಇದು ಆದೀತು.

ಇನ್ನೊಂದು ಮಾತು – ಸ್ವಯಂ ತಾನೇ ತನ್ನ ಪತನ ಮಾಡಿ ಕೊಂಡಿರುವನು, ಅರ್ಥಾತ್ – ಇವನೇ ಪ್ರಪಂಚದ ಸಂಬಂಧವನ್ನು ಹಿಡಿದಿರುವನು, ಪ್ರಪಂಚವು ಇವನನ್ನು ಹಿಡಿದಿಲ್ಲ. ಬಾಲ್ಯಾವಸ್ಥೆಯನ್ನು ಇವನು ಬಿಡದೆ ಅದು ಸ್ವಾಭಾವಿಕವಾಗಿ ಬಿಟ್ಟುಹೋಯಿತು. ಮತ್ತೆ ಇವನು ನಾನು ತರುಣನಾಗಿದ್ದೇನೆ ಎಂದು ತಾರುಣ್ಯವನ್ನು ಹಿಡಿದುಕೊಂಡನು. ಆದರೆ ಇವನಿಗೆ ತಾರುಣ್ಯದ ಜೊತೆಗೂ ಸಂಬಂಧ ಉಳಿಯ ಲಾರದು. ತಾತ್ಪರ್ಯ – ಒಂದೊಮ್ಮೆ ಇವನು ಹೊಸ ಸಂಬಂಧ ಬೆಳೆಸದಿದ್ದರೆ, ಯಾವುದು ತನ್ನಿಂದ-ತಾನೇ ಬಿಟ್ಟು ಹೋಗುತ್ತದೋ ಅಂತಹ ಹಳೆಯ ಸಂಬಂಧವು ಸ್ವಾಭಾವಿಕವಾಗಿ ಬಿಟ್ಟು ಹೋದೀತು. ಹಳೆಯ ಸಂಬಂಧ ವಾದರೋ ಇರುವುದಿಲ್ಲ, ಆದರೆ ಹೊಸ ಸಂಬಂಧವನ್ನು ಇವನು ಬೆಳೆಸುತ್ತಾನೆ; ಇದರಿಂದ-ಸಂಬಂಧ ಬೆಳೆಸುವುದರಲ್ಲಿ ಮತ್ತು ಕಳಚುವುದರಲ್ಲಿ ಇವನು ಸ್ವತಂತ್ರ ಮತ್ತು ಸಮರ್ಥನಾಗಿದ್ದಾನೆ ಎಂಬುದು ಸಿದ್ಧವಾಗುತ್ತದೆ. ಈ ಹೊಸ ಸಂಬಂಧ ಬೆಳೆಸದಿದ್ದರೆ ತನ್ನ ಉದ್ಧಾರ ತಾನೇ ಮಾಡಿ ಕೊಳ್ಳಬಲ್ಲನು.

ಶರೀರ-ಪ್ರಪಂಚದೊಂದಿಗಿರುವ ಸಂಯೋಗ (ಸಂಬಂಧ) ವು ಪ್ರತಿಕ್ಷಣ ತನ್ನಿಂದ ತಾನೇ ವಿಯೋಗವಾಗುತ್ತಿದೆ. ಆ ತನ್ನಿಂದ-ತಾನೇ ಆಗುತ್ತಿರುವ ವಿಯೋಗವನ್ನು ಸಂಯೋಗ ಅವಸ್ಥೆಯಲ್ಲೇ ಸ್ವೀಕರಿಸಿದರೆ ಇವನು ತನ್ನಿಂದಲೇ-ತನ್ನನ್ನು ಉದ್ಧರಿಸಿಕೊಳ್ಳಬಲ್ಲನು.

'ನಾತ್ಮಾನಮವಸಾದಯೇತ್' – ಇವನು ತಾನೇ-ತನ್ನನ್ನು ಪತನದತ್ತ ಕೊಂಡೊಯ್ಯದಿರಲಿ; ಇದರ ತಾತ್ಪರ್ಯ – ಪರಿವರ್ತನಶೀಲ ಪ್ರಾಕೃತ ಪದಾರ್ಥಗಳೊಂದಿಗೆ ತನ್ನ ಸಂಬಂಧವನ್ನು ಜೋಡಿಸದೆ ಅರ್ಥಾತ್ – ಅವುಗಳಿಗೆ ಮಹತ್ವಕೊಟ್ಟು ಅವುಗಳ ದಾಸನಾಗ ಬಾರದು, ತನ್ನನ್ನು ಅವುಗಳ ಅಧೀನನೆಂದು ತಿಳಿಯಬಾರದು, ತನಗಾಗಿ ಅವುಗಳ ಆವಶ್ಯಕತೆಯನ್ನು ತಿಳಿಯಬಾರದು. ಯಾರಿಗಾದರು ಹಣ ಸಿಕ್ಕಿದರೆ, ಅಂತಸ್ತು ದೊರೆತರೆ, ಅಧಿಕಾರ ಸಿಕ್ಕಿದರೆ, ಅವುಗಳು ಸಿಕ್ಕಿದ್ದರಿಂದ ಅವನು ತನ್ನನ್ನು ದೊಡ್ಡವ, ಶ್ರೇಷ್ಠ, ಸ್ವತಂತ್ರನೆಂದು ತಿಳಿಯುತ್ತಾನೆ. ಆದರೆ ವಿಚಾರಗೈದು ನೋಡಿದರೆ ಇವನು ಸ್ವಯಂ ದೊಡ್ಡವ ನಾದನೋ?, ಧನ, ಸಂಪತ್ತು, ಅಧಿಕಾರ ದೊಡ್ಡದಾಯಿತೇ? ಸ್ವತಃ ಚೈತನ್ಯ ಮತ್ತು ಏಕರಸವಾಗಿದ್ದರೂ ಕೂಡ ಈ ಪ್ರಾಕೃತ ವಸ್ತುಗಳಿಗೆ ಪರಾಧೀನ ನಾಗುತ್ತಾನೆ ಮತ್ತು ತನ್ನ ಪತನವನ್ನು ಮಾಡಿಕೊಳ್ಳುತ್ತಾನೆ. ಈ ಪತನದಲ್ಲಿಯೂ ಇವನು ತನ್ನ ಉತ್ಥಾನವೆಂದು ತಿಳಿದು, ಅವು ಗಳಿಗೆ ಅಧೀನನಾಗಿದ್ದರೂ ತನ್ನನ್ನು ಸ್ವಾಧೀನನೆಂದು ತಿಳಿಯುವುದು ಆಶ್ಚರ್ಯದ ಮಾತಾಗಿದೆ.

'ಆತ್ಮೈವ ಹ್ಯಾತ್ಮನೋ ಬಂಧುಃ' – ಇವನು ತಾನೇ ತನ್ನ 'ಬಂಧುವಾಗಿದ್ದಾನೆ.' ತಾನಲ್ಲದೇ ಬೇರೆ ಯಾರೂ ಬಂಧುಗಳಿಲ್ಲ, ಆದ್ದರಿಂದ ಸ್ವಯಂಗೆ ಯಾರ ಆವಶ್ಯಕತೆಯೂ ಇಲ್ಲ, ಅದಕ್ಕೆ ತನ್ನ ಉದ್ಧಾರಕ್ಕಾಗಿ ಯಾವುದೇ ಯೋಗ್ಯತೆಯ ಆವಶ್ಯಕತೆ ಇಲ್ಲ, ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿಗಳ ಆವಶ್ಯಕತೆ ಇಲ್ಲ, ಹಾಗೂ ಯಾವುದೇ ವಸ್ತು, ವ್ಯಕ್ತಿ, ಪರಿಸ್ಥಿತಿ ಇತ್ಯಾದಿಗಳ ಆವಶ್ಯಕತೆಯೂ ಇಲ್ಲ, ತಾತ್ಪರ್ಯ – ಪ್ರಾಕೃತ ಪದಾರ್ಥಗಳು ಇವನ ಸಾಧಕ (ಸಹಾಯಕ) ಅಥವಾ ಬಾಧಕವಲ್ಲ, ಇವನು ಸ್ವತಃ ತಾನೇ ತನ್ನ ಉದ್ಧಾರ ಮಾಡಬಲ್ಲನು, ಅದಕ್ಕಾಗಿ ಇವನಿಗೆ ತಾನೇ-ತನ್ನ ಬಂಧು (ಮಿತ್ರ) ಆಗಿದ್ದಾನೆ.

ನಮ್ಮ ಸಹಾಯಕರಲ್ಲಿ, ರಕ್ಷಕರಲ್ಲಿ, ಉದ್ಧಾರಕರಲ್ಲಿಯೂ ಶ್ರದ್ಧೆ- ಭಕ್ತಿಯನ್ನಿಟ್ಟರೆ, ಅವರ ಮಾತಿನಂತೆ ನಡೆದರೆ ಅವರೂ ನಮ್ಮ ಬಂಧುಗಳಾದಾರು; ಏಕೆಂದರೆ ನಾವು ಒಪ್ಪಿಕೊಳ್ಳದೆ, ನಾವು ಶ್ರದ್ಧೆ-ವಿಶ್ವಾಸ ವಿರಿಸದೆ ಅವರು ನಮ್ಮ ಉದ್ಧಾರ ಮಾಡಲಾರನು, ಇದು ನಿಯಮವಾಗಿದೆ.

'ಆತ್ಮೈವ ರಿಪುರಾತ್ಮನಃ' – 'ತಾನೇ ತನ್ನ ಶತ್ರುವಾಗಿದ್ದಾನೆ.' ಅರ್ಥಾತ್-ತನ್ನಿಂದ ತನ್ನ ಉದ್ಧಾರಮಾಡಿಕೊಳ್ಳದವನು ತಾನೇ-ತನ್ನ ಶತ್ರುವಾಗಿದ್ದಾನೆ. ತಾನಲ್ಲದೆ ಇವನಿಗೆ ಬೇರೆ ಯಾರೂ ಶತ್ರುಗಳಿಲ್ಲ, ಪ್ರಕೃತಿಯ ಕಾರ್ಯ ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿಗಳೂ ಅವನಿಗೆ ಅಪಕಾರ ಮಾಡಲು ಸಮರ್ಥರಲ್ಲ, ಈ ಶರೀರ ಇಂದ್ರಿಯಾ ದಿಗಳು ಅವನ ಅಪಕಾರ ಮಾಡಲಾರವೋ, ಹಾಗೆಯೇ ಉಪಕಾರವನ್ನು ಮಾಡಲಾರವು. ಆ ಶರೀರಾದಿಗಳನ್ನು ಸ್ವತಃ ತನ್ನದೆಂದು ತಿಳಿದುಕೊಂಡರೆ ಅವನು ತಾನೇ-ತನ್ನ ಶತ್ರುವಾಗುತ್ತಾನೆ. ತಾತ್ಪರ್ಯ – ಆ ಪ್ರಾಕೃತ ಪದಾರ್ಥ ಗಳೊಂದಿಗೆ ತನ್ನತನದ ಸ್ವೀಕೃತಿಯೇ ತನ್ನ ಜೊತೆಗೆ ತನ್ನ ಶತ್ರುತ್ವವಾಗಿದೆ.

ಶ್ಲೋಕದ ಉತ್ತರಾರ್ಧದಲ್ಲಿ ಎರಡು ಬಾರಿ 'ಏವ' ಪದವನ್ನು ಕೊಡುವ ತಾತ್ಪರ್ಯ – ತನ್ನ ಮಿತ್ರ ಮತ್ತು ಶತ್ರು ತಾನೇ ಆಗಿದ್ದಾನೆ, ಬೇರೆ ಯಾರೂ ಮಿತ್ರ ಅಥವಾ ಶತ್ರುಗಳಾಗಲಾರರು ಮತ್ತು ಆಗುವ ಸಂಭವವೂ ಇಲ್ಲ, ಪ್ರಕೃತಿಯ ಕಾರ್ಯದೊಂದಿಗೆ ಕಿಂಚಿತ್ತೂ ಸಂಬಂಧವನ್ನು ಒಪ್ಪಿಕೊಳ್ಳದಿರುವುದರಿಂದ ತಾನೇ-ತನ್ನ ಮಿತ್ರನಾಗುತ್ತಾನೆ ಮತ್ತು ಪ್ರಕೃತಿಯ ಕಾರ್ಯದೊಂದಿಗೆ ಕಿಂಚಿನ್ಮಾತ್ರವಾದರೂ ಸಂಬಂಧವನ್ನು ಒಪ್ಪಿಕೊಳ್ಳುವುದರಿಂದ ತಾನೇ-ತನ್ನ ಶತ್ರು ವಾಗುತ್ತಾನೆ.

ಪರಿಶಿಷ್ಟ ಭಾವ – ತನ್ನ ಉದ್ಧಾರ ಮತ್ತು ಪತನದಲ್ಲಿ

ಮನುಷ್ಯನು ಸ್ವತಃ ಕಾರಣನಾಗಿದ್ದಾನೆ, ಬೇರೆ ಯಾರೂ ಅಲ್ಲ. ಭಗವಂತನು ಮನುಷ್ಯ ಶರೀರವನ್ನು, ಅವನ ಶ್ರೇಯಸ್ಸಿನ ಸಾಮಗ್ರಿಯನ್ನೂ ಪೂರ್ಣವಾಗಿ ಕೊಟ್ಟಿರುವನು. ಆದ್ದರಿಂದ ತನ್ನ ಉದ್ಧಾರಕ್ಕಾಗಿ ಬೇರೆಯವರ ಆವಶ್ಯಕತೆಯೇ ಇಲ್ಲ. ಪತನವನ್ನು ಬೇರೆ ಯಾರೂ ಮಾಡಲಾರರು. ಜೀವಿಯು ಸ್ವತಃ ಗುಣಗಳ ಸಂಗಗೈದು ಜನ್ಮ-ಮರಣದಲ್ಲಿ ಬೀಳುತ್ತಾನೆ (೧೩/೨೧).

ಗುರುಗಳು, ಸಂತರು, ಭಗವಂತನೂ ಕೂಡ – ಮನುಷ್ಯನು ಸ್ವತಃ ಅವರ ಮೇಲೆ ವಿಶ್ವಾಸವಿಟ್ಟರೆ, ಅವರನ್ನು ಸ್ವೀಕರಿಸಿದರೆ, ಅವರ ಸಮ್ಮುಖನಾದರೆ, ಅವರಿಗೆ ಶರಣಾದರೆ, ಅವರ ಆಜ್ಞೆಯನ್ನು ಪಾಲಿಸಿದರೆ ಮಾತ್ರ ಉದ್ಧಾರಮಾಡ ಬಲ್ಲರು. ಮನುಷ್ಯನು ಅವರನ್ನು ಸ್ವೀಕರಿಸದಿದ್ದರೆ ಅವರು ಹೇಗೆ ಉದ್ಧರಿಸಬಲ್ಲರು? ಉದ್ಧರಿಸಲಾರರು. ಸ್ವತಃ ಶಿಷ್ಯನಾಗದೆ ಗುರು ಏನು ಮಾಡಬಲ್ಲನು? ಬೇರೆ ವ್ಯಕ್ತಿ ಊಟವನ್ನೆನೋ ಕೊಡಬಲ್ಲನು, ಆದರೆ ಹಸಿವು ಸ್ವಂತಕ್ಕಿರಬೇಕು. ಸ್ವಂತದ ಹಸಿವು ಇಲ್ಲದಿದ್ದರೆ ಬೇರೆಯವರು ಕೊಟ್ಟ ಊಟದ ಉಪಯೋಗವೇನು? ಹೀಗೆಯೇ ಸ್ವತಃ ಪ್ರೀತಿ (ಆಸಕ್ತಿ) ಇಲ್ಲದಿದ್ದರೆ ಗುರುಗಳ, ಸಂತರ ಉಪದೇಶದ ಉಪಯೋಗವೇನು?

ಗುರುಗಳು, ಸಂತರು, ಭಗವಂತ ಇವರ ಅಭಾವ ಎಂದೂ ಆಗುವುದಿಲ್ಲ. ಅನೇಕ ಸಂತರು ಆಗಿಹೋದರು, ಗುರುಗಳು ಆಗಿ ಹೋದರು, ಭಗವಂತನ ಅವತಾರ ಆಗಿಹೋಗಿವೆ ಆದರೆ ಇಷ್ಟರವರೆಗೆ ನಮ್ಮ ಉದ್ಧಾರವಾಗಲಿಲ್ಲವಾದರೆ ಇದರಿಂದ – ನಾವೇ ಅವರನ್ನು ಸ್ವೀಕರಿಸಲಿಲ್ಲ ಎಂಬುದು ಸಿದ್ಧವಾಗುತ್ತದೆ. ಆದ್ದರಿಂದ ನಮ್ಮ ಉದ್ಧಾರ ಹಾಗೂ ಪತನದಲ್ಲಿ ನಾವೇ ಕಾರಣರಾಗಿದ್ದೇವೆ. ತನ್ನ ಉದ್ಧಾರ ಮತ್ತು ಪತನದಲ್ಲಿ ಬೇರೆಯವರನ್ನು ಕಾರಣವೆಂದು ತಿಳಿಯುವವನ ಉದ್ಧಾರ ಎಂದೂ ಆಗಲಾರದು.

ನಿಜವಾದ ದೃಷ್ಟಿಯಿಂದ ನೋಡಿದರೆ ಭಗವಂತನು ಇದ್ದಾನೆ, ಗುರುವೂ ಇದ್ದಾನೆ, ತತ್ತ್ವಜ್ಞಾನವು ಇದೆ ಮತ್ತು ನಮ್ಮಲ್ಲಿ ಯೋಗ್ಯತೆ, ಸಾಮರ್ಥ್ಯವೂ ಇದೆ. ಕೇವಲ ನಾಶವುಳ್ಳ ಸುಖದ ಆಸಕ್ತಿಯಿಂದಲೇ ಅವುಗಳು ಪ್ರಕಟವಾಗುವುದರಲ್ಲಿ ಬಾಧಕವಾಗಿದೆ. ನಾಶವುಳ್ಳ ಸುಖದ ಆಸಕ್ತಿಯನ್ನು ಇಲ್ಲವಾಗಿಸುವ ಹೊಣೆಗಾರಿಕೆ ಸಾಧಕನ ಮೇಲೆಯೇ ಇದೆ; ಏಕೆಂದರೆ, ಅವನೇ ಆಸಕ್ತಿಯನ್ನಿಟ್ಟಿರುವನು.

ಗುರುವಾಗುವುದು ಅಥವಾ ಆಗಿಸಿಕೊಳ್ಳುವುದು ಗೀತೆಯ ಸಿದ್ಧಾಂತವಲ್ಲ. ಮನುಷ್ಯನು ಸ್ವತಃ ತನ್ನ ಗುರುವಾಗಿದ್ದಾನೆ. ಅದಕ್ಕಾಗಿ ಉಪದೇಶವನ್ನು ತಾನೇ-ತನಗೆ ಕೊಡಬೇಕಾಗಿದೆ. ಎಲ್ಲವೂ ಪರಮಾತ್ಮನೇ ಆಗಿದ್ದಾನೆ **(ವಾಸುದೇವಃ ಸರ್ವಮ್)**, ಹಾಗಿರುವಾಗ ಬೇರೆ ಗುರು ಹೇಗಾಗಬಲ್ಲನು ಮತ್ತು ಯಾರು ಯಾರಿಗೆ ಉಪದೇಶ ಕೊಡುವುದು. ಆದ್ದರಿಂದ **'ಉದ್ಧರೇದಾತ್ಮನಾತ್ಮಾನಮ್'** ಇದರ ತಾತ್ಪರ್ಯ – ಬೇರೆಯವರಲ್ಲಿ ಕೊರತೆಯನ್ನು ನೋಡದೆ, ತನ್ನಲ್ಲೇ ಕೊರತೆಯನ್ನು ನೋಡಬೇಕು ಮತ್ತು ಅದನ್ನು ದೂರವಾಗಿಸಲು ಪ್ರಯತ್ನಿಸ ಬೇಕು, ತನಗೆ ಉಪದೇಶವನ್ನು ಕೊಡಬೇಕು. ನೀವೇ ನಿಮ್ಮ ಗುರುವಾಗಿರಿ, ನೀವೇ ನಿಮ್ಮ ಮುಖಂಡರಾಗಿರಿ, ನೀವೇ ನಿಮ್ಮ ಶಾಸಕರಾಗಿರಿ.

–●–

ಸಂಬಂಧ – ಹಿಂದಿನ ಶ್ಲೋಕದಲ್ಲಿ ಭಗವಂತನು ತಾನೇ-ತನ್ನ ಮಿತ್ರನಾಗಿದ್ದಾನೆ ಮತ್ತು ತಾನೇ ತನ್ನ ಶತ್ರುವಾಗಿದ್ದಾನೆ ಎಂದು ಹೇಳಿದನು. ಆದ್ದರಿಂದ ಸ್ವತಃ ತಾನೇ – ತನ್ನ ಮಿತ್ರ ಮತ್ತು ಶತ್ರು ಹೇಗೇ? ಇದರ ಉತ್ತರ ಮುಂದಿನ ಶ್ಲೋಕದಲ್ಲಿ ಕೊಡುತ್ತಾನೆ ಅರ್ಥಾತ್– ಹಿಂದಿನ ಶ್ಲೋಕದ ಉತ್ತರಾರ್ಧದ ವ್ಯಾಖ್ಯೆ ಮುಂದಿನ ಶ್ಲೋಕದಲ್ಲಿ ಮಾಡುತ್ತಾನೆ —

ಬಂಧುರಾತ್ಮಾತ್ಮನಸ್ತಸ್ಯ ಯೇನಾತ್ಮೈವಾತ್ಮನಾ ಜಿತಃ ।
ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್ ॥ ೬॥

ಯೇನ - ಯಾರು, **ಆತ್ಮನಾ** - ತನ್ನಿಂದ, **ಆತ್ಮಾ** - ತನ್ನನ್ನು, **ಜಿತಃ** - ಗೆದ್ದುಕೊಂಡಿರುವನೋ, **ತಸ್ಯ** - ಅವನಿಗೆ, **ಆತ್ಮಾ, ಏವ** - ತಾನೇ, **ಆತ್ಮನಃ** - ತನಗೆ, **ಬಂಧುಃ** - ಬಂಧುವಾಗಿದ್ದಾನೆ, **ತು** - ಮತ್ತು **ಅನಾತ್ಮನಃ** - ಯಾರು ತಾನೇ – ತನ್ನನ್ನು ಗೆದ್ದು ಕೊಂಡಿಲ್ಲವೋ ಅಂತಹ ಅನಾತ್ಮನ, **ಆತ್ಮಾ, ಏವ** - ಆತ್ಮವೇ, **ಶತ್ರುತ್ವೇ** - ಶತ್ರುತ್ವದಲ್ಲಿ, **ಶತ್ರುವತ್** - ಶತ್ರುವಿನಂತೆ, **ವರ್ತೇತ** - ವರ್ತಿಸುತ್ತದೆ. ॥ ೬॥

ಯಾರು ತನ್ನಿಂದಲೇ ತನ್ನನ್ನು ಗೆದ್ದುಕೊಂಡಿರುವನೋ, ಅವನಿಗೆ ತನಗೆ ತಾನೇ ಬಂಧುವಾಗಿದ್ದಾನೆ ಮತ್ತು ಯಾರು ತಾನೇ-ತನ್ನನ್ನು ಗೆದ್ದುಕೊಂಡಿಲ್ಲವೋ, ಅಂತಹ ಅನಾತ್ಮನ ಆತ್ಮವೇ ಶತ್ರುತ್ವದಲ್ಲಿ ಶತ್ರುವಿನಂತೆ ವರ್ತಿಸುತ್ತದೆ. ॥ ೬॥

ವ್ಯಾಖ್ಯಾ - **'ಬಂಧುರಾತ್ಮಾತ್ಮನಸ್ತಸ್ಯ ಯೇನಾತ್ಮೈವಾತ್ಮನಾ ಜಿತಃ'** – ತನ್ನಲ್ಲಿ ತಾನಲ್ಲದೆ ಬೇರೆ ಸತ್ತೆಯೇ ಇಲ್ಲ. ಆದ್ದರಿಂದ ಯಾರು ತನ್ನಲ್ಲಿ ತಾನಲ್ಲದೆ ಬೇರೆ (ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿ)ಯದರ ಕಿಂಚಿತ್ತೂ ಆವಶ್ಯಕತೆಯನ್ನು ಇರಿಸಿಕೊಂಡಿಲ್ಲದವನು ಅರ್ಥಾತ್ – ಅಸತ್ ಪದಾರ್ಥಗಳನ್ನು ಸರ್ವಥಾ ತ್ಯಾಗಗೈದು, ತನ್ನ ಸಮರೂಪೀ

ಸ್ವರೂಪದಲ್ಲಿ ಸ್ಥಿತನಾದವನೇ ತಾನೇ – ತನ್ನನ್ನು ಗೆದ್ದು ಕೊಂಡಿರುವನು.

ಅವನು ತಾನೇ-ತನ್ನಲ್ಲಿ ಸ್ಥಿತನಾದನು – ಇವನ ಪರಿಚಯ ವೇನು? ಅವನ ಅಂತಃಕರಣ ಸಮತೆಯಲ್ಲಿ ಸ್ಥಿತವಾಗಿ ಹೋದೀತು; ಏಕೆಂದರೆ, ಬ್ರಹ್ಮವು ನಿರ್ದೋಷ ಮತ್ತು ಸಮವಾಗಿದೆ. ಆ ಬ್ರಹ್ಮನ ನಿರ್ದೋಷತೆ ಹಾಗೂ ಸಮತೆ ಅವನ ಅಂತಃಕರಣದಲ್ಲಿ ಬಂದುಬಿಡುತ್ತದೆ. ಇದರಿಂದ ಅವನು ಬ್ರಹ್ಮನಲ್ಲಿ ಸ್ಥಿತನಾಗಿದ್ದಾನೆಂಬ ಪರಿಚಯವಾಗುತ್ತದೆ (೫/೧೯). ತಾತ್ಪರ್ಯ–ಬ್ರಹ್ಮನಲ್ಲಿ ಸ್ಥಿತನಾದ್ದರಿಂದಲೇ ಅವನು ತನ್ನ ಮೂಲಕ, ತಾನೇ ತನ್ನ ಮೇಲೆ ವಿಜಯವನ್ನು ಸಾಧಿಸಿ ಕೊಂಡಿರುವನು. ನಿಜವಾಗಿ ಬ್ರಹ್ಮನಲ್ಲಿ ಸ್ಥಿತಿ ಯಾದರೋ ನಿತ್ಯ-ನಿರಂತರವಾಗಿತ್ತು. ಕೇವಲ ಮನ, ಬುದ್ಧಿ ಇತ್ಯಾದಿಗಳನ್ನು ತನ್ನದೆಂದು ತಿಳಿದಿದ್ದರಿಂದಲೇ ಆ ಸ್ಥಿತಿಯ ಅನುಭವ ವಾಗುತ್ತಿರಲಿಲ್ಲ.

ಜಗತ್ತಿನಲ್ಲಿ ಬೇರೆಯವರ ಸಹಾಯಪಡೆಯದೆ ಯಾರೂ ಯಾರ ಮೇಲೆ ವಿಜಯವನ್ನು ಪಡೆಯಲಾರರು ಮತ್ತು ಬೇರೆಯವರ ಸಹಾಯಕತೆ ಪಡೆಯುವುದೇ ತನ್ನನ್ನು ಪರಾಜಿತ ನಾಗಿಸಿಕೊಳ್ಳುವುದಾಗಿದೆ. ಈ ದೃಷ್ಟಿಯಿಂದ ಸ್ವತಃ ಮೊದಲು ಪರಾಜಿತನಾಗಿಯೇ ಬೇರೆಯವರ ಮೇಲೆ ವಿಜಯ ಸಾಧಿಸುತ್ತಾನೆ. ಯಾರಾದರು ಅಸ್ತ್ರ-ಶಸ್ತ್ರಗಳಿಂದ ಬೇರೆಯ ವರನ್ನು ಪರಾಜಿತ ಮಾಡಿದರೆ ಅವನು ಬೇರೆ ಯವರನ್ನು ಪರಾಜಿತಗೊಳಿಸಲು ಅಸ್ತ್ರ-ಶಾಸ್ತ್ರಗಳ ಆವಶ್ಯಕತೆಯನ್ನು ತಿಳಿಯುತ್ತಾನೆ; ಆದ್ದರಿಂದ ಸ್ವತಃ ಅಸ್ತ್ರ-ಶಸ್ತ್ರಗಳೊಂದಿಗೆ ಪರಾಜಿತನೇ ಆದನು. ಯಾರೋ ಶಾಸ್ತ್ರಗಳಿಂದ, ಬುದ್ಧಿಯಿಂದ, ಶಾಸ್ತ್ರಾರ್ಥಗೈದು ಬೇರೆಯವರ ಮೇಲೆ ವಿಜಯವನ್ನು ಪಡೆದರೆ ಅವನು ಸ್ವತಃ ಮೊದಲಿಗೆ ಶಾಸ್ತ್ರ ಮತ್ತು ಬುದ್ಧಿಗೆ ಪರಾಜಿತನಾಗಿಯೇ ಆಗುತ್ತಾನೆ ಮತ್ತು ಆಗಲೇ ಬೇಕಾಗುತ್ತದೆ. ತಾತ್ಪರ್ಯ ಯಾವುದೇ ಸಾಧನೆಯಿಂದ ಯಾರ ಮೇಲಾದರೂ ವಿಜಯಪಡೆದರೆ ಅವನು ತಾನೇ-ತನ್ನನ್ನು ಪರಾಜಿತ ನಾಗಿಸುತ್ತಾನೆ. ಸ್ವತಃ ಪರಾಜಿತನಾಗದೆ ಬೇರೆ ಯವರ ಮೇಲೆ ಎಂದೂ ವಿಜಯವನ್ನು ಪಡೆಯಲಾರನು – ಇದು ನಿಯಮ ವಾಗಿದೆ. ಆದ್ದರಿಂದ ಯಾರು ತನಗಾಗಿ ಬೇರೆಯವರ ಆವಶ್ಯಕತೆಯನ್ನು ಸ್ವಲ್ಪವೂ ತಿಳಿಯುವುದಿಲ್ಲವೋ ಅವನೇ ತನ್ನಿಂದ- ತನ್ನನ್ನು, ತನ್ನ ಮೇಲೆ ವಿಜಯವನ್ನು, ಪಡೆದಿರುವನು ಮತ್ತು ಅವನೇ ಸ್ವತಃ ತನ್ನ ಬಂಧುವಾಗಿದ್ದಾನೆ.

'ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್' – ತಾನಲ್ಲದೆ ಬೇರೆಯವರ ಅರ್ಥಾತ್– ಶರೀರ, ಇಂದ್ರಿಯಗಳು, ಮನ, ಬುದ್ಧಿ, ಧನ, ವೈಭವ, ರಾಜ್ಯ, ನೆಲ, ಮನೆ, ಅಂತಸ್ತು ಅಧಿಕಾರ ಇತ್ಯಾದಿಗಳ ಆವಶ್ಯಕತೆಯನ್ನು ತನಗಾಗಿ ತಿಳಿಯುವವನೇ 'ಅನಾತ್ಮಾ' ಆಗಿದ್ದಾನೆ. ತಾತ್ಪರ್ಯ – ಯಾವುದು ತನ್ನ ಸ್ವರೂಪ ವಲ್ಲವೋ, ಆತ್ಮಾ ಅಲ್ಲವೋ ಅವನ್ನು ತನಗೆ ಆವಶ್ಯಕ ಮತ್ತು ಸಹಾಯಕವೆಂದು ತಿಳಿಯುತ್ತಾನೆ ಮತ್ತು ಅವನ್ನು ತನ್ನ ಸ್ವರೂಪವೆಂದು ಒಪ್ಪಿಕೊಳ್ಳುತ್ತಾನೆ. ಹೀಗೆ ಅನಾತ್ಮನಾಗಿ ಯಾವುದೇ ಪ್ರಾಕೃತ ಪದಾರ್ಥವನ್ನು ತನ್ನದೆಂದು ತಿಳಿಯುವವನೇ ತಾನೇ-ತನ್ನೊಂದಿಗೆ ಶತ್ರುವಿನಂತೆ ವರ್ತಿಸುತ್ತಾನೆ. ಮನ, ಬುದ್ಧಿ ಇತ್ಯಾದಿಗಳನ್ನು ತನ್ನದೆಂದು ಒಪ್ಪಿಕೊಂಡು ನಾನು ಅವುಗಳ ಮೇಲೆ ತನ್ನ ಅಧಿಕಾರ ಸ್ಥಾಪಿಸಿದೆ ಎಂದು ತಿಳಿದುಕೊಂಡರೂ ನಿಜವಾಗಿ (ಅವುಗಳನ್ನು ತನ್ನದೆಂದು ಒಪ್ಪಿಕೊಳ್ಳುವುದರಿಂದ) ಅವನು ಪರಾಜಿತನೇ ಆಗಿದ್ದಾನೆ. ತಾತ್ಪರ್ಯ–ಬೇರೆಯವರಿಂದ ಪರಾಜಿತನಾಗಿಯೂ ತನ್ನ ವಿಜಯವನ್ನು ತಿಳಿಯುವುದೇ ತನ್ನೊಂದಿಗೆ ಶತ್ರುತ್ವದಿಂದ ವರ್ತಿಸುವುದಾಗಿದೆ.

'ಶತ್ರುತ್ವೇ' ಎಂದು ಹೇಳುವ ಭಾವ – ಯಾವುದು ತನ್ನದಲ್ಲವೋ ಅದರಲ್ಲಿ 'ನಾನು' ಮತ್ತು 'ನನ್ನದು' ಎಂಬ ಸಂಬಂಧ ಒಪ್ಪಿಕೊಳ್ಳುವುದು ತನ್ನೊಂದಿಗಿರುವ ಶತ್ರುತ್ವದಲ್ಲಿ ಮುಖ್ಯ ಕಾರಣವಾಗಿದೆ. ಇದರಿಂದ – ಸ್ವತಃ ಪ್ರಕೃತಿಜನ್ಯ ಪದಾರ್ಥಗಳೊಂದಿಗೆ ತನ್ನ ಸಂಬಂಧವನ್ನು ಸ್ಥಾಪಿಸಿ ಕೊಳ್ಳುತ್ತಾನೆ, ಅಲ್ಲಿಂದಲೇ ಶತ್ರುತ್ವ ಪ್ರಾರಂಭವಾಗುತ್ತದೆ. ಮನುಷ್ಯನು ಪ್ರಾಕೃತ ವಸ್ತುಗಳೊಂದಿಗೆ ಎಷ್ಟೆಷ್ಟು ಅಧಿಕಾರ ನಡೆಸುತ್ತಾನೋ ಅಷ್ಟಷ್ಟೇ ಅವನು ತನ್ನನ್ನು ಪರಾಧೀನ ನಾಗಿಸುತ್ತಾ ಹೋಗುತ್ತಾನೆ. ಅದರಲ್ಲಿಯೂ ಅವನು ಮಾನ, ದೊಡ್ಡಸ್ತಿಕೆ ಕೀರ್ತಿ ಮುಂತಾದವುಗಳನ್ನು ಬಯಸಿ ಹೆಚ್ಚಿಚ್ಚು ಪತನದತ್ತ ಸಾಗುತ್ತಾನೆ. ಅವನಿಗೆ ನಾನು ಒಳ್ಳೆಯದನ್ನೇ ಮಾಡುತ್ತಿದ್ದೇನೆ, ನನ್ನ ಉನ್ನತಿಯಾಗು ತ್ತಿದೆ ಎಂದು ಕಾಣುತ್ತದೆ; ಆದರೆ ಈ ಮಾತು ಖಂಡಿತವಾಗಿ ವಿಪರೀತವಾಗಿದೆ. ನಿಜವಾಗಿ ಇವನು ತನ್ನೊಂದಿಗೆ ತನ್ನ ಶತ್ರುತ್ವವನ್ನೇ ಬೆಳೆಸುತ್ತಿದ್ದಾನೆ.

ಮಾನವಶರೀರವು ಜಡತೆಯನ್ನು ಸರ್ವಥಾ ತ್ಯಾಗಗೈದು ಕೇವಲ ಚಿನ್ಮಯನನ್ನು ಪಡೆದುಕೊಳ್ಳಲು ದೊರೆತಿದೆ. ಇದನ್ನು ಮರೆತು ಅವನು ವರ್ತಮಾನದಲ್ಲಿ ಹಾಗೂ ಸತ್ಯನಂತರವೂ, ಮೂರ್ತಿ ಭಾವಚಿತ್ರ ಇತ್ಯಾದಿಗಳ ರೂಪದಲ್ಲಿ ತನ್ನ ನಾಮ-ರೂಪವು ಶಾಶ್ವತವಾಗಿರಲಿ ಈ ರೀತಿ ಜಡತೆಗೆ ಮಹತ್ವವನ್ನು ಕೊಟ್ಟು ಅದನ್ನು ಸ್ಥಿರವಾಗಿಸಲು ಬಯಸುತ್ತಾನೆ. ಈ ರೀತಿ ಚಿನ್ಮಯನಾಗಿದ್ದರೂ ಜಡತೆಯ ದಾಸ್ಯದಲ್ಲಿ ಸಿಲುಕಿಕೊಂಡು ಅವನು ತನ್ನೊಂದಿಗೆ ಮಹಾನ್ ಶತ್ರುತ್ವದ ವರ್ತನೆ ಮಾಡುವುದು ತುಂಬಾ ಆಶ್ಚರ್ಯಕರ ಮಾತಾಗಿದೆ.

'ಶತ್ರುವತ್' ಹೇಳುವುದರಲ್ಲಿ– ಶರೀರ, ಇಂದ್ರಿಯಗಳು, ಮನ, ಬುದ್ಧಿ ಇತ್ಯಾದಿಗಳನ್ನು ತನ್ನದೆಂದು ತಿಳಿದು ಅವನು ತನ್ನನ್ನು ಅವುಗಳ ಅಧಿಪತಿ ಎಂದು ತಿಳಿಯುತ್ತಾನೆ; ಆದರೆ ನಿಜವಾಗಿ ಅವುಗಳ ದಾಸನಾಗುತ್ತಾನೆ! ಅವನ ವರ್ತನೆ ತನ್ನ ದೃಷ್ಟಿಯಿಂದ ತನ್ನ ಅಹಿತವನ್ನು ಮಾಡಿಕೊಳ್ಳುವುದು

ಇಲ್ಲದಿದ್ದರೂ ಪರಿಣಾಮದಲ್ಲಾದರೋ ತನ್ನ ಅಹಿತವೇ ಆಗುತ್ತದೆ. ಅದಕ್ಕಾಗಿ ಭಗವಂತನು ಹೇಳುತ್ತಾನೆ – 'ಅವನ ವರ್ತನೆ ತನ್ನೊಂದಿಗೆ **ಶತ್ರುವತ್** ಅರ್ಥಾತ್-ಶತ್ರುವಿನಂತೆ ಆಗುತ್ತದೆ' ಎಂಬುದೇ ಭಾವವಾಗಿದೆ.

ತಾತ್ಪರ್ಯ – ಯಾವುದೇ ಮನುಷ್ಯನು ತನ್ನ ದೃಷ್ಟಿಯಿಂದ ತನ್ನೊಂದಿಗೆ ಶತ್ರುತ್ವದ ವರ್ತನೆಮಾಡುವುದಿಲ್ಲ. ಆದರೆ ಅಸತ್ ವಸ್ತುವಿನ ಆಶ್ರಯಪಡೆದು ಮನುಷ್ಯನು ತನ್ನ ಹಿತದ ದೃಷ್ಟಿಯಿಂದಲೂ ಕೂಡ ಹೇಗೆ ವರ್ತಿಸುತ್ತಾನೋ ಅದು ನಿಜವಾಗಿ ತನ್ನೊಂದಿಗೆ ಶತ್ರುವಿನಂತೆ ಆಗುತ್ತದೆ; ಏಕೆಂದರೆ, ಅಸತ್ ವಸ್ತುವಿನ ಆಶ್ರಯವು ಪರಿಣಾಮದಲ್ಲಿ ಜನ್ಮ-ಮರಣ ರೂಪೀ ಮಹಾನ್ ದುಃಖವನ್ನು ಕೊಡುವಂತಹುದು.

ಪರಿಶಿಷ್ಟ ಭಾವ – ಶರೀರದಲ್ಲಿ ನಾನು-ನನ್ನದು ಇರದಿದ್ದರೆ ತಾನೇ ತನ್ನ ಮಿತ್ರನು ಮತ್ತು ಶರೀರವನ್ನು ನಾನು-ನನ್ನದು ಎಂದು ತಿಳಿದರೆ ತಾನೇ-ತನ್ನ ಶತ್ರುವಿನಂತಿದೆ ಅರ್ಥಾತ್-ಅನಾತ್ಮಕ್ಕೆ ಸತ್ತೆ ಕೊಡುವುದರಿಂದ ಅದರ ಪರಿಣಾಮ ಶತ್ರುವಿನಂತೆ ಆದೀತು.

'ಶತ್ರುವತ್'–ಶತ್ರುವು ಯಾವ ನಷ್ಟವನ್ನು ಮಾಡುತ್ತಾನೋ ಅದನ್ನೇ ಅವನು ಸ್ವತಃ ತನಗೆ ಮಾಡಿಕೊಳ್ಳುತ್ತಾನೆ. ನಿಜವಾಗಿ ಭೋಗಿ ಮನುಷ್ಯನು ತನ್ನ ನಷ್ಟಮಾಡಿಕೊಂಡಷ್ಟು ಶತ್ರುವೂ ಮಾಡುವುದಿಲ್ಲ. ವಾಸ್ತವಿಕ ದೃಷ್ಟಿಯಿಂದ ನೋಡಿದರೆ ಶತ್ರುವಿನಿಂದ ನಮ್ಮ ಒಳ್ಳೆಯದೇ ಆಗುತ್ತದೆ. ಅವನು ನಮಗೆ ಕೆಟ್ಟದಾಗಿಸಲಾರನು. ಕಾರಣ – ಅವನು ವಸ್ತುಗಳವರೆಗೆ ತಲುಪುತ್ತಾನೆ, ಸ್ವಯಂವರೆಗೆ ತಲುಪುವುದಿಲ್ಲ. ಆದ್ದರಿಂದ ನಾಶವುಳ್ಳದರ ನಾಶವಲ್ಲದೆ ಬೇರೆ ಅವನೇನು ಮಾಡಬಲ್ಲನು? ನಾಶವುಳ್ಳದರ ನಾಶದಿಂದ ನಮ್ಮದು ಒಳ್ಳೆಯದೇ ಆದೀತು. ನಿಜವಾಗಿ ನಮ್ಮ ನಷ್ಟವು ನಮ್ಮ ಭಾವಕೆಟ್ಟು ಹೋದಾಗಲೇ ಆಗುತ್ತದೆ.

–❀–

ಸಂಬಂಧ – ತನ್ನ ಮೂಲಕ ತನ್ನ ವಿಜಯವಾದಾಗ ಏನು ಪರಿಣಾಮವಾಗುತ್ತದೆ? ಇದರ ಉತ್ತರವನ್ನು ಮುಂದಿನ ಮೂರು ಶ್ಲೋಕಗಳಲ್ಲಿ ಕೊಡುತ್ತಾನೆ —

ಜಿತಾತ್ಮನಃ ಪ್ರಶಾಂತಸ್ಯ ಪರಮಾತ್ಮಾ ಸಮಾಹಿತಃ ।
ಶೀತೋಷ್ಣಸುಖದುಃಖೇಷು ತಥಾ ಮಾನಾಪಮಾನಯೋಃ ॥ ೭॥

ಜಿತಾತ್ಮನಃ - ಯಾರು ತಾನೇ-ತನ್ನ ಮೇಲೆ ವಿಜಯವನ್ನು ಪಡೆದಿರುವನೋ, **ಶೀತೋಷ್ಣಸುಖದುಃಖೇಷು** - ಶೀತ-ಉಷ್ಣ (ಅನುಕೂಲತೆ-ಪ್ರತಿಕೂಲತೆ) ಸುಖ-ದುಃಖ, **ತಥಾ** - ಹಾಗೆಯೇ, **ಮಾನಾಪಮಾನಯೋಃ** - ಮಾನ ಅಪಮಾನಗಳಲ್ಲಿ, **ಪ್ರಶಾಂತಸ್ಯ** - ನಿರ್ವಿಕಾರನಾಗಿರುವನೋ ಆ ಮನುಷ್ಯನಿಗೆ, **ಪರಮಾತ್ಮಾ** - ಪರಮಾತ್ಮನು, **ಸಮಾಹಿತಃ** - ನಿತ್ಯಪ್ರಾಪ್ತನಾಗಿದ್ದಾನೆ. ॥ ೭॥

ಯಾರು ತಾನೇ – ತನ್ನ ಮೇಲೆ ವಿಜಯವನ್ನು ಪಡೆದಿರುವನೋ, ಶೀತ-ಉಷ್ಣ (ಅನುಕೂಲತೆ-ಪ್ರತಿಕೂಲತೆ) ಸುಖ-ದುಃಖ ಹಾಗೂ ಮಾನಾಪಮಾನಗಳಲ್ಲಿ ನಿರ್ವಿಕಾರನಾಗಿರುವನೋ ಆ ಮನುಷ್ಯನಿಗೆ ಪರಮಾತ್ಮನು ನಿತ್ಯ ಪ್ರಾಪ್ತನಾಗಿದ್ದಾನೆ. ॥ ೭॥

ವ್ಯಾಖ್ಯಾ - [ಆರನೇ ಶ್ಲೋಕದಲ್ಲಿ **'ಅನಾತ್ಮನಃ'** ಪದ ಬಂದಿದೆ, ಇಲ್ಲಿ **'ಜಿತಾತ್ಮನಃ'** ಪದ ಬಂದಿದೆ. ಇದರ ತಾತ್ಪರ್ಯ – ಯಾರು 'ಅನಾತ್ಮಾ' ಆಗಿರುತ್ತಾನೋ, ಅವನು ಶರೀರಾದಿ ಪ್ರಾಕೃತ ಪದಾರ್ಥಗಳೊಂದಿಗೆ 'ನಾನು – ನನ್ನದು' ಎಂದು ತಿಳಿದು ತನ್ನೊಂದಿಗೆ ಶತ್ರುತ್ವದ ವರ್ತನೆ ಮಾಡುತ್ತಾನೆ. ಯಾರು 'ಜಿತಾತ್ಮಾ' ಆಗಿದ್ದಾನೋ, ಅವನು ಶರೀರಾದಿ ಪ್ರಾಕೃತ ಪದಾರ್ಥಗಳಿಂದ ತನ್ನ ಸಂಬಂಧವನ್ನು ತಿಳಿಯದೆ ತನ್ನೊಂದಿಗೆ ಮಿತ್ರನಂತೆ ವರ್ತಿಸುತ್ತಾನೆ. ಈ ರೀತಿ ಅನಾತ್ಮಾ ಮನುಷ್ಯನು ತನ್ನ ಪತನಮಾಡಿಕೊಳ್ಳುವನು ಮತ್ತು ಜಿತಾತ್ಮಾ ಮನುಷ್ಯನು ತನ್ನ ಉದ್ಧಾರ ಮಾಡಿಕೊಳ್ಳುವನು.]

'ಜಿತಾತ್ಮನಃ' - ಶರೀರ, ಇಂದ್ರಿಯಗಳು, ಮನ, ಬುದ್ಧಿ ಮುಂತಾದ ಯಾವುದೇ ಪ್ರಾಕೃತ ಪದಾರ್ಥಗಳ ಸಹಾಯಕತೆಯನ್ನು ತನಗಾಗಿ ತಿಳಿಯದವನನ್ನು ಮತ್ತು ಆ ಪ್ರಾಕೃತ ಪದಾರ್ಥಗಳೊಂದಿಗೆ ಕಿಂಚಿತ್ತಾದರೂ ತನ್ನತನದ ಸಂಬಂಧವನ್ನು ಜೋಡಿಸದವನನ್ನು 'ಜಿತಾತ್ಮಾ' ಎಂದು ಹೇಳುತ್ತಾರೆ. ಜೀತಾತ್ಮಾ ಮನುಷ್ಯನು ತನ್ನದಾದರೋ ಹಿತವವನ್ನು ಮಾಡಿಕೊಳ್ಳುತ್ತಾನೆ, ಅವನಿಂದ ಜಗತ್ತಿನ ಹಿತವೂ ತುಂಬಾ ಆಗುತ್ತದೆ.

'ಶೀತೋಷ್ಣಸುಖದುಃಖೇಷು ಪ್ರಶಾಂತಸ್ಯ' – ಇಲ್ಲಿ ಶೀತ ಮತ್ತು ಉಷ್ಣ ಇವೆರಡು ಪದಗಳ ಬಗ್ಗೆ ಆಳವಾಗಿ ವಿಚಾರಮಾಡಿದರೆ ಇವು ಛಳಿ ಮತ್ತು ಸೆಕೆಯ ವಾಚಕವೆಂದು ಸಿದ್ಧವಾಗುವುದಿಲ್ಲ; ಏಕೆಂದರೆ, ಛಳಿ-ಸೆಕೆ ಇವೆರಡೂ ಕೇವಲ ತ್ವಗಿಂದ್ರಿಯ ವಿಷಯವಾಗಿದೆ. ಒಂದೊಮ್ಮೆ ಜಿತಾತ್ಮಾ ಪುರುಷನು ಕೇವಲ ಒಂದೇ ತ್ವಗಿಂದ್ರಿಯದ ವಿಷಯದಲ್ಲಿಯೇ ಶಾಂತನಿರುವನಾದರೆ ಶ್ರವಣ, ನೇತ್ರ, ರಸನೆ, ಘ್ರಾಣ – ಈ ಇಂದ್ರಿಯಗಳ ವಿಷಯಗಳು ಬಾಕಿ ಉಳಿಯುವವು. ಅರ್ಥಾತ್ – ಇವುಗಳಲ್ಲಿ ಅವನು ಪ್ರಶಾಂತ ನಾಗಿರುವುದು ಬಾಕಿ ಉಳಿದುಹೋದರೆ ಅವನಲ್ಲಿ ಅಪೂರ್ಣತೆ

ಬಂದುಬಿಟ್ಟೀತು. ಆದ್ದರಿಂದ ಇಲ್ಲಿ ಶೀತ-ಉಷ್ಣ ಪದಗಳು ಅನುಕೂಲತೆ-ಪ್ರತಿಕೂಲತೆಯ ವಾಚಕವಾಗಿವೆ.

ಶೀತ ಅರ್ಥಾತ್ ಅನುಕೂಲತೆಯು ಪ್ರಾಪ್ತಿಯಾದಾಗ ಒಳಗೆ ಒಂದು ರೀತಿಯ ಶೀತಲತೆ ಉಂಟಾಗುತ್ತದೆ. ಉಷ್ಣ ಅರ್ಥಾತ್ – ಪ್ರತಿಕೂಲತೆಯು ಪ್ರಾಪ್ತಿಯಾದಾಗ ಒಳಗೆ ಒಂದು ರೀತಿಯ ಸಂತಾಪ ಉಂಟಾಗುತ್ತದೆ. ತಾತ್ಪರ್ಯ – ಅಂತರಂಗದಲ್ಲಿ ಶೀತಲತೆ ಇಲ್ಲದೆ ಮತ್ತು ಸಂತಾಪವಿಲ್ಲದೆ ಒಂದು ಸಮಾನ ಶಾಂತಿ ಆಗಿರಬೇಕು. ಅರ್ಥಾತ್ – ಇಂದ್ರಿಯಗಳ ಅನುಕೂಲ-ಪ್ರತಿಕೂಲ ವಿಷಯಗಳು, ವಸ್ತು, ವ್ಯಕ್ತಿ, ಘಟನೆ, ಪರಿಸ್ಥಿತಿ ಇತ್ಯಾದಿಗಳು ಪ್ರಾಪ್ತಿಯಾದರೂ ಅಂತರಂಗದ ಶಾಂತಿ ಭಂಗವಾಗದಿರಲಿ. ಕಾರಣ – ಅಂತರಂಗದಲ್ಲಿರುವ ಸ್ವತಃಸಿದ್ಧ ಶಾಂತಿಯು ಅನುಕೂಲತೆಯಲ್ಲಿ ರಾಜಿಯಾಗುವುದರಿಂದ ಮತ್ತು ಪ್ರತಿಕೂಲತೆಯಲ್ಲಿ ಸಿಟ್ಟಾಗುವುದರಿಂದ ಭಂಗವಾಗುತ್ತದೆ. ಆದ್ದರಿಂದ ಶೀತ-ಉಷ್ಣಗಳಲ್ಲಿ ಪ್ರಶಾಂತವಾಗಿರುವ ಅರ್ಥ – ಹೊರಗಿನಿಂದಾಗುವ ಸಂಯೋಗ – ವಿಯೋಗದ ಪ್ರಭಾವ ಅಂತರಂಗದಲ್ಲಿ ಬೀಳದಿರುವುದೇ ಆಗಿದೆ.

ಈಗ 'ಸುಖ' ಮತ್ತು 'ದುಃಖ' ಪದಗಳಿಂದ ಯಾವ ಅರ್ಥ ತೆಗೆದುಕೊಳ್ಳಬೇಕೆಂಬ ವಿಚಾರಮಾಡಬೇಕು. ಸುಖ ಮತ್ತು ದುಃಖಗಳು ಎರಡೆರಡು ರೀತಿಯದಾಗಿರುತ್ತವೆ –

(೧) ಸಾಧಾರಣ ಲೌಕಿಕ ದೃಷ್ಟಿಯಿಂದ ಧನ, ಸಂಪತ್ತು, ವೈಭವ, ಪತ್ನೀ, ಪುತ್ರ ಇತ್ಯಾದಿ ಅನುಕೂಲ ಸಾಮಗ್ರಿಯ ಬಾಹುಳ್ಯವಿರುವವನಿಗೆ ಜನರು 'ಸುಖೀ' ಎಂದು ಹೇಳುತ್ತಾರೆ. ಧನ, ಸಂಪತ್ತು, ವೈಭವ, ಪತ್ನೀ, ಪುತ್ರ ಇತ್ಯಾದಿ ಅನುಕೂಲ ಸಾಮಗ್ರಿಯ ಅಭಾವವಿರುವವನಿಗೆ ಜನರು 'ದುಃಖಿ' ಎಂದು ಹೇಳುತ್ತಾರೆ.

(೨) ಯಾರ ಬಳಿಯಲ್ಲಿ ಬಾಹ್ಯ ಸುಖಮಯ ಸಾಮಗ್ರಿ ಇಲ್ಲವೋ, ಅವನು ಊಟ ಎಲ್ಲಿ ಮಾಡುವನೋ ಇದರ ನೆಲೆ ಇಲ್ಲ, ಬಳಿಯಲ್ಲಿ ಉಡಲು ಬೇಕಾದಷ್ಟು ಬಟ್ಟೆಗಳಿಲ್ಲ, ಇರಲಿಕ್ಕಾಗಿ ಜಾಗವಿಲ್ಲ, ಜೊತೆಯಲ್ಲಿ ಸೇವೆಮಾಡುವ ಜನರಾರೂ ಇಲ್ಲ; ಇಂತಹ ಅವಸ್ಥೆ ಇದ್ದರೂ, ಯಾರ ಮನಸ್ಸಿನಲ್ಲಿ ದುಃಖ – ಸಂತಾಪವಾಗುವುದಿಲ್ಲವೋ, ಯಾವುದೇ ವಸ್ತು, ವ್ಯಕ್ತಿ, ಪರಿಸ್ಥಿತಿ ಇತ್ಯಾದಿಗಳ ಆವಶ್ಯಕತೆಯನ್ನು ಅನುಭವಿಸದೆ ಎಲ್ಲಾ ಸಮಯದಲ್ಲಿ ತುಂಬಾ ಸಂತೋಷವಾಗಿರುತ್ತಾನೋ ಅವನನ್ನು ಸುಖಿ ಎಂದು ಹೇಳುತ್ತಾರೆ. ಆದರೆ ಹೊರಗಿನ ಸುಖಮಯ ಸಾಮಗ್ರಿಯು ಹೇರಳವಾಗಿದ್ದು, ಊಟಕ್ಕಾಗಿ ಉತ್ತಮೋತ್ತಮ ಪದಾರ್ಥಗಳಿವೆ, ಉಡಲು ಒಳ್ಳೊಳ್ಳೆಯ ಬಟ್ಟೆಗಳಿವೆ, ಇರಲು ತುಂಬಾ ದೊಡ್ಡಮನೆ ಇದೆ, ಸೇವೆಗಾಗಿ ಅನೇಕ ಆಳುಗಳಿದ್ದಾರೆ ಇಂತಹ ಅವಸ್ಥೆ ಇದ್ದರೂ ಕೂಡ ಅಂತರಂಗದಲ್ಲಿ ಹಗಲು ರಾತ್ರಿ – ಈ ಸಾಮಗ್ರಿಗಳು ಎಲ್ಲಾದರು ನಷ್ಟವಾದೀತೇ, ಈ ಸಾಮಗ್ರಿಯು ಖಾಯಂ ಆಗಿ ಹೇಗೆ ಉಳಿದೀತು, ಹೇಗೆ ಬೆಳೆದೀತು? ಇತ್ಯಾದಿ ಚಿಂತೆ ಇರುತ್ತದೆ. ಈ ರೀತಿಯ ಹೊರಗಿನ ಸಾಮಗ್ರಿಯು ಇರುವಾಗಲೂ ಯಾರು ಅಂತರಂಗದಲ್ಲಿ ದುಃಖಿಯಾಗುತ್ತಾನೋ ಅವನನ್ನು ದುಃಖಿ ಎಂದು ಹೇಳುತ್ತಾರೆ.

ಮೇಲೆ ಹೇಳಿದ ಎರಡು ಪ್ರಕಾರದ ಸುಖ-ದುಃಖಿಗಳ ತಾತ್ಪರ್ಯ – ಹೊರಗಿನ ಸಾಮಗ್ರಿಯಿಂದ ಸುಖಿ-ದುಃಖಿಯಾಗುವುದು ಮತ್ತು ಅಂತರಂಗದ ಪ್ರಸನ್ನತೆ-ಖಿನ್ನತೆಯಿಂದ ಸುಖೀ-ದುಃಖಿಯಾಗುವುದೇ ಆಗಿದೆ. ಗೀತೆಯಲ್ಲಿ ಎಲ್ಲೆಲ್ಲಿ ಸುಖ-ದುಃಖಿಗಳಲ್ಲಿ ಸಮನಾಗಿರುವ ಮಾತು ಬಂದಿದೆಯೋ ಅಲ್ಲಿ ಹೊರಗಿನ ಸಾಮಗ್ರಿಯಲ್ಲಿ ಸಮನಾಗಿರಲು ಹೇಳಲಾಗಿದೆ. **'ಸಮದುಃಖಸುಖಃ'** (೧೨/೧೩; ೧೪/೨೪), **'ಶೀತೋಷ್ಣ ಸುಖ ದುಃಖೇಷು ಸಮಃ'** (೧೨/೧೮) ಇತ್ಯಾದಿ. ಸುಖ-ದುಃಖಿಗಳಿಂದ ರಹಿತನಾಗಲು ಹೇಳುವಲ್ಲಿ ಒಳಗಿನ ಪ್ರಸನ್ನತೆ ಮತ್ತು ಖಿನ್ನತೆಗಳಿಂದ ರಹಿತನಾಗಲು ಹೇಳಲಾಗಿದೆ. **'ದ್ವಂದ್ವೈರ್ವಿಮುಕ್ತಾಃ ಸುಖದುಃಖಿ ಸಂಜ್ಞೈಃ'** (೧೫/೫) ಇತ್ಯಾದಿ. ಸುಖ-ದುಃಖಿಗಳಲ್ಲಿ ಸಮನಾಗಿರುವ ಮಾತು ಬಂದಿರುವಲ್ಲಿ ಸುಖ-ದುಃಖಿಗಳ ಅಸ್ತಿತ್ವವಾದರೋ ಇದೆ, ಆದರೆ ಅದರ ಪ್ರಭಾವ ಬೀಳುವುದಿಲ್ಲ, ಸುಖ-ದುಃಖಿಗಳಿಂದ ರಹಿತವಾಗುವ ಮಾತು ಇರುವಲ್ಲಿ ಸುಖ-ದುಃಖಿಗಳ ಅಸ್ತಿತ್ವವೇ ಇಲ್ಲ, ಈ ರೀತಿ ಬೇಕಾದರೆ ಹೊರಗಿನ ಸುಖ-ದುಃಖಿಮಯ ಸಾಮಗ್ರಿಯು ದೊರೆತಾಗ ಅಂತರಂಗದಲ್ಲಿ ಸಮನಾಗಿರಲು ಹೇಳಲೀ, ಬೇಕಾದರೆ ಆಂತರಂಗಿಕ ಸುಖ-ದುಃಖಿಗಳಿಂದ ರಹಿತನಾಗಲು ಹೇಳಲೀ – ಎರಡರ ತಾತ್ಪರ್ಯ ಒಂದೇ ಆಗಿದೆ; ಏಕೆಂದರೆ, ಸಮವು ಒಳಗಿನಿಂದಲೇ ಇದೆ ಮತ್ತು ರಹಿತವೂ ಒಳಗಿನಿಂದಲೇ ಇದೆ.

ಇಲ್ಲಿ ಶೀತ-ಉಷ್ಣ ಮತ್ತು ಸುಖ-ದುಃಖಿಗಳಲ್ಲಿ ಪ್ರಶಾಂತ (ಸಮ)ನಾಗಿರುವ ಮಾತನ್ನು ಹೇಳಲಾಗಿದೆ. ಅನುಕೂಲತೆಯಿಂದ ಸುಖಿವಾಗುತ್ತದೆ – **'ಅನುಕೂಲ ವೇದನೀಯಂ ಸುಖಿಮ್'** ಹಾಗೂ ಪ್ರತಿಕೂಲತೆಯಿಂದ ದುಃಖಿವಾಗುತ್ತದೆ – **'ಪ್ರತಿಕೂಲ ವೇದನೀಯಂ ದುಃಖಿಮ್'**. ಅದಕ್ಕಾಗಿ ಶೀತ-ಉಷ್ಣಗಳ ಅರ್ಥ ಅನುಕೂಲತೆ – ಪ್ರತಿಕೂಲತೆ ಎಂದು ತೆಗೆದುಕೊಂಡರೆ ಸುಖ-ದುಃಖಿವೆಂದು ಹೇಳುವುದು ವ್ಯರ್ಥವಾದೀತು ಮತ್ತು ಸುಖ-ದುಃಖಿವೆಂದು ಹೇಳುವುದರಿಂದ ಶೀತ-ಉಷ್ಣವೆಂದು ಹೇಳುವುದು ವ್ಯರ್ಥವಾದೀತು; ಏಕೆಂದರೆ, ಸುಖ-ದುಃಖಿ ಪದಗಳು ಶೀತ-ಉಷ್ಣ (ಅನುಕೂಲತೆ-ಪ್ರತಿಕೂಲತೆ)ದ್ದೇ ವಾಚಕವಾಗಿವೆ. ಹಾಗಾದರೆ ಇಲ್ಲಿ ಶೀತ-ಉಷ್ಣ ಮತ್ತು ಸುಖ-ದುಃಖಿ ಪದಗಳ ಸಾರ್ಥಕತೆ ಹೇಗೆ ಸಿದ್ಧವಾದೀತು? ಅದಕ್ಕಾಗಿ ಶೀತ-ಉಷ್ಣ ಪದಗಳಿಂದ ಪ್ರಾರಬ್ಧಕ್ಕನುಸಾರ ಬರುವ ಅನುಕೂಲತೆ-ಪ್ರತಿಕೂಲತೆಯನ್ನು

ತೆಗೆದುಕೊಂಡರೆ ಮತ್ತು ಸುಖ-ದುಃಖ ಪದಗಳಿಂದ ವರ್ತಮಾನದಲ್ಲಿ ಮಾಡಲಾಗುವ ಕ್ರಿಯಮಾಣ ಕರ್ಮಗಳ ಪೂರ್ಣತೆ-ಅಪೂರ್ಣತೆ ಹಾಗೂ ಅವುಗಳ ತಾತ್ಕಾಲಿಕ ಫಲದ ಸಿದ್ಧಿ-ಅಸಿದ್ಧಿಯನ್ನು ತೆಗೆದುಕೊಂಡರೆ ಇವೆಲ್ಲ ಪದಗಳ ಸಾರ್ಥಕತೆ ಸಿದ್ಧವಾದೀತು. ತಾತ್ಪರ್ಯ– ಬೇಕಾದರೆ ಪ್ರಾರಬ್ಧದ ಅನುಕೂಲ-ಪ್ರತಿಕೂಲ ಪರಿಸ್ಥಿತಿ ಇರಲೀ, ಬೇಕಾದರೆ ಕ್ರಿಯಮಾಣದ ತಾತ್ಕಾಲಿಕ ಸಿದ್ಧಿ-ಅಸಿದ್ಧಿ ಇರಲೀ – ಇವೆರಡರಲ್ಲಿಯೂ ಪ್ರಶಾಂತ (ನಿರ್ವಿಕಾರ)ನಾಗಿರಬೇಕು.

ಈ ಪ್ರಕರಣಕ್ಕನುಸಾರವೂ ಮೇಲಿನ ಅರ್ಥವೇ ಸರಿಯೆಂದು ಕಾಣುತ್ತದೆ. ಕಾರಣ – ಇದೇ ಅಧ್ಯಾಯದ ೪ನೇ ಶ್ಲೋಕದಲ್ಲಿ ಬಂದಿರುವ **'ನೇಂದ್ರಿಯಾರ್ಥೇಷು (ಅನುಷಜ್ಜತೆ)'** ಪದವನ್ನು ಇಲ್ಲಿ ಶೀತ-ಉಷ್ಣ ಪದದಿಂದ ಹೇಳಲಾಗಿದೆ ಮತ್ತು **'ನ ಕರ್ಮಸು ಅನುಷಜ್ಜತೇ'** ಪದಗಳನ್ನು ಇಲ್ಲಿ ಸುಖ-ದುಃಖ ಪದಗಳಿಂದ ಹೇಳಲಾಗಿವೆ, ಅರ್ಥಾತ್ – ಅಲ್ಲಿ ಪ್ರಾರಬ್ಧಕ್ಕನುಸಾರ ಬಂದಿರುವ ಅನುಕೂಲ-ಪ್ರತಿಕೂಲ ಪರಿಸ್ಥಿತಿಗಳಲ್ಲಿ ಮತ್ತು ಕ್ರಿಯಮಾಣ ಕರ್ಮಗಳ ಪೂರ್ತಿ-ಅಪೂರ್ತಿ ಹಾಗೂ ತಾತ್ಕಾಲಿಕ ಫಲದ ಸಿದ್ಧಿ-ಅಸಿದ್ಧಿಯಲ್ಲಿ ಆಸಕ್ತಿ ರಹಿತನಾಗುವ ಮಾತು ಬಂದಿದೆ ಮತ್ತು ಇಲ್ಲಿ ಅವೆರಡರಲ್ಲಿ ಪ್ರಶಾಂತನಾಗುವ ಮಾತು ಬಂದಿದೆ.

'ತಥಾ ಮಾನಾಪಮಾನಯೋಃ' – ಹೀಗೆಯೇ ಅವರು ಮಾನಾಪಮಾನದಲ್ಲಿಯೂ ಪ್ರಶಾಂತರಾಗಿದ್ದಾರೆ. ಈಗ ಇಲ್ಲಿ– ಮಾನ ಅಪಮಾನವಾದರೋ ಪ್ರಾರಬ್ಧದ ಫಲವಾಗಿದೆ; ಆದ್ದರಿಂದ ಈ ಶೀತ-ಉಷ್ಣ (ಅನುಕೂಲ-ಪ್ರತಿಕೂಲ ಪರಿಸ್ಥಿತಿ) ಇದರ ಅಂತರ್ಗತವೇ ಬಂತು. ಮತ್ತೆ ಇದನ್ನು ಬೇರೆಯಾಗಿ ಏಕೆ ಪರಿಗಣಿಸಲಾಗಿದೆ? ಎಂಬ ಪ್ರಶ್ನೆ ಮಾಡಿದರೆ, ಇದರ ಉತ್ತರವಾಗಿ – ಶೀತ- ಉಷ್ಣವಾದರೋ ದೈವೇಚ್ಛಾ (ಅನಿಚ್ಛೆ) ಕೃತ ಪ್ರಾರಬ್ಧದ ಫಲವಾಗಿದೆ, ಆದರೆ ಮಾನ-ಅಪಮಾನ ಪರೇಚ್ಛಾಕೃತ ಪ್ರಾರಬ್ಧದ ಫಲವಾಗಿದೆ; ಅದಕ್ಕಾಗಿ ಮಾನ-ಅಪಮಾನವನ್ನು ಬೇರೆಯಾಗಿ ತೆಗೆದುಕೊಳ್ಳಲಾಗಿದೆ. ಈ ಪರೇಚ್ಛಾಕೃತ ಪ್ರಾರಬ್ಧವು ಮಾನ-ದೊಡ್ಡಸ್ತಿಕೆಯಿಂದಲೂ ಆಗುತ್ತದೆ ಮತ್ತು ನಿಂದಾ-ಸ್ತುತಿ ಇತ್ಯಾದಿಗಳಿಂದಲೂ ಆಗುತ್ತದೆ. ಅದಕ್ಕಾಗಿ ಮಾನ-ಅಪಮಾನ ಪದದಲ್ಲೇ ನಿಂದಾ-ಸ್ತುತಿಯನ್ನು ತೆಗೆದುಕೊಳ್ಳಲು ಬಯಸಿದರೆ ತೆಗೆದುಕೊಳ್ಳಬಹುದು. ತಾತ್ಪರ್ಯ ಕರ್ಮ ಯೋಗಿಯು ಬೇರೆಯವರಿಂದ ಮಾಡಲಾದ ಮಾನ-ಅಪಮಾನದಲ್ಲಿ ಪ್ರಶಾಂತನಾಗಿರುತ್ತಾನೆ ಅರ್ಥಾತ್ – ಅವನ ಶಾಂತಿಯಲ್ಲಿ ಕಿಂಚಿತ್ತೂ ವ್ಯತ್ಯಾಸವಾಗುವುದಿಲ್ಲ.

ಮಾನ-ಅಪಮಾನದಲ್ಲಿ ಪ್ರಶಾಂತನಾಗಿರುವ ಉಪಾಯ – ಸಾಧಕನಿಗೆ ಯಾರಾದರು ಮಾನ-ಆದರ ಮಾಡಿದರೆ, ಸಾಧಕನು – ಇದು ನನ್ನ ಕರ್ಮಗಳ, ನನ್ನ ಗುಣಗಳ, ನನ್ನ ಒಳ್ಳೆತನದ ಫಲವಾಗಿದೆ ಎಂದು ತಿಳಿಯದೆ, ಇದಾದರೋ ಮಾನ-ಆದರ ಮಾಡುವವನ ಸಜ್ಜನಿಕೆಯಾಗಿದೆ, ಉದಾರತೆಯಾಗಿದೆ ಎಂದು ತಿಳಿಯಬೇಕು. ಅವನ ಸಜ್ಜನಿಕೆಯನ್ನು ತನ್ನ ಗುಣವೆಂದು ತಿಳಿಯುವುದು ಪ್ರಾಮಾಣಿಕತೆಯಲ್ಲ. ಒಂದು ಪಕ್ಷ ಯಾರಾದರು ಅಪಮಾನ ಮಾಡಿದರೆ – ಇದು ನನ್ನ ಕರ್ಮಗಳ ಫಲವಾಗಿದೆ ಎಂದು ತಿಳಿಯಬೇಕು. ಇದರಲ್ಲಿ ಅಪಮಾನ ಮಾಡುವವನ ಯಾವುದೇ ದೋಷವಿರದೆ ಅವನಾದರೋ ದಯೆಗೆ ಪಾತ್ರನಾಗಿದ್ದಾನೆ; ಏಕೆಂದರೆ, ಆ ಒಡಪಾಯಿ ನನ್ನ ಪಾಪಗಳ ಫಲವನ್ನು ಉಣಿಸುವುದರಲ್ಲಿ ನಿಮಿತ್ತನಾಗಿ ನನ್ನನ್ನು ಶುದ್ಧ ವಾಗಿಸಿದನು. ಈ ರೀತಿಯಾಗಿ ತಿಳಿಯುವುದರಿಂದ ಸಾಧಕನು ಮಾನ-ಅಪಮಾನದಲ್ಲಿ ಪ್ರಶಾಂತ, ನಿರ್ವಿಕಾರನಾಗಿ ಹೋದಾನು. ಒಂದೊಮ್ಮೆ ಅವನು ಮಾನವನ್ನು ತನ್ನ ಗುಣ ಮತ್ತು ಅಪಮಾನವನ್ನು ಬೇರೆಯವರ ದೋಷವೆಂದು ತಿಳಿದರೆ ಅವನು ಮಾನ-ಅಪಮಾನದಲ್ಲಿ ಪ್ರಶಾಂತನಾಗಲಾರನು.

'ಪರಮಾತ್ಮಾ ಸಮಾಹಿತಃ' – ಶೀತ-ಉಷ್ಣ, ಸುಖ-ದುಃಖ, ಮಾನ-ಅಪಮಾನ ಈ ಆರರಲ್ಲಿಯೂ ಪ್ರಶಾಂತ, ನಿರ್ವಿಕಾರನಾಗಿರುವುದರಿಂದ, ಅವನಿಗೆ ಪರಮಾತ್ಮನು ಪ್ರಾಪ್ತನಾಗಿದ್ದಾನೆ ಎಂಬುದು ಸಿದ್ಧವಾಗುತ್ತದೆ. ಕಾರಣ –ಅಂತರಂಗದಲ್ಲಿ ವಿಲಕ್ಷಣ ಆನಂದ ದೊರೆಯದೆ ಹೊರಗಿನ ಅನುಕೂಲತೆ-ಪ್ರತಿಕೂಲತೆ, ಸಿದ್ಧಿ-ಅಸಿದ್ಧಿ, ಮಾನ-ಅಪಮಾನ ಇವುಗಳಲ್ಲಿ ಅವನು ಪ್ರಶಾಂತನಾಗಿ ಇರಲಾರನು. ಅವನು ಪ್ರಶಾಂತನಾಗಿದ್ದಾನೆಂದರೆ ಅವನಿಗೆ ಏಕಸವಾಗಿರುವ ವಿಲಕ್ಷಣ ಆನಂದ ಸಿಕ್ಕಿದೆ ಎಂದು ತಿಳಿಯಬೇಕು. ಅದಕ್ಕಾಗಿ ಗೀತೆಯಲ್ಲಿ ಅಲ್ಲಲ್ಲಿ ಹೇಳಲಾಗಿದೆ-ಯಾರ ಮನಸ್ಸು ಸಾಮ್ಯಾವಸ್ಥೆಯಲ್ಲಿ ಸ್ಥಿತವಾಗಿದೆಯೋ, ಅವರು ಇದೇ ಜೀವಿತ ಅವಸ್ಥೆಯಲ್ಲಿಯೇ ಪ್ರಪಂಚವನ್ನು ಗೆದ್ದುಕೊಂಡಿರುವರು (೫/೧೯). ಯಾವ ಲಾಭದ ಪ್ರಾಪ್ತಿ ಆದ ಮೇಲೆ ಅದಕ್ಕಿಂತ ಹೆಚ್ಚಿನ ಲಾಭವಾಗುವುದು ಒಪ್ಪಲಾಗುವುದಿಲ್ಲ ಮತ್ತು ಅದರಲ್ಲಿ ಸ್ಥಿತನಾದ ಮೇಲೆ ಭಾರಿ ದೊಡ್ಡ ದುಃಖದಿಂದಲೂ ವಿಚಲಿತನಾಗಲಾರನು (೬/೨೨) ಇತ್ಯಾದಿ-ಇತ್ಯಾದಿ.

ಪರಿಶಿಷ್ಟ ಭಾವ – *ಯಾರ ಆತ್ಮಾ ಮಿತ್ರನಂತಿದೆಯೋ, ಅರ್ಥಾತ್ ಯಾರ ಶರೀರದಲ್ಲಿ ನಾನು ಮತ್ತು ನನ್ನದು ಇಲ್ಲವೋ ಅವನು ಅನುಕೂಲತೆ-ಪ್ರತಿಕೂಲತೆ, ಸುಖ-ದುಃಖ, ಮಾನ-ಅಪಮಾನ ಪ್ರಾಪ್ತವಾದಾಗಲೂ ಸಮ, ನಿರ್ವಿಕಾರನಾಗಿರುತ್ತಾನೆ. ಇಂತಹ ಮನುಷ್ಯನು ಸಿದ್ಧ ಕರ್ಮಯೋಗಿಯಾಗಿದ್ದಾನೆ, ಅರ್ಥಾತ್ ಅವನಿಗೆ ಪರಮಾತ್ಮನ ಅನುಭವ ಆಗಿ ಹೋಗಿದೆ –ಎಂದು ತಿಳಿಯಬೇಕು. ಕಾರಣ – ಅನುಕೂಲತೆ-ಪ್ರತಿಕೂಲತೆ, ಸುಖ-ದುಃಖ, ಮಾನ-ಅಪಮಾನಗಳಾದರೋ ಬಂದು ಹೋಗುತ್ತವೆ, ಆದರೆ ಪರಮಾತ್ಮ ತತ್ತ್ವವು ಹೇಗಿದೆಯೋ ಹಾಗೆಯೇ ಇರುತ್ತದೆ.*

ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ ।
ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಂಚನಃ ॥ ೮॥

ಜ್ಞಾನವಿಜ್ಞಾನತೃಪ್ತಾತ್ಮಾ - ಯಾರ ಅಂತಃಕರಣ ಜ್ಞಾನವಿಜ್ಞಾನದಿಂದ ತೃಪ್ತವಾಗಿದೆಯೋ, **ಕೂಟಸ್ಥಃ** - ಯಾರು ಕೂಟದಂತೆ ನಿರ್ವಿಕಾರನಾಗಿದ್ದಾನೋ, **ವಿಜಿತೇಂದ್ರಿಯಃ** - ಜಿತೇಂದ್ರಿಯನಾಗಿದ್ದಾನೋ (ಮತ್ತು), **ಸಮಲೋಷ್ಟಾಶ್ಮಕಾಂಚನಃ** - ಮಣ್ಣಿನ ಹೆಂಟೆ, ಕಲ್ಲು ಹಾಗೂ ಚಿನ್ನದಲ್ಲಿ ಸಮಬುದ್ಧಿಯುಳ್ಳನೋ, **ಇತಿ** - ಇಂತಹ, **ಯೋಗೀ** - ಯೋಗಿಯು, **ಯುಕ್ತಃ** - ಯುಕ್ತ (ಯೋಗಾರೂಢ)ನೆಂದು, **ಉಚ್ಯತೇ** - ಹೇಳಲಾಗುತ್ತದೆ. ॥ ೮॥

ಯಾರ ಅಂತಃಕರಣ ಜ್ಞಾನವಿಜ್ಞಾನದಿಂದ ತೃಪ್ತವಾಗಿದೆಯೋ, ಯಾರು ಕೂಟದಂತೆ ನಿರ್ವಿಕಾರನಾಗಿದ್ದಾನೋ, ಜಿತೇಂದ್ರಿಯನಾಗಿದ್ದಾನೋ ಮತ್ತು ಮಣ್ಣಿನ ಹೆಂಟೆ, ಕಲ್ಲು ಹಾಗೂ ಚಿನ್ನದಲ್ಲಿ ಸಮಬುದ್ಧಿಯುಳ್ಳನೋ ಇಂತಹ ಯೋಗಿಯು ಯುಕ್ತ (ಯೋಗಾರೂಢ)ನೆಂದು ಹೇಳಲಾಗುತ್ತದೆ. ॥ ೮॥

ವ್ಯಾಖ್ಯಾ - **'ಜ್ಞಾನ ವಿಜ್ಞಾನತೃಪ್ತಾತ್ಮಾ'** – ಇಲ್ಲಿ ಕರ್ಮಯೋಗದ ಪ್ರಕರಣವಿದೆ; ಆದ್ದರಿಂದ ಇಲ್ಲಿ ಕರ್ಮ ಮಾಡುವ ತಿಳವಳಿಕೆಯ ಹೆಸರು 'ಜ್ಞಾನ' ಮತ್ತು ಕರ್ಮಗಳ ಸಿದ್ಧಿ-ಅಸಿದ್ಧಿಯಲ್ಲಿ ಸಮನಾಗಿರುವುದು 'ವಿಜ್ಞಾನವಾಗಿದೆ'.

ಸ್ಥೂಲಶರೀರದಿಂದಾಗುವ ಕ್ರಿಯೆ, ಸೂಕ್ಷ್ಮಶರೀರದಿಂದಾಗುವ ಚಿಂತನೆ, ಕಾರಣಶರೀರದಿಂದಾಗುವ ಸಮಾಧಿ ಈ ಮೂರನ್ನೂ ತನಗಾಗಿ ಮಾಡುವುದು ಜ್ಞಾನವಲ್ಲ, ಕಾರಣ- ಕ್ರಿಯೆ, ಚಿಂತನೆ, ಸಮಾಧಿ ಇತ್ಯಾದಿ ಎಲ್ಲ ಕರ್ಮಗಳ ಆರಂಭ ಮತ್ತು ಸಮಾಪ್ತಿ ಇರುತ್ತದೆ ಹಾಗೂ ಆ ಕರ್ಮಗಳಿಂದ ದೊರೆಯುವ ಫಲಕ್ಕೂ ಆದಿ-ಅಂತ್ಯವಿರುತ್ತದೆ. ಆದರೆ ಸ್ವಯಂ ಪರಮಾತ್ಮನ ಅಂಶನಾದ ಕಾರಣ ನಿತ್ಯವಾಗಿರುತ್ತದೆ. ಆದ್ದರಿಂದ ಅನಿತ್ಯವಾದ ಕರ್ಮ ಮತ್ತು ಫಲದಿಂದ ಈ ನಿತ್ಯವಾಗಿರುವವನಿಗೆ ಏನು ತೃಪ್ತಿ ಸಿಗಬಹುದು? ಜಡದಿಂದ ಚೇತನ ಕ್ಕೇನು ತೃಪ್ತಿ ಸಿಗಬಹುದು? ಕರ್ಮಗಳಿಂದ ನನಗೆ ಏನೂ ಸಿಗ ಲಾರದು ಹೀಗೆ ಸರಿಯಾದ ಅನುಭವವಾದರೆ ಇದು ಕರ್ಮಗಳನ್ನು ಮಾಡುವ 'ಜ್ಞಾನ'ವಾಗಿದೆ. ಇಂತಹ ಜ್ಞಾನ ಉಂಟಾದಾಗ ಅವನು ಕರ್ಮಗಳ ಪೂರ್ಣತೆ-ಅಪೂರ್ಣತೆಯಲ್ಲಿ ಮತ್ತು ಪದಾರ್ಥಗಳ ಪ್ರಾಪ್ತಿ-ಅಪ್ರಾಪ್ತಿಯಲ್ಲಿ ಸಮನಾದಾನು – ಇದು ವಿಜ್ಞಾನವಾಗಿದೆ. ಈ ಜ್ಞಾನ-ವಿಜ್ಞಾನ ದಿಂದ ಅವನು ತೃಪ್ತನಾಗುತ್ತಾನೆ. ಮತ್ತೆ ಅವನಿಗೆ ಮಾಡುವುದು, ತಿಳಿಯುವುದು, ಪಡೆಯುವುದು ಏನೂ ಬಾಕಿ ಉಳಿಯುವುದಿಲ್ಲ.

'ಕೂಟಸ್ಥ'* – ಕೂಟ (ಅಡಿಗಲ್ಲು) ಒಂದು ಕಬ್ಬಿಣದ ತುಂಡು ಆಗಿರುತ್ತದೆ, ಅದರ ಮೇಲೆ ಕಬ್ಬಿಣ, ಚಿನ್ನ, ಬೆಳ್ಳಿ ಇತ್ಯಾದಿಗಳು ಅನೇಕರೂಪದಿಂದ ಬಡಿಯಲಾಗುತ್ತವೆ, ಆದರೆ ಅದು ಒಂದೇ ರೀತಿಯಾಗಿರುತ್ತದೆ, ಕದಲುವುದಿಲ್ಲ, ಹೀಗೆಯೇ ಸಿದ್ಧ ಮಹಾಪುರುಷರ ಮುಂದೆ ನಾನಾ ಬಗೆಯ ಪರಿಸ್ಥಿತಿಗಳು ಬಂದರೂ ಅವರು ಕೂಟದಂತೆ ನಿರ್ವಿಕಾರವಾಗಿರುತ್ತಾರೆ.

'ವಿಜಿತೇಂದ್ರಿಯಃ'–ಕರ್ಮಯೋಗದ ಸಾಧಕನಿಗೆ ಇಂದ್ರಿಯಗಳ ಬಗ್ಗೆ ತುಂಬಾ ಗಮನಕೊಡಬೇಕಾಗುತ್ತದೆ; ಏಕೆಂದರೆ ಕರ್ಮ ಮಾಡುವುದರಲ್ಲಿ ಪ್ರವೃತ್ತಿ ಇರುವ ಕಾರಣ ಅವನಿಗೆ ಎಲ್ಲಾದರು ರಾಗ-ದ್ವೇಷಗಳಾಗುವ ಸಂಭವವಿರುತ್ತದೆ. ಅದಕ್ಕಾಗಿ ಗೀತೆಯಲ್ಲಿ– **'ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್'** (೧೨/೧೧) ಎಂದು ಹೇಳಿದೆ, ಅರ್ಥಾತ್ – ಕರ್ಮಫಲ ತ್ಯಾಗದಲ್ಲಿ ಜಿತೇಂದ್ರಿಯತೆ ಮುಖ್ಯವಾಗಿದೆ. ಈ ರೀತಿ ಸಾಧನಾ ಅವಸ್ಥೆಯಲ್ಲಿ ಇಂದ್ರಿಯಗಳ ಬಗ್ಗೆ ವಿಶೇಷ ಗಮನವಿಡುವ ಸಾಧಕನು ಸಿದ್ಧ-ಅವಸ್ಥೆಯಲ್ಲಿ ಸ್ವತಃ 'ವಿಜಿತೇಂದ್ರಿಯ'ನಾಗುತ್ತಾನೆ.

'ಸಮಲೋಷ್ಟಾಶ್ಮಕಾಂಚನಃ' – 'ಲೋಷ್ಟ' ಎಂದು ಮಣ್ಣಿನ ಹೆಂಟೆಗೆ, 'ಅಶ್ಮ' ಎಂದು ಕಲ್ಲಿಗೆ, 'ಕಾಂಚನ' ಎಂದು ಚಿನ್ನಕ್ಕೆ ಹೇಳುತ್ತಾರೆ – ಇವೆಲ್ಲದರಲ್ಲಿ ಸಿದ್ಧ ಕರ್ಮಯೋಗಿಯು ಸಮನಾಗಿರುತ್ತಾನೆ. ಸಮನಾಗಿರುವ ಅರ್ಥ – ಮಣ್ಣಿನಹೆಂಟೆ, ಕಲ್ಲು, ಚಿನ್ನದ ಜ್ಞಾನವಿರುವುದಿಲ್ಲ ಎಂಬುದಲ್ಲ– ಇಂತಹ ಜ್ಞಾನ ಚೆನ್ನಾಗಿರುತ್ತದೆ ಮತ್ತು ಅವುಗಳ ವ್ಯವಹಾರವೂ ಅವುಗಳನುಸಾರ ಹೇಗಾಗಬೇಕೋ ಹಾಗೆಯೇ ಆಗುತ್ತದೆ, ಅರ್ಥಾತ್–ಅವನು ಚಿನ್ನವನ್ನು ಕಪಾಟಿನಲ್ಲಿ ಸುರಕ್ಷಿತವಾಗಿಡುತ್ತಾನೆ, ಮಣ್ಣಿನ ಹೆಂಟೆ, ಕಲ್ಲುಗಳನ್ನು ಹೊರಗೆ ಇಡುತ್ತಾನೆ. ಹೀಗಿದ್ದರೂ ಕೂಡ ಹೊನ್ನು ಕಳೆದುಹೋದರೂ, ಹಣ ಹೊರಟುಹೋದರೂ, ಅವನ ಮನಸ್ಸಿನಲ್ಲಿ ಯಾವುದೇ ಪರಿಣಾಮ ಉಂಟಾಗುವುದಿಲ್ಲ ಮತ್ತು ಹೊನ್ನು-ಹಣ ದೊರೆತಾಗಲೂ ಅವನ ಮನಸ್ಸಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಅರ್ಥಾತ್ ಅವುಗಳು ಬಂದು

* ಯಾರು ಕೂಟ (ಚಿನ್ನ-ಕಬ್ಬಿಣ ಬಡಿಯುವ ಅಡಿಗಲ್ಲು)ದಂತೆ ಸ್ಥಿರನಾಗಿರುತ್ತಾನೋ ಅವನಿಗೆ ಕೂಟಸ್ಥ ಎಂದು ಹೇಳುತ್ತಾರೆ. 'ಕೂಟಮತ್ ತಿಷ್ಠತೀತಿ ಕೂಟಸ್ಥಃ'.

ಹೋಗುವುದರಿಂದ, ಇರುವುದರಿಂದ ಕೆಟ್ಟುಹೋಗುವುದರಿಂದ ಅವನಿಗೆ ಹರ್ಷ-ಶೋಕವಾಗುವುದಿಲ್ಲ ಇದೇ ಅವನು ಸಮನಾಗಿರುವುದಾಗಿದೆ. ಅವನಿಗೆ ಕಲ್ಲುಗಳಿದ್ದಂತೆ ಚಿನ್ನವೂ ಇದೆ, ಚಿನ್ನವಿದ್ದಂತೆ ಮಣ್ಣಿನ ಹೆಂಟಿಗಳಿವೆ, ಹೆಂಟಿಗಳಂತೆ ಚಿನ್ನವಾಗಿದೆ. ಆದ್ದರಿಂದ ಇವುಗಳಲ್ಲಿ ಯಾವುದಾದರೂ ಹೊರಟು ಹೋದರೇನು? ಯಾವುದಾದರು ಕೆಟ್ಟು ಹೋದರೇನು? ಈ ಮಾತಿಗಾಗಿ ಅವನ ಅಂತಃಕರಣದಲ್ಲಿ ಯಾವುದೇ ವಿಕಾರ ಉಂಟಾಗುವುದಿಲ್ಲ, ಈ ಸ್ವರ್ಣಾದಿ ಪ್ರಾಕೃತ ಪದಾರ್ಥಗಳ ಬೆಲೆಯಾದರೋ ಪ್ರಕೃತಿ ಯೊಂದಿಗೆ ಸಂಬಂಧವಿರಿಸಿದಾಗಲೇ ಗೊತ್ತಾಗುತ್ತದೆ ಮತ್ತು ಅಲ್ಲಿಯವರೆಗೆ ಅವುಗಳು ಚೆನ್ನಾಗಿವೆ-ಕೆಟ್ಟದಾಗಿವೆ ಎಂಬ ಪರಿಣಾಮ ಅಂತಃಕರಣದಲ್ಲಿ ಆಗುತ್ತಿರುತ್ತದೆ. ಆದರೆ ನಿಜವಾದ ಬೋಧವಾಗುತ್ತಲೇ ಪ್ರಕೃತಿಯಿಂದ ಸಂಬಂಧ ಕಡಿದುಹೋದಾಗ ಅವನ ಅಂತಃಕರಣದಲ್ಲಿ ಈ ಪ್ರಾಕೃತ (ಭೌತಿಕ) ಪದಾರ್ಥಗಳ ಯಾವ ಬೆಲೆಯೂ ಇರುವುದಿಲ್ಲ, ಅರ್ಥಾತ್ - ಒಳ್ಳೆಯ-ಕೆಟ್ಟ ಎಲ್ಲ ಪದಾರ್ಥಗಳಲ್ಲಿ ಸಮಭಾವ ಉಂಟಾಗುತ್ತದೆ.

ಅವನ ದೃಷ್ಟಿಯು ಪದಾರ್ಥಗಳು ಉಂಟಾಗುವುದು – ನಷ್ಟ ವಾಗುವುದು ಅದರ ಸ್ವಭಾವದ ಕುರಿತು ಇರುತ್ತದೆ, ಅರ್ಥಾತ್ – ಅವನ ದೃಷ್ಟಿಯಲ್ಲಿ ಈ ಪ್ರಾಕೃತ ಪದಾರ್ಥಗಳ ಉತ್ಪನ್ನ ಮತ್ತು ನಷ್ಟವಾಗುವುದರಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ ಎಂಬುದೇ ಸಾರವಾಗಿದೆ. ಹೊನ್ನು ಉತ್ಪನ್ನವಾಗಿ ನಷ್ಟವಾಗುತ್ತದೆ, ಕಲ್ಲು ಉತ್ಪನ್ನವಾಗಿ ನಷ್ಟವಾಗುತ್ತದೆ, ಮಣ್ಣಿನಹೆಂಟಿ ಉತ್ಪನ್ನವಾಗಿ ನಷ್ಟವಾಗುತ್ತದೆ. ಅದರ ಈ ಅನಿತ್ಯತೆ ಯಲ್ಲಿ ದೃಷ್ಟಿ ಇರುವುದರಿಂದ ಅವರಿಗೆ ಹೊನ್ನು, ಕಲ್ಲು, ಹೆಂಟಿ ಇವುಗಳಲ್ಲಿ ತಾತ್ತ್ವಿಕವಾಗಿ ಯಾವ ವ್ಯತ್ಯಾಸವೂ ಕಾಣುವುದಿಲ್ಲ, ಈ ಮೂರರೊಂದಿಗೆ ವ್ಯವಹಾರವಾದರೋ ಯಥಾಯೋಗ್ಯ ವಾಗಬೇಕು ಹಾಗೂ ಯಥಾಯೋಗ್ಯ ಮಾಡುವುದೂ ಉಚಿತವಾಗಿದೆ, ಮತ್ತು ಅವನು ಯಥಾಯೋಗ್ಯ ವ್ಯವಹಾರವನ್ನು ಮಾಡುತ್ತಾನೆ; ಆದರೆ ಅವನ ದೃಷ್ಟಿಯು ವಿನಾಶತ್ವದಲ್ಲಿಯೇ ಇರುತ್ತದೆ. ಅವುಗಳಲ್ಲಿ ಒಂದೇ ಪರಮಾತ್ಮತತ್ತ್ವವು ಸಮಾನವಾಗಿ ಪರಿಪೂರ್ಣವಾಗಿದೆ, ಆ ಪರಮಾತ್ಮತತ್ತ್ವದ ಸ್ವತಃಸಿದ್ಧ ಸಮತೆಯು ಅವನಲ್ಲಿರುತ್ತದೆ.

'ಯುಕ್ತ ಇತ್ಯುಚ್ಯತೇ ಯೋಗೀ' – ಇಂತಹ ಜ್ಞಾನ-ವಿಜ್ಞಾನದಿಂದ ತೃಪ್ತ, ನಿರ್ವಿಕಾರ, ಜಿತೇಂದ್ರಿಯ ಮತ್ತು ಸಮಬುದ್ಧಿಯುಳ್ಳ ಸಿದ್ಧಕರ್ಮಯೋಗಿಯನ್ನು ಯುಕ್ತ ಅರ್ಥಾತ್-ಯೋಗಾರೂಢ, ಸಮತೆಯಲ್ಲಿ ಸ್ಥಿತನೆಂದು ಹೇಳಲಾಗುತ್ತದೆ.

—•—

ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥದ್ವೇಷ್ಯಬಂಧುಷು ।
ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ ॥ ೯॥

ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥದ್ವೇಷ್ಯಬಂಧುಷು - ಸಹೃದ್, ಮಿತ್ರ, ವೈರೀ, ಉದಾಸೀನ, ಮಧ್ಯಸ್ಥ ದ್ವೇಷ್ಯ ಮತ್ತು ಸಂಬಂಧಿಗಳಲ್ಲಿ, **ಚ** - ಹಾಗೂ, **ಸಾಧುಷು** - ಸಾಧುಗಳಂತೆ ಆಚರಣೆ ಮಾಡುವವನಲ್ಲಿ (ಮತ್ತು), **ಪಾಪೇಷು** - ಪಾಪಾಚರಣೆ ಮಾಡುವವನಲ್ಲಿಯೂ, **ಅಪಿ** - ಕೂಡ, **ಸಮಬುದ್ಧಿಃ** - ಸಮಬುದ್ಧಿಯುಳ್ಳ ಮನುಷ್ಯನು, **ವಿಶಿಷ್ಯತೇ** - ಶ್ರೇಷ್ಠನಾಗಿದ್ದಾನೆ. ॥ ೯॥

ಸುಹೃದ್, ಮಿತ್ರ, ವೈರಿ, ಉದಾಸೀನ, ಮಧ್ಯಸ್ಥ ದ್ವೇಷ್ಯ ಮತ್ತು ಸಂಬಂಧಿಗಳಲ್ಲಿ ಹಾಗೂ ಸಾಧುಗಳಂತೆ ಆಚರಣೆ ಮಾಡುವವನಲ್ಲಿ ಮತ್ತು ಪಾಪಾಚರಣೆ ಮಾಡುವವನಲ್ಲಿಯೂ ಕೂಡ ಸಮಬುದ್ಧಿಯುಳ್ಳ ಮನುಷ್ಯನು ಶ್ರೇಷ್ಠನಾಗಿದ್ದಾನೆ ॥ ೯॥

ವ್ಯಾಖ್ಯಾ - [ಎಂಟನೆ ಶ್ಲೋಕದಲ್ಲಿ ಪದಾರ್ಥಗಳಲ್ಲಿ ಸಮತೆ ಹೇಳಲಾಯಿತು, ಈಗ ಈ ಶ್ಲೋಕದಲ್ಲಿ ವ್ಯಕ್ತಿಗಳಲ್ಲಿ ಸಮತೆಯನ್ನು ಹೇಳುತ್ತಾನೆ. ವ್ಯಕ್ತಿಗಳಲ್ಲಿ ಸಮತೆಯನ್ನು ಹೇಳುವುದರ ತಾತ್ಪರ್ಯ – ಮನುಷ್ಯಾದರೋ ತನ್ನ ಕಡೆಯಿಂದ ಯಾವ ಕ್ರಿಯೆಯು ಮಾಡುವುದಿಲ್ಲ; ಆದ್ದರಿಂದ ಅವುಗಳಲ್ಲಿ ಸಮಬುದ್ಧಿ ಉಂಟಾಗುವುದು ಸುಲಭವಾಗಿದೆ. ಆದರೆ ವ್ಯಕ್ತಿಗಳಾದರೋ ತನಗಾಗಿ ಮತ್ತು ಬೇರೆಯವರಿಗಾಗಿಯೂ ಕ್ರಿಯೆ ಮಾಡುತ್ತಾರೆ; ಆದ್ದರಿಂದ ಅವರಲ್ಲಿ ಸಮಬುದ್ಧಿ ಉಂಟಾಗುವುದು ಕಷ್ಟವಾಗಿದೆ. ಅದಕ್ಕಾಗಿ ವ್ಯಕ್ತಿಗಳ ಆಚರಣೆಯನ್ನು ನೋಡಿಯೂ ಕೂಡ ಯಾರ ಬುದ್ಧಿಯಲ್ಲಿ, ವಿಚಾರದಲ್ಲಿ ಯಾವುದೇ ವಿಷಮತೆ ಅಥವಾ ಪಕ್ಷಪಾತವಿರುವುದಿಲ್ಲವೋ ಇಂತಹ ಸಮಬುದ್ಧಿಯುಳ್ಳ ಪುರುಷನು ಶ್ರೇಷ್ಠನಾಗಿದ್ದಾನೆ.]

'ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥದ್ವೇಷ್ಯಬಂಧುಷು' – ತಾಯಿಯಂತೆ ಹಿತವನ್ನು ಬಯಸುವನಾದರೂ ಮಮತೆಯಿಲ್ಲದೆ, ಕಾರಣವಿಲ್ಲದೆ ಎಲ್ಲರ ಹಿತವನ್ನು ಬಯಸುವ ಮತ್ತು ಮಾಡುವ ಸ್ವಭಾವವುಳ್ಳವನನ್ನು 'ಸುಹೃದ' ಎಂದು ಹೇಳುತ್ತಾರೆ. ಉಪಕಾರಕ್ಕೆ ಬದಲಾಗಿ ಉಪಕಾರವನ್ನು ಮಾಡುವವನನ್ನು 'ಮಿತ್ರ'ನೆಂದು ಹೇಳುತ್ತಾರೆ.

ಹೇಗೆ ಕಾರಣವಿಲ್ಲದೆ ಬೇರೆಯವರ ಹಿತವನ್ನು ಮಾಡುವ ಸ್ವಭಾವ ಸುಹೃದ್‌ನಲ್ಲಿರುತ್ತದೋ, ಹಾಗೆಯೇ ಯಾರಲ್ಲಿ ಕಾರಣವಿಲ್ಲದೆ ಬೇರೆಯವರ ಅಹಿತವನ್ನು ಮಾಡುವ ಸ್ವಭಾವ

ವಿರುತ್ತದೋ, ಅವನನ್ನು 'ಅರಿ' ಎಂದು ಹೇಳುತ್ತಾರೆ. ಯಾರು ತನ್ನ ಸ್ವಾರ್ಥದಿಂದ ಅಥವಾ ಬೇರೆ ಯಾವುದಾದರು ಕಾರಣ ವಿಶೇಷದಿಂದ ಬೇರೆಯವರ ಅಹಿತ, ಅಪಕಾರ ಮಾಡುತ್ತಾನೋ ಅವನು 'ದ್ವೇಷ್ಯ' ನಾಗಿದ್ದಾನೆ.

ಇಬ್ಬರು ಪರಸ್ಪರ ವಾದವಿವಾದ ಮಾಡುತ್ತಿದ್ದಾರೆ, ಅವರನ್ನು ನೋಡಿಯೂ ಕೂಡ ಯಾರು ತಟಸ್ಥನಾಗಿರುತ್ತಾನೋ, ಯಾರಲ್ಲೂ ಕಿಂಚಿತ್ತೂ ಪಕ್ಷಪಾತಮಾಡುವುದಿಲ್ಲವೋ ಮತ್ತು ತಾನು ಏನನ್ನೂ ಹೇಳುವುದಿಲ್ಲವೋ ಅವನನ್ನು, 'ಉದಾಸೀನ'ನೆಂದು ಹೇಳುತ್ತಾರೆ. ಆದರೆ ಅವರಿಬ್ಬರಲ್ಲಿ ಜಗಳ ಮುಗಿದು ಹೋಗಲೀ, ಇಬ್ಬರಿಗೂ ಹಿತವಾಗಲೀ – ಎಂಬ ಪ್ರಯತ್ನ ಮಾಡುವವನನ್ನು 'ಮಧ್ಯಸ್ಥ' ಎಂದು ಹೇಳುತ್ತಾರೆ.

ಒಬ್ಬನು ಬಂಧು ಅರ್ಥಾತ್ ಸಂಬಂಧಿಯಾಗಿದ್ದಾನೆ ಮತ್ತು ಇನ್ನೊಬ್ಬನು ಬಂಧುವಲ್ಲ, ಆದರೆ ಈರ್ವರೊಂದಿಗೂ ವ್ಯವಹರಿಸುವುದರಲ್ಲಿ ಅವನ ಮನಸ್ಸಿನಲ್ಲಿ ವಿಷಮಭಾವ ಉಂಟಾಗುದಿಲ್ಲ, ಅವನ ಮಗನು ಅಥವಾ ಬೇರೆ ಯಾರದೋ ಮಗನು ಯಾವುದಾದರು ಕೆಟ್ಟ ಕೆಲಸಮಾಡಿದರೆ ಅವನು ಅವರ ಅಪರಾಧಕ್ಕನುಸಾರ ಇಬ್ಬರಿಗೂ ಸಮಾನವಾದ ಶಿಕ್ಷೆ ಕೊಡುತ್ತಾನೆ, ಹಾಗೆಯೇ ತನ್ನ ಪುತ್ರನು ಅಥವಾ ಬೇರೆಯವರ ಪುತ್ರನು ಒಳ್ಳೆಯ ಕೆಲಸಮಾಡಿದರೆ ಅವರಿಗೆ ಪಾರಿತೋಷಕವನ್ನು ಕೊಡುವುದರಲ್ಲಿಯೂ ಅವನಿಗೆ ಯಾವುದೇ ಪಕ್ಷಪಾತ ವಿರುವುದಿಲ್ಲ.

'ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ' – ಶ್ರೇಷ್ಠ ಆಚರಣೆಮಾಡುವವರೊಂದಿಗೆ ಮತ್ತು ಪಾಪಾಚರಣೆ ಉಳ್ಳವರೊಂದಿಗೆ ವ್ಯವಹಾರ ಮಾಡುವುದರಲ್ಲಿ ವ್ಯತ್ಯಾಸ ವಿರುತ್ತದೆ ಹಾಗೂ ಇರಲೂಬೇಕು; ಆದರೆ ಇಬ್ಬರ ಹಿತೈಷಿತೆಯಲ್ಲಿ ಅರ್ಥಾತ್ ಅವರ ಹಿತಮಾಡುವುದರಲ್ಲಿ, ದುಃಖದ ಸಮಯದಲ್ಲಿ ಅವರಿಗೆ ಸಹಾಯಮಾಡುವುದರಲ್ಲಿ ಅವನ ಅಂತಃಕರಣದಲ್ಲಿ ಯಾವುದೇ ವಿಷಮಭಾವ, ಪಕ್ಷಪಾತ ಇರುವುದಿಲ್ಲ. 'ಎಲ್ಲರಲ್ಲಿಯೂ ಓರ್ವ ಪರಮಾತ್ಮನಿದ್ದಾನೆ' ಈ ಅನುಭವವು ಸ್ವಯಂದಲ್ಲಾಗುತ್ತದೆ, ಬುದ್ಧಿಯಲ್ಲಿ ಎಲ್ಲರ ಹಿತೈಷಿತೆಯೇ ಇರುತ್ತದೆ, ಮನಸ್ಸಿನಲ್ಲಿ ಎಲ್ಲರ ಹಿತ ಚಿಂತನವೇ ಆಗುತ್ತದೆ ಮತ್ತು ವ್ಯವಹಾರದಲ್ಲಿ ಪರತೆ-ಮಮತೆ ಬಿಟ್ಟು ಎಲ್ಲರ ಸುಖಕ್ಕಾಗಿ ಕಾರ್ಯವಾಗುತ್ತದೆ.

ವಿಷಮಬುದ್ಧಿ ಹೆಚ್ಚಾಗಿರುವ ಸಂಭವವಿರುವಲ್ಲಿಯೂ, ಸಮ ಬುದ್ಧಿ ಇರುವುದು ವಿಶೇಷವಾಗಿದೆ. ಅಲ್ಲಿ ಸಮಬುದ್ಧಿ ಉಂಟಾದರೆ ಮತ್ತೆ ಎಲ್ಲ ಕಡೆಗಳಲ್ಲಿ ಸಮಬುದ್ಧಿ ಉಂಟಾಗುತ್ತದೆ.

ಈ ಶ್ಲೋಕದಲ್ಲಿ ಭಾವ, ಗುಣ, ಆಚರಣೆ ಇತ್ಯಾದಿಗಳ ಭಿನ್ನತೆಯಿಂದ ಒಂಭತ್ತು ಪ್ರಕಾರದ ಪ್ರಾಣಿಗಳ ಹೆಸರುಗಳು ಬಂದಿವೆ. ಈ ಪ್ರಾಣಿಗಳ ಭಾವ, ಗುಣ, ಆಚರಣೆ ಇತ್ಯಾದಿ ಭಿನ್ನತೆಯಿಂದ ಅವರೊಂದಿಗೆ ವರ್ತಿಸುವುದರಲ್ಲಿ ವಿಷಮತೆ ಬಂದರೆ ಅದು ದೋಷವಲ್ಲ, ಕಾರಣ – ಆ ವರ್ತನೆಯಾದರೋ ಅವರ ಭಾವ, ಆಚರಣೆ, ಪರಿಸ್ಥಿತಿ ಇತ್ಯಾದಿಗಳನುಸಾರವೇ ಆಗಿದೆ ಮತ್ತು ಅವರಿಗಾಗಿಯೇ ಇದೆ, ತನಗಾಗಿ ಅಲ್ಲ, ಆದರೆ ಅವರೆಲ್ಲರಲ್ಲಿ ಪರಮಾತ್ಮನೇ ಪರಿಪೂರ್ಣನಾಗಿದ್ದಾನೆ – ಈ ಭಾವದಲ್ಲಿ ಯಾವುದೇ ವ್ಯತ್ಯಾಸಬರಬಾಗದು. ತನ್ನ ಕಡೆಯಿಂದ ಎಲ್ಲರ ಸೇವೆಯಾಗಲೀ – ಈ ಭಾವದಲ್ಲಿಯೂ ಅಂತರ ಬೀಳಬಾರದು.

ಶಾತ್ಯರ್ಥ – ಯಾವುದಾದರು ಮಾರ್ಗದಿಂದ ಯಾರಿಗೆ ತತ್ತ್ವಬೋಧವಾಗಿ ಹೋಗಿದೆಯೋ, ಅವರಿಗೆ ಎಲ್ಲ ಕಡೆಯಲ್ಲಿ ಸಮಬುದ್ಧಿ ಉಂಟಾಗುತ್ತದೆ, ಅರ್ಥಾತ್ – ಎಲ್ಲಿಯೂ ಪಕ್ಷಪಾತ ವಿರದೆ ಸಮಾನವಾಗಿ ಸೇವೆ ಮತು ಹಿತದ ಭಾವ ಉಂಟಾಗುತ್ತದೆ. ಭಗವಂತನು ಸಮಸ್ತ ಪ್ರಾಣಿಗಳ ಸುಹೃದ್ ಆಗಿದ್ದಾನೆ – **'ಸುಹೃದಂ ಸರ್ವಭೂತಾನಾಮ್'** (೫/೨೯) ಹಾಗೆಯೇ ಆಸಿದ್ಧ ಕರ್ಮಯೋಗಿಯು ಸಮಸ್ತ ಪ್ರಾಣಿಗಳ ಸುಹೃದ್ ಆಗುತ್ತಾನೆ – **'ಸುಹೃದಃ ಸರ್ವದೇಹಿನಾಮ್'** (ಶ್ರೀಮದ್ಭಾಗವತ ೩/೨೫/೨೧).

ಇಲ್ಲಿ ಸುಹೃದ್, ಮಿತ್ರ – ಇತ್ಯಾದಿ ಹೆಸರು ಹೇಳಿದನಂತರ ಕೊನೆಗೆ **'ಸಾಧುಷ್ವಪಿ ಚ ಪಾಪೇಷು'** ಎಂದು ಹೇಳುವುದರ ತಾತ್ಪರ್ಯ – ಯಾರಿಗೆ ಶ್ರೇಷ್ಠ ಆಚರಣೆಯುಳ್ಳವರೊಂದಿಗೆ ಮತ್ತು ನಿಕೃಷ್ಟ ಆಚರಣೆಯುಳ್ಳವರೊಂದಿಗೆ ಸಮಬುದ್ಧಿ ಉಂಟಾದರೆ ಅವನಿಗೆ ಎಲ್ಲ ಕಡೆಗಳಲ್ಲಿ ಸಮಬುದ್ಧಿ ಉಂಟಾದೀತು. ಕಾರಣ – ಪ್ರಪಂಚದಲ್ಲಿ ಆಚರಣೆಗಳದ್ದೇ ಪ್ರಾಮುಖ್ಯತೆ ಇದೆ, ಆಚರಣೆಗಳದ್ದೇ ಪ್ರಭಾವ ಬೀಳುತ್ತದೆ, ಆಚರಣೆಗಳಿಂದಲೇ ಮನುಷ್ಯನ ಪರೀಕ್ಷೆಯಾಗುತ್ತದೆ, ಆಚರಣೆಯಿಂದಲೇ ಶ್ರದ್ಧೆ-ಅಶ್ರದ್ಧೆ ಉಂಟಾಗುತ್ತದೆ, ಸ್ವಾಭಾವಿಕವಾಗಿ ಆಚರಣೆಗಳ ಮೇಲೆಯೇ ದೃಷ್ಟಿ ಹೋಗುತ್ತದೆ, ಆಚರಣೆಯಿಂದಲೆ ಸದ್ಭಾವ-ದುರ್ಭಾವ ಉಂಟಾಗುತ್ತವೆ. ಭಗವಂತನೂ ಕೂಡ – **'ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋಜನಃ'** (೩/೨೧) ಎಂದು ಹೇಳಿ ಆಚರಣೆಯ ಮಾತನ್ನು ಮುಖ್ಯವಾಗಿ ಹೇಳಿರುವನು. ಅದಕ್ಕಾಗಿ ಶ್ರೇಷ್ಠ ಆಚರಣೆಯುಳ್ಳ ಮತ್ತು ಕನಿಷ್ಠ ಆಚರಣೆಯುಳ್ಳ ಇಬ್ಬರಲ್ಲಿಯೂ ಸಮತೆ ಉಂಟಾದರೆ ಮತ್ತೆ ಎಲ್ಲ ಕಡೆಗಳಲ್ಲಿ ಸಮತೆ ಉಂಟಾದೀತು. ಇವೆರಡರಲ್ಲಿಯೂ ಶ್ರೇಷ್ಠ ಆಚರಣೆಯುಳ್ಳ ಪುರುಷರಲ್ಲಿ ಸದ್ಭಾವ ಉಂಟಾಗುವುದು ಸುಲಭವಾಗಿದೆ, ಆದರೆ ಪಾಪಾಚರಣೆಯುಳ್ಳ ಪುರುಷರಲ್ಲಿ ಸದ್ಭಾವ ಉಂಟಾಗುವುದು ಕಷ್ಟವಾಗಿದೆ. ಆದ್ದರಿಂದ ಭಗವಂತನು ಇಲ್ಲಿ **'ಅಪಿ ಚ'** ಎರಡು ಅವ್ಯಯ ಗಳನ್ನು ಪ್ರಯೋಗಿಸಿರುವನು. ಅದರ ಅರ್ಥ – 'ಮತ್ತು ಪಾಪಾಚರಣೆ ಮಾಡುವವರಲ್ಲಿಯೂ

ಕೂಡ' ಯಾರಿಗೆ ಸಮಬುದ್ಧಿ ಇದೆಯೋ ಅವನು ಶ್ರೇಷ್ಠನಾಗಿದ್ದಾನೆ.

ಇಲ್ಲಿ ಕಂಡುಬರುವವರ ಕುರಿತು ನೋಡುವವನ ಸ್ಥಿತಿಯು ವರ್ಣನೆ ಮಾಡಲಾಗಿದೆ, ಆದ್ದರಿಂದ **'ಸಮಬುದ್ಧಿರ್ವಿಶಿಷ್ಯತೇ'** ಎಂದು ಹೇಳಿದೆ. ನೋಡುವವನಲ್ಲಿರುವ ಸಮಬುದ್ಧಿಯು ಎಲ್ಲರಿಗೆ ಕಂಡುಬರುವುದಿಲ್ಲ, ಆದರೆ ಸಾಧಕನಿಗಾದರೋ ಅದೇ ಮುಖ್ಯ ವಾಗಿದೆ; ಏಕೆಂದರೆ, ಸಾಧಕನು 'ನಾನು ನನ್ನ ದೃಷ್ಟಿಯಿಂದ ಹೇಗಿದ್ದೇನೆ' ಹೀಗೆ ತಾನೇ-ತನ್ನನ್ನು ನೋಡುತ್ತಾನೆ. ಅದಕ್ಕಾಗಿ ತನ್ನಿಂದಲೇ ತನ್ನ ಉದ್ಧಾರ ಮಾಡಿ ಕೊಳ್ಳಲು ಹೇಳಲಾಗಿದೆ (೬/೫).

ಪ್ರಪಂಚದಲ್ಲಿ ಪ್ರಾಯಶಃ ಇತರರ ಆಚರಣೆಗಳ ಕಡೆಗೇ ದೃಷ್ಟಿ ಇರುತ್ತದೆ. ಸಾಧಕನು – ನನ್ನ ದೃಷ್ಟಿಯು ನನ್ನ ಭಾವಗಳ ಕಡೆಗಿದೆಯೋ ಅಥವಾ ಇತರರ ಆಚರಣೆಗಳ ಕಡೆಗಿದೆಯೋ? ಎಂದು ವಿಚಾರ ಮಾಡಬೇಕು. ಬೇರೆಯವರ ಆಚರಣೆಗಳ ಮೇಲೆ ದೃಷ್ಟಿ ಇರುವುದರಿಂದ ಯಾವ ದೃಷ್ಟಿಯಿಂದ ತನ್ನ ಶ್ರೇಯಸ್ಸಾಗುತ್ತದೋ ಆ ದೃಷ್ಟಿಯು ಇಲ್ಲವಾಗಿ ಕತ್ತಲೆಯೇ ಆವರಿಸುತ್ತದೆ. ಆದ್ದರಿಂದ ಇತರರ ಶ್ರೇಷ್ಠ ಮತ್ತು ಕನಿಷ್ಠ ಆಚರಣೆಗಳ ಮೇಲೆ ದೃಷ್ಟಿಯನ್ನಿಡದೆ ಅವರ ನಿಜವಾದ ಸ್ವರೂಪದಲ್ಲಿ ದೃಷ್ಟಿ ಇರಿಸಬೇಕು. ಸ್ವರೂಪದಲ್ಲಿ ದೃಷ್ಟಿ ಇರುವುದರಿಂದ ಅವರ ಆಚರಣೆಗಳ ಮೇಲೆ ದೃಷ್ಟಿ ಇರಲಾರದು; ಏಕೆಂದರೆ, ಸ್ವರೂಪವು ಹೇಗಿದೆಯೋ ಹಾಗೆಯೇ ಇರುತ್ತದೆ, ಆಚರಣೆಗಳು ಬದಲಾಗುತ್ತಾ ಇರುತ್ತವೆ. ಸತ್ಯ ತತ್ತ್ವದ ಮೇಲಿರುವ ದೃಷ್ಟಿಯೂ ಸತ್ಯವಾಗಿರುತ್ತದೆ. ಆದರೆ ಕೇವಲ ಆಚರಣೆಗಳ ಮೇಲಿರುವ ದೃಷ್ಟಿಯು ಅಸತ್ತಿನ ಮೇಲಿರುವುದರಿಂದ ಅಸತ್ತೇ ಆಗಿರುತ್ತದೆ. ಇದರಲ್ಲಿಯೂ ಅಶುದ್ಧ ಆಚರಣೆಗಳ ಮೇಲೆಯೇ ಹೆಚ್ಚಾಗಿ ದೃಷ್ಟಿಯಿಳ್ಳವವರ ಪತನವೆಂದೇ ತಿಳಿಯಬೇಕು. ತಾತ್ಪರ್ಯ – ಆದರಣೀಯವಲ್ಲದ ಅಶುದ್ಧ ಆಚರಣೆಗಳಿಗೆ ಪ್ರಾಮುಖ್ಯತೆ ಕೊಡುವವನು ತನ್ನ ಪತನವನ್ನೇ ಮಾಡಿಕೊಳ್ಳುತ್ತಾನೆ. ಆದ್ದರಿಂದ ಭಗವಂತನು ಇಲ್ಲಿ – ಅಶುದ್ಧ ಆಚರಣೆ ಮಾಡುವಂತಹ ಪಾಪಿಗಳಲ್ಲಿಯೂ ಸಮಬುದ್ಧಿಯುಳ್ಳವನನ್ನು ಶ್ರೇಷ್ಠನೆಂದು ಹೇಳಿರುವನು. ಕಾರಣ – ಅವನ ದೃಷ್ಟಿಯು ಸತ್ಯತತ್ತ್ವದಲ್ಲಿರುವುದರಿಂದ ಅವನ ದೃಷ್ಟಿಯಲ್ಲಿ ಎಲ್ಲವೂ ಪರಮಾತ್ಮ ತತ್ತ್ವವೇ ಆಗಿರುತ್ತದೆ. ಮತ್ತೆ ಮುಂದೆ ಹೋದಾಗ 'ಯಾವುದೂ' ಇರುವುದಿಲ್ಲ, ಕೇವಲ ಪರಮಾತ್ಮ ತತ್ತ್ವವೇ ಉಳಿಯುತ್ತದೆ. **'ಸಮಬುದ್ಧಿರ್ವಿಶಿಷ್ಯತೇ'** ಎಂಬ ಪದದಿಂದ ಅವನದ್ದೇ ಮಹಿಮೆ ಹಾಡಲಾಗಿದೆ.

ವಿಶೇಷ ವಿಚಾರ

'ಗೀತೆಯಯೋಗ ಸಮತೆಯೇ ಆಗಿದೆ – **'ಸಮತ್ವಂ ಯೋಗ ಉಚ್ಯತೆ'** (೨/೪೮) ಗೀತೆಯ ದೃಷ್ಟಿಯಿಂದ ಒಂದೊಮ್ಮೆ ಸಮತೆ ಬಂದುಬಿಟ್ಟರೆ ಬೇರೆ ಯಾವ ಲಕ್ಷಣದ ಆವಶ್ಯಕತೆಯೂ ಇಲ್ಲ, ಅರ್ಥಾತ್ – ನಿಜವಾದ ಸಮತೆಯು ಪ್ರಾಪ್ತಿಯಾದವನಲ್ಲಿ ಎಲ್ಲ ಸದ್ಗುಣ-ಸದಾಚಾರಗಳು ತನ್ನಿಂದ-ತಾನೇ ಬರುವವು ಮತ್ತು ಅವನಿಗೆ ಜಗತ್ತಿನ ಮೇಲೆ ವಿಜಯ ಉಂಟಾಗುವುದು (೫/೧೯). ವಿಷ್ಣು ಪುರಾಣದಲ್ಲಿ ಪ್ರಹ್ಲಾದರೂ ಕೂಡ-ಸಮತೆಯು ಭಗವಂತನ ಆರಾಧನೆ (ಭಜನೆ)ಯಾಗಿದೆ – **'ಸಮತ್ವಮಾರಾಧನಮಚ್ಯುತಸ್ಯ'** (೧/೧೭/೯೦) ಎಂದು ಹೇಳಿರುವರು. ಈ ರೀತಿ ಯಾವ ಸಮತೆಯ ಅಸೀಮ, ಅಪಾರ, ಅನಂತ ಮಹಿಮೆ ಇದೆಯೋ, ಯಾವುದನ್ನು ಎಂದೂ ಯಾರೂ ವರ್ಣಿಸಲಾರರೋ, ಆ ಸಮತೆಯ ಪ್ರಾಪ್ತಿಯ ಉಪಾಯವು – ಕೆಟ್ಟತನದಿಂದ ರಹಿತನಾಗುವುದು. ಕೆಟ್ಟತನದಿಂದ ರಹಿತನಾಗುವ ಉಪಾಯವು – (೧) ಯಾರನ್ನೂ ಕೆಟ್ಟವನೆಂತು ತಿಳಿಯಬಾರದು. (೨) ಯಾರಿಗೂ ಕೆಡುಕನ್ನು ಮಾಡಬಾರದು. (೩) ಯಾರ ಕೆಡುಕನ್ನು ಬಗೆಯಬಾರದು. (೪) ಯಾವುದರಲ್ಲಿಯೂ ಕೆಡುಕನ್ನು ನೋಡಬಾರದು. (೫) ಯಾರ ಕೆಟ್ಟತನವನ್ನು ಕೇಳ ಬಾರದು. (೬) ಯಾರ ಕೆಟ್ಟತನವನ್ನು ಹೇಳಬಾರದು. ಈ ಆರು ಮಾತುಗಳನ್ನು ದೃಢತೆಯಿಂದ ಪಾಲಿಸಿದರೆ ನಾವು ಕೆಟ್ಟತನದಿಂದ ರಹಿತರಾಗುವೆವು. ಕೆಟ್ಟತನ ರಹಿತವಾಗುತ್ತಲೇ ನಮ್ಮಲ್ಲಿ ತನ್ನಿಂದ-ತಾನೇ ಒಳ್ಳೆತನ ಬಂದೀತು; ಏಕೆಂದರೆ, ಒಳ್ಳೆತನ ನಮ್ಮ ಸ್ವರೂಪವಾಗಿದೆ.

ಒಳ್ಳೆತನವನ್ನು ತರಲು ನಾವು ಪ್ರಯತ್ನಮಾಡುತ್ತೇವೆ, ಸಾಧನೆ ಮಾಡುತ್ತೇವೆ; ಆದರೆ ಅನೇಕ ವರ್ಷಗಳವರೆಗೆ ಸಾಧನೆ ಮಾಡಿದರೂ ನಿಜವಾದ ಒಳ್ಳೆತನ ನಮ್ಮಲ್ಲಿ ಬರುವುದಿಲ್ಲ ಮತ್ತು ಸಾಧನೆಮಾಡಿದಾಗ ಸ್ವಂತಕ್ಕೂ ಸಂತೋಷವಾಗದೆ ಇಷ್ಟು ಸಾಧನೆ ಮಾಡಿದರೂ ಸದ್ಗುಣ ಸದಾಚಾರಗಳು ಬಂದಿಲ್ಲ ಎಂಬ ವಿಚಾರ ಬರುತ್ತದೆ. ಆದ್ದರಿಂದ ಈ ಸದ್ಗುಣ-ಸದಾಚಾರಗಳು ಬರುವುದೇ ಇಲ್ಲ – ಹೀಗೆ ಅರಿತುಕೊಂಡು ನಾವು ಸಾಧನೆಯಿಂದ ಹತಾಶರಾಗುತ್ತೇವೆ. ಹತಾಶರಾಗುವುದರಲ್ಲಿ ನಾವು ಒಳ್ಳೆತನವನ್ನು ಉದ್ಯೋಗ ಸಾಧ್ಯವೆಂದು ತಿಳಿದಿದ್ದೇವೆ ಮತ್ತು ಕೆಟ್ಟತನವನ್ನು ಸರ್ವಥಾ ಬಿಟ್ಟಲ್ಲ ಇದೇ ಮುಖ್ಯ ಕಾರಣವಾಗಿದೆ. ಕೆಟ್ಟತನವನ್ನು ಸರ್ವಥಾ ತ್ಯಾಗಮಾಡದೆ ಅಂಶಿಕ ಒಳ್ಳೆಯತನವು ಕೆಟ್ಟತನಕ್ಕೆ ಬಲಕೊಡುತ್ತಾ ಇರುತ್ತದೆ. ಕಾರಣ – ಅಂಶಿಕ ಒಳ್ಳೆಯತನದಿಂದ ಉತ್ತಮತೆಯ ಅಭಿಮಾನ ಉಂಟಾಗುತ್ತದೆ ಹಾಗೂ ಇರುವ ಎಲ್ಲ ಕೆಟ್ಟತನವು ಒಳ್ಳೆತನದ ಅಭಿಮಾನವನ್ನೇ ಅವಲಂಬಿಸಿದೆ. ಪೂರ್ಣ ಒಳ್ಳೆತನ ಉಂಟಾದಾಗ ಒಳ್ಳೆತನದ ಅಭಿಮಾನವಿರುವುದಿಲ್ಲ ಮತ್ತು ಕೆಟ್ಟತನವೂ ಉತ್ಪನ್ನವಾಗುವುದಿಲ್ಲ. ಆದ್ದರಿಂದ ಕೆಟ್ಟತನದ ತ್ಯಾಗ ಮಾಡಿದ ಮೇಲೆ

ಒಳ್ಳೆತನವು ಉದ್ಯೋಗ ಮಾಡದೆಯೇ, ಬಯಸದೆಯೇ ತನ್ನಿಂದ-ತಾನೇ ಬಂದು ಬಿಡುತ್ತದೆ. ಒಳ್ಳೆತನವು ನಮ್ಮಲ್ಲಿ ಬಂದಾಗ ನಾವು ಒಳ್ಳೆಯವರಾಗುತ್ತೇವೆ. ನಾವು ಒಳ್ಳೆಯವರಾದಾಗ ನಮ್ಮಿಂದ ಸ್ವಾಭಾವಿಕವಾಗಿಯೇ ಒಳ್ಳೆತನ ಆಗತೊಡಗುತ್ತದೆ. ಒಳ್ಳೆತನ ಆಗತೊಡಗಿದಾಗ ಸೃಷ್ಟಿಯ ಮೂಲಕ ಸ್ವಾಭಾವಿಕವಾಗಿಯೇ ನಮ್ಮ ಜೀವನ ನಿರ್ವಾಹ ಆಗತೊಡಗುತ್ತದೆ. ಅರ್ಥಾತ್ – ಜೀವನ ನಿರ್ವಾಹಕ್ಕಾಗಿ ನಾವು ಪರಿಶ್ರಮ ಮಾಡ ಬೇಕಾಗುವುದಿಲ್ಲ ಮತ್ತು ಬೇರೆಯವರ ಆಶ್ರಯವನ್ನೂ ಪಡೆಯ ಬೇಕಾಗುವುದಿಲ್ಲ, ಇಂತಹ ಅವಸ್ಥೆಯಲ್ಲಿ ನಾವು ಪ್ರಪಂಚದ ಆಶ್ರಯದಿಂದ ಸರ್ವಥಾ ಮುಕ್ತರಾಗಿ ಹೋಗುತ್ತೇವೆ. ಪ್ರಪಂಚದ ಆಶ್ರಯದಿಂದ ಸರ್ವಥಾ ಮುಕ್ತರಾಗುತ್ತಲೇ ನಮಗೆ ಸ್ವತಃ ಸಿದ್ಧ ಸಮತೆಯು ಪ್ರಾಪ್ತಿಯಾಗುತ್ತದೆ ಮತ್ತು ನಾವು ಕೃತಕೃತ್ಯರಾಗುತ್ತೇವೆ, ಜೀವನ್ಮುಕ್ತರಾಗುತ್ತೇವೆ.

ಪರಿತಿಪ್ಪ ಭಾವ – ಸಮತೆಯ ವಿಭಾಗ ಬೇರೆಯಾಗಿದೆ, ವಿಷಮತೆಯ ವಿಭಾಗ ಬೇರೆಯಾಗಿದೆ. ಪರಮಾತ್ಮತತ್ತ್ವ ಸಮವಾಗಿದೆ, ಪ್ರಪಂಚ ವಿಷಮವಾಗಿದೆ. ಸಿದ್ಧ ಕರ್ಮಯೋಗಿಗೆ ವಿಷಮ ವ್ಯವಹಾರದಲ್ಲಿಯೂ ಸಮಬುದ್ಧಿ ಇರುತ್ತದೆ. ವ್ಯವಹರಿಸಲು ಯಾವುದೊಂದಿಗೆ ಏಕತೆ ಆಗಲಾರದೋ, ಏಕತೆಯನ್ನು ಮಾಡಲೂ ಬಾರದೋ ಮತ್ತು ಏಕತೆ ಮಾಡಲೂ ಸಾಧ್ಯವಿಲ್ಲವೋ ಅಂತಹ ಮಣ್ಣಿನ ಹೆಂಟೆ, ಕಲ್ಲು, ಚಿನ್ನಗಳಲ್ಲಿ ಮತ್ತು ಸುಹೃದ್, ಮಿತ್ರ, ವೈರೀ, ಉದಾಸೀನ, ಮಧ್ಯಸ್ಥ, ದ್ವೇಷ್ಯ, ಸಾಧು ಹಾಗೂ ಪಾಪಿವ್ಯಕ್ತಿಗಳಲ್ಲಿಯೂ ಅವನಿಗೆ ಸಮಬುದ್ಧಿ ಇರುತ್ತದೆ. ಕಾರಣ – ಅವನಿಗೆ 'ಓರ್ವ ಪರಮಾತ್ಮನಲ್ಲದೆ ಏನೂ ಇಲ್ಲ' ಈ ಅನುಭವವಾಗಿದೆ.

ಒಂದೇ ಚಿನ್ನದಿಂದ ಮಾಡಿದ ವಿಷ್ಣುವಿನ ಮೂರ್ತಿಯಿರಲಿ, ನಾಯಿಯ ಮೂರ್ತಿ ಇರಲೀ ತೂಕದಲ್ಲಿ ಒಂದೇ ಆದ ಕಾರಣ ಎರಡರ ಬೆಲೆಯೂ ಒಂದೇ ಆದೀತು. ಭಗವಾನ್ ವಿಷ್ಣುವು ಸರ್ವಶ್ರೇಷ್ಠ ಹಾಗೂ ಪರಮಪೂಜ್ಯನಾಗಿದ್ದಾನೆ ಮತ್ತು ನಾಯಿಯು ನೀಚ, ಅಪೂಜ್ಯವಾದ ಈ ರೀತಿ ಹೊರಗಿನ ರೂಪವನ್ನು ನೋಡಿದರೆ ಎರಡರಲ್ಲಿ ತುಂಬಾ ವ್ಯತ್ಯಾಸವಿದೆ, ಆದರೆ ಚಿನ್ನವನ್ನು ನೋಡಿದರೆ ಎರಡರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಇದೇ ರೀತಿ ಜಗತ್ತಿನಲ್ಲಿ ಯಾರೋ ಮಿತ್ರನಾಗಿದ್ದಾನೆ, ಯಾರೋ ಶತ್ರುವಾಗಿದ್ದಾನೆ, ಯಾರೋ ಮಹಾತ್ಮನಾಗಿದ್ದಾನೆ, ಯಾರೋ ದುರಾತ್ಮಾ ಆಗಿದ್ದಾನೆ, ಯಾರೋ ಒಳ್ಳೆಯವನಿದ್ದಾನೆ, ಯಾರೋ ಕೆಟ್ಟವನಿದ್ದಾನೆ, ಯಾರೋ ಸಜ್ಜನನಾಗಿದ್ದಾನೆ, ಯಾರೋ ದುರ್ಜನನಾಗಿದ್ದಾನೆ, ಯಾರೋ ಸದಾಚಾರಿಯಾಗಿದ್ದಾನೆ, ಯಾರೋ ದುರಾಚಾರಿಯಾಗಿದ್ದಾನೆ, ಯಾರೋ ಧರ್ಮಾತ್ಮನಾಗಿದ್ದಾನೆ, ಯಾರೋ ಪಾಪಿಯಾಗಿದ್ದಾನೆ, ಯಾರೋ ವಿದ್ವಾಂಸನಾಗಿದ್ದಾನೆ, ಯಾರೋ ಮೂರ್ಖನಾಗಿದ್ದಾನೆ ಇವೆಲ್ಲವು ಹೊರಗಿನ ದೃಷ್ಟಿಯಾಗಿದೆ. ಆದರೆ ತತ್ತ್ವದಿಂದ ನೋಡಿದರೆ ಎಲ್ಲರೂ ಓರ್ವ ಭಗವಂತನೇ ಆಗಿದ್ದಾನೆ. ಓರ್ವ ಭಗವಂತನೇ ಅನಂತ ರೂಪದಿಂದ ಪ್ರಕಟನಾಗಿದ್ದಾನೆ, ಎಂಬ ತಿಳಿವಳಿಕೆಯುಳ್ಳವನು ಅವನನ್ನು ಗುರುತಿಸುತ್ತಾನೆ, ಬೇರೆಯವನು ಗುರುತಿಸಲಾರನು

ಸ್ನಾನಮಾಡುವಾಗ ಶರೀರಕ್ಕೆ ಸಾಬೂನು ಹಚ್ಚಿಕೊಂಡು ಕನ್ನಡಿಯಲ್ಲಿ ನೋಡಿದರೆ ಶರೀರವು ತುಂಬಾ ಕೆಟ್ಟದಾಗಿ, ಅಸಹ್ಯವಾಗಿ ಕಂಡುಬಂದೀತು. ಎಲ್ಲೋ ನೊರೆ ಕಂಡೀತು, ಎಲ್ಲೊ ಗೆರೆಗಳಿರುವಂತೆ ಕಂಡೀತು. ಆದರೆ ಹೀಗೆ ಕಂಡರೂ ಎಂತಹ ಕಾಯಿಲೆ ಬಂತಪ್ಪಾ ಎಂಬ ದುಃಖವಾಗುವುದಿಲ್ಲ. ಕಾರಣ – ಇದಾದರೋ ಶರೀರದ ಮೇಲೆ ಕಂಡುಬರುತ್ತದೆ, ನೀರು ಹಾಕಿದರೆ ತೊಳೆದು ಹೋದೀತು ಎಂಬ ಭಾವ ಒಳಗಿರುತ್ತದೆ. ಹೀಗೆಯೇ ಎಲ್ಲರೂ ಪರಮಾತ್ಮನ ಸ್ವರೂಪರಾಗಿದ್ದಾರೆ, ಆದರೆ ಹೊರಗಿನಿಂದ ಶರೀರಗಳಲ್ಲಿ ಬೇರೆ-ಬೇರೆ ಸ್ವಭಾವ ಕಂಡುಬರುತ್ತವೆ. ನಿಜವಾಗಿ ಹೊರಗಿನಿಂದ ಕಾಣುವವರೂ ಕೂಡ ಪರಮಾತ್ಮನ ಸ್ವರೂಪರೇ ಆಗಿದ್ದಾರೆ. ಆದರೆ ನಮ್ಮ ರಾಗ-ದ್ವೇಷದ ಕಾರಣ ಅವರು ಬೇರೆ-ಬೇರೆಯಾಗಿ ಕಾಣುತ್ತಾರೆ.

ಐದನೇ ಅಧ್ಯಾಯದ ೨ನೇ ಶ್ಲೋಕದಲ್ಲಿ **'ಕರ್ಮಯೋಗೋ ವಿಶಿಷ್ಯತೆ'** ಎಂಬ ಪದಗಳಿಂದ ಹೇಳಲಾಗಿರುವ ಮಾತನ್ನು ಇಲ್ಲಿ **'ಸಮಬುದ್ಧಿರ್ವಿಶಿಷ್ಯತೇ'** ಪದಗಳಿಂದ ಹೇಳಲಾಗಿದೆ. ಸಮಬುದ್ಧಿಯುಳ್ಳ ಮನುಷ್ಯನು ನಿರ್ಲಿಪ್ತನಾಗಿರುತ್ತಾನೆ. ನಿರ್ಲಿಪ್ತನಾಗಿರುವುದರಿಂದ 'ಯೋಗ'ವಾಗುತ್ತದೆ. ಲಿಪ್ತತೆ ಉಂಟಾಗುತ್ತಲೇ 'ಭೋಗ'ವಾಗುತ್ತದೆ. ಸಮಬುದ್ಧಿಯು ಮೂರೂ ಯೋಗಗಳಲ್ಲಿದೆ, ಆದರೆ ಕರ್ಮಯೋಗದಲ್ಲಿ ವಿಶೇಷವಾಗಿದೆ; ಏಕೆಂದರೆ, ಭೌತಿಕ ಸಾಧನೆಯಾದ್ದರಿಂದ ಕರ್ಮಯೋಗಿಯ ಮುಂದೆ ವಿಷಮತೆ ಹೆಚ್ಚು ಬರುತ್ತದೆ.

—✱—

ಸಂಬಂಧ – ಯಾವ ಸಮತೆ (ಸಮಬುದ್ಧಿ)ಯು ಕರ್ಮಯೋಗದಿಂದ ದೊರೆಯುತ್ತದೋ ಅದೇ ಸಮತೆಯು ಧ್ಯಾನಯೋಗದಿಂದಲೂ ದೊರೆಯುತ್ತದೆ. ಅದಕ್ಕಾಗಿ ಭಗವಂತನು ಧ್ಯಾನಯೋಗದ ಪ್ರಕರಣವನ್ನು ಪ್ರಾರಂಭಿಸುತ್ತಾ ಮೊದಲಿಗೆ ಧ್ಯಾನಯೋಗಕ್ಕಾಗಿ ಪ್ರೇರೇಪಿಸುತ್ತಾನೆ —

ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ ।
ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ ॥ ೧೦॥

ಅಪರಿಗ್ರಹಃ - ಭೋಗಬುದ್ಧಿಯಿಂದ ಸಂಗ್ರಹಿಸದವನು, **ನಿರಾಶೀಃ** - ಇಚ್ಛಾರಹಿತನೂ (ಮತ್ತು), **ಯತಚಿತ್ತಾತ್ಮಾ** - ಅಂತಃಕರಣ ಹಾಗೂ ಶರೀರವನ್ನು ವಶಪಡಿಸಿಕೊಂಡಿರುವ, **ಯೋಗೀ** - ಯೋಗಿಯು, **ಏಕಾಕೀ** - ಒಂಟಿಯಾಗಿ, **ರಹಸಿ** - ಏಕಾಂತದಲ್ಲಿ, **ಸ್ಥಿತಃ** - ಸ್ಥಿತನಾಗಿ, **ಆತ್ಮಾನಮ್** - ಮನಸ್ಸನ್ನು, **ಸತತಮ್** - ನಿರಂತರವಾಗಿ, **ಯುಂಜೀತ** - (ಪರಮಾತ್ಮನಲ್ಲಿ) ತೊಡಗಿಸಲಿ. ॥ ೧೦॥

ಭೋಗಬುದ್ಧಿಯಿಂದ ಸಂಗ್ರಹಿಸದವನೂ, ಇಚ್ಛಾರಹಿತನೂ ಮತ್ತು ಅಂತಃಕರಣ ಹಾಗೂ ಶರೀರವನ್ನು ವಶಪಡಿಸಿಕೊಂಡಿರುವ ಯೋಗಿಯು ಒಬ್ಬಂಟಿಗನಾಗಿ ಏಕಾಂತದಲ್ಲಿ ಇದ್ದುಕೊಂಡು ಮನಸ್ಸನ್ನು ನಿರಂತರವಾಗಿ ಪರಮಾತ್ಮನಲ್ಲಿ ತೊಡಗಿಸಲಿ. ॥ ೧೦॥

ವ್ಯಾಖ್ಯಾ - [ಭಗವಂತನು ಐದನೇ ಅಧ್ಯಾಯದ ೨೭, ೨೮ನೇ ಶ್ಲೋಕಗಳಲ್ಲಿ ಧ್ಯಾನಯೋಗವನ್ನು ಸಂಕ್ಷೇಪವಾಗಿ ವರ್ಣಿಸಿದ್ದನು. ಈಗ ಇಲ್ಲಿ ಅದನ್ನೇ ವಿಸ್ತಾರವಾಗಿ ವರ್ಣಿಸುತ್ತಿದ್ದಾನೆ.

'ಯುಜ್ ಸಮಾಧೌ' – ಎಂಬ ಧಾತುವಿನಿಂದ ಉಂಟಾಗುವ 'ಯೋಗ' ಶಬ್ದದ ಅರ್ಥ ಚಿತ್ತವೃತ್ತಿಗಳನ್ನು ನಿರೋಧಮಾಡುವುದಾಗಿದೆ.* ಆ ಯೋಗದ ವರ್ಣನೆ ಇಲ್ಲಿ ೧೦ನೇ ಶ್ಲೋಕದಿಂದ ಪ್ರಾರಂಭಿಸುತ್ತಾನೆ.].

'ಅಪರಿಗ್ರಹಃ' – ಚಿತ್ತವೃತ್ತಿಗಳ ನಿರೋಧರೂಪೀ ಯೋಗದ ಸಾಧನೆಯನ್ನು ಇಡೀ ಪ್ರಪಂಚದಿಂದ ವಿಮುಖನಾಗಿ ಮತ್ತು ಕೇವಲ ಪರಮಾತ್ಮನಿಗೆ ಸಮ್ಮುಖವಾಗಿ ಮಾಡಲಾಗುತ್ತದೆ. ಆದ್ದರಿಂದ ಅದಕ್ಕಾಗಿ ಮೊದಲನೆಯ ಸಾಧನೆ **'ಅಪರಿಗ್ರಹಃ'** ಅರ್ಥಾತ್ – ತನಗಾಗಿ ಸುಖಬುದ್ಧಿಯಿಂದ ಏನನ್ನೂ ಸಂಗ್ರಹಿಸಬಾರದು ಎಂದು ಹೇಳುತ್ತಾರೆ. ಕಾರಣ – ತನ್ನ ಸುಖಕ್ಕಾಗಿ ಭೋಗ ಹಾಗೂ ಸಂಗ್ರಹ ಮಾಡುವುದರಿಂದ ಅದರಲ್ಲಿ ಅವನ ಮನದ ಸೆಳೆತ ಇದ್ದೀತು, ಅದರಿಂದ ಸಾಧಕನ ಮನಸ್ಸು ಧ್ಯಾನದಲ್ಲಿ ತೊಡಗಲಾರದು. ಅದಕ್ಕಾಗಿ ಧ್ಯಾನಯೋಗದ ಸಾಧಕನಿಗೆ ಅಪರಿಗ್ರಹನಾಗುವುದು ಅಗತ್ಯ ವಾಗಿದೆ.

'ನಿರಾಶೀಃ'+ – ಮೊದಲು **'ಅಪರಿಗ್ರಹಃ'** ಪದದಿಂದ ಹೊರಗಿನ ಭೋಗ ಪದಾರ್ಥಗಳ ತ್ಯಾಗ ಹೇಳಿ, ಈಗ **'ನಿರಾಶೀಃ'** ಪದದಿಂದ ಒಳಗಿನ ಭೋಗ ಮತ್ತು ಸಂಗ್ರಹದ ಇಚ್ಛೆಯ ತ್ಯಾಗಮಾಡಲಿಕ್ಕಾಗಿ ಹೇಳುತ್ತಾನೆ. ತಾತ್ಪರ್ಯ – ಒಳಗೆ ಯಾವುದೇ ಭೋಗವನ್ನು ಭೋಗ ಬುದ್ಧಿಯಿಂದ ಭೋಗಿಸುವ ಇಚ್ಛೆ, ಕಾಮನೆ, ಆಸೆ ಇರಿಸಬಾರದು. ಕಾರಣ ಮನಸ್ಸಿನಲ್ಲಿ ಉತ್ಪತ್ತಿ-ವಿನಾಶಶೀಲ ಪದಾರ್ಥಗಳ ಮಹತ್ವ, ಆಸೆ, ಕಾಮನೆ ಪರಮಾತ್ಮನ ಪ್ರಾಪ್ತಿಯಲ್ಲಿ ಮಹಾನ್ ಬಾಧಕವಾಗಿದೆ. ಆದ್ದರಿಂದ ಇದರಲ್ಲಿ ಸಾಧಕನು ಎಚ್ಚರವಾಗಿರಬೇಕು.

'ಯತಚಿತ್ತಾತ್ಮಾ' – ಹೊರಗಿನಿಂದ ತನ್ನ ಸುಖಕ್ಕಾಗಿ ಪದಾರ್ಥ ಮತ್ತು ಸಂಗ್ರಹದ ತ್ಯಾಗ ಹಾಗೂ ಒಳಗಿನಿಂದ ಅದರ ಕಾಮನೆ, ಆಸೆಯ ತ್ಯಾಗವಾದ ಬಳಿಕವೂ ಅಂತಃಕರಣ ಇತ್ಯಾದಿಗಳಲ್ಲಿ ಹೊಸ ರಾಗ ಉಂಟಾಗುವ ಸಂಭವವಿರುತ್ತದೆ. ಆದ್ದರಿಂದ ಇಲ್ಲಿ ಮೂರನೆಯ ಸಾಧನೆಯನ್ನು **'ಯತ ಚಿತ್ತಾತ್ಮಾ'** ಅರ್ಥಾತ್ – ಸಾಧಕನು ಅಂತಃಕರಣ ಸಹಿತ ಶರೀರವನ್ನು ವಶದಲ್ಲಿ ಇರಿಸುವವನಾಗಲಿ ಎಂದು ಹೇಳಿದೆ. ಇವುಗಳು ವಶವಾದಾಗ ಮತ್ತೆ ಹೊಸ ರಾಗವು ಉಂಟಾಗಲಾರದು. ಇವುಗಳನ್ನು ವಶಮಾಡಿಕೊಳ್ಳುವ ಉಪಾಯ – ಯಾವುದೇ ಹೊಸ ಕೆಲಸ, ರಾಗಪೂರ್ವಕ ಮಾಡಬಾರದು. ಕಾರಣ – ರಾಗ ಪೂರ್ವಕ ಪ್ರವೃತ್ತಿ ಆಗುವುದರಿಂದ ಶರೀರದ ಸುಖ-ಆಲಸ್ಯದಲ್ಲಿ ಮತ್ತು ಮನಸ್ಸಿನ ಭೋಗಗಳ ಚಿಂತನೆಯಲ್ಲಿ ಅಥವಾ ವ್ಯರ್ಥಚಿಂತನೆಯಲ್ಲಿ ಪ್ರವೃತ್ತಿ ಆಗುತ್ತದೆ. ಅದಕ್ಕಾಗಿ ಅಂತಃಕರಣ ಮತ್ತು ಶರೀರವನ್ನು ವಶದಲ್ಲಿ ಮಾಡಿಕೊಳ್ಳುವ ಮಾತು ಹೇಳಲಾಗಿದೆ.

'ಯೋಗೀ' – ಧ್ಯೇಯ, ಲಕ್ಷ್ಯ ಕೇವಲ ಪರಮಾತ್ಮನಲ್ಲೇ ತೊಡಗಿರುವವನು, ಅರ್ಥಾತ್ – ಪರಮಾತ್ಮ ಪ್ರಾಪ್ತಿಗಾಗಿಯೇ ಧ್ಯಾನಯೋಗವನ್ನು ಮಾಡುವವನು, ಸಿದ್ಧಿಗಳು ಮತ್ತು ಭೋಗಗಳ ಪ್ರಾಪ್ತಿಗಾಗಿ ಅಲ್ಲ, ಅವನನ್ನು ಇಲ್ಲಿ **'ಯೋಗೀ'** ಎಂದು ಹೇಳಲಾಗಿದೆ.

'ಏಕಾಕೀ' ಧ್ಯಾನಯೋಗದ ಸಾಧಕನು ಒಬ್ಬಂಟಿಗನಾಗಿರಲೀ, ಜೊತೆಯಲ್ಲಿ ಯಾರೂ ಸಹಾಯಕನಿಲ್ಲದಿರಲೀ; ಏಕೆಂದರೆ, ಇಬ್ಬರಿದ್ದರೆ ಮಾತು-ಕತೆ ಪ್ರಾರಂಭವಾದೀತು

---

* **'ಯೋಗಶ್ಚಿತ್ತವೃತ್ತಿನಿರೋಧಃ'** (ಪಾತಂಜಲಯೋಗ ದರ್ಶನ ೧/೨).

+ 'ಆಶಿಷ್' ಹೆಸರು ಇಚ್ಛೆಯದಾಗಿದೆ ಮತ್ತು 'ನಿಸ್' ಹೆಸರು ರಹಿತನಾಗುವುದಾಗಿದೆ; ಆದ್ದರಿಂದ 'ನಿರಾಶೀಃ'ಯ ಅರ್ಥ – ಇಚ್ಛೆಯಿಂದ ರಹಿತನಾಗುವುದು ಎಂದಾಯಿತು.

ಮತ್ತು ಜೊತೆಗೆ ಯಾರಾದರು ಸಹಾಯಕರಿದ್ದರೆ ರಾಗದ ಕಾರಣ ಅವನ ನೆನಪು ಬರುತ್ತಾ ಇದ್ದೀತು, ಅದರಿಂದ ಮನಸ್ಸು ಭಗವಂತನದಲ್ಲಿ ತೊಡಗಲಾರದು.

'रहसि स्थितः' – ಸಾಧಕನು ಎಲ್ಲಿ ಸ್ಥಿತನಾಗಿರಬೇಕು? ಇದಕ್ಕಾಗಿ ಅವನು ಏಕಾಂತದಲ್ಲಿ ಸ್ಥಿತನಾಗಲೀ ಅರ್ಥಾತ್ – ಎಲ್ಲಿ ಧ್ಯಾನಕ್ಕಿಂತ ವಿರುದ್ಧವಾದ ಯಾವುದೇ ವಾತಾವರಣ ಇಲ್ಲದಿರುವಂತಹ ಏಕಾಂತದಲ್ಲಿ ಸ್ಥಿತನಾಗಬೇಕು. ಹೊಳಿಯದಂಡೆ ಇರಲೀ, ಕಾಡಿನ ಏಕಾಂತ ಸ್ಥಳವಿರಲೀ ಏಕಾಂತ ಮಂದಿರವಿರಲೀ, ಅಥವಾ ಮನೆಯಲ್ಲಿಯೇ ಒಂದು ಕೋಣೆ ಇರಲೀ, ಅದರಲ್ಲಿ ಭಜನೆ – ಧ್ಯಾನಮಾಡುವಂತಿರ ಬೇಕು. ಅದರಲ್ಲಿ ಸ್ವತಃ ಊಟ-ನಿದ್ದೆ ಮಾಡಬಾರದು ಮತ್ತು ಬೇರೆ ಯಾರೂ ಮಾಡಬಾರದು.

'आत्मानं सततं युञ्जीत' – ಮೇಲೆ ಹೇಳಿದ ಏಕಾಂತದಲ್ಲಿ ಕುಳಿತುಕೊಂಡು ಮನಸ್ಸನ್ನು ನಿರಂತರ ಭಗವಂತನಲ್ಲಿ ತೊಡಗಿಸಬೇಕು. ಮನಸ್ಸನ್ನು ನಿರಂತರ ಭಗವಂತನಲ್ಲಿ ತೊಡಗಿಸಲು ಮುಖ್ಯವಾದ ಮಾತು – ಧ್ಯಾನಮಾಡಲು ಏಕಾಂತ ಸ್ಥಳಕ್ಕೆ ಹೋಗುವಾಗ, ಹೋಗುವ ಮೊದಲು – 'ಈಗ ನನಗೆ ಪ್ರಪಂಚದ ಯಾವುದೇ ಕೆಲಸ ಮಾಡುವುದಲ್ಲ, ಕೇವಲ ಭಗವಂತನ ಧ್ಯಾನವೇ ಮಾಡಬೇಕು, ಈಗ ಭಗವಂತನಲ್ಲದೆ ಬೇರೆಯವರ ಚಿಂತನೆ ಮಾಡುವುದೇ ಅಲ್ಲ' ಎಂಬ ವಿಚಾರ ಮಾಡಬೇಕು. ಈ ಮಾತಿನಂತೆ ನಿರಂತರ ಜಾಗರೂಕನಾಗಿರಬೇಕು, ಏಕೆಂದರೆ, ಜಾಗರೂಕತೆಯೇ ಸಾಧನೆಯಾಗಿದೆ.

ಸಾಧಕನಿಗೆ ಧ್ಯಾನದ ಸಮಯದಲ್ಲಾದರೋ ಭಗವಂತನ ಚಿಂತನೆಯಲ್ಲಿ ತತ್ಪರತೆಯಿಂದ ತೊಡಗಿದ್ದು, ವ್ಯವಹಾರದ ಸಮಯದಲ್ಲಿಯೂ ನಿರ್ಲಿಪ್ತನಾಗಿದ್ದು ಭಗವಂತನ ಚಿಂತನೆ ಮಾಡುತ್ತಿರುವುದು ತುಂಬಾ ಆವಶ್ಯಕವಾಗಿದೆ; ಏಕೆಂದರೆ, ವ್ಯವಹಾರದ ಸಮಯ ಭಗವಂತನ ಚಿಂತನೆ ಆಗದಿರುವುದರಿಂದ ಪ್ರಪಂಚದಲ್ಲಿ ಲಿಪ್ತತೆ ಹೆಚ್ಚಾಗುತ್ತದೆ. ವ್ಯವಹಾರ ಕಾಲದಲ್ಲಿ ಭಗವಂತನ ಚಿಂತನೆ ಮಾಡುವುದರಿಂದ ಧ್ಯಾನದ ಸಮಯದಲ್ಲಿ ಚಿಂತಿಸುವುದು ಸುಲಭವಾಗುತ್ತದೆ ಮತ್ತು ಧ್ಯಾನದ ಸಮಯ ಸರಿಯಾಗಿ ಚಿಂತನೆ ಆಗುವುದರಿಂದ ವ್ಯವಹಾರಕಾಲದಲ್ಲಿಯೂ ಚಿಂತನೆ ಆಗುತ್ತಿರುತ್ತದೆ. ಅರ್ಥಾತ್ ಎರಡೂ ಸಮಯದಲ್ಲಿ ಮಾಡಲಾದ ಚಿಂತನೆ ಒಂದು ಮತ್ತೊಂದಕ್ಕೆ ಸಹಾಯಕವಾಗುತ್ತದೆ. ತಾತ್ಪರ್ಯ – ಸಾಧಕನ ಸಾಧನತೆಯು ಎಲ್ಲಾ ಸಮಯದಲ್ಲಿ ಜಾಗ್ರತವಾಗಿರಲಿ. ಅವನು ಪ್ರಪಂಚದಲ್ಲಿ ಪರಮಾತ್ಮನನ್ನು ಸೇರಿಸಲಿ ಆದರೆ ಪರಮಾತ್ಮನಲ್ಲಿ ಪ್ರಪಂಚವನ್ನು ಸೇರಿಸದಿರಲಿ, ಅರ್ಥಾತ್ – ಪ್ರಾಪಂಚಿಕ ಕಾರ್ಯಮಾಡುವಾಗಲೂ ಭಗವತ್ಸ್ಮರಣೆ ಮಾಡುತ್ತಾ ಇರಬೇಕು.

ಸಾಧಕನು ಧ್ಯಾನಕ್ಕೆ ಕುಳಿತುಕೊಳ್ಳುವಾಗ 'ಇಂತಹ ಕೆಲಸ ಮಾಡುವುದಿದೆ, ಇಷ್ಟು ಪಡೆಯಲಿದೆ, ಇಷ್ಟು ಕೊಡಲಿಕ್ಕಿದೆ, ಇಂತಹ ಕಡೆಗೆ ಹೋಗುವುದಿದೆ, ಇಂತಹವನನ್ನು ಕಾಣುವುದಿದೆ' ಇತ್ಯಾದಿ ಕೆಲಸಗಳನ್ನು ಮನಸ್ಸಿನಲ್ಲಿ ತುಂಬಿಕೊಂಡರೆ ಅರ್ಥಾತ್ – ಮನಸ್ಸಿನಲ್ಲಿ ಇವುಗಳ ಸಂಕಲ್ಪ ಮಾಡಿದರೆ ಅವನ ಮನಸ್ಸು ಭಗವಂತನ ಧ್ಯಾನದಲ್ಲಿ ತೊಡಗಲಾರದು. ಆದ್ದರಿಂದ ಧ್ಯಾನಕ್ಕೆ ಕುಳಿತುಕೊಳ್ಳುವಾಗ – 'ಬೇಕಾದ್ದಾಗಲೀ, ಕತ್ತು ತುಂಡಾಗಲೀ, ನನಗೆ ಕೇವಲ ಭಗವಂತನದ್ದೇ ಧ್ಯಾನ ಮಾಡುವುದಿದೆ' ಹೀಗೆ ದೃಢ ನಿಶ್ಚಯಮಾಡಿಕೊಳ್ಳಬೇಕು. ಇಂತಹ ವಿಚಾರ ದೃಢವಾದಾಗ ಭಗವಂತನಲ್ಲಿ ಮನಸ್ಸನ್ನು ತೊಡಗಿಸುವುದರಲ್ಲಿ ತುಂಬಾ ಅನುಕೂಲವಾದೀತು.

ಭಗವಂತನಲ್ಲಿ ಮನಸ್ಸು ತೊಡಗುವುದಿಲ್ಲ, ಇದರ ಕಾರಣವೇನು? ಎಂಬ ದೂರು ಸಾಧಕನಲ್ಲಿ ಇರುತ್ತದೆ. ಇದರ ಕಾರಣ ಸಾಧಕನು ಪ್ರಪಂಚದೊಂದಿಗೆ ಸಂಬಂಧವನ್ನು ಕಡಿದುಕೊಂಡು ಧ್ಯಾನ ಮಾಡದೆ ಪ್ರಪಂಚದೊಂದಿಗೆ ಸಂಬಂಧವನ್ನು ಇಟ್ಟುಕೊಂಡು ಮಾಡುತ್ತಾನೆ. ಆದ್ದರಿಂದ ತನ್ನ ಸುಖ, ಸೇವೆಗಾಗಿ ಅಂತರಂಗದಲ್ಲಿ ಯಾರನ್ನೂ ಕೂಡ ತನ್ನವನೆಂದು ತಿಳಿಯಬಾರದು, ಅರ್ಥಾತ್ – ಯಾರಲ್ಲಿಯೂ ಮಮತೆ ಇಡಬಾರದು; ಏಕೆಂದರೆ, ಮಮತೆ ಇದ್ದಲ್ಲೇ ಮನಸ್ಸು ಹೋದೀತು. ಅದಕ್ಕಾಗಿ ಉದ್ದೇಶ ಕೇವಲ ಭಗವಂತನದ್ದೇ ಇರಬೇಕು ಮತ್ತು ಎಲ್ಲದರಲ್ಲಿ ನಿರ್ಲಿಪ್ತತೆ ಇದ್ದರೆ ಭಗವಂತನಲ್ಲಿ ಮನಸ್ಸು ತೊಡಗಬಲ್ಲದು.

ವಿಶೇಷ ವಿಚಾರ

ಅರ್ಜುನನು ಮೊದಲೂ ಯುದ್ಧಕ್ಕಾಗಿ ಸಿದ್ಧನಿದ್ದನು ಮತ್ತು ಕೊನೆಯಲ್ಲಿಯೂ ಅವನು ಯುದ್ಧ ಮಾಡಿದನು. ಕೇವಲ ಮಧ್ಯದಲ್ಲಿ ಅವನು ಯುದ್ಧವನ್ನು ಪಾಪವೆಂದು ತಿಳಿಯುತ್ತಿದ್ದನು. ಆದರೆ ಭಗವಂತನು ತಿಳಿಸಿದಾಗ ಅವನು ಯುದ್ಧಮಾಡಲು ಸ್ವೀಕರಿಸಿದನು. ಈ ರೀತಿ ಕರ್ಮಗಳ ಪ್ರಸಂಗ ಇರುವುದರಿಂದ ಗೀತೆಯಲ್ಲಿ ಕರ್ಮಯೋಗದ ವಿಷಯ ಬರುವುದು ಸರಿಯೇ ಇತ್ತು, ಆದರೆ ಇದರಲ್ಲಿ ಜ್ಞಾನಯೋಗ, ಭಕ್ತಿಯೋಗ ಇತ್ಯಾದಿ ಅನೇಕ ಪಾರಮಾರ್ಥಿಕ ಸಾಧನೆಗಳ ವರ್ಣನೆ ಹೇಗೆ ಬಂತು? ಅದರಲ್ಲಿಯೂ ಇಲ್ಲಿ ಧ್ಯಾನಯೋಗದ ವರ್ಣನೆ ಬಂದಿದೆ. ಅದರಲ್ಲಿ ಕೇವಲ ಏಕಾಂತದಲ್ಲಿ ಕುಳಿತು ಧ್ಯಾನಮಾಡಬೇಕಾಗುತ್ತದೆ. ಈ ಪ್ರಸಂಗವು ಇಲ್ಲಿ ಏಕೆ ಬಂತು?

ಅರ್ಜುನನು ಪಾಪದ ಭಯದಿಂದ ಯುದ್ಧದಿಂದ ನಿವೃತ್ತನಾಗುತ್ತಿದ್ದರೆ ಅವನೊಳಗೆ ಶ್ರೇಯಸ್ಸಿನ ಇಚ್ಛೆ ಜಾಗ್ರತವಾಗುತ್ತದೆ. ಆದ್ದರಿಂದ ಅವನು ಭಗವಂತನಲ್ಲಿ – 'ಯಾವುದರಿಂದ ನನ್ನ ನಿಶ್ಚಿತ ಶ್ರೇಯಸ್ಸಾದೀತು, ಆ ಮಾತನ್ನು ನನಗೆ ಹೇಳು ಎಂದು ಪ್ರಾರ್ಥಿಸು ತ್ತಾನೆ (೨/೭; ೩/೨ ಮತ್ತು

೫/೧). ಇದರ ಕುರಿತು ಭಗವಂತನಿಗೆ ಶ್ರೇಯಸ್ಕರವಾದ ಎಷ್ಟು ಮಾರ್ಗಗಳಿವೆಯೋ ಅವೆಲ್ಲವನ್ನು ಹೇಳ ಬೇಕಾಯಿತು. ಅವುಗಳಲ್ಲಿ ದಾನ, ಯಜ್ಞ, ತಪಸ್ಸು, ವೇದಾಧ್ಯಯನ, ಪ್ರಾಣಾಯಾಮ, ಧ್ಯಾನಯೋಗ, ಹಠಯೋಗ, ಲಯಯೋಗ ಇತ್ಯಾದಿ ಹೇಳುವುದು ಕರ್ತವ್ಯವಾಗುತ್ತದೆ. ಅದಕ್ಕಾಗಿ ಭಗವಂತನು ಗೀತೆಯಲ್ಲಿ ಶ್ರೇಯಸ್ಕರ ಸಾಧನೆಗಳನ್ನು ತಿಳಿಸಿದನು. ಅವೆಲ್ಲ ಸಾಧನೆಗಳಲ್ಲಿ ಭಗವಂತನು – 'ಉತ್ಪತ್ತಿ-ವಿನಾಶಶೀಲ ವಸ್ತುಗಳ ಲಕ್ಷ್ಯವೇ ಮುಖ್ಯವಾಗಿ ಬಂಧನ ಕಾರಕವಾಗಿದೆ ಎಂದು ಹೇಳಿದನು. ಸಾಧಕನ ಲಕ್ಷ್ಯ ಕೇವಲ ಪರಮಾತ್ಮನದ್ದೇ ಆಗಿದ್ದರೆ ಮತ್ತೆ ಅವನ ಇದಿರು ಯಾವುದೇ ಕರ್ತವ್ಯ-ಕರ್ಮ ಬಂದರೂ ಅದನ್ನು ಸಮಭಾವದಿಂದ ಮಾಡಬೇಕು. ಸಮಭಾವದಿಂದ ಮಾಡಲಾದ ಎಲ್ಲ ಕರ್ತವ್ಯ-ಕರ್ಮ ಗಳು ಶ್ರೇಯಸ್ಕರವಾಗಿವೆ.

ಪರಿಶಿಷ್ಟ ಭಾವ – ಕರ್ಮಯೋಗ, ಜ್ಞಾನಯೋಗ ಮತ್ತು ಭಕ್ತಿಯೋಗವಾದರೋ ಕರಣ ನಿರಪೇಕ್ಷ ಸಾಧನೆಗಳಾಗಿವೆ, ಆದರೆ ಧ್ಯಾನಯೋಗ ಕರಣಸಾಪೇಕ್ಷ ಸಾಧನೆಯಾಗಿದೆ. ಈಗ ಭಗವಂತನು ಧ್ಯಾನಯೋಗವನ್ನು ವರ್ಣಿಸಲು ಪ್ರಾರಂಭಿಸುತ್ತಾನೆ.*

—●—

ಸಂಬಂಧ – ಹಿಂದಿನ ಶ್ಲೋಕದಲ್ಲಿ ಭಗವಂತನು ಧ್ಯಾನಯೋಗಕ್ಕೆ ಪ್ರೇರಣೆ ನೀಡಿದನು. ಧ್ಯಾನಯೋಗದ ಸಾಧನೆ ಹೇಗೆ ಮಾಡಬೇಕು? ಇದಕ್ಕಾಗಿ ಈಗ ಮುಂದಿನ ಮೂರು ಶ್ಲೋಕಗಳಲ್ಲಿ ಧ್ಯಾನಯೋಗದ ಉಪಯೋಗೀ ಮಾತನ್ನು ಹೇಳುತ್ತಾನೆ —

ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ ।
ನಾತ್ಯುಚ್ಛ್ರಿತಂ ನಾತಿನೀಚಂ ಚೈಲಾಜಿನಕುಶೋತ್ತರಮ್ ॥ ೧೧॥

ಶುಚೌ - ಶುದ್ಧವಾದ, **ದೇಶೇ** - ಭೂಮಿಯಲ್ಲಿ, **ಸ**, **ಅತ್ಯುಚ್ಛ್ರಿತಮ್** - ಹೆಚ್ಚು ಎತ್ತರವಿಲ್ಲದ (ಮತ್ತು), **ಸ**, **ಅತಿನೀಚಮ್** - ಅತೀ ತಗ್ಗು ಇಲ್ಲದ, **ಆತ್ಮನಃ** - ತನ್ನ, **ಆಸನಮ್** - ಆಸನವನ್ನು, **ಸ್ಥಿರಮ್** - ಸ್ಥಿರವಾಗಿ, **ಪ್ರತಿಷ್ಠಾಪ್ಯ** - ಪ್ರತಿಷ್ಠಾಪಿಸಿ **ಚೈಲಾಜಿನಕುಶೋತ್ತರಮ್** - (ಕ್ರಮಶಃ) ದರ್ಭೆ, ಕೃಷ್ಣಾಜಿನ, ಬಟ್ಟೆ ಹಾಸಬೇಕು. ॥ ೧೧॥

ಶುದ್ಧವಾದ ಭೂಮಿಯಲ್ಲಿ ಹೆಚ್ಚು ಎತ್ತರವಿಲ್ಲದ ಹಾಗೂ ಅತೀ ತಗ್ಗು ಇಲ್ಲದ ತನ್ನ ಆಸನವನ್ನು ಸ್ಥಿರವಾಗಿ ಪ್ರತಿಷ್ಠಾಪಿಸಿ ಅದರ ಮೇಲೆ ಕ್ರಮಶಃ ದರ್ಭೆ, ಕೃಷ್ಣಾಜಿನ, ಬಟ್ಟೆಗಳನ್ನು ಹಾಸಬೇಕು. ॥ ೧೧॥

ವ್ಯಾಖ್ಯಾ - **'ಶುಚೌದೇಶೆ'** – ಭೂಮಿಯ ಶುದ್ಧಿ ಎರಡು ರೀತಿಯಿಂದಿರುತ್ತದೆ (೧) ಸ್ವಾಭಾವಿಕ ಶುದ್ಧಿ-ಗಂಗಾದಿ ಪುಣ್ಯನದಿಗಳ ತೀರ, ಕಾಡು, ತುಲಸೀ, ನೆಲ್ಲಿ ಅಶ್ವತ್ಥ ಇತ್ಯಾದಿ ಪವಿತ್ರವೃಕ್ಷಗಳ ಸಮೀಪದ ಸ್ಥಾನ. (೨) ಶುದ್ಧಗೊಳಿಸಿದ ಸ್ಥಾನ ಭೂಮಿಯಲ್ಲಿ ಸೆಗಣಿ ಸಾರಿಸಿ ಅಥವಾ ನೀರು ಚಿಮುಕಿಸಿ ಶುದ್ಧಮಾಡಲಾದ, ಅಲ್ಲಿರುವ ಮಣ್ಣನ್ನು ಎರಡು-ಮೂರು ಅಂಗಲು ತೆಗೆದು ಹಾಕಿ ಶುದ್ಧಗೊಳಿಸಿದ್ದು, ಹೀಗೆ ಸ್ವಾಭಾವಿಕ ಅಥವಾ ಶುದ್ಧಗೊಳಿಸಿದ ಸಮತಟ್ಟಾದ ಭೂಮಿ ಯಲ್ಲಿ ಕಟ್ಟಿಗೆ ಅಥವಾ ಕಲ್ಲಿನ ಮಣೆ ಹೂಡಬೇಕು.

'ಚೈಲಾಜಿನ ಕುಶೋತ್ತರಮ್' – ಪಾಠಕ್ಕನುಸಾರ ಕ್ರಮಶಃ ಮೃ ಮೃಗಚರ್ಮ ದರ್ಭೆ ಹಾಸಬೇಕು,+ ಆದರೂ ಹಾಸುವಾಗ ಮೊದಲಿಗೆ ದರ್ಭೆ ಹಾಸಬೇಕು, ಅದರ ಮೇಲೆ ಕೊಲ್ಲದೆ ಇರುವ ಮೃಗದ ಅರ್ಥಾತ್ – ತನ್ನಿಂದ-ತಾನೇ ಸತ್ತಿರುವ ಮೃಗದ ಚರ್ಮವನ್ನು ಹಾಸಬೇಕು; ಏಕೆಂದರೆ ಕೊಂದ ಮೃಗದ ಚರ್ಮ ಅಶುದ್ಧವಾಗುತ್ತದೆ. ಇಂತಹ ಮೃಗ ಚರ್ಮ ಸಿಗದಿದ್ದರೆ ದರ್ಭೆಯ ಮೇಲೆ ಗೋಣಿತಾಟು ಅಥವಾ ಉಣ್ಣೆಬಟ್ಟೆ ಹಾಸಬೇಕು. ಮತ್ತೆ ಅದರ ಮೇಲೆ ಮೃದುವಾದ ಬಟ್ಟೆ ಯನ್ನು ಹಾಸಬೇಕು.

ಭಗವಾನ್ ವಾರಾಹಸ್ವಾಮಿಯ ರೋಮಗಳಿಂದ ಉತ್ಪನ್ನ ವಾದ್ದರಿಂದ ದರ್ಭೆಯು ಪವಿತ್ರವೆಂದು ತಿಳಿಯಲಾಗಿದೆ; ಆದ್ದರಿಂದ ಅದರಿಂದ ಮಾಡಿದ ಆಸನವನ್ನು ಉಪಯೋಗಿ ಸುತ್ತಾರೆ. ಗ್ರಹಣಾದಿ ಸಮಯದಲ್ಲಿ ಶುದ್ಧಿಗಾಗಿ ಪದಾರ್ಥಗಳ ಮೇಲೆ, ಬಟ್ಟೆಗಳ ಮೇಲೆ ದರ್ಭೆ ಇಡುತ್ತಾರೆ. ಪವಿತ್ರಕ ಪ್ರೋಕ್ಷಣ ಇತ್ಯಾದಿಗಳಲ್ಲಿ ಇವನ್ನು ಉಪಯೋಗಿಸುತ್ತಾರೆ ಆದ್ದರಿಂದ ಭಗವಂತನು ದರ್ಭೆ ಹಾಸಲು ಹೇಳಿರುವನು.

ದರ್ಭೆಯು ಶರೀರಕ್ಕೆ ಚುಚ್ಚದಿರಲಿ ಮತ್ತು ನಮ್ಮ ಶರೀರ

---

* ಕರ್ಮಯೋಗದಲ್ಲಿ 'ಕರ್ಮ' ಕರಣ ಸಾಪೇಕ್ಷವಾಗಿದೆ ಆದರೆ 'ಯೋಗ' ಕರಣನಿರಪೇಕ್ಷವಾಗಿದೆ.

+ ಶ್ಲೋಕದಲ್ಲಿದ್ದ ಪಾಠವನ್ನು ತೆಗೆದುಕೊಂಡರೆ ಕೆಳಗೆ ಬಟ್ಟೆ, ಅದರ ಮೇಲೆ ಮೃಗಚರ್ಮ ಮತ್ತು ಅದರ ಮೇಲೆ ದರ್ಭೆ ಹಾಸಬೇಕಾದೀತು. ಆದರೆ ಈ ಕ್ರಮ ಯುಕ್ತಸಂಗವಲ್ಲ; ಏಕೆಂದರೆ, ದರ್ಭೆ ಶರೀರಕ್ಕೆ ಚುಚ್ಚುತ್ತದೆ. ಆದ್ದರಿಂದ ಕೆಳಗೆ ದರ್ಭೆ, ಅದರ ಮೇಲೆ ಮೃಗಚರ್ಮ ಹಾಗೂ ಅದರ ಮೇಲೆ ಬಟ್ಟೆ – ಹೀಗೆ ಕ್ರಮ ತೆಗೆದುಕೊಳ್ಳಲಾಗಿದೆ; ಏಕೆಂದರೆ, ಪಾಠಕ್ರಮದಿಂದ ಅರ್ಥಕ್ರಮ ಬಲಿಷ್ಠವಾಗಿರುತ್ತದೆ– 'ಪಾಠಕ್ರಮಾದರ್ಥಕ್ರಮೋ ಬಲೀಯಾನ್'

ದಲ್ಲಿರುವ ವಿದ್ಯುತ್‌ಶಕ್ತಿಯು ನೆಲಕ್ಕೆ ಹೋಗಬಾರದೆಂದು ಅದಕ್ಕಾಗಿ (ವಿದ್ಯುತ್ ಶಕ್ತಿಯು ತಡೆಯಲಿಕ್ಕಾಗಿ) ಮೃಗಚರ್ಮವನ್ನು ಹಾಸುವ ವಿಧಾನವಿದೆ.

ಮೃಗಚರ್ಮದ ರೋಮುಗಳು ಶರೀರಕ್ಕೆ ತಾಕದಿರಲಿ, ಆಸನವು ಮೃದುವಾಗಿರಲಿ ಅದಕ್ಕಾಗಿ ಕೃಷ್ಣಾಜಿನದ ಮೇಲೆ ಹತ್ತಿಯ ಶುದ್ಧ ಬಟ್ಟೆ ಹಾಸಲು ಹೇಳಲಾಗಿದೆ. ಮೃಗಚರ್ಮದ ಬದಲಿಗೆ ಕಂಬಳಿ ಅಥವಾ ಗೋಣಿತಾಟು ಬಿಸಿಯಾಗದಿರಲಿ ಎಂದು ಅದರ ಮೇಲೆ ಹತ್ತಿಯ ಬಟ್ಟೆಯನ್ನು ಹಾಸಬೇಕು.

'ನಾತ್ಯುಚ್ಛ್ರಿತಂ ನಾತಿನೀಚಮ್' – ಸಮತಟ್ಟಾದ ಶುದ್ಧ ಭೂಮಿಯಲ್ಲಿ ಇರಿಸುವ ಮಣೆಯು ಅತಿ ಎತ್ತರವಿರಬಾರದು, ಹೆಚ್ಚು ತಗ್ಗು ಇರಬಾರದು. ಕಾರಣ – ಹೆಚ್ಚ ಎತ್ತರವಿರುವುದರಿಂದ ಧ್ಯಾನ ಮಾಡುವಾಗ ಅಕಸ್ಮಾತ್ ನಿದ್ದೆಬಂದರೆ ಬಿದ್ದು ಏಟಾಗುವ ಸಂಭವವಿರುತ್ತದೆ ಮತ್ತು ಹೆಚ್ಚು ತಗ್ಗಾದರೆ ಭೂಮಿಯಲ್ಲಿ ಓಡಾಡುವ ಇರುವೆ ಇತ್ಯಾದಿ ಜಂತುಗಳು ಶರೀರದ ಮೇಲೆ ಹತ್ತಿಕೊಂಡು ಕಚ್ಚುವುದರಿಂದ ಧ್ಯಾನದಲ್ಲಿ ವಿಕ್ಷೇಪ ಉಂಟಾದೀತು. ಅದಕ್ಕಾಗಿ ಅತೀ ಎತ್ತರ, ಅತೀ ತಗ್ಗು ಆಸನದ ನಿಷೇಧಮಾಡಲಾಗಿದೆ.

'ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ' – ಧ್ಯಾನಕ್ಕಾಗಿ ನೆಲದ ಮೇಲೆ ಇಡಲಾಗುವ ಮಣೆ-ಚೌಕವು ಅಲ್ಲಾಡಬಾರದು. ಭೂಮಿಯಲ್ಲಿ ಸರಿಯಾಗಿ ಗಟ್ಟಿಯಾಗಿ ಇಟ್ಟಿರಬೇಕು.

ಧ್ಯಾನಮಾಡಲು ಕುಳಿತು ಕೊಳ್ಳುವ ಆಸನವು ತನ್ನದೇ ಆಗಿರಬೇಕು, ಬೇರೆಯವರದ್ದಲ್ಲ; ಏಕೆಂದರೆ ಬೇರೆಯವರ ಆಸನವನ್ನು ಉಪಯೋಗಿಸಿದರೆ ಅದರಲ್ಲಿ ಅಂತಹುದೇ ಪರಮಾಣುಗಳು ಇರುತ್ತವೆ. ಆದ್ದರಿಂದ ಇಲ್ಲಿ **'ಆತ್ಮನಃ'** ಪದದಿಂದ ತನ್ನ ಆಸನವು ಬೇರೆಯಾಗಿಯೇ ಇರಬೇಕೆಂಬ ವಿಧಾನವಿದೆ. ಇದೇ ರೀತಿ ಗೋಮುಖಿ, ಮಾಲೆ, ಸಂಧ್ಯಾವಂದನೆಯ ಪಂಚಪಾತ್ರೆ ಇತ್ಯಾದಿಗಳು ತನ್ನದೇಯಾಗಿರಬೇಕು. 'ಬೇರೆಯವರು ಕುಳಿತು ಕೊಳ್ಳುವ ಆಸನ, ತೊಡುವ ಎಕ್ಕಡ, ಏಡಾವು, ಬಟ್ಟೆ ಇತ್ಯಾದಿಗಳು ನಾವು ಉಪಯೋಗಿಸಿದರೆ ಅವರ ಪಾಪ-ಪುಣ್ಯಗಳಿಗೆ ಭಾಗಿಯಾಗಬೇಕಾಗುತ್ತದೆ' ಎಂದು ಶಾಸ್ತ್ರದಲ್ಲಿ ವಿಧಾನವಿದೆ. ಪುಣ್ಯಾತ್ಮರಾದ ಸಂತರು, ಗುರುಗಳು ಇವರ ಆಸನದಲ್ಲಿಯೂ ಕುಳಿತುಕೊಳ್ಳಬಾರದು; ಏಕೆಂದರೆ ಅವರ ಆಸನ, ಬಟ್ಟೆ ಇತ್ಯಾದಿಗಳಿಗೆ ಕಾಲು ತಗಲುವುದು ಅವರ ಅನಾದರ ಮಾಡಿದಂತೆ, ಅಪರಾಧವಾಗಿದೆ.

-❀-

ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇಂದ್ರಿಯಕ್ರಿಯಃ ।
ಉಪವಿಶ್ಯಾಸನೇ ಯುಂಜ್ಯಾದ್ಯೋಗಮಾತ್ಮವಿಶುದ್ಧಯೇ ॥ ೧೨॥

ತತ್ರ - ಆ, **ಆಸನೇ** - ಆಸನದಲ್ಲಿ, **ಉಪವಿಶ್ಯ** - ಕುಳಿತುಕೊಂಡು, **ಯತಚಿತ್ತೇಂದ್ರಿಯ ಕ್ರಿಯಃ** - ಚಿತ್ತ ಮತ್ತು ಇಂದ್ರಿಯಗಳ ಕ್ರಿಯೆಗಳನ್ನು ವಶದಲ್ಲಿರಿಸಿಕೊಂಡು, **ಮನಃ** - ಮನಸ್ಸನ್ನು, **ಏಕಾಗ್ರಮ್** - ಏಕಾಗ್ರ, **ಕೃತ್ವಾ** - ಮಾಡಿ, **ಆತ್ಮವಿಶುದ್ಧಯೇ** - ಅಂತಃಕರಣದ ಶುದ್ಧಿಗಾಗಿ, **ಯೋಗಮ್** - ಯೋಗವನ್ನು, **ಯುಂಜ್ಯಾತ್** - ಅಭ್ಯಾಸಮಾಡಬೇಕು. ॥ ೧೨॥

ಆ ಆಸನದಲ್ಲಿ ಕುಳಿತುಕೊಂಡು ಚಿತ್ತ ಮತ್ತು ಇಂದ್ರಿಯಗಳ ಕ್ರಿಯೆಗಳನ್ನು ವಶದಲ್ಲಿರಿಸಿಕೊಂಡು ಮನಸ್ಸನ್ನು ಏಕಾಗ್ರ ಮಾಡಿ ಅಂತಃಕರಣದ ಶುದ್ಧಿಗಾಗಿ ಯೋಗವನ್ನು ಅಭ್ಯಾಸಮಾಡಬೇಕು. ॥ ೧೨॥

ವ್ಯಾಖ್ಯಾ - [ಹಿಂದಿನ ಶ್ಲೋಕದಲ್ಲಿ ಹಾಸುವ ಆಸನದ ವಿಧಿಯನ್ನು ಹೇಳಿದನಂತರ ಈಗ ಭಗವಂತನು ೧೨ನೇ ಮತ್ತು ೧೩ನೇ ಶ್ಲೋಕಗಳಲ್ಲಿ ಕುಳಿತುಕೊಳ್ಳುವಂತಹ ಆಸನದ ವಿಧಿಯನ್ನು ಹೇಳುತ್ತಾನೆ.]

'ತತ್ರ ಆಸನೇ' – ಕ್ರಮಶಃ ದರ್ಭೆ, ಕೃಷ್ಣಾಜಿನ, ಬಟ್ಟೆ ಹಾಸಿರುವ ಆಸನವನ್ನು ಹಿಂದಿನ ಶ್ಲೋಕದಲ್ಲಿ ವರ್ಣಿಸಿದಕ್ಕೆ ಇಲ್ಲಿ **'ತತ್ರ ಆಸನೆ'** ಎಂಬ ಪದ ಬಂದಿದೆ.

'ಉಪವಿಶ್ಯ' – ಆ ಹಾಸಿರುವ ಆಸನದ ಮೇಲೆ ಸಿದ್ಧಾಸನ, ಪದ್ಮಾಸನ, ಸುಖಾಸನ ಇತ್ಯಾದಿ ಸುಖವಾಗಿ ಕುಳಿತುಕೊಳ್ಳಬಹುದಾದ ಆಸನದಲ್ಲಿ ಕುಳಿತುಕೊಳ್ಳಬೇಕು. ಆಸನದ ವಿಷಯದಲ್ಲಿ – ಯಾವುದೇ ಆಸನದಲ್ಲಿ ಕುಳಿತರಲಿ ಅದೇ ಆಸನದಲ್ಲಿ ಸತತ ಮೂರು ಗಂಟೆ ಕುಳಿತಿರಬೇಕು ಎಂದು ಹೇಳಿದೆ. ಅಪ್ಪಿ ಹೊತ್ತು ಅತ್ತ-ಇತ್ತ ಅಲ್ಲಾಡ ಬಾರದು. ಹೀಗೆ ಕುಳಿತುಕೊಳ್ಳುವ ಅಭ್ಯಾಸವು ಸಿದ್ಧವಾದಾಗ ಮನಸ್ಸು ಮತ್ತು ಪ್ರಾಣಗಳು ಸ್ವತಃ-ಸ್ವಾಭಾವಿಕ ಶಾಂತ (ಚಂಚಲತೆಯಿಲ್ಲದೆ) ವಾಗುತ್ತವೆ. ಕಾರಣ ಮನಸ್ಸಿನ ಚಂಚಲತೆ ಶರೀರವನ್ನು ಸ್ಥಿರವಾಗಿಸುವುದಿಲ್ಲ ಹಾಗೂ ಶರೀರದ ಚಂಚಲತೆ ಕ್ರಿಯಾ-ಪ್ರವಣತೆಯುಳ್ಳ ಮನಸ್ಸನ್ನು ಸ್ಥಿರವಾಗಲು ಬಿಡುವುದಿಲ್ಲ, ಅದಕ್ಕಾಗಿ ಧ್ಯಾನದಲ್ಲಿ ಶರೀರವು ಸ್ಥಿರವಾಗಿರುವುದು ತುಂಬಾ ಅವಶ್ಯಕವಾಗಿದೆ.

'ಯತಚಿತ್ತೇಂದ್ರಿಯ ಕ್ರಿಯಃ' – ಆಸನದಲ್ಲಿ ಕುಳಿತುಕೊಳ್ಳುವ ಸಮಯ ಚಿತ್ತ ಮತ್ತು ಇಂದ್ರಿಯಗಳ ಕ್ರಿಯೆಗಳು